ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಸವ್ಯಸಾಚಿ ಪಂಪ

ನಾಡೋಜ ಹಂಪ. ನಾಗರಾಜಯ್ಯ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಸವ್ಯಸಾಚಿ ಪಂಪ

ನಾಡೋಜ ಹಂಪ. ನಾಗರಾಜಯ್ಯ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**SAVYASAACHI PAMPA :** A Novel by **Hampa. Nagarajaiah**; Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೦

ಪ್ರತಿಗಳು : ೧೦೦೦

ಪುಟಗಳು : xx + ೧೮೬

ಬೆಲೆ : ರೂ. ೫೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :

**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**

ನಂ. ೬೯, ಸುಬೇದಾರ್ ಛತ್ರಂ ರೋಡ್

ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅರಿಕೆ

ಇಪ್ಪತ್ತೈದು ವರ್ಷದ ಹಿಂದೆ ಮಂಡ್ಯದ ಅನಂತನಾಥಸ್ವಾಮಿ ಚೈತ್ಯಾಲಯದಲ್ಲಿ ಧಾರ್ಮಿಕ ಸಮಾರಂಭ, ಮಹಾವೀರ ಸ್ವಾಮಿಯ ಉತ್ಸವದ ಸಡಗರವೆಂದು ನೆನಪು. ನಾನಾಗ (೧೯೫೦) ಮಂಡ್ಯದ ಮುನಿಸಿಪಲ್ ಪ್ರೌಢಶಾಲೆಯ ವಿದ್ಯಾರ್ಥಿ. ಅಂದಿನ ಸಭೆಯ ಮೇಲಾಳು ಕನ್ನಡ ನಾಡಿನ ಹೆಸರಾಂತ ಹಿರಿಯ ಬರಹಗಾರರಾದ ಕಾ.ಸ. ಧರಣೇಂದ್ರಯ್ಯನವರು. ಅವರು ಅಂದು ಪಂಪ ಮಹಾಕವಿಯ ಲೋಕ ವಿಖ್ಯಾತವಾದ ನಾಲ್ಕು ವೃತ್ತಗಳನ್ನು ಹಾಡಿದರು. "ಕಾ.ಸ.ಧ."—ಅವರ ಬಾಯಿಂದ ರತ್ನಾಕರ ಮಹಾಕವಿಯ ಭರತೇಶ ವೈಭವದ ನಿರಂಜನ ಸ್ತುತಿ ಸಾಂಗತ್ಯ ಪದ್ಯಗಳ ಹಾಡುವಿಕೆಯನ್ನು ಕೇಳಿದ್ದೇನೆ. ಪಂಪ ರನ್ನ ಜನ್ನ ನಾಗಚಂದ್ರ ಮೊದಲಾದ ಅನೇಕ ಕವಿಗಳನ್ನು ಕುರಿತ ಭಾಷಣಗಳನ್ನು ಅವರ ಬಾಯಿಂದಲೇ ಹತ್ತಾರು ಕಡೆ ಅನಂತರ ಕೇಳಿದ್ದೇನೆ.

ಆದರೆ ಅಂದಿನ ಅವರ ಭಾಷಣ, ಹಾಡು ನನ್ನನ್ನು ಪಂಪನ ದಾಸನನ್ನಾಗಿಸಿತು. ಅಂದು ಪಂಪನ ಪದ್ಯಗಳು ಪೂರ್ಣವಾಗಿ ಅರ್ಥವಾಗಲಿಲ್ಲ, ನಿಜ. ಅರ್ಥವಾಗದಿದ್ದರೂ ಆಕರ್ಷಣೆಯಾಯಿತು. ಮೊದಲಿಂದ ಇದ್ದ ಕನ್ನಡದ ಒಲವು ಜಾಗೃತವಾದಂತಾಯಿತು. ಮುಂದೆ ಕನ್ನಡವನ್ನೇ ಪ್ರಧಾನ ವಿಷಯವಾಗಿ ಆರಿಸಿಕೊಂಡು ಪಂಪನ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿದಂತೆಲ್ಲಾ ಅವನ ಮನೋಧರ್ಮದ ಜಾಡು ಉಸಿರಾಡುತ್ತಿತ್ತು. ಮೂಡಬಿದ್ರೆ, ಕಾರ್ಕಳ, ಶೃಂಗೇರಿ, ಬೆಂಗಳೂರು, ದಾವಣಗೆರೆ, ಶಿವಮೊಗ್ಗ, ಹೊಳಲ್ಕೆರೆ ಮುಂತಾದ ಕಡೆಗಳಲ್ಲಿ ಪಂಪನನ್ನು ಕುರಿತು ಮಾಡಿದ ಉಪನ್ಯಾಸ, ಪಂಪನ ಬಗೆಗೆ ಹೆಚ್ಚಿನ ಮಾಹಿತಿ ಒದಗಿಸಿಕೊಟ್ಟ ಜಿನವಲ್ಲಭನ ಗಂಗಾಧರಂ ಶಾಸನ–ಇವೆಲ್ಲ ಕಾದಂಬರಿ ಬರೆವ ಭಾವನೆಯನ್ನು ಹುರಿಗೊಳಿಸಿದುವು.

ಅವಕಾಶಕ್ಕಾಗಿ ಕಾಯುತ್ತಿದ್ದ ಅಂತರಂಗವನ್ನು ತಟ್ಟಿದವರು ಗುಡಿಬಂಡೆಯ ವಿವೇಕೋದಯ ಗ್ರಂಥಮಾಲೆಯ ಸಂಚಾಲಕರು. ಗೆಳೆಯ ಸುರೇಶ ಜೈನ್ ಮೊದಲು ಬೇಡಿದರು, ಕಡೆಗೆ ಕಾಡಿದರು. ಅವರ ಒತ್ತಾಯ, ಒತ್ತಾಸೆಗಳ ಫಲ ಈ ಹೊತ್ತಗೆ. ಇದೊಂದು ಚಾರಿತ್ರಿಕ ಕಾದಂಬರಿಯಾದುದರಿಂದ ಹತ್ತನೆಯ ಶತಮಾನದ ಕನ್ನಡ ನಾಡಿನ ಐತಿಹಾಸಿಕ ವಿವರಗಳು ಅನೇಕವು ಹಾಸುಹೊಕ್ಕಾಗಿ ಇಲ್ಲಿ ಅನಿವಾರ್ಯವಾಗಿ ಬೆರೆತಿವೆ. ಮುಖ್ಯವಾಗಿ (ಗಂಗಾಧರಂ) ಕುರ್ಕ್ಯಾಲದ ಜಿನವಲ್ಲಭನ; ಶಾಸನ, ಕೊಲ್ಲಿಪಾರದ ತಾಮ್ರ ಶಾಸನ, ವೇಮುಲವಾಡ ಶಾಸನ, ಪರಭಣಿ ತಾಮ್ರ ಶಾಸನ,

ಅಲ್ಲದೆ ಹತ್ತನೆಯ ಶತಮಾನದ ಇನ್ನೂ ಕೆಲವು ಶಾಸನಗಳನ್ನು ಅಭ್ಯಸಿಸಿ ಬಳಸಿಕೊಳ್ಳಲಾಗಿದೆ. ಇತಿಹಾಸದೊಡನೆ ಒಂದು ಪಟ್ಟು ಮೇಲಾಗಿ ಕಲ್ಪನೆಯೂ ಕೂಡಿಕೊಂಡಿದೆ:– ಇದು ಸಹಜ ಹಾಗೂ ಅವಶ್ಯ. ಕನ್ನಡ ನಾಡೋಜನಾದ ಪಂಪನ ಭವ್ಯ ವ್ಯಕ್ತಿತ್ವದ ದಿವ್ಯ ದರ್ಶನಕ್ಕೆ ಇದು ಸಹಕಾರಿಯೆಂದಾದರೆ ಬರೆದವನು ಧನ್ಯ. ಗತಿಸಿದ ಸಮಾಜದ ನಾಗರೀಕತೆ ಧ್ವನಿತವಾಗಿರುವ ನನ್ನ ಈ ಎರಡನೆಯ ಕಾದಂಬರಿಯನ್ನೂ ಕನ್ನಡಿಗರು ಸಹೃದಯತೆಯಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ನೆನಕೆಗಳು:–
ಸೌಭಾಗ್ಯವತಿ ಕಮಲಾ ಹಂಪನಾ
ವರ್ಧಮಾನ ಪ್ರಕಾಶನದವರು, ಮುದ್ರಕರು
— ಇವರಿಗೆಲ್ಲ.

**ಹಂಪನಾ**

# ನಾಲ್ಕನೆಯ ಮುದ್ರಣಕ್ಕೆ ನಾಲ್ಕು ಮಾತು

ಉಪಲಬ್ಧ ಚಾರಿತ್ರಿಕ ಆಧಾರಗಳು, ಐತಿಹ್ಯಗಳು. ಸ್ಥಳ ಪುರಾಣ – ಇವನ್ನು ಕಲ್ಪನೆಯೊಂದಿಗೆ ಹಾಸು ಹೊಕ್ಕಾಗಿ ಸೇರಿಸಿ ಹೆಣೆದಿರುವ ಆದಿಕವಿ ಪಂಪನ ಜೀವನವನ್ನು ಕುರಿತ ಈ ಐತಿಹಾಸಿಕ ಕಾದಂಬರಿಯನ್ನು ಕನ್ನಡದ ಓದುಗರು ಅಕ್ಕರೆಯಿಂದ ಬರಮಾಡಿಕೊಂಡಿದ್ದಾರೆ, ಮೂರು ಮುದ್ರಣಗಳನ್ನು ದಾಟಿ ನಾಲ್ಕನೆಯ ಮುದ್ರಣ ಕಾಣುವಂತೆ ಪ್ರೋತ್ಸಾಹಿಸಿದ್ದಾರೆ. ಇದು ಲೇಖಕನಾದ ನನಗೆ ಅತೀವ ಆನಂದವನ್ನು ತಂದಿದೆ. ಈ ಸಂತೋಷದ ಕ್ಷಣದಲ್ಲಿ ಈ ಕಾದಂಬರಿಯ ಹಿಂದಿನ ಪ್ರಕಾಶಕರುಗಳಾದ ಗುಡಿಬಂಡೆಯ ಶ್ರೀ ವಿವೇಕೋದಯ ಗ್ರಂಥಮಾಲೆಯ ಸುರೇಶ್ ಕುಮಾರರನ್ನೂ, ಬೆಂಗಳೂರಿನ ವರ್ಧಮಾನ ಪ್ರಕಾಶನದ ಎಂ. ಅಶ್ವತ್ಥ ಅವರನ್ನೂ ಸ್ಮರಿಸಿಕೊಳ್ಳುತ್ತೇನೆ. ಈಗ ನಾಲ್ಕನೆಯ ಮುದ್ರಣವನ್ನು ಹೊರತರುತ್ತಿರುವ, ಗದಗ ಶಹರದ ವಿದ್ಯಾನಿಧಿ ಪ್ರಕಾಶನದ ಮಾಲೀಕರಾದ ಮೈ.ಮ. ಮೆಣಸಗಿ ಮತ್ತು ಅವರ ಮಕ್ಕಳಿಗೆ ನಾನು ಆಭಾರಿಯಾಗಿದ್ದೇನೆ.

ನಾನು ಈ ಕಾದಂಬರಿಯನ್ನು ಬರೆದು ಇಪ್ಪತ್ತೆರಡು ವರ್ಷಗಳಾದುವು. ಅಂದಿನ ನನ್ನ ಅಧ್ಯಯನ, ಅನುಭವ, ಜೀವನ ದೃಷ್ಟಿ – ಇವು ಮುಪ್ಪುರಿಗೊಂಡು ಈ ಕೃತಿ ಮೈಪಡೆಯಿತು. ಇಂದು ಇದೇ ವಸ್ತುವನ್ನು ಎತ್ತಿಕೊಂಡು ಕಾದಂಬರಿಯಾಗಿ ಬರೆದಿದ್ದರೆ ಇದರ ಸ್ವರೂಪ ಹೀಗಿರುತ್ತಿರಲಿಲ್ಲ; ಅಥವಾ ಇಂದಿನ ಪ್ರಯತ್ನ ಯಾವ ಆಕಾರದಲ್ಲಿ ರೂಪುಗೊಳ್ಳುತ್ತಿತ್ತೋ ಹೇಳಲಾರೆ. ಆದರೆ ಮಹಾಕವಿ ಪಂಪನ ಉನ್ನತ ವ್ಯಕ್ತಿತ್ವ ಢಾಳಾಗಿ ಇಲ್ಲಿ ಪ್ರಜ್ವಲಿಸುತ್ತಿರುವುದನ್ನು ತಗ್ಗಿಸುವುದು ಇಂದೂ ಸಹ ಸಾಧ್ಯವಾಗಲಾರದು.

"ಸವ್ಯಸಾಚಿ ಪಂಪ" ಕಾದಂಬರಿಯನ್ನು ಶ್ಲಾಘಿಸಿ ಬರೆದ ವಿಮರ್ಶೆಗಳು ಕೆಲವು ಅಚ್ಚಾಗಿವೆ; ಆ ಎಲ್ಲಾ ವಿಮರ್ಶಕರಿಗೆ ನಾನು ಕೃತಜ್ಞನಾಗಿದ್ದೇನೆ. ನಾನು ಈ ಕಾದಂಬರಿಯನ್ನು ಬರೆದ ಹೊಸತರಲ್ಲಿ ಇದನ್ನು ಓದಿ ಮೆಚ್ಚುಗೆಯ ಎರಡು ಮಾತು ಹೇಳಿ ನನ್ನ ಬೆನ್ನು ತಟ್ಟಿದ ಡಾ. ಆ.ನೇ. ಉಪಾಧ್ಯೆ, ಟಿ.ಕೆ. ತುಕೋಳ್, ಮಿರ್ಜಿ ಅಣ್ಣಾರಾಯ, ತ.ರಾಸು., ಡಾ. ಮಾಸ್ತಿ, ಡಾ. ನಿರಂಜನ, ಡಾ. ಅನುಪಮಾ ನಿರಂಜನ, ಸೇವೆ ನಮಿರಾಜ ಮಲ್ಲ – ಇವರು ಯಾರೂ ಇಂದು ಕಣ್ಣೆದುರು ಇಲ್ಲ ; ಈ ಎಲ್ಲಾ ಹಿರಿಯರನ್ನು ನೆನೆದು ಕೈ ಮುಗಿಯುತ್ತೇನೆ. ಈ ಪುಸ್ತಕದ ಪ್ರತಿಯನ್ನು ತಮ್ಮ ಸಂಗ್ರಹದಿಂದ ನೀಡಿದ ಮಿತ್ರ ಹರಿಹರಪ್ರಿಯ ಅವರಿಗೆ ಋಣಿ.

ಕನ್ನಡ ಅಧ್ಯಾಪಕಿಯಾಗಿ, ರೀಡರ್ ಆಗಿ, ಪ್ರಾಧ್ಯಾಪಕಿಯಾಗಿ, ಪ್ರಿನ್ಸಿಪಾಲಳಾಗಿ ಮೂವತ್ತೈದು ವರ್ಷ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ, ಇದೀಗ ನಿವೃತ್ತಿ ಹೊಂದಿರುವ ನನ್ನ ಮಡದಿ, ಲೇಖಕಿ ಡಾ. ಕಮಲಾ ಹಂಪನಾ ಅವರ ನಿವೃತ್ತಿಯ ಸಂತೃಪ್ತಿ ಸ್ಮರಣೆಗೆ ಈ ಕಾದಂಬರಿಯ ನಾಲ್ಕನೆಯ ಮುದ್ರಣವನ್ನು ಅರ್ಪಿಸುತ್ತೇನೆ.

೮.೬.೧೯೯೪ **ಹಂಪ. ನಾಗರಾಜಯ್ಯ**

# ಎರಡನೆಯ ಮುದ್ರಣಕ್ಕೆ
# ಪ್ರಕಾಶಕರ – ಮುದ್ರಕರ ಮಾತು

ಮಡಿಕೇರಿಯಲ್ಲಿ ನಡೆದ ೧೯೮೧ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಿಗೆ ಭೇಟಿ ಕೊಟ್ಟಾಗ ನಮಗೆ ಕನ್ನಡ ಪುಸ್ತಕಗಳ ಉತ್ಪಾದನೆಯಲ್ಲಿನ ಪ್ರಮುಖ ಕೊರತೆಯೊಂದು ಕಂಡು ಬಂದಿತು. ಉತ್ತಮ ಕಾಗದ ಬಳಸಿದ ಸುಂದರ ವಿನ್ಯಾಸ, ಅಚ್ಚುಕಟ್ಟಾದ ಮುದ್ರಣವಿರುವ ಪುಸ್ತಕಗಳು ಕನ್ನಡದಲ್ಲಿ ಇಲ್ಲವೇ ಇಲ್ಲವೇನೋ ಎನ್ನುವ ನಮ್ಮ ಅಭಿಪ್ರಾಯಕ್ಕೆ ಮತ್ತಷ್ಟು ಪುಷ್ಟಿ ದೊರೆಯಿತು.

ಈ ದಿಸೆಯಲ್ಲಿ ಒಂದಿಷ್ಟು ಸುಧಾರಣೆಯನ್ನು ತರಲು ಏಕೆ ಸಾಧ್ಯವಿಲ್ಲ ಎನ್ನುವ ಆಲೋಚನೆಯೂ ಮಿಂಚಿತು. ಅನೇಕ ಆದರ್ಶಗಳೂ ನಮ್ಮ ಕಣ್ಣ ಮುಂದೆ ಹಾದು ಹೋದವು. ನಮ್ಮ ಈ ಹಂಬಲವನ್ನು ಕಾರ್ಯರೂಪಕ್ಕೆ ತರುವ ಬಗೆಗೆ ಯೋಚಿಸಿ ಒಂದು ನಿರ್ಧಾರಕ್ಕೆ ಬಂದೆವು.

ಕನ್ನಡದ ಜನಪ್ರಿಯ ಕೃತಿಗಳನ್ನು ಮತ್ತು ಶ್ರೇಷ್ಠ ಲೇಖಕರ ಎಲ್ಲಾ ಕೃತಿಗಳನ್ನು ಸಂಪುಟಗಳಾಗಿ ನಮ್ಮ ಉದ್ದೇಶದಂತೆ ಪ್ರಕಟಿಸುವುದು, ಮುಂತಾಗಿ ಹಲವಾರು ಯೋಜನೆಗಳನ್ನು ಕೈಗೊಳ್ಳಲು ಯೋಚಿಸಿದ್ದೇವೆ.

ಪುಸ್ತಕ ಪ್ರಕಟಣೆಯಲ್ಲಿ ಉತ್ತಮ ಗುಣಮಟ್ಟದ ಸಾಮಾಗ್ರಿ, ಆಕರ್ಷಕ ವಿನ್ಯಾಸ, ಅಚ್ಚುಕಟ್ಟಾದ ಮುದ್ರಣಗಳ ಉದ್ದೇಶವನ್ನು ಪ್ರಮುಖವಾಗಿರಿಸಿಕೊಂಡಂತೆ ಒಂದು ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ನಮ್ಮ ಆಲೋಚನೆಯನ್ನು ಕಾರ್ಯರೂಪಕ್ಕೆ ತರಲು ಯೋಚಿಸಿ, ಅದರಂತೆ ಪ್ರಾರಂಭಿಸಿಯೂ ಬಿಟ್ಟೆವು.

ಆದರ್ಶಗಳೊಂದಿಗೆ ಕನ್ನಡ ಪತ್ರಿಕೋದ್ಯಮವನ್ನು ಪ್ರವೇಶಿಸಲು ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಆದರೂ ಈ ಸಾಹಸಕ್ಕೆ ಕೈ ಹಚ್ಚಿದ್ದೇವೆ. ಜನತೆಯ ಪ್ರೋತ್ಸಾಹ ಮತ್ತು ಉದ್ಯಮದವರ ಸಹಕಾರ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆನ್ನುವುದನ್ನು ನಿರೀಕ್ಷಿಸಬೇಕು.

ಹಂಪನಾ ಅವರಿಗೆ ನಮ್ಮ ಯೋಜನೆಯನ್ನು ವಿವರಿಸಿ ಅವರ ಕೃತಿಯೊಂದನ್ನು ಪ್ರಕಟಿಸಲು ಕೇಳಿದೆವು. ಮೊದಲು ಸಮಸ್ಯೆಗಳ ಕಡೆಗೆ ನಮ್ಮ ಗಮನ ಸೆಳೆದರು. ನಮ್ಮ ಉತ್ಸಾಹಕ್ಕೆ ಭಂಗವೇಕೆ ತರಬೇಕೆಂದು ತಮ್ಮ ಕೃತಿಯೊಂದನ್ನು ಕೊಡಲು ಒಪ್ಪಿ ಪ್ರೋತ್ಸಾಹವನ್ನು ನೀಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು.

ಕಂಡಾಗಲೆಲ್ಲಾ ನಮ್ಮ ಮುಖ್ಯ ಧ್ಯೇಯವಾದ "ಮುದ್ರಣ ವಿನ್ಯಾಸ, ಅಚ್ಚುಕಟ್ಟಾದ ಗುಣಮಟ್ಟದ ಕಡೆಗೆ ಗಮನಹರಿಸಿ" ಎಂದು ಎಚ್ಚರಿಸುತ್ತಿರುವ ಶ್ರೀ ಲಕ್ಷ್ಮಣ್ ತೆಲಗಾವಿ ಅವರಿಗೆ ಕೃತಜ್ಞತೆಗಳು.

ನಮ್ಮ ಯೋಜನೆಯನ್ನು ತುಂಬು ಹೃದಯದಿಂದ ಸ್ವಾಗತಿಸಿ, ಸಹಕರಿಸಿದ

ಶ್ರೀ ಎಂ. ವಾಸುದೇವಯ್ಯನವರಿಗೆ

ಮತ್ತು

ಕಲಾವಿದ ಪ.ಸ. ಕುಮಾರ್

ವೆಂ. ಮತ್ತು ಬಳಗ

ಚಂದ್ರಶೇಖರ ಕಂಬಾರ

ವ್ಯಂಗ್ಯಚಿತ್ರಕಾರರಾದ ಶ್ರೀ ಎಂ. ವಿಶ್ವನಾಥ

ಅವರಿಗೆ ನಮ್ಮ ಕೃತಜ್ಞತೆಗಳು.

ಇಷ್ಟೆಲ್ಲಕ್ಕೂ ಪ್ರೇರಣೆಯನ್ನೊದಗಿಸಿದ ಮಡಿಕೇರಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮರೆಯಲಾಗದು.

**ಎಂ. ಅಶ್ವತ್ಥ**

# ಪರಿವಿಡಿ

| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಅರಿಕೆ | xi |
| ನಾಲ್ಕನೆಯ ಮುದ್ರಣಕ್ಕೆ ನಾಲ್ಕು ಮಾತು | xiii |
| ಎರಡನೆಯ ಮುದ್ರಣಕ್ಕೆ ಪ್ರಕಾಶಕರ – ಮುದ್ರಕರ ಮಾತು | xv |
| ಸವ್ಯಸಾಚಿ ಪಂಪ | ೧–೧೮೬ |

# ಸವ್ಯಸಾಚಿ ಪಂಪ

## ೧

ಮುದ್ದುಮುದ್ದಾಗಿ ಬೆಳೆಯುತ್ತಿದ್ದ ಮಗು ಪದ್ಮಪ್ರಭ ಮನೆಯವರ ಬಾಯಲ್ಲಿ ಪದ್ಮಪನಾಗಿದ್ದ. ಜನರ ನಾಲಗೆಯಲ್ಲಿ ಪಂಪನಾಗಿದ್ದ. ಪಂಪನ ತಾತ ಕೊಮರಯ್ಯ ಮೊಮ್ಮಗನ ಆಟಪಾಟ ವಿನೋದಗಳಲ್ಲಿ ಆನಂದಿಸಿದ.

“ಮಕ್ಕಳಿಲ್ಲದ ಮನೆ, ಹಕ್ಕಿಗಳಿಲ್ಲದ ವನ, ಹೂಗಳಿಲ್ಲದ ಉದ್ಯಾನ. ಪದ್ಮಪ್ರಭ ಹುಟ್ಟಿ ಮನೆಯನ್ನು ಸಹ್ಯವಾಗಿಸಿದ್ದಾನೆ. ಅವನ ಜಾತಕ ಬಲ ಚೆನ್ನಾಗಿದೆ. ವಿದ್ಯೆಯ ರೇಖೆ ಕೊಂಕಿಲ್ಲದೆ ನೀಳವಾಗಿ ಹರಿದಿದೆ. ಸರಸ್ವತಿಯ ವರಪುತ್ರನಾಗಿ ವಿರಾಜಿಸುತ್ತಾನೆ. ಕೈಬೆರಳುಗಳು ದುಂಡಾಗಿವೆ. ಉತ್ತಮ ಕಲಾಭಿರುಚಿಯಿಂದ ಶೋಭಿಸುತ್ತಾನೆ. ಹೊಳಪಿನ ಕಣ್ಣುಗಳು ಅವನು ತೇಜಸ್ವಿಯಾಗುವನೆಂದು ಸೂಚಿಸುತ್ತಿವೆ. ಆದರೆ...”

“ಆದರೆ, ಎಂದರೆ ಏನಪ್ಪಾ! ನೀವು ಅರ್ಧಕ್ಕೇ ನಿಲ್ಲಿಸಿದಿರಿ, ನಮಗೆಲ್ಲ ಗಾಬರಿ”.

‘‘ಗಾಬರಿಯಾಗುವಂತಹುದು ಏನಿಲ್ಲಾ ಭೀಮ. ನಮ್ಮ ಮಗು ಸನ್ಯಾಸಿ ಆಗುವ ಲಕ್ಷಣಗಳು ಕಾಣುತ್ತಿವೆ!”

“ಹೌದೇ ಅಪ್ಪಾ! ಇದೇನಿದು, ಬಯಸಿ ಬಯಸಿ ಪಡೆದ ಮಗು ಸನ್ಯಾಸಿಯಾದರೆ ಹೇಗೆ? ಇದಕ್ಕಾಗಿಯೇ ನಾವೆಲ್ಲ ಇಷ್ಟು ಕಷ್ಟಪಟ್ಟು ತೀರ್ಥಯಾತ್ರೆ ಮಾಡಿದ್ದು? ಪೂಜೆ ಅಭಿಷೇಕ ನೋಂಪಿ ವ್ರತೋಪವಾಸಾದಿಗಳನ್ನೆಸಗಿದ್ದು?”

“ಆಗುವುದೆಲ್ಲಾ ಆಗಿಯೇ ತೀರುತ್ತದೆ ಭೀಮ. ವಿಧಿಯ ವಿಲಾಸವನ್ನು ಮೀರುವುದು ಮಾನವನಿಗೆ ಆಗದ ಮಾತು.”

“ಹಾಗಾದರೆ ಮುಂದೆ ಮನೆತನದ ಗತಿಯೇನು? ವಂಶ ಗೌರವ ಹೇಗೆ?”

“ಮನೆಯ ಮಗ ಸನ್ಯಾಸಿಯಾದರೆ ಮನೆತನದ ಗೌರವಕ್ಕೆ ಕುಂದೇನು?”

“ಹಾಗಲ್ಲದೆ ಮತ್ತೇನು ಕೋಡು ಮೂಡುವುದೆ?”

“ಅಷ್ಟು ಹಗುರವಾಗಿ ನುಡಿಯಬಾರದು ಭೀಮಪ. ಸನ್ಯಾಸಿಗಳೆಂದರೆ ಸಾಮಾನ್ಯರಲ್ಲ. ನಮ್ಮ ನಾಡಿನ ಹಿರಿಮೆ ಗರಿಮೆಗಳೆಲ್ಲ ಅಂತಹ ಗುರು ಹಿರಿಯರಿಂದಲೇ ಉಳಿದು ಬೆಳೆದು ಬಂದಿರುವುದು. ಗೃಹಸ್ಥ ಧರ್ಮಕ್ಕಿಂತ

ಸನ್ಯಾಸ ಧರ್ಮದೊಡ್ಡದು. ನಮ್ಮ ಪೂರ್ವಿಕರಾದ ವೈದಿಕರು ನಂಬಿದ್ದ ವರ್ಣಾಶ್ರಮ ಪದ್ಧತಿಯಲ್ಲಿ ಋಷಿಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅಷ್ಟೇಕೆ? ನೀನು ತುಂಬಾ ಮನ್ನಣೆ ಕೊಡುವುದು ಶ್ರಮಣ ಶ್ರೇಷ್ಠರಾದ ದೇವೇಂದ್ರ ಕೀರ್ತಿಗಳಿಗೆ ತಾನೆ?"

"ಅವರ ವಿಚಾರ ಬೇರೆ ಅಪ್ಪಾಜಿ"

"ಅದು ಹೇಗೆ? ಅವರಿನ್ನೂ ಚಿಕ್ಕವರಲ್ಲವೆ"

"ಅವರು ತರುಣರಾದರೂ ಸಾಮಾನ್ಯರಲ್ಲ. ಮಹಾನ್ ಯತಿವರೇಣ್ಯರು."

"ಜಿನಸೇನರು, ಗುಣಭದ್ರರು, ಅವರಿಗಿಂತ ಹಿಂದಿನವರು ಎಲ್ಲಾ ಶ್ರೇಷ್ಠ ಮುನಿಗಳು, ಶ್ರವಣಬೆಳಗೊಳದಲ್ಲಿ ಭದ್ರಬಾಹು ಭಟಾರರಾದಿಯಾಗಿ ಮುನಿವರೇಣ್ಯರ ಸ್ಮಾರಕಗಳನ್ನು ನಿಷಿಧಿಗಳನ್ನು ಕಂಡು ನೀನೇ ಭಕ್ತಿ ಗೌರವಗಳಿಂದ ಎರಗಿ ಬರಲಿಲ್ಲವೆ"

"ಅದೆಲ್ಲ ಸರಿಯೆ. ನಮ್ಮ ಮಗು ಕೂಡ ಮುನಿಯಾದರೆ ಆ ಪ್ರಾತಃಸ್ಮರಣೀಯರ ಸಾಲಿಗೆ ಸೇರುವಷ್ಟು ಅರ್ಹತೆ ಗಳಿಸುವನೆಂಬ ನಂಬಿಕೆಯೇನು"

"ಭೀಮಪ, ಕೂಸು ಹುಟ್ಟುವ ಮೊದಲೇ ತೊಟ್ಟಿಲು ಕಟ್ಟಿದರು ಎಂಬಂತೆ ನಮ್ಮ ಮಾತುಕತೆ ನಡೆಯುತ್ತಿದೆ! ಇದೆಲ್ಲ ಇನ್ನೂ ಮುಂದಿನ ಮಾತು. ಪದ್ಮಪ ಏನಾಗುವನೋ ಕಾದು ನೋಡೋಣ. ಆದರೆ ಒಂದು ಮಾತು ಗಟ್ಟಿ. ಅವನು ಯಾವುದೇ ಕ್ಷೇತ್ರ ಆರಿಸಿಕೊಂಡರೂ ಅದರಲ್ಲಿ ಪಾರಂಗತನಾಗಿ ಮನೆತನದ ಗೌರವ ಎತ್ತಿ ಹಿಡಿಯುತ್ತಾನೆ."

"ಹಾಗಾದರೆ ಈಗ ಮುಂದಿನ ಮಾರ್ಗವೇನು? ನನಗಂತೂ ಸುತ್ತ ಕತ್ತಲೆ ಕಟ್ಟಿದಂತಾಗಿ ಬೇರೆ ದಾರಿಯೇ ತೋರುತ್ತಿಲ್ಲ. ನೀವು ಹೇಗೆ ಹೇಳಿದರೆ ನಾನು ಹಾಗೆ ಮುಂದಡಿಯಿಡುತ್ತೇನೆ."

"ನನ್ನ ಸಲಹೆ ಕೇಳುವುದಾದರೆ ಪದ್ಮಪನನ್ನು ಗುರುದೇವ ದೇವೇಂದ್ರ ಮುನೀಂದ್ರರ ಬಳಿಯಲ್ಲೇ ಬಿಡುವುದು ಒಳ್ಳೆಯದು. ಅವರೇ ಅವನ ಭವಿಷ್ಯ ರೂಪಿಸುವ ರೂವಾರಿ!"

"ನೀವು ನನ್ನ ಮನಸ್ಸಿನಲ್ಲಿದ್ದುದನ್ನೇ ಆಡಿದ್ದೀರಿ ಅಪ್ಪಾಜಿ. ಆದರೆ ದೇವೇಂದ್ರ ಕೀರ್ತಿಗಳು ರಾಜಗುರುಗಳು. ಅರಮನೆಗೂ ಗುರುಮನೆಗೂ ತುಂಬಾ ಹತ್ತಿರದ ಸಂಪರ್ಕವಿದೆ. ಅರಸರನ್ನು ಆಶೀರ್ವದಿಸುವ ಕೈಗಳು ನಮ್ಮ ಎಳೆಯ ಬಳ್ಳಿಯನ್ನು ಅನುಗ್ರಹಿಸುವುದು ತೀರದ ಹಾರೈಕೆಯೆಂದು ತೋರುತ್ತದೆ."

"ಜೈನಯತಿಗಳು ತಾರತಮ್ಯಾತೀತರು. ಮೇಲುಕೀಳುಗಳೆಂಬ ಭಾವನೆ ಅವರ ಬಳಿಗೂ ಸುಳಿಯುವುದಿಲ್ಲ. ನಮ್ಮ ಬಾಲಕನಿಗೆ ಹುಟ್ಟಿನಿಂದ ಅವರ

ದೃಷ್ಟಿಲಾಭ ದೊರೆತೇ ಇದೆ. ಗಂಡು ಮಗು ಹುಟ್ಟುವುದೆಂದು ಮೊದಲೇ ತಿಳಿಸಿದ್ದರು. ನಾಮಕರಣವಾಗುವಾಗ ಅವರೇ ಹೆಸರನ್ನೂ ಸೂಚಿಸಿದರು. ಇನ್ನು ಮುಂದೆ ಕೂಡ ಅವರ ಹರಕೆಯ ಕಾಪಿನಲ್ಲೇ ಇವನು ಬೆಳೆಯುವುದು ಸರಿಯಾಗೇ ಇದೆ."

"ಆಗಲಿ ಅಪ್ಪಾಜಿ. ನಾನು ನಾಳೆಯೇ ರಾಜಗುರುಗಳ ಮುಂದೆ ಈ ವಿಚಾರ ಅರಿಕೆ ಮಾಡಿಕೊಳ್ಳುತ್ತೇನೆ."

ಕೊಮರಯ್ಯ ಆ ದಿನ ಅಷ್ಟು ಮಾತನಾಡಿದ್ದೇ ಹೆಚ್ಚು. ಆತನ ಸ್ವಭಾವ ವಿಚಿತ್ರ. ಮಾತಿಗಿಂತ ಮೌನ ಹೆಚ್ಚು. ಹೇಳಬೇಕಾದುದನ್ನೂ ಬಹುವಾಗಿ ಅಂಗ ವಿನ್ಯಾಸದ ಮೂಲಕವೇ ಸೂಚಿಸಿಬಿಡುತ್ತಿದ್ದನು. ಊಟಕ್ಕೆ ಕುಳಿತಾಗಲೂ ಸಾಕು ಬೇಕುಗಳೆಲ್ಲ ಕೈ ಮುಖಗಳಿಂದಲೇ ತಿಳಿಸಿಬಿಡುತ್ತಿದ್ದನು. ಇತ್ತೀಚೆಗಂತೂ ಇದು ಅಧಿಕವಾಗಿತ್ತು. ದಿನದಿಂದ ದಿನಕ್ಕೆ ಕೊಮರಯ್ಯ ಏನನ್ನೋ ಯೋಚಿಸುತ್ತಿದ್ದನು. ಸದಾ ಅಂತರ್ಮುಖಿಯಾಗಿರುತ್ತಿದ್ದನು.

ಪದ್ಮಪ ತಾತನ ಅಚ್ಚುಮೆಚ್ಚು. ತಾತನ ತೊಡೆತೋಳುಗಳೇ ಪಂಪನ ತೂಗು ತೊಟ್ಟಿಲು. ಅಜ್ಜನ ಎರಕದಲ್ಲಿ ಬೆಳೆದ ಫಲವಾಗಿ ಕೊಮರಯ್ಯನ ಕೆಲವು ಗುಣಗಳು ಮೊಮ್ಮಗನಲ್ಲೂ ಮನೆ ಮಾಡಿದುವು. ತಾತನಂತೆ ಪಂಪನೂ ಮಿತಭಾಷಿಯಾಗಿ ಬೆಳೆದ. ಕೊಮರಯ್ಯನ ತುಂಬು ಗಾಂಭೀರ್ಯ ಕೂಡ ಪಂಪನಲ್ಲೂ ಮೈ ತಳೆಯಿತು. ಅಜ್ಜ ವೇದ ವೇದಾಂಗಗಳನ್ನು ಓದುವಾಗಲೂ ಪಂಪ ಬಳಿಯಲ್ಲೇ ಕುಳಿತು ಆಲಿಸುತ್ತಿದ್ದ. ಎಳೆಯ ಮಿದುಳು ಅದನ್ನೆಲ್ಲ ತನ್ನ ಉಗ್ರಾಣದಲ್ಲಿ ಶೇಖರಿಸಿಕೊಂಡಿತು. ಕೊಮರಯ್ಯ ಸಕಲ ವೇದಪಾರಂಗತ. ಕ್ರಮಪಾಠ ಜಟಾಪಾಠ ಪದಪಾಠ ಎಲ್ಲದರಲ್ಲೂ ನಿಷ್ಣಾತ. ಆತ್ಮೀಯರು ಕೊಮರಯ್ಯನನ್ನು 'ನಾಟ್ಯಾಚಾರ್ಯ ಭರತಮುನಿ' ಎಂದು ನಿರ್ದೇಶಿಸುತ್ತಿದ್ದರು. ಅನೇಕ ಜನ ಅವನಲ್ಲಿ ಶಿಷ್ಯತ್ವಕ್ಕಾಗಿ ಸೆರಗೊಡ್ಡಿ ಯಾಚಿಸಿದರು. ಆದರೆ ಆತ ಅದಕ್ಕೆ ಒಪ್ಪಲಿಲ್ಲ. ತನ್ನ ಮನೆ ಗುರುಮನೆಯಾಗಿರುವುದು ಅವನಿಗೆ ಬೇಕಿರಲಿಲ್ಲ. ಅರಮನೆಯಿಂದ ಬಂದ ಕರೆಯನ್ನೂ ಕೊಮರಯ್ಯ ಗೌರವದಿಂದ ನಿರಾಕರಿಸಿದ್ದ. ಲೌಕಿಕ ಲಾಭಗಳಾದ ಕೀರ್ತಿ, ಪ್ರತಿಷ್ಠೆ, ಪದವಿ, ಪ್ರಶಸ್ತಿ, ಪುರಸ್ಕಾರಗಳ ಬಗೆಗೆ ಆಸಕ್ತಿಯೇ ಇರಲಿಲ್ಲ. ಅದಕ್ಕೆ ಕಾರಣವೂ ಇತ್ತು.

* * * * *

ಕೊಮರಯ್ಯನ ತಂದೆ ಅಭಿಮಾನಚಂದ್ರ ಶುದ್ಧ ವೈದಿಕ ಜ್ಞಾನಿ. ಯಜ್ಞ ಯಾಗಾದಿಗಳಲ್ಲಿ ನಿಷ್ಠಾವಂತ, ವೇದೋಪನಿಷತ್ತುಗಳಲ್ಲೂ ಪರಮ ಪಾರಂಗತ.

ಅನೇಕ ಕ್ರತುಗಳ ಕರ್ಮಠ. ತಮ್ಮ ವಂಶದ ಪೂರ್ವಿಕರು ಹಲವು ರಾಜರುಗಳಿಂದ ಆಗ್ನ್ಯಾಧೇಯ, ಪೌಂಡರೀಕ ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯಿ, ಬಹು ಸುವರ್ಣ, ರಾಜಸೂಯ, ಅಪ್ತೋರ್ಯಾಮ, ಗವಾಮಾಯನ, ಅಶ್ವಮೇಧ ಮೊದಲಾದ ಯಾಗಗಳನ್ನು ಮಾಡಿಸಿದವರೆಂಬ ಸಂಗತಿಯನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ, ಒಮ್ಮೆ ಆ ಪೊಳಲಿಗೆ ಜಿನಸೇನಾಚಾರ್ಯರು ಧರ್ಮವಿಹಾರಿಗಳಾಗಿ ಆಗಮಿಸುವರೆಂದು ಸ್ವಾಗತಕ್ಕೆ ಸಿದ್ಧತೆಗಳೆಲ್ಲ ನಡೆಯುತ್ತಿದ್ದವು. ಆಗ ಅಭಿಮಾನಚಂದ್ರ ದೊಡ್ಡಯಾಗಕ್ಕೆ ಮೊದಲೇ ನಿಶ್ಚಯಿಸಿದ್ದಂತೆ ತೊಡಗಿದ. ನೆರೆಯ ನಗರಗಳ ಜೈನರೆಲ್ಲ ತಂಡತಂಡವಾಗಿ ಅವನಲ್ಲಿ ಬಂದು ಬಿನ್ನೈಸಿಕೊಂಡರು. ಆತ ಯಾಗ ನಿಲ್ಲಿಸಲು ಒಪ್ಪಲಿಲ್ಲ. ಭೂಶೋಧನೆ ಕಾರ್ಯ ಮುಗಿದಿತ್ತು; ನದೀ ತೀರದಲ್ಲಿ ವಿಶಾಲವಾದ ಪ್ರಶಾಂತ ಸ್ಥಳದಲ್ಲಿ ಆರಂಭಿಸಿದ ಯಾಗವನ್ನು ಅರ್ಧಕ್ಕೆ ನಿಲ್ಲಿಸುವುದು ಶಾಸ್ತ್ರ ನಿಷಿದ್ಧ. ಯಾಗ ಅರೆಬರೆಯಾದರೆ ಮಹಾಪಾಪದ ಪ್ರಾಪ್ತಿ ಕಟ್ಟಿಟ್ಟಬುತ್ತಿಯೆಂದು ತಿಳಿಸಿ ಕಳಿಸಿಬಿಟ್ಟ. ಜಿನಸೇನರು ಪಟ್ಟಣದೊಳಕ್ಕೆ ಬರದೆ ಊರ ಹೊರಗೇ ಹಾದು ಮುಂದಿನ ನಗರದತ್ತ ಹೋದರು.

ಅಭಿಮಾನಚಂದ್ರನಿಗೆ ಇದು ತಿಳಿಯಿತು. ಯಜ್ಞಕಾರ್ಯವೆಲ್ಲ ಮುಗಿವ ತನಕ ಕಾದ. ಆರು ತಿಂಗಳ ತನಕ ನಡೆದಿತ್ತು. ಹಲವಾರು ಗ್ರಾಮಗಳು, ಹಸು ಆನೆ ಕುದುರೆಗಳು, ಬೆಳ್ಳಿಯ ಕೊಡ, ಆಭರಣಗಳು, ರಥಗಳು, ಕಾರ್ಷಾಪಣಗಳು, ವಸ್ತ್ರಗಳು–ಮೊದಲಾದ ಭಾರಿ ದಾನ ಸನ್ಮಾನಗಳನ್ನು ತಾನೂ ಪಡೆದು ಇತರರಿಗೂ ಕೊಡಿಸಿದ. ಶುಚಿರ್ಭೂತನಾದ ಮೇಲೆ ಜಿನಸೇನರಲ್ಲಿಗೇ ಹೊರಟ. ಕೋಪದಿಂದ ಬುಸುಗುಟ್ಟುತ್ತ ಹೆಬ್ಬಾವಿನಂತೆ ಬಂದ. ಆಚಾರ್ಯರು ಮುಗುಳು ನಗೆಯಿಂದ ಬರಮಾಡಿಕೊಂಡರು. ನಿರ್ಮಲವಾದ ಮುಖಮಂಡಲದಿಂದ ತೇಜಸ್ವಿಗಳಾಗಿ ಜ್ಞಾನ ಮೂರ್ತಿಯಂತೆ ಕುಳಿತಿದ್ದ ತಪೋಧನರನ್ನು ಕಂಡೇ ಅವನ ಕೋಪ ಕರಗತೊಡಗಿತ್ತು. ಅವರ ಮಂದಸ್ಮಿತದಿಂದ ಕೋಪದ ಕಾವು ತಣ್ಣಗಾಯಿತು. ಸಾಷ್ಟಾಂಗವೆರಗದೆ ಕೇವಲ ಕೈಮುಗಿದು ಚಿತ್ರಾರ್ಪಿತನಂತೆ ಕುಳಿತ. ಭಗವಾನ್ ಜಿನಸೇನರೇ ಮಾತಿಗೆ ತೊಡಗಿದರು.

"ನೀವು ಬಂದದ್ದು ಲೇಸಾಯಿತು. ಎಲ್ಲಾ ಚೆನ್ನು ತಾನೆ?"

"ಹೌದು ಸ್ವಾಮಿಗಳೆ. ತಮ್ಮೊಡನೆ ಒಂದು ಮುಖ್ಯ ವಿಷಯ ಪ್ರಸ್ತಾಪಿಸುವ ಸಲುವಾಗಿ ತಮ್ಮಲ್ಲಿಗೇ ಬಂದಿದ್ದೇನೆ."

"ತುಂಬಾ ಸಂತೋಷ. ಯಾವ ಸಂಕೋಚವೂ ಇಲ್ಲದೆ ಮಾತನಾಡಬಹುದು."

ಆಚಾರ್ಯರ ಅಪ್ಪಣೆಯೇನೋ ಆಯಿತು. ಆದರೂ ಏನು ಮಾತನಾಡುವುದು? ಹೇಗೆ ಮಾತಿಗೆ ಪೀಠಿಕೆ ಹಾಕುವುದು? ಮಾತಿನಲ್ಲಿ ಸಂಯಮ ಸಡಿಲಿದರೆ? ಬಂದ ಉದ್ದೇಶ ನೆರವೇರಬೇಕೆಂಬುದು ನಿಶ್ಚಯ.

ಅಭಿಮಾನಚಂದ್ರ ಮನದಾಳದಲ್ಲಿ ಕಿನಿಸಿ ಕಿಂಕಿರಿವೋಗಿದ್ದ. ಮೇಲೆ ಅದನ್ನು ತೋರಗೊಡಲೊಲ್ಲ. ಗುರುಹಿರಿಯರ ಮುಂದೆ ನಯವಿನಯಗಳ ಉಲ್ಲಂಘನೆ ತರವಲ್ಲವೆಂದು ತೀರ್ಮಾನಿಸಿದ. ಕಂಠದವರೆಗೆ ಬಂದ ಕೋಪವನ್ನು ನುಂಗಿಕೊಂಡ. ಮಾತಿಗೆ ಎಲ್ಲಿ ಗಡಸು ಬಂದೀತೋ ಎಂದು ಮಾರ್ದವತೆ ತಂದುಕೊಂಡು ಎಚ್ಚರದಿಂದ ಮಾತಿಗೆ ತೊಡಗಿದ.

"ಭಗವಾನ್, ತಾವು ಆರು ತಿಂಗಳ ಹಿಂದೆ ನಮ್ಮ ನಗರಕ್ಕೆ ಬರುವಿರೆಂದು ಜೈನರೂ ಜೈನೇತರರು ವಿಜೃಂಭಣೆಯ ಸ್ವಾಗತಕ್ಕೆ ಅಣಿ ಮಾಡಿದ್ದರು. ಆದರೆ ತಾವು ನಗರದ ಬಳಿಗೆ ಬಂದೂ ನಗರದೊಳಕ್ಕೆ ಕಾಲಿಡದೆ ಹೊರದಾರಿಯಲ್ಲೇ ಮುಂದೆ ಸಾಗಿದಿರೆಂದು ತಿಳಿಯಬಂತು. ಅದೇಕೆ ಹಾಗಾಯಿತೆಂದು ಕಾರಣವನ್ನು ಕೇಳಬಹುದೇ ಸ್ವಾಮಿನ್." ತನಗೆ ಅದರ ಕಾರಣ ತಿಳಿದಿದ್ದರೂ ಕೇಳಿದ.

"ಪ್ರಾಜ್ಞರಾದ ನಿಮಗೆ ಈ ವಿಷಯದ ಕಾರಣವನ್ನು ಪ್ರತ್ಯೇಕವಾಗಿ ವಿವರಿಸಬೇಕಿಲ್ಲವಲ್ಲವೆ? ನೀವು ತಿಳಿದಂತೆ, ಹಿಂಸೆಯು ಎಲ್ಲಿ ನಡೆಯುತ್ತದೆಯೋ ಅಲ್ಲಿಗೆ ಜೈನರೂ ಜೈನಯತಿಗಳೂ ಹೋಗುವುದಿಲ್ಲ."

"ಏನು ಸ್ವಾಮಿಗಳೇ ತಾವು ಹೇಳುವುದು! ನಮ್ಮ ನಗರದಲ್ಲಿ ಯಾವ ಹಿಂಸೆಯೂ ತಾವು ಬರುವ ವೇಳೆಯಲ್ಲಿ ನಡೆಯಲಿಲ್ಲವಲ್ಲಾ!"

"ನಾವು ನಿಮ್ಮ ನಗರವನ್ನು ಹೊಗುವ ಸಮಯದಲ್ಲೇ ಅಲ್ಲಿ ಯಾಗ ನಡೆಯುತ್ತಿದ್ದಿತು. ಆ ಯಾಗದ ಧೂಮ ದೂರದಿಂದಲೇ ದಾರಿಹೋಕರಿಗೆಲ್ಲ ಕಾಣುತ್ತಿತ್ತು."

"ತಮ್ಮ ಅಭಿಪ್ರಾಯದಲ್ಲಿ ಯಾಗಾದಿಗಳನ್ನು ನಡೆಸುವುದು ಹಿಂಸೆಯೆ?"

"ಯಾಗಾದಿಗಳನ್ನಷ್ಟೇ ನಡೆಸುವುದು ಹಿಂಸೆಯಲ್ಲ."

"ಹಾಗಾದರೆ ತಮ್ಮ ಮಾತಿನ ಅರ್ಥ?"

"ಯಾಗಾದಿಗಳ ಕಾಲದಲ್ಲಿ ನಡೆಸುವ ಬಲಿ, ಪ್ರಾಣಿವಧೆ ಹಿಂಸೆಯಲ್ಲವೆ?"

"ಅದು ಯಜ್ಞದ ನಿಯಮ. ನಿಯಮ ತಪ್ಪಿ ನಡೆಯುವುದು ಶಾಸ್ತ್ರ ಸಮ್ಮತವಾಗಲಾರದು. ವಿಧಿಬದ್ಧವಾಗಿ ನಡೆದಾಗಲೇ ಅದರ ಫಲ ಸಿದ್ಧಿ."

"ನಮಗೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಮಾನವ ತನ್ನ ಸ್ವಾರ್ಥ ಸಾಧನೆಗಾಗಿ ಮೂಕ ಪ್ರಾಣಿಗಳನ್ನು ಬಲಿಕೊಡಬೇಕೆಂದು ಯಾವ ಶಾಸ್ತ್ರ ಆಗಮ

ಪುರಾಣೇತಿಹಾಸಗಳಲ್ಲೂ ಬಹುಶಃ ಇರಲಾರದು."

"ಹಾಗೆ ಇರುವುದರಿಂದಲೇ ಇದು ಅನೂಚಾನವಾಗಿ ನಡೆದು ಬಂದಿದೆ."

"ಆ ಭಾಗ ಪ್ರಕ್ಷಿಪ್ತವಿರಬಹುದು. ಅಲ್ಲದೆ ಅಂಥ ಹೇಯ ಕೃತ್ಯದಿಂದ ಯಾವ ಪ್ರಯೋಜನ ಪಡೆಯಲು ಸಾಧ್ಯವಿದೆ?"

"ತಾವು ಯಜ್ಞ ಯಾಗಾದಿಗಳ ವಿರೋಧಿಯೆಂದು ನಾವು ತಿಳಿಯಬೇಕಾಗುತ್ತದೆ."

"ಅದು ಅಪಾರ್ಥ ಕಲ್ಪನೆಯಾದೀತಲ್ಲವೆ? ನಮ್ಮ ಉದ್ದೇಶವನ್ನು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಿ."

"ನಮ್ಮ ನಾಡಿನಲ್ಲಿ ಸಾವಿರಾರು ವರ್ಷಗಳಿಂದ ಈ ಯಜ್ಞನಡೆದುಬಂದಿದೆ. ಇದ ಸರಿಯಲ್ಲವಾಗಿದ್ದರೆ ಇಂದಿನ ತನಕ ಈ ಬಲಿ ಮುಂದುವರಿಯುವುದು ಸಾಧ್ಯವಿತ್ತೆ?"

"ಸಾವಿರಾರು ವರ್ಷಗಳಿಂದ ರೂಢಿಯಲ್ಲಿದ್ದ ಮಾತ್ರಕ್ಕೆ ಅಸತ್ಯ ಸತ್ಯವಾಗದು, ಹಿಂಸೆ ಅಹಿಂಸೆಯಾಗದು."

"ತಾವು ಇಲ್ಲಿ ಒಂದು ವಿಷಯ ಗಮನಿಸಬೇಕೆಂದು ಕೋರುತ್ತೇನೆ. ನನ್ನ ತೀರ್ಥರೂಪರನ್ನು ತಾವು ಬಲ್ಲಿರಿ, ಅಲ್ಲವೆ?"

"ಮಾಧವ ಸೋಮಯಾಜಿಗಳನ್ನು ತಿಳಿಯದವರು ಯಾರು? ಅವರಷ್ಟು ಬಲ್ಲಿದರು ಈ ಸುತ್ತಮುತ್ತ ಯಾರೂ ಇಲ್ಲ. ವೇದ ಪುರಾಣ ಶಾಸ್ತ್ರಗಳೆಲ್ಲ ಅವರಿಗೆ ವಾಚೋ ವಿಧೇಯ......"

"ಸ್ವಾಮಿನ್ ಸ್ವಲ್ಪ ತಾಳಿ! ತಾವು ಇಷ್ಟು ಮುಕ್ತ ಕಂಠದಿಂದ ಪ್ರಶಂಸಿಸುತ್ತಿರುವ ಮಾಧವ ಸೋಮಯಾಜಿಗಳು ಹಲವಾರು ಯಜ್ಞಗಳ ಅಧ್ವರ್ಯುಗಳಾಗಿದ್ದರೆಂಬ ವಿಚಾರ ಗೊತ್ತಿದೆಯಷ್ಟೆ?"

"ಅಹುದು. ಅದನ್ನೇ ನಾವು ಮುಂದೆ ಹೇಳಬೇಕೆಂದಿದ್ದೆವು. ಮಾಧವ ಸೋಮಯಾಜಿಗಳು ಅಷ್ಟೆಲ್ಲ ಪ್ರಗಲ್ಭ ಪಂಡಿತವರೇಣ್ಯರಾಗಿದ್ದೂ ತಮ್ಮೆಲ್ಲ ಕೀರ್ತಿಯನ್ನೂ ಕರಿದು ಮಾಡಿಬಿಟ್ಟರು!"

"ದುಡಿಕಿ ನುಡಿದಿರಿ ಸ್ವಾಮಿ. ತಮ್ಮ ಪವಿತ್ರ ಮುಖ ಕಮಲದಿಂದ ಇಂತಹ ಮಾತುಗಳು ಹೊಮ್ಮಬಾರದು. ನನ್ನ ತಂದೆಯವರ ಬಗೆಗೆ ಹೀಗೆ ಆಡಿದವರೇ ಈ ನೆಲದಲ್ಲಿ ಇಲ್ಲ!"

"ನಿಜ ಕೆಲವೊಮ್ಮೆ ಕಠಿಣವಾಗಿರುತ್ತದೆ. ಆದರೆ ಯತಿಗಳಾದವರು ಎಷ್ಟೇ ನಿಷ್ಠುರವಾದರೂ ತ್ರಿಕಾಲಾಬಾಧಿತ ಸತ್ಯವನ್ನೇ ಹೇಳಬೇಕಾಗುತ್ತದೆ.

ನನ್ನಿಯನ್ನಾಡುವುದು ನಮ್ಮ ನಿತ್ಯದ ನಡೆ. ನೀವು ನೊಂದುಕೊಳ್ಳದೆ ನೆಮ್ಮದಿಯಿಂದ ಯೋಚಿಸಿ ನೋಡಿ."

"ತಾವು ನಮ್ಮ ಆರ್ಯಧರ್ಮಕ್ಕಿಂತ ತಮ್ಮ ಜಿನಧರ್ಮ ದೊಡ್ಡದೆಂಬ ಭಾವನೆಯಿಂದ ಹೀಗೆ ಹೇಳುತ್ತಿದ್ದೀರಲ್ಲವೇ?"

"ಹಾಗೆಂದು ನಾವು ಹೇಳಿದೆವೆ? ಅವರವರ ಧರ್ಮ ಅವರವರಿಗೆ ದೊಡ್ಡದು. ಆದರೆ ಎಲ್ಲಕ್ಕೂ ದೊಡ್ಡದು ಮಾನವ ಜನ್ಮ ಮತ್ತು ಮಾನವ ಧರ್ಮ. ಮಾನವ ಸೃಷ್ಟಿಯ ಶಿಖರ. ಆತ ಪಾಲಿಸಲು ಯೋಗ್ಯವಾದುದು ಅಹಿಂಸಾ ಮಾರ್ಗ."

"ವೈದಿಕ ಧರ್ಮವೂ ಅಹಿಂಸೆಯನ್ನೇ ಆಧರಿಸಿ ನಿಂತಿದೆಯಲ್ಲವೆ?"

"ಅಹುದು. ಜೈನಧರ್ಮ ವೈದಿಕ ಧರ್ಮಗಳು ಅಹಿಂಸೆಯೆಂಬ ನಾಣ್ಯದ ಎರಡು ಮುಖಗಳು."

''ಅದನ್ನು ಒಪ್ಪಿಯೂ ತಾವು, ನಮ್ಮ ತಂದೆ ಮಾಧವ ಸೋಮಯಾಜಿಯವರು ತಮ್ಮ ಯಶಸ್ಸನ್ನು ಮಾಸಿಕೊಂಡರೆಂದು ಅದು ಹೇಗೆ ಹೇಳುವಿರಿ?"

"ಅದು ಚಂದ್ರನಲ್ಲಿ ಕಿರಿದು ಕಪ್ಪು ಇದ್ದಂತೆ. ಮಾಧವ ಸೋಮಯಾಜಿಗಳ ಧವಳ ಕೀರ್ತಿಯೆಲ್ಲ ಅವರು ನಡೆಸಿದ ಯಾಗಧೂಮದಲ್ಲಿ ಮುಚ್ಚಿಹೋಯಿತು. ಈ ವಿಚಾರವನ್ನು ಯಾರೂ ಹೇಳಿಲ್ಲವೆಂದು ನೀವು ಆಗಲೇ ತಿಳಿಸಿದಿರಿ. ಆದರೆ ಕನ್ನಡ ನಾಡಿನ ಬಹುಜನ ಅಹಿಂಸಾ ಪುತ್ರರೆಲ್ಲ ನಾವು ಅಂದುಕೊಂಡಂತೆಯೇ ಭಾವಿಸಿದ್ದಾರೆ."

"ಅಂತಾದರೆ ಜಿನಮುನಿಗಳೆಲ್ಲ ನಮ್ಮ ಯಾಗಾದಿಗಳ ಅಪಪ್ರಚಾರಕ್ಕೆ ಟೊಂಕಕಟ್ಟಿ ನಿಂತಿದ್ದೀರೆಂದಾಯಿತು."

"ನೀವು ತಪ್ಪು ತಿಳಿದಿದ್ದೀರಿ. ಮಿಥ್ಯೆಯ, ಹಿಂಸೆಯ ವಿರುದ್ಧ ನಮ್ಮ ಪ್ರಚಾರವೇ ಹೊರತು ಸತ್ಯದ ವಿರುದ್ಧವಾಗಿ ಅಲ್ಲ. ಯತಿಗಳು ಎಂದೂ ಇನ್ನೊಬ್ಬರನ್ನು ದೂಷಿಸುವುದಿಲ್ಲ. ಕಡೆಗೆ ತಮ್ಮ ಹಗೆಗಳನ್ನೂ ಪ್ರೀತಿಸುತ್ತಾರೆ. ಮೇಲು ಕೀಳು ಎಂಬ ತಾರತಮ್ಯವಿಲ್ಲ. ಎಲ್ಲವನ್ನೂ ಎಲ್ಲರನ್ನೂ ಸಮನಾಗಿ ಸಮಾನವಾಗಿ ನಿರ್ಮಮಕಾರ ದೃಷ್ಟಿಯಿಂದ ನೋಡುವುದು ಯತಿಯ ಪ್ರಥಮ ಕರ್ತವ್ಯ."

"ಯಾಗಾದಿಗಳನ್ನು ನಡೆಸುವ ಎಲ್ಲರೂ ಅದರ ಕ್ರಮದಂತೆ ವಿಧ್ಯುಕ್ತನಾಗೇ ಎಲ್ಲ ಏರ್ಪಾಟುಗಳನ್ನೂ ಮಾಡುತ್ತಿದ್ದಾರೆ. ಅವರೆಲ್ಲ ಮಹಾ ಮೇಧಾವಿಗಳು. ತಮ್ಮ ಅಭಿಪ್ರಾಯದಲ್ಲಿ ಈ ಮೇಧಾವಿಗಳಿಗೆ ಮನ್ನಣೆಯೇ ಇಲ್ಲವೆ?"

“ಮನ್ನಣೆಯ ಮೇಧಾವಿತನದ ಮಾತು ಬೇರೆ. ಅವರ ಶಕ್ತಿ ಸಾಮರ್ಥ್ಯ ಪಾಂಡಿತ್ಯಗಳು ಪ್ರಶಂಸನೀಯವೆ. ಆದರೆ ಹೆಚ್ಚು ಜನ ಒಪ್ಪಿದ ಮಾತ್ರಕ್ಕೆ ಹಿಂಸೆ ಅಹಿಂಸೆಯಾಗದು. ಅಹಿಂಸೆ ಹಿಂಸೆಯಾಗದು. ಎಲ್ಲಾ ಧರ್ಮಗಳ ಮೂಲವೂ ದಯೆಯೇ ಆಗಿದೆ. ಜೀವದಯೆಯೇ ಜೈನಧರ್ಮ ಎಂಬ ವಿಚಾರವನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ವೈದಿಕಧರ್ಮವೂ ಅಷ್ಟೇ. ಉಳಿದ ಧರ್ಮಗಳೂ ಅಷ್ಟೆ. ಅಲ್ಲದೆ ನಾವು ಎಲ್ಲಾ ಧರ್ಮಗಳನ್ನೂ ಗೌರವದಿಂದ ಕಾಣುತ್ತೇವೆ. ಆದರೆ ಯಾಗದಲ್ಲಿ ಪಶುಬಲಿಯಾಗಿ ಅದರ ತುಂಡುಗಳನ್ನು ಅಧ್ವರ್ಯುವೂ ಋತ್ವಿಜರೂ ತಿನ್ನುತ್ತಾರೆ. ಇದು ಹಿಂಸೆ ಮಾಡಿ ಮಾಂಸ ತಿಂದಂತೆ ಅಲ್ಲವೆ?”

“ಸ್ವಾಮಿನ್, ಅದು ಆ ಪಶುವಿನ ಸದ್ಗತಿಗೋಸ್ಕರ ಮಾಡುವ ಕ್ರಿಯೆ. ಯಾಗದಲ್ಲಿ ಪಾಲುಗೊಂಡವರಿಗೆಲ್ಲ, ಅಷ್ಟೇಕೆ ಯಾಗ ಮಂಟಪದಲ್ಲಿ ನೆರೆದವರಿಗೆಲ್ಲ ಸದ್ಗತಿ ಉಂಟು. ಯಜ್ಞಗಳನ್ನು ಹೆಚ್ಚು ಮಾಡಿದರೆ ಇಂದ್ರಪದವಿಯೂ ಉಂಟು.”

“ಹಿಂಸಾಚಾರದಿಂದ ಸದ್ಗತಿ ಉಂಟೆಂದರೆ ವಿಚಿತ್ರವಲ್ಲವೆ? ಆದುದರಿಂದಲೇ ನಾವು ಯಾಗ ಪ್ರದೇಶದಿಂದ ದೂರ ಹೊರಟಿದ್ದು. ಅಲ್ಲದೆ ಇಂದ್ರಪದವಿ ಪ್ರಾಪ್ತಿಗಾಗಿ ಹಿಂಸಾಮಾರ್ಗ ಹಿಡಿಯುವುದು ಸರಿಯೆ? ಇಂದ್ರ ಪದವಿಗಿಂತ ದೊಡ್ಡ ಪದವಿ ಮುಕ್ತಿಪದವಿ!”

ಅಭಿಮಾನಚಂದ್ರನ ಅಭಿಮಾನಕ್ಕೆ ಆಘಾತವಾಯಿತು. ಆತ ನಿರುತ್ತರನಾದ. ಜಿನಸೇನರನ್ನು ನೋಡಲು ಬಂದಾಗ ಇದ್ದ ಆತ್ಮಪ್ರತ್ಯಯ ಹೋಗುವಾಗ ಇರಲಿಲ್ಲ. ಜಿನಸೇನರ ವಾದಸರಣಿಗೆ ಸಂಪೂರ್ಣ ಮಣಿಯದಿದರೂ ಬಿಗಿ ಸಡಿಲವಾಗಿತ್ತು. ಜಿನಸೇನರಿಗೆ ಪ್ರಣಾಮ ಮಾಡಿ ಅಪ್ಪಣೆ ಬೇಡಿದ.

“ಅಭಿಮಾನಚಂದ್ರರೇ, ನಮ್ಮ ಮಾತುಗಳನ್ನು ಆತುರಪಡದೆ ಬಿಡುವಿನಲ್ಲಿ ಮತ್ತೆ ಪರಿಭಾವಿಸಿರಿ. ನೀವು ಹಿಂಸೆ ಅಹಿಂಸೆಗಳ ಸ್ವರೂಪ ತಿಳಿಯಲು ಸಾಧ್ಯವಾದೀತು. ಅಹಿಂಸಾ ಪರಮೋ ಧರ್ಮಃ ಎಂಬುದನ್ನು ಒಪ್ಪುವಿರಿ. ದಯೆ, ಧರ್ಮ, ದಾನ, ತಪ, ಶೀಲ ಮೊದಲಾದ ಗುಣಗಳನ್ನು ಆಧರಿಸಿ ಬದುಕು ನಡೆಸಿರಿ. ಇವೇ ಮಾನವರನ್ನು ಉನ್ನತಿಗೆ ಕರೆದೊಯ್ಯುವ ಗುಣಗಳು. ಒಳ್ಳೆಯದು, ಹೋಗಿ ಬನ್ನಿ, ಧರ್ಮ ವೃದ್ಧಿರಸ್ತು” ಎಂದು ಆಶೀರ್ವದಿಸಿ ಕಳಿಸಿಕೊಟ್ಟರು. ಚಿಂತಿಸಿದಂತೆಲ್ಲ ಅವನ ಚಿತ್ತಭಿತ್ತಿಯಲ್ಲಿ ಜಿನಸೇನರ ಪವಿತ್ರ ಚಿತ್ರ ಪ್ರತಿಷ್ಠಾಪಿತವಾಗ ತೊಡಗಿತು.

ಊರಿಗೆ ಹಿಂತಿರುಗಿ ಬಂದ ಮೇಲೆ ಅಭಿಮಾನಚಂದ್ರನ ನಡವಳಿಕೆಯಲ್ಲಿ ಬಹಳ ಪರಿವರ್ತನೆಯಾಯಿತು. ಯಾಗಾದಿಗಳಲ್ಲಿ ಆಸಕ್ತಿ ಶಿಥಿಲವಾಯಿತು.

ಕೊಮರಯ್ಯನಿಗೆ ತನ್ನ ತಂದೆಯಲ್ಲಾದ ಮಾರ್ಪಾಟಿಗೆ ಮೊದಲು ಮೊದಲು ಕಾರಣ ತಿಳಿಯಲಿಲ್ಲ. ತಾತ ಮಾಧವ ಸೋಮಯಾಜಿಗಳ ಮರಣದಿಂದ ಆದ ಗಾಯ ಮಾಯಲಿಲ್ಲವೆಂದು ಭಾವಿಸಿದ. ಕೆಲವು ದಿನಗಳಲ್ಲಿ ಮೌನದ ಕಾರಣ ತಿಳಿಯಿತು. ಜೈನಧರ್ಮದ ದೋಷಗಳನ್ನು ಹುಡುಕಿ ತೆಗೆದು ಜಿನಸೇನರ ಬಾಯಿ ಕಟ್ಟಿಸಬೇಕೆಂದು ಅಭಿಮಾನಚಂದ್ರ ಜೈನ ಆಗಮಗಳನ್ನೆಲ್ಲ ಪಾರಾಯಣ ಮಾಡತೊಡಗಿದ. ವೇದೋಪನಿಷತ್ ಬ್ರಾಹ್ಮಣಗಳ ಸ್ಥಳದಲ್ಲಿ ಷಟ್ಖಂಡಾಗಮ ಪಾಕೃತ ಧವಳ ಗ್ರಂಥಗಳ ಓಲೆಕಟ್ಟುಗಳು ಬಂದುವು. ಆಗತಾನೆ ಪ್ರಕಟವಾಗಿದ್ದ ಪೂರ್ವಪುರಾಣವನ್ನೂ ಅಭ್ಯಾಸ ಮಾಡಿದ.

ಓದುತ್ತ ಓದುತ್ತ ಜಿನಧರ್ಮದ ರುಚಿ ಹತ್ತಿತು. ಮೆಚ್ಚುಗೆ ಮೂಡಿತು. ಹಿಟ್ಟಿನ ಕೋಳಿ ಬಲಿ ಕೊಟ್ಟಷ್ಟರಿಂದಲೇ ಕಷ್ಟ ಕಾರ್ಪಣ್ಯಗಳ ಭವಾವಳಿಯಲ್ಲಿ ತೊಳಲಿ ಬಳಲಿದ ಜೀವದ ಕತೆ ನೆನಪಾಯಿತು. ಯಾಗದಲ್ಲಿ ಪಶುಬಲಿ ಕೊಡುವವರ ಗತಿಯೇನು ಎಂದು ಚಿಂತಿಸಿದ. ಆ ನೆನಪೇ ನಡುಕ ತಂದಿತು. ಕ್ರಮೇಣ ಉಪವಾಸಾದಿಗಳಿಂದ ಆತ್ಮಚಿಂತನೆಗೆ ತೊಡಗಿದ. ಹಿಂದೆ ಚೈತ್ಯಾಲಯಗಳ ಕಡೆಗೆ ಮುಖ ಕೂಡ ಮಾಡಿ ನೋಡುತ್ತಿರಲಿಲ್ಲ. ಈಗ ಚೈತ್ಯಾಲಯಗಳ ಬಳಿಗೆ ಹೋಗತೊಡಗಿದ. ಪ್ರಾರಂಭದಲ್ಲಿ ಅಗ್ರಹಾರದವರು ಯಾರಾದರೂ ಕಂಡಾರೇನೊ ಎಂದು ಭೀತನಾಗುತ್ತಿದ್ದ, ಕಡೆಕಡೆಗೆ ಆತ್ಮಜ್ಞಾನಿಗೆ ಯಾವ ಮತವಾದರೇನು? ಎಂಬ ಚಿತ್ತಸ್ಥಿತಿಗೆ ಬಂದ. ಕೊಮರಯ್ಯ ತಂದೆಯಲ್ಲಾದ ವ್ಯತ್ಯಾಸವನ್ನು ಚೆನ್ನಾಗಿ ಗುರುತಿಸಿದ. ಅವರನ್ನೇ ಹಿಂಬಾಲಿಸಿ ಜಿನಬಸದಿಗಳ ಹತ್ತಿರ ಹೋಗಿ ಬಂದ. ಬಸದಿಯ ಹೊರಗೆ ಎತ್ತರವಾಗಿ ನಿಂತ ಮಾನಸ್ತಂಭ ನೋಡಿ ಕುತೂಹಲ ಉಂಟಾಯಿತು. ಮನೆಯಲ್ಲಿ ಜೈನ ಆಗಮಗಳ ಕಡತಗಳು ಈಗ ಹಲವಾರಿದ್ದವು. ತಾನೂ ಓದತೊಡಗಿದ. ತಂದೆ ತನ್ನನ್ನು ಗಂಧದ ಕೊರಡಿನಂತೆ ತೇದು, ವೇದ ಪಾರಂಗತನನ್ನಾಗಿಸಿದ್ದರು. ಸಂಸ್ಕೃತ, ತೆಲುಗು, ಕನ್ನಡಗಳಲ್ಲಿ ನಿಷ್ಣಾತನಾಗಿದ್ದ. ಜೈನಾಗಮಗಳ ಸಾರವನ್ನು ಸುಲಭವಾಗಿ ಗ್ರಹಿಸಿದ. ತಂದೆಯ ಮನಸ್ಸಿನ ಆಳದಲ್ಲಿ ಯಾವ ಅಲ್ಲೋಲ ಕಲ್ಲೋಲ ನಡೆಯುತ್ತಿದೆಯೆಂಬುದನ್ನು ಅರಿತ. ಆದರೂ ಅವರೊಡನೆ ಮಾತನಾಡಲು ಅಳುಕು.

ಅಭಿಮಾನಚಂದ್ರನಿಗೆ ತನ್ನ ವಂಶದ ಅಭಿಮಾನ ಕಣ್ಣ ಮುಂದೆ ಸುಳಿಯಿತು. ತನ್ನ ತೀರ್ಥರೂಪರ ಚಿತ್ರ ಎದುರಾಯಿತು. ಮಾಧವ ಸೋಮಯಾಜಿ ಉತ್ಕೃಷ್ಟ ಶ್ರೀವತ್ಸ ಗೋತ್ರೋದ್ಭವ, ಜಮದಗ್ನಿ ಪಂಚಾರ್ಷೇಯದ ಕಮ್ಮೆ ಬ್ರಾಹ್ಮಣ. ಸಂಪತ್ತು, ಪದವಿ, ಗೌರವ ಪರಂಪರೆಗಳಿಂದ ಪ್ರತಿಷ್ಠಿತ. ರಾಜಾಧಿರಾಜರುಗಳಿಂದ ಸನ್ಮಾನಿತ.

ವೆಂಗಿವರಪಳ್ಳಿಯಾವ ವೆಂಗಿಪಳುವಿನ ಹೊಂಗಳಶವಾಗಿದ್ದ. ವಸಂತ, ಕೊಟ್ಟೂರು, ನಿಡಗುಂದಿ, ವಿಕ್ರಮಪುರ–ಇವು ನಾಲ್ಕು ಅಗ್ರಹಾರಗಳು ವೆಂಗಿಪಳುವಿನ ಚತುರ್ಮುಖ ಸೌಂದರ್ಯವಾಗಿ ರಾರಾಜಿಸುತ್ತಿದ್ದುವು. ಮಾಧವ ಸೋಮಯಾಜಿ ಈ ನಾಲ್ಕು ಅಗ್ರಹಾರಗಳಿಗೆ ಅಗ್ರಗಣ್ಯನಾಗಿ ಒಬ್ಬ ಸಾಮಂತ ದೊರೆಯಂತೆ ಅಳುತ್ತಾ ಬಾಳುತ್ತಿದ್ದ. ಆದರೆ ಆತ ಅಭ್ಯುದಯದ ಶಿಖರದಲ್ಲಿ ವಿಹರಿಸುತ್ತಿರುವಂತೆಯೇ ಬರಸಿಡಿಲಿಗೆರಗಿದಂತೆ ಅಕಾಲ ಮರಣವನ್ನಪ್ಪಿದನು. ಮಾಧವ ಸೋಮಯಾಜಿ ಮಗನ ಮದುವೆಯನ್ನೂ ನೋಡಲು ಆಗಲಿಲ್ಲ.

ತಂದೆಯ ವಿದ್ವತ್ತು ಚರಾಚರ ಸ್ವತ್ತು ಅಭಿಮಾನಚಂದ್ರನಿಗೆ ಚಿಕ್ಕವಯಸ್ಸಿನಲ್ಲಿಯೇ ದೊರೆಯಿತು. ತಂದೆಯ ಕಾಲದಲ್ಲಿದ್ದ ಎಲ್ಲಾ ಗೋವು ಕರಿತುರಗೋತ್ತಮ ಮಣಿ ಕನಕ ಸಾರವಸ್ತುಗಳೆಲ್ಲ ಬಂದುವು. ತುಂಬ ಹೆಮ್ಮೆಯಿಂದ ಅವನ್ನು ಅನುಭೋಗಿಸುತ್ತಿದ್ದ. ತಂದೆಯಂತೆ ಯಜ್ಞಗಳನ್ನು ಆಚರಿಸುತ್ತಿದ್ದ. ರಾಜ ಸಾಮಂತ ಮನ್ನೆಯರಿಂದ ಸನ್ಮಾನಗಳನ್ನು ಸ್ವೀಕರಿಸುತ್ತಿದ್ದ. ಆದರೆ ಜಿನಸೇನರಿಂದ ತನ್ನ ಸ್ವಾಭಿಮಾನಕ್ಕೆ ಬರೆ ಎಳೆದಂತೆ ಆದಾಗ ಭೋಗವಸ್ತುಗಳು ನಿಸ್ಸಾರವೆನಿಸಿದುವು. ಅವನ್ನೆಲ್ಲಾ ಒಂದೊಂದಾಗಿ ಆಯಾ ಯಾಚಕ ವರ್ಗಕ್ಕೆ ದಾನ ಮಾಡಿದ. ದಿನೇ ದಿನೇ ಶಾಂತೋದಾತ್ತಚರಿತನಾದ.

ಅಭಿಮಾನಚಂದ್ರನಿಗೂ ತನ್ನ ಅಂತರಂಗವನ್ನು ಯಾರಲ್ಲಿಯೂ ತೋಡಿಕೊಳ್ಳಲಾಗಲಿಲ್ಲ. ಮಗನೊಡನೆ ಪ್ರಸ್ತಾಪಿಸಲು ಸಂಕೋಚ. ಇತರ ಸಮವಯಸ್ಕರೊಡನೆ ಚರ್ಚಿಸುವುದು ಪ್ರಯೋಜನವಿಲ್ಲವೆಂದು ಸುಮ್ಮನಾದ. 'ಅರವತ್ತರ ಗಡಿದಾಟಿದ್ದೇನೆ. ಇನ್ನು ಅವರೆಲ್ಲ ನನ್ನನ್ನು ಅರಳುಮರುಳು ಎಂದಾರು' ಎಂದು ಶಂಕಿಸಿದ. ಕಡೆಗೊಂದು ದಿನ ಬಸದಿಯಿಂದ ಬಂದವನೇ ಹಾಸಿಗೆ ಹಿಡಿದು ಮಲಗಿಬಿಟ್ಟು. ಮೂರು ದಿನ ಮಾತಾಡಲಿಲ್ಲ. ಒಂದು ತೊಟ್ಟು ನೀರು ಕುಡಿಯಲಿಲ್ಲ. ಬಾಯಲ್ಲಿ ಏನೋ ಮಂತ್ರೋಚ್ಚಾರಣೆ ಮಾಡಿಕೊಳ್ಳುತ್ತಿದ್ದ. ನಾಲ್ಕನೆಯ ದಿವಸ ದೀಪ ಆರಿತು.

ಕೊಮರಯ್ಯನ ಮನಸ್ಸಿನಲ್ಲಿ ತನ್ನ ತಂದೆಯ ಕಡೆಯ ದಿನಗಳ ನೆನಪು ಚಿರಕಾಲ ಉಳಿಯಿತು. "ಅವರು ಮರುಗಿದ್ದು ನಮಗಾಗಿ. ಏನು ಹೇಳಬೇಕೆಂದಿದ್ದರೊ ಹೇಳಲಿಲ್ಲ. ಅವರ ತುಟಿಯ ಅಂಚಿನಲ್ಲಿ ಸಂಚರಿದ್ದು ಪಂಚನಮಸ್ಕಾರವಿರಬೇಕು. ಇರಲಿ, ಅವರಿಗಾಗಿ ನಾವು ಸಲ್ಲಿಸಬಹುದಾದ ಗೌರವ ನಾನು ಯಾಗಾದಿಗಳನ್ನು ನಿಲ್ಲಿಸುವುದೆಂದು ತೋರುತ್ತದೆ" ಎಂದು ಅಂದುಕೊಂಡವನು ಅಂದಿನಿಂದ ವೇದಾದಿಗಳನ್ನು ಬೋಧಿಸುವ ಮನೆತನದ

ಪರಂಪರೆಗೆ ಇತಿಶ್ರೀ ಹಾಡಿದ. ಮನೆಯೊಳಗೆ ವೇದಘೋಷದ ಮಂಜುಳ ಝೇಂಕಾರದ ತರಂಗಗಳು ತಗ್ಗಿ ಸ್ವಸ್ತಿಶ್ರೀಯ ಮಂಗಳ ಓಂಕಾರದಲೆಗಳು ಏಳತೊಡಗಿದುವು. ಪವಿತ್ರ ಗಾಯತ್ರಿಗಾನ ಹಿಂದೆ ಸರಿದು ಪಂಚಪರಮೇಷ್ಠಿ ಸ್ತುತಿ ಮೊಳಗತೊಡಗಿತು.

## ೨

ಲೋಕಾಂತದಲ್ಲಿದ್ದೂ ಏಕಾಂತ ಜೀವನಕ್ಕೆ ಕೊಮರಯ್ಯ ಮಾರುಹೋದ. ಲೋಕಮಾನ್ಯ ಜಿನಸೇನರು ಅವನಿಗೆ ಪ್ರಿಯರಾದರು. ಆದರೆ ಜಿನಸೇನರು ಮುಕ್ತಿಗೆ ಸಂದ ಮೇಲೆ ಕೆಲವು ಕಾಲ ವೈರಾಗ್ಯ ಬಂದವರಂತೆ ಮೌನವ್ರತಧಾರಿಯಾಗಿದ್ದ, ಜೈನ ಧರ್ಮದಲ್ಲಿ ಮೂಡಿದ್ದ ಆಸಕ್ತಿ ಅನುರಾಗಕ್ಕೆಡೆಗೊಡುವ ಅವಸರದಲ್ಲಿ ಜಿನಸೇನರು ಮೋಕ್ಷದತ್ತ ಧಾವಿಸಿದ್ದರು. ತನ್ನ ಅನುಮಾನಗಳನ್ನು ಪರಿಹರಿಸಲು ಅವರೆತ್ತರದ ಆಚಾರ್ಯರು ಮತ್ತೆ ದೊರೆಯರೆಂದು ಭಾವಿಸಿದ್ದ. ಆಗ ಅವನ ಮನಸ್ಸನ್ನು ಗೆದ್ದವರು ಗುಣಭದ್ರಾಚಾರ್ಯರು. ಜಿನಸೇನರ ಅಂತರಂಗದ ಶಿಷ್ಯರಾದ ಗುಣಭದ್ರರು ಎಲ್ಲಾ ದೃಷ್ಟಿಯಿಂದ ಗುರುಗಳ ಸ್ಥಾನವನ್ನು ತುಂಬ ತೊಡಗಿದರು. ಮಹಾಪುರಾಣದಲ್ಲಿ ಮೊದಲರ್ಧ ಭಾಗವಾದ ಪೂರ್ವ ಪುರಾಣದ ಕಡೆ ಕಡೆಯಲ್ಲಿ ರಚಿತನಾಗಬೇಕಾಗಿದ್ದ ಕೆಲವು ಶ್ಲೋಕಗಳನ್ನು ಮುಗಿಸಿದ್ದಲ್ಲದೆ, ಉತ್ತರ ಪುರಾಣವನ್ನೂ ಬರೆದು ಮುಗಿಸಿದ ಹಿರಿಮೆ ಗುಣಭದ್ರಾಚಾರ್ಯರದು.

ಉತ್ತರ ಪುರಾಣದ ರಚನೆಯ ಕಾಲದಲ್ಲಿ ಕೊಮರಯ್ಯನೊಡನೆ ಗುಣಭದ್ರರಿಗೆ ಆತ್ಮೀಯತೆ ಬೆಳೆಯಿತು. ಜಿನಸೇನರಂತೆ ಗುಣಭದ್ರರೂ ಆತನನ್ನು ಅನ್ಯಧರ್ಮೀಯನೆಂದು ಅವಜ್ಞಿಸಲಿಲ್ಲ. ಗಂಟೆಗಟ್ಟಲೆ ಧಾರ್ಮಿಕ ಚರ್ಚೆಯಲ್ಲಿ ತೊಡಗುತ್ತಿದ್ದರು. ಅಂತಹ ವೇಳೆಗಳಲ್ಲಿ ಎಷ್ಟೋ ಸಲ ತಂದೆಯ ಜೊತೆಯಲ್ಲಿ ಭೀಮಪನೂ ಇರುತ್ತಿದ್ದನು. ಭೀಮಪನಿಗೆ ಜಿನಸೇನರ ಪರಿಚಯ ಮಸುಕು ಮಸುಕು. ಆತ ಇನ್ನೂ ಆರೇಳು ವರ್ಷದ ಎಳೆಯನಿದ್ದಾಗಲೇ ಅವರು ಅಪವರ್ಗವನ್ನೈದಿದ್ದರು. ಗುಣಭದ್ರಾಚಾರ್ಯರು ಮಾತ್ರ ಭೀಮಪನಿಗೆ ಮನೆಯ ಮನೆತನದ ಮಹಾಗುರುವಿನಂತಿದ್ದರು. ಅವರ ಸನ್ನಿಧಾನಕ್ಕೆ ಅನೇಕ ಸಲ ಬಿಜಯಂಗೈದು ಆನಂದತುಂದಿಲನಾಗುತ್ತಿದ್ದ. ಅವರು ಧರ್ಮ ನಿರೂಪಣೆ ಮಾಡುವಾಗಲೂ ಅವರ ಮಾತು ಮೋಡಿಯಾಗಿ ಬಿಡುತ್ತಿತ್ತು. ನಿರೂಪಣೆ ಕೇವಲ ಶಾಸ್ತ್ರೀಯ, ಇಲ್ಲವೇ ಮತೀಯ ಪ್ರಕ್ರಿಯೆಗಳಿಂದ ನೀರಸವಾಗದೆ ಕಾವ್ಯದ ಕಮನೀಯ ಶೈಲಿಯಿಂದ ರೋಚಕವಾಗುತ್ತಿತ್ತು. ತಂದೆ ಮಕ್ಕಳ ಮೇಲೆ ಅವರ

ಪ್ರಭಾವ ಆಳವಾಗಿತ್ತು.

ಕೊಮರಯ್ಯನಲ್ಲಿ ಔದಾರ್ಯ ಹೆಚ್ಚೋ ಗಾಂಭೀರ್ಯ ಹೆಚ್ಚೋ ಎಂದು ಕೇಳಿದರೆ ಉತ್ತರಿಸುವುದು ಕಷ್ಟವಾಗುತ್ತಿತ್ತು. ಆತ ಸಮಸ್ತ ವೇದ ವೇದಾಂಗ ಸಮುದ್ಯೋತಿತ ಮತಿಯುತನಾಗಿದ್ದರೂ, ವೈದಿಕತನದಿಂದ ಪರಾಙ್ಮುಖನಾಗತೊಡಗಿದ್ದು ಕೆಲವರಿಗೆ ಪವಾಡವೆನಿಸತೊಡಗಿದರೂ, ಆತನ ಈ ಹಿನ್ನೆಲೆಯನ್ನು ತಿಳಿದವರಿಗೆ ಆಶ್ಚರ್ಯವೆನಿಸಲಿಲ್ಲ. ಅಂತೂ ಕೊಮರಯ್ಯ ತಂದೆಯಂತೆ ಅತ್ಯುದಾರಿಯಾದ. ಉಚಿತ ಪುರಾತನ ಚರಿತನೆಂದು ಖ್ಯಾತನಾಮನಾದ.

ಎಲ್ಲಕ್ಕೂ ಮಿಗಿಲಾಗಿ ಕೊಮರಯ್ಯ ಸೌಂದರ್ಯೋಪಾಸಕನಾಗಿದ್ದ, ಸಾಹಿತ್ಯ ವತ್ಸಲನಾಗಿದ್ದ, ಅವನಲ್ಲಿ ಜಿನಸೇನ ಗುಣಭದ್ರರ ನಿಕಟತೆ ಧಾರ್ಮಿಕವಾಗಿ ಪರಿಣಾಮ ಬೀರಿದಂತೆ, ಸಾಹಿತ್ಯಿಕವಾಗಿಯೂ ಪ್ರಭಾವ ಉಂಟಾಗಿತ್ತು. ಗುಪ್ತಗಾಮಿನಿಯಾಗಿ ಕಾವ್ಯ ರಚನಾಶಕ್ತಿ ರೂಪಗೊಂಡು ಕೃತಿ ನಿರ್ಮಾಣಕ್ಕೆ ತೊಡಗಲು ಹವಣಿಸುತ್ತಿದ್ದ. ನಗರ ಜೀವನಕ್ಕಿಂತ ಆತನಿಗೆ ನಿಸರ್ಗ ಪ್ರಿಯವೆನಿಸಿತು. ಅದರಿಂದಾಗಿ ಪಟ್ಟಣ, ಅಗ್ರಹಾರ – ಎಲ್ಲಾ ಬಿಟ್ಟು ಬನವಾಸಿಯ ದಟ್ಟವಾದ ಅರಣ್ಯ ಪ್ರದೇಶಕ್ಕೆ ಆಗಾಗ್ಗೆ ಹೋಗಿಬರುತ್ತಿದ್ದ. ಪ್ರಕೃತಿಯ ಮಡಿಲಲ್ಲಿ ಗಂಟೆಗಟ್ಟಲೆ ಅಂತರ್ಮುಖಿಯಾಗಿ ಕುಳಿತು ಬಿಡುತ್ತಿದ್ದ. ಕೋಗಿಲೆ ಕಾಜಾಣ ಕಾಮಳ್ಳಿ ಹಾಡು ಕೇಳಿ ತನ್ಮಯನಾಗುತ್ತಿದ್ದ. ನಿತ್ಯಹರಿದ್ವರ್ಣ ವಿಲಾಸಿನಿ ವನಶ್ರೀಯ ವೈಭವಕ್ಕೆ ಮನಸೋತು ತಲೆದೂಗುತ್ತಿದ್ದ.

ಆತ ಒಳಮೊಗನಾಗಿ ಚಿಂತಿಸಲು ಮತ್ತೊಂದು ಪ್ರಬಲ ಕಾರಣವಿತ್ತು. ಇತ್ತೀಚೆಗೆ ಮಗ ಭೀಮಪ ದೊಡ್ಡವನಾಗಿ ಬೆಳೆದಂತೆ ಜೈನಾಗಮನಗಳನ್ನೇ ವಿಶೇಷವಾಗಿ ಅಭ್ಯಾಸ ನಡೆಸುತ್ತಿದ್ದ. ಗುಣಭದ್ರಾಚಾರ್ಯರನ್ನು ಪದೇ ಪದೇ ಹೋಗಿ ದರ್ಶನ ಪಡೆದು ಬರುತ್ತಿದ್ದ. ಕೊಪಣಾಚಲವಲ್ಲದೆ ಕಳ್ವಪ್ಪಿನ ಚಂದ್ರಗಿರಿಯನ್ನೂ ತೀರ್ಥಯಾತ್ರಾ ನಿಮಿತ್ತ ಹೊರಟ ಜೈನ ಶ್ರಾವಕ ತಂಡದೊಡನೆ ಹೋಗಿ ದರ್ಶಿಸಿ ಬಂದ. ವೈದಿಕ ಪರಂಪರೆಯಿಂದ ಬಂದ ಕುಲವೃತ್ತಿಗೆ ಭೀಮಪ ತಿಲಾಂಜಲಿಯನ್ನೇ ಕೊಟ್ಟುಬಿಟ್ಟಿದ್ದ.

ದಿನಗಳುರುಳಿದಂತೆ ತನ್ನಿಂದ ಆಗದುದನ್ನು ತನ್ನ ಮಗ ಭೀಮಪ ಆಗುಮಾಡುವುದು ನಿಶ್ಚಯವೆಂದು ತೋರಿತು. ತಾನು ಅದಕ್ಕೆ ಎಂದೂ ಪ್ರತಿಭಟನೆ ತೋರಿಸದಿದ್ದುದನ್ನು ಕಂಡು ಬೀಮಪ ಇದು ಅಪ್ಪನ ಸಮ್ಮತಿಯೆಂದೇ ತಿಳಿದು ಮುಂದೆ ಹೊರಟಿದ್ದ. ತನ್ನ ಬಯಕೆ ಭೀಮಪನ ರೂಪದಲ್ಲಿ ಈಡೇರುವ ದಿನಗಳು ಸಮೀಪಿಸಬಹುದೆಂದು ಅಂದುಕೊಂಡರೆ ಅದಕ್ಕೂ ಮೊದಲೇ ಆ

ದಿನ ಬಂದು ಬಿಟ್ಟಿತು. ಅಂದು ಭೀಮಪ ಗುಣಭದ್ರಾಚಾರ್ಯರನ್ನು ಕಂಡು ಬಂಕಾಪುರದಿಂದ ಬಂದಿದ್ದ. ಕೈಕಾಲು ಮುಖ ತೊಳೆದುಕೊಂಡನೇ ಪ್ರಯಾಣದ ಆಯಾಸವನ್ನೂ ಲೆಕ್ಕಿಸದೆ ನೇರವಾಗಿ ತಂದೆಯ ಬಳಿಗೆ ಬಂದು ಮಾತಿಗಾರಂಭಿಸಿದ.

"ಅಪ್ಪಾಜಿ, ನಾನು ತಮ್ಮಲ್ಲಿ ಬಹು ಮುಖ್ಯವಾದ ವಿಚಾರವನ್ನು ಕುರಿತು ಮಾತನಾಡಬೇಕಾಗಿದೆ. ತಾವು ಕುಸಿತರಾಗಕೂಡದೆಂದೂ, ನನ್ನ ಮಾತನ್ನು ತಾಳ್ಮೆಯಿಂದ ಕೇಳಬೇಕೆಂದೂ ಪ್ರಾರ್ಥಿಸುತ್ತೇನೆ. ಅಲ್ಲದೆ ತಾವು ....."

"ಅದೆಲ್ಲಾ ಉಪಚಾರ ಇರಲಿ . ಅದೇನೆಂದು ಸುತ್ತು ಬಳಸು ಇಲ್ಲದೆ ಹೇಳಬಾರದೆ?"

"ಹೇಳುತ್ತೇನೆ ಅಪ್ಪಾಜಿ. ಆದರೆ ತಾವು ಕೋಪಮಾಡಿಕೊಳ್ಳುವುದಿಲ್ಲವೆಂದು ಮಾತು ಕೊಡಬೇಕೆಂದು ಕೋರುತ್ತೇನೆ."

"ಅಯ್ಯಾ; ನಿನ್ನ ಪೀಠಿಕೆ ನೋಡಿದರೆ ಏಕೋ ಅನುಮಾನವಾಗುತ್ತಿದೆ. ತಂದೆ ಹತ್ತಿರ ಈ ಔಪಪಚಾರಿಕ ವಿಧಾನ ಬೇಡ. ನೇರವಾಗಿ ಹೇಳು."

"ಹಾಗಲ್ಲ ಅಪ್ಪಾ. ವಿಷಯ ತುಂಬಾ ಗಂಭೀರವಾದದ್ದು. ತಮ್ಮ ಮನಸ್ಸಿಗೆ ಅದು ಒಪ್ಪದಿರಬಹುದು."

"ನಾಟಕ ನಿಲ್ಲಿಸಿ ಅಂಥ ವಿಷಯ ಅದೇನು ಹೇಳಬಾರದೆ? ನನ್ನ ಕುತೂಹಲವನ್ನು ಹೆಚ್ಚಿಸುತ್ತಿದ್ದಿಯೇ ಹೊರತು ಮುಖ್ಯ ವಿಷಯ ಪ್ರಸ್ತಾಪಿಸಲಿಲ್ಲ."

"ನಾನು ಕಳೆದವಾರ ಇಲ್ಲಿಂದ ಹೊರಟಿದ್ದು....."

"ಬಂಕಾಪುರಕ್ಕೆ. ಅದು ಗೊತ್ತು."

"ಅಲ್ಲಿ ಗುಣಭದ್ರಾಚಾರ್ಯರೊಡನೆ ನನ್ನ ಅಂತರಂಗದ ಅಭೀಪ್ಸೆಯನ್ನು ನಿವೇದಿಸಿಕೊಂಡೆ. ಅವರು ನನ್ನ ಬೇಡಿಕೆಗೆ ಅಸ್ತು ಎಂದು ಕೃಪೆಯಿಟ್ಟು ಅನುಗ್ರಹಿಸಿದ್ದಾರೆ. ಈಗ ತಾವು ಕೂಡ ನನ್ನ ಎದೆಯಾಳದ ಬಯಕೆ ಈಡೇರುವಂತೆ ಆಶೀರ್ವದಿಸಬೇಕೆಂದು ಬೇಡುತ್ತೇನೆ."

"ಓಹೋ! ಪಗರಣದಲ್ಲಿ ಪಾತ್ರವಹಿಸಲು ತಕ್ಕವನಾಗಿದ್ದೀಯೇ ನೋಡು! ಅಲ್ಲಯ್ಯಾ ವಿಷಯ ಏನೆಂಬುದನ್ನೇ ತಿಳಿಸದೇ ಅಭಿನಯ ಮಾಡುತ್ತಿದ್ದೀಯಲ್ಲಾ? ನಾನು ಯಾವುದಕ್ಕೆ ಸಮ್ಮತಿಸಬೇಕೆಂಬುದೇ ಗೊತ್ತಾಗುತ್ತಿಲ್ಲ."

"ಅಪ್ಪಾಜಿ, ನಾನು....."

"ನೀನು ಏನು? ಮದುವೆಯಾಗಬೇಕೆ?"

"ಛೆ ಛೆ! ಅದಲ್ಲ. ನಾನು ತೀರ್ಮಾನಿಸಿಬಿಟ್ಟಿದ್ದೇನೆ."

"ಹಾಗೊ ವಿಷಯ! ಹುಡುಗಿಯನ್ನು ನೀನೇ ಒಪ್ಪಿ ಅವಳನ್ನೇ

ಮದುವೆಯಾಗುವುದೆಂದು ನೀನೇ ತೀರ್ಮಾನಿಸಿ ಮಾತು ಕೊಟ್ಟು ಬಂದುಬಿಟ್ಟೆಯೋ?"

"ಪದ್ಮಾವತಿದೇವಿ ಆಣೆಗೂ ಇಲ್ಲ ಅಪ್ಪ."

"ಏನೆಂದೇ? ಪದ್ಮಾವತಿದೇವಿ ಆಣೆಯಂತೆ, ಯಾರಪ್ಪಾ ಅದು ಆ ಪದ್ಮಾವತಿದೇವಿ?"

"ತಮಗೆ ತಿಳಿಯದ ಸಂಗತಿ ಏನಲ್ಲ. ತೀರ್ಥಂಕರರ ಯಕ್ಷಿ ಪದ್ಮಾವತಮ್ಮನವರು."

"ಅದೇನು ಜೈನರ ದೇವತೆಗಳ ಮೇಲೆ ಆಣೆಯಿಡುವ ಹೊಸ ಪದ್ಧತಿ?"

"ಅದನ್ನೇ ಈಗ ತಮಗೆ ಹೇಳಬೇಕೆಂದು ಇದ್ದದ್ದು. ನಾನು ಮತಾಂತರಗೊಳ್ಳಬೇಕೆಂದು ಮನಸ್ಸು ಗಟ್ಟಿಮಾಡಿದ್ದೇನೆ....."

"ಏನೆಂದೆ? ....."

"ಹೌದಪ್ಪಾ. ನಾನು ಜೈನಧರ್ಮ ಸ್ವೀಕರಿಸಬೇಕೆಂದು ನಿಶ್ಚಯಿಸಿ ಬಿಟ್ಟಿದ್ದೇನೆ."

"ಭೀಮಾ! ನಿನಗೇನು ಬುದ್ಧಿಭ್ರಮಣೆಯಾಗಿದೆಯೋ ಏನು? ಎಂಥ ಮಾತನಾಡುತ್ತಿರುವೆಯೆಂಬುದು ಗೊತ್ತೆ?"

"ಗೊತ್ತು, ಎಚ್ಚರದಿಂದಲೇ ನುಡಿಯುತ್ತಿದ್ದೇನೆ. ಬುದ್ಧಿ ಸರಿಯಾಗಿ, ಸ್ಥಿಮಿತದಲ್ಲಿ ಇದುವರೆಗೂ ಇರಲಿಲ್ಲ. ಆದರೆ ಈಗ ಭ್ರಮೆಯೆಲ್ಲ ನಿರಸನವಾಗಿದೆ."

"ಭೀಮಪ, ನಿನಗೆ ಯಾರೊ ಹಗೆಗಳು ತಲೆಗೆ ಹುಚ್ಚು ಹತ್ತಿಸಿದ್ದಾರೆ. ಇಲ್ಲವಾದರೆ ಈ ಮಾತು ನಮ್ಮ ಮನೆಯಲ್ಲಿ ನಿನ್ನ ಬಾಯಿಂದ ಬರುತ್ತಿರಲಿಲ್ಲ."

"ಹಾಗೇನೂ ಇಲ್ಲ. ಇದರಲ್ಲಿ ಯಾರ ಕೈವಾಡವೂ ಇಲ್ಲ. ಇದು ನನ್ನದೇ ತೀರ್ಮಾನ."

"ನಿನ್ನದೇ ತೀರ್ಮಾನವೆಂದರೆ ಈ ಮನೆಗೆ ನೀನೇ ಯಜಮಾನನೋ? ನಿನಗೆ ಹೇಳುವವರು ಕೇಳುವವರು ಯಾರೂ ಇಲ್ಲವೆಂದು ತಿಳಿದುಕೊಂಡಯಾ?"

"ಅದಕ್ಕೆಂದೇ ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲು ಬಂದಿದ್ದೇನೆ."

"ನಿನ್ನ ಈ ನಾಟಕದ ಗಂಭೀರ ಭಾಷೆ ಸಾಕು ನಿಲ್ಲಿಸು. ನಮ್ಮ ಮನೆತನದ ಗೌರವ ಹಾಳು ಮಾಡಲು ಎಷ್ಟು ದಿನದಿಂದ ಹೊಂಚು ಹಾಕುತ್ತಿದ್ದೆ?"

"ಇದರಲ್ಲಿ ಗೌರವ ಹಾಳು ಮಾಡುವ ಪ್ರಶ್ನೆಯೇ ಏಳದು. ಏನಿದ್ದರೂ ಗೌರವ ಹೆಚ್ಚುವುದು."

"ಏನೇನೋ ಗಳಹಬೇಡ. ಈ ಭರತವರ್ಷದ ಶ್ರೇಷ್ಠವಾದ ವೈಧಿಕಧರ್ಮವನ್ನು ಹೀಗಳೆಯಲು ನೀನೆಷ್ಟರವನು?"

“ನಾನು ವೈಧಿಕಧರ್ಮವನ್ನು ಶ್ರೇಷ್ಠವಲ್ಲವೆಂದು ಹೇಳಲಿಲ್ಲವಲ್ಲಾ?”

“ಮತ್ತೇನು ನೀನು ಹೇಳುತ್ತಿರುವುದರ ಅರ್ಥ? ಬ್ರಾಹ್ಮಣತ್ವವನ್ನು ಕೈ ಬಿಡುವುದರ ಅಗತ್ಯವೇನು?”

“ನಾನು ಜೈನಧರ್ಮವನ್ನು ಪರಿಪಾಲಿಸಲು ತ್ರಿಕರಣಪೂರ್ವಕವಾಗಿ ಒಪ್ಪಿದ್ದೇನೆ.”

“ತಾರುಣ್ಯದ ಕಾವಿನಿಂದ ದುಡುಕಿ ನುಡಿಯಬೇಡ. ಒಂದು ಧರ್ಮವನ್ನು ಬಿಟ್ಟು ಇನ್ನೊಂದು ಧರ್ಮವನ್ನು ಸ್ವೀಕರಿಸುವುದು, ಬಟ್ಟೆ ಬದಲಾಯಿಸಿದಂತಲ್ಲ.”

“ಅದನ್ನು ಚೆನ್ನಾಗಿ ಬಲ್ಲೆ ಆರ್ಯಾ. ಪೂರ್ವಾಪರಗಳನ್ನೆಲ್ಲಾ ತುಲನೆಮಾಡಿ ನೋಡಿ ಕಡೆಗೆ ಕೈಗೊಂಡ ನಿಲುವು ಇದು.”

“ಮಹಾಜ್ಞಾನವೃದ್ಧ ನೀನು! ಇಪ್ಪತ್ತೆರಡರ ಹರೆಯದಲ್ಲಿ ಹಿಂದುಮುಂದುಗಳನ್ನು ಪರಿಭಾವಿಸುವ ಪ್ರೌಢಿಮೆ, ಪಕ್ವತೆ ಬಂದಿರುತ್ತದೆಂದು ತಿಳಿದು ಬಿಟ್ಟೆಯಾ? ನಿನ್ನ ಗ್ರಂಥಜ್ಞಾನಕ್ಕೂ ಬದುಕಿಗೂ ಕಡಲಿನ ಅಂತರವಿದೆ.”

“ಪ್ರಾಯ ಕೂಸಾಗಿರಬಹುದು ಅಪ್ಪಾಜಿ, ಅಭಿಪ್ರಾಯ ಕೂಸಾಗಿಲ್ಲ. ಚಿಂತನ ಮಂಥನಗಳನ್ನೆಸಗಿ ತಳೆದ ನಿರ್ಧಾರವಿದು.”

“ಆವೇಶದ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿ ಹೋಗಬೇಡ, ನೆತ್ತಿ ತಂಪಾಗಿಟ್ಟುಕೊಂಡು ಯೋಚಿಸುವುದು ಲೇಸು. ಇಷ್ಟಕ್ಕೂ ನಿನಗೆ ಜೈನಧರ್ಮ ಸ್ವೀಕಾರಕ್ಕೆ ಯಾವ ಜೈನಮುನಿಯೂ ಅನುಮತಿ ಕೊಡುವುದಿಲ್ಲ, ತಿಳಿಯತೆ?”

“ಆ ವಿಚಾರದಲ್ಲಿ ನೀವು ಅನುಮಾನಿಸಬೇಡಿ. ಅದಕ್ಕೆ ಅವಶ್ಯಕವಾದ ಸಿದ್ಧತೆಗಳೆಲ್ಲ ನಡೆದಿವೆ.”

“ಹೀಗೋ ಸಮಾಚಾರ? ನೀನು ಎಲ್ಲಾ ಪಿತೂರಿ ನಡೆಸಿ, ಕಡೆಗೆ ಏನೂ ಅರಿಯದ ಅಮಾಯಕನಂತೆ ನನ್ನ ಬಳಿಗೆ ಬಂದಿದ್ದೀಯೆ. ಜೈನರು ಯಾರೊ ಕೆಲವರು ಸೇರಿಕೊಂಡು ನಿನ್ನ ಮುಗ್ಧ ಮನಸ್ಸಿಗೆ ಚೆನ್ನಾಗಿ ಮಂಕುಬೂದಿ ಎರಚಿದ್ದಾರೆ. ಅವರ ಸವಿ ಮಾತುಗಳಿಗೆ ಮರುಳಾಗಬೇಡ. ಮುಂದೆ ನಿತ್ಯವೂ ಅಗ್ನಿ ಪರೀಕ್ಷೆ ಎದುರಿಸಬೇಕಾದೀತು.”

“ಮಾಯಾಮಂತ್ರ ಮೋಹ ವಿದ್ಯೆಗಳಿಗೆ ಬುದ್ಧಿ ಒಪ್ಪಿಸುವಷ್ಟು ಬಾಲಿಶ ನಾನಲ್ಲ ಅಪ್ಪಾಜಿ. ಇದು ನನ್ನ ಸ್ವೋಪಜ್ಞ ಆಯ್ಕೆ. ಯಾರ ಬಲಾತ್ಕಾರಕ್ಕೂ ಒಪ್ಪಿ ಈ ಮತಾಂತರಕ್ಕೆ ತೊಡಗಿಲ್ಲ. ಇದು ನನ್ನ ಆತ್ಮ ಸಂತೋಷದ ಆಯ್ಕೆ.”

“ಸರಿಸರಿ. ಈಗ ನಿನಗೆ ಮತಾಂತರಕ್ಕೆ ಒಪ್ಪಿಗೆ ಕೊಟ್ಟು ಶ್ರಾವಕವ್ರತಗಳನ್ನು ನೀಡುವ ಜೈನಾಚಾರ್ಯರು ಯಾರು?”

“ಭಗವಾನ್ ಜಿನಸೇನಾಚಾರ್ಯರ ಶಿಷ್ಯಾಗ್ರಣಿ, ಜೈನಶಾಸ್ತ್ರಪಾರಂಗತ ಗುಣಭದ್ರಾಚಾರ್ಯರು.”

“ಹೌದೆ! ನಿಜವೆ?”

“ಅಹುದು ಅಪ್ಪಾಜಿ. ನಾನು ಹೇಳುತ್ತಿರುವುದು ಸತ್ಯಸ್ಯ ಸತ್ಯ.”

“ಭೀಮಪ, ನೀನು ನಿಜಕ್ಕೂ ಧನ್ಯ! ಯಶೋವಂತನಾಗಿ ಚಿರಂಜೀವಿಯಾಗು ಮಗು.”

“ಅಪ್ಪಾಜಿ! ತಾವು ಹೇಳುತ್ತಿರುವುದು ವಿಡಂಬನೆಯಿಂದಲ್ಲ ತಾನೆ?”

“ಖಂಡಿತಾ ಅಲ್ಲ ಭೀಮ. ಅಂತಃಕರಣಪೂರ್ವಕವಾಗಿ ಒಪ್ಪಿಗೆ ಕೊಡುತ್ತಿದ್ದೇನೆ.”

“ಹಾಗಾದರೆ ಇದುವರೆಗೂ ತಾವು ಹೇಳಿದ್ದು, ಕೋಪಿಸಿದ್ದು ಸುಳ್ಳೆ?”

“ಅದು ನಿನ್ನ ನಿರ್ಧಾರ, ಆತುರದಿಂದ ಕೈಗೊಂಡ ಪೊಳ್ಳು ನಿರ್ಧಾರವೊ ಇಲ್ಲವೇ ಆಲೋಚನೆಯಿಂದ ತಳೆದ ಗಟ್ಟಿ ನಿರ್ಧಾರವೊ ಎಂದು ಪರಿಶೀಲಿಸಲು ಮಾಡಿದ ಅಗ್ನಿಪರೀಕ್ಷೆ”.

“ಪರೀಕ್ಷೆಯ ಫಲಿತಾಂಶ?”

“ನಾನು ಸೋತೆ, ನೀನೆ ಗದ್ದೆ. ಜೀವನದುದ್ದಕ್ಕೂ ವಿಜಯಿಯಾಗು ಕಂದ.” ಭೀಮಪ ಆನಂದತುಂದಿಲನಾಗಿ ತಂದೆಯ ಅಡಿದಾವರೆಗಳಿಗೆ ನೆಲದುದ್ದಕ್ಕೂ ಪೊಡಮಟ್ಟು, ಪಾದಗಳನ್ನು ಮತ್ತೆ ಮತ್ತೆ ಮುಟ್ಟಿ ಮುಟ್ಟಿ ನಮಸ್ಕರಿಸಿದ. ಹೃದಯ ಆನಂದ ಸರೋವರವಾಯಿತು. ಸಂತೋಷದ ಅಧಿಕ್ಯದ ಫಲವಾಗಿ ಕಣ್ಣ ಬಟ್ಟಲಿಂದ ನೀರು ಹನಿಹನಿಯಾಗಿ ಒಸರಿ ತಂದೆಯ ಕಾಲುಗಳನ್ನು ತೊಳೆಯಿತು. ಒಮ್ಮೆಲೇ ಕುತ್ತಿಗೆಯ ಮೇಲೆ ನೀರ ಹನಿಗಳು ತೊಟ್ಟಿಕ್ಕಿದಂತೆ ಬೀಳತೊಡಗಿದುವು. ಭೀಮಪ ಎದ್ದು ಕುಳಿತ, ಕತ್ತೆತ್ತಿ ನೋಡಿದ, ತಂದೆಯ ಕಣ್ಣಿಂದ ನೀರು ಧಾರಾಕಾರವಾಗಿ ಪ್ರವಹಿಸುತ್ತಿದೆ. ಕೊಮರಯ್ಯ ಪ್ರತಿಮಾಯೋಗದಲ್ಲಿ ಧ್ಯಾನಸ್ಥನಾದಂತೆ ನಿಂತಿದ್ದ. ಅರ್ಧನಿಮೀಲಿತ ನೇತ್ರ, ಗಂಗೆಯ ಸೀಳಿನಂತೆ ತೆಳ್ಳತೆ ಸಣ್ಣಗೆ ಮೂಗಿನ ಪಕ್ಕದಲ್ಲೇ ಕಣ್ಣಿಂದ ತುಟಿಯವರೆಗೂ ಹರಿದು ಬಂದು ಕೆಳಕ್ಕೆ ಧುಮುಕುತ್ತಿರುವ ನೀರ ಹನಿಗಳು. ಭೀಮಪನ ತಲೆಯ ಮೇಲೆ, ಚೈತ್ಯಾಲಯದಲ್ಲಿ ಇಂದ್ರನು ಮಂತ್ರಪೂರ್ವಕವಾಗಿ ಶುಭಕೋರಿ ಹಾಕುವ ತೀರ್ಥಪ್ರಸಾದದ ಪವಿತ್ರ ಬಿಂದುಗಳಂತೆ, ತಂದೆಯ ಕಂಬನಿಗಳುದುರಿದುವು. ಭೀಮಪ ಆಶೀರ್ವಾದ ಹೊತ್ತು ಎದ್ದು ನಿಂತ.

“ಅಪ್ಪಾಜಿ.”

ಉತ್ತರವಿಲ್ಲ. ಮತ್ತೆ ಕೂಗಿದ, ನೀರವತೆ. ಹತ್ತಿರ ಹೋಗಿ ತಂದೆಯ ಭುಜ ಹಿಡಿದು ಅಲುಗಾಡಿಸಿ 'ಅಪ್ಪಾಜಿ' ಎಂದ. ಬಹಿರ್ಮುಖಿಯಾದ ತಪಸ್ವಿಯಂತೆ ಕೊಮರಯ್ಯ 'ಹ್ಞಾ' ಎನ್ನುತ್ತಾ ಕಣ್ಣುಬಿಟ್ಟ.

"ಅಪ್ಪಾಜಿ, ಏನಿದು ಕಣ್ಣಿಂದ ಒಂದೇ ಸಮನೆ ನೀರು ಸುರಿಸುತ್ತಿದ್ದೀರಿ. ತಮಗೆ ನನ್ನ ನಿರ್ಧಾರ ಸಮ್ಮತವಿಲ್ಲದಿದ್ದರೆ ಈಗಲೂ ತಿಳಿಸಿಬಿಡಿ, ತಮ್ಮೆಲ್ಲರನ್ನು ನೋಯಿಸಿ, ಅತ್ತೂ ಕರೆದು ಆರತಿ ಎತ್ತಿಸಿಕೊಳ್ಳುವಂತಾದರೆ ನನಗೆ ಶುಭವಾಗದು."

"ಇದು ನೋವಿನ ನೀರಲ್ಲ ಕಂದ, ಆನಂದಬಾಷ್ಪ. ನನ್ನ ಒಪ್ಪಿಗೆಯ ಹೊರರೂಪ. ನನ್ನ ತೀರ್ಥರೂಪರ ಕಾಲದಲ್ಲಿ ಕಾಳಿನ ರೂಪದಲ್ಲಿ ಬಂದು ಸೇರಿಕೊಂಡ ಜೈನಧರ್ಮಾನುರಾಗ, ನನ್ನಲ್ಲಿ ಗುಪ್ತವಾಗಿ ಅಂಕುರಗೊಂಡು ನಿನ್ನಲ್ಲಿ ಕುಡಿಯಿಟ್ಟು ಪಲ್ಲವಿಸಿದೆ ಕುಮಾರ. ನಾನು ಸಾಧಿಸಲು ಆಗದುದನ್ನು ನೀನು ಸಾಧಿಸಿದ್ದೀಯೆ. ಎಲ್ಲಿ ತಂದೆ ಸೋತನೊ ಅಲ್ಲಿ ಮಗ ಗೆದ್ದಾಗ ಆಗುವ ಆನಂದ ಅವಿರಳ. ಅದು ಬಣ್ಣನೆಗೆ ನಿಲುಕದ್ದು. ಹೃತ್ಸಂವೇದ್ಯವಾದುದು."

"ಹಾಗೆಂದರೆ, ತಾವೂ ಈ ಧರ್ಮಾಂತರಕ್ಕೆ ಅಣಿಯಾಗಿದ್ದೀರಾ ಅಪ್ಪಾಜಿ."

"ಈ ದೇಹದ ಕಣಕಣವೂ ಅಣುವ್ರತ ಸ್ವೀಕರಣಕ್ಕಾಗಿ ಹಾತೊರೆಯುತ್ತಿತ್ತು."

"ಮತ್ತೆ ಈ ವಿಳಂಬಕ್ಕೆ ಕಾರಣ?"

"ಕಾರಣ ನನ್ನ ಅಳುಕೆದೆ. ಈ ಅಗ್ರಹಾರದವರನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲದುದು. ಹಲವು ಸಲ ಗುಣಭದ್ರರ ಬಳಿ ಈ ತೊಳಲಾಟವನ್ನು ತೋಡಿಕೊಳ್ಳಬೇಕೆಂದೇ ವೆಂಗಿಪಳುವಿನಿಂದ ಬಂಕಾಪುರಕ್ಕೆ ಹೋದೆ. ಆದರೆ ಅಲ್ಲಿ ಬಾಯಿಂದ ಈ ಮಾತೇ ಹೊರಡುತ್ತಿರಲಿಲ್ಲ. ಅವರು ಒಪ್ಪದಿದ್ದರೆ_ಎಂಬ ಸಂದೇಹವೂ ಒಂದು ಕಾರಣ. ತತ್ಪರಿಣಾಮವಾಗಿ, ಬಂದ ದಾರಿಗೆ ಸುಂಕವಿಲ್ಲದಂತೆ ಬಂಕಾಪುರದಿಂದ ವೆಂಗಿಪಳುವಿಗೆ ಹಿಂತಿರುತ್ತಿದ್ದೆ. ಈಗ ನೀನು ಜೈನಧರ್ಮಕ್ಕೆ ಪಾದಾರ್ಪಣೆ ಮಾಡುತ್ತಿರುವುದು ಕೇವಲ ಔಪಚಾರಿಕ. ಏಕೆಂದರೆ ಈ ಸ್ವೀಕಾರ ನಿನ್ನ ತಾತನ ಕಾಲದಲ್ಲೇ ಮಾನಸಿಕವಾಗಿ ನಡೆದುಬಿಟ್ಟಿದೆ."

"ನಿಜವೆ ಅಪ್ಪಾಜಿ; ಇದೆಲ್ಲವನ್ನೂ ನನ್ನಿಂದ ಮುಚ್ಚಿಟ್ಟು ಕಣ್ಣಾಮುಚ್ಚಾಲೆ ಆಟವಾಡಿದ್ದೇಕೆ?"

"ಪರಿಸ್ಥಿತಿ ಹಾಗೆ ಒದಗಿ ಬಂತು. ಯಾವುದಕ್ಕೂ ಕಾಲ ಕೂಡಿಬರಬೇಕೆಂದು ಹಿರಿಯರು ಹೇಳುತ್ತಾರೆ. ಆ ಮಾತು ನಿಜವಿರಬಹುದು. ನಿನ್ನನ್ನು ಮೊದಲಿನಿಂದಲೂ ಜೈನ ಗುರು ವಚನ ಶಾಸ್ತ್ರ ಪರಿಸರದ ಪ್ರಭಾವಲಯದಲ್ಲೇ ಹೆಚ್ಚಾಗಿ ಬೆಳೆಯಬಿಟ್ಟಿದ್ದು ಈ ಸದುದ್ದೇಶದಿಂದಲೇ. ಕಾಲಲಬ್ಧಿ ನಿನ್ನ ಕಾಲದಲ್ಲಿ ಕೂಡಿಬಂದಿದೆ."

"ಹಾಗಾದರೆ ನೀವಿಬ್ಬರೂ ದೂರಭವ್ಯರು, ನಾನು ಆಸನ್ನಭವ್ಯಜೀವಿ" ಎಂದು ಭೀಮಪ ನಡೆಯಾಡಿದ. ಕೊಮರಯ್ಯ ಮೆಲ್ಲಗೆ ನುಡಿದ—

"ಮೇಲು ಮೇಲಿನ ತೇಲು ನೋಟಕ್ಕೆ ಇದು ಹಾಸ್ಯವೆಂದು ತೋರಿದರೂ ಒಳನೋಟಕ್ಕೆ ಅರ್ಥಗರ್ಭಿತವಾಗಿ ಕಾಣುತ್ತದೆ. ಇರಲಿ. ಜೈನಧರ್ಮ ಸ್ವೀಕಾರದ ಪವಿತ್ರ ಪೂಜಾಕಾರ್ಯದ ದಿನ ನಿಶ್ಚಯವಾಗಿದೆಯೇ?"

"ಶಕಪರ್ವ ೮೧೭ರ ಜ್ಯೇಷ್ಠಮಾಸದ ಬಹುಳ ಬೃಹಸ್ಪತಿವಾರ ಬೆಳಗ್ಗೆ ಬಂಕಾಪುರದ ಬಸದಿಯಲ್ಲಿ ಈ ಕಾರ್ಯ ನಡೆಯಲಿದೆ. ಗುಣಭದ್ರರ ಆಶೀರ್ವಾದ ಸಾಮಂತ ಲೋಕಾದಿತ್ಯರ ಅರಮನೆಯಲ್ಲಿ ಅಂದು ಔತಣಕೂಟ. ನಮಗೆಲ್ಲ ಅಲ್ಲಿ ಸಹಪಂಕ್ತಿ ಭೋಜನವಿದೆ, ಗುಣಭದ್ರರ ಆಹಾರದಾನಾನಂತರ."

"ತುಂಬಾ ಪ್ರಶಸ್ತವಾದ ದಿವಸ ಆರಿಸಿಕೊಂಡಿದ್ದಿ, ಧರ್ಮ ವೃದ್ಧಿರಸ್ತು."

"ಏನಪ್ಪಾಜಿ, ತಾವು ಆಶೀರ್ವದಿಸುವ ಧ್ವನಿ ನೋಡಿದರೆ, ಅಂದು ಅಲ್ಲಿಗೆ ದಯಮಾಡಿಸುವಂತೆ ತೋರುವುದಿಲ್ಲವಲ್ಲಾ? ಹಾಗೆ ಮಾಡಬೇಡಿ. ತಮ್ಮ ಪರೋಕ್ಷದಲ್ಲಿ ನಡೆದ ಧಾರ್ಮಿಕ ಆಚರಣೆ ಅಶ್ರೇಯಸ್ಕರವಾದೀತು."

"ಅಶುಭ ನುಡಿಯಬೇಡ. ನನ್ನ ಹಿತದೃಷ್ಟಿಯಿಂದ ಒಳಿತಾದುದನ್ನೇ ನಾನು ಮಾಡುವೆ. ಲೌಕಿಕ ಅಷ್ಟು ಸರಳ ಸುಲಭದ ಮಾತಲ್ಲ. ಅದು ತುಂಬಾ ಸಿಕ್ಕು ಸಿಕ್ಕು, ಗಂಟು ಗಂಟು. ಆ ಗೋಜಿನಿಂದ ಬಿಡಿಕೊಳ್ಳುವುದು ಕಠಿಣ. ನಾನು ಇಲ್ಲಿಯೇ ಇದ್ದು ನಿನಗೆ ಸ್ವಸ್ತಿ ಕೋರುವೆ ಅಲ್ಲದೆ ಹೂ, ಈಗೇಕೆ ಬಿಡು."

"ನನಗೆ ಯಕ್ಷಪ್ರಶ್ನೆ ಒಡ್ಡಿದರೆ ಉತ್ತರಿಸುವಷ್ಟು ವಿವೇಕ ಸಾಲದು. ಒಗಟು ಬಿಡಿಸಿ ಹೇಳಬಾರದೆ?"

"ಅಲ್ಲಾ, ನಾಳೆ ನೀನು ಜೈನಮತೀಯನಾದ ಮೇಲೆ..."

"ನಾನು ಜೈನನಾದ ಮೇಲೆ ತಾವೂ ಆದಂತೆಯೇ ಅಪ್ಪಾಜಿ."

"ನಿನಗಿಂತ ಮೊದಲೇ ಅಂತರ್ಯದಲ್ಲಿ ಅದು ನಡೆದಿದೆ. ಅದಿರಲಿ, ನೀನು ಇನ್ನು ಮುಂದೆ ಈ ಅಗ್ರಹಾರದಲ್ಲಿ, ಸ್ವಲ್ಪಕಾಲ, ನಿಶ್ಚಿಂತೆಯಿಂದಿರುವುದು ಕಷ್ಟವಾದೀತು. ಅದರಿಂದ ನೀನು ವಸಂತ, ಕೊಟ್ಟೂರು ಅಗ್ರಹಾರಗಳನ್ನು ಬಿಟ್ಟು ನಿಡಗುಂದಿ ಇಲ್ಲವೇ ವಿಕ್ರಮಪುರ ಅಗ್ರಹಾರಗಳಲ್ಲಿರು."

"ಅದಕ್ಕೆ ಬೇರೆ ಏರ್ಪಾಟು ಆಗಲೇ ಆಗಿಬಿಟ್ಟಿದೆ."

"ಅಂದರೆ ವಿಕ್ರಮಪುರದಲ್ಲಿರಲು ಏರ್ಪಡಿಸೋಣವೆ?"

"ಇಲ್ಲ, ಇಲ್ಲ. ನಮ್ಮ ವೆಂಗಿಪಳುವಿಗೆ ಸೇರಿದ ನಾಲ್ಕು ಅಗ್ರಹಾರಗಳಲ್ಲಿ ನಾನು ಯಾವುದರಲ್ಲೂ ಇರುವುದಿಲ್ಲ. ರಾಜ್ಯಪಾಲ ಲೋಕಾದಿತ್ಯರು

ಪುಲಿಗೆರೆಯಲ್ಲಿರುವ ತಮಗೆ ಸೇರಿದ ದೊಡ್ಡ ಸೌಧವೊಂದನ್ನು ನನ್ನ ವಾಸಕ್ಕೆ ಬಿಟ್ಟುಕೊಡಲು ಒಪ್ಪಿದ್ದಾರೆ. ನನ್ನ ಮುಂದಿನ ಬದುಕು ಪುಲಿಗೆರೆಯ ಪೌರನಾಗಿ."

"ಅಬ್ಬಾ! ನಿನ್ನ ಭವಿಷ್ಯದೃಷ್ಟಿಗೆ ನಾನು ನಿಬ್ಬೆರಗಾದೆ ಭೀಮಪ. ಪುಲಿಗೆರೆ ಜೈನರ ಕೇಂದ್ರಗಳಲ್ಲೊಂದು. ಅಲ್ಲಿ ಅನೇಕ ಬಸದಿಗಳೂ ಗುರುಮಠಗಳೂ ಇವೆ. ದೊಡ್ಡ ವ್ಯಾಪಾರಸ್ಥಳ ಕೂಡ. ಒಳ್ಳೆಯ ಪಟ್ಟಣವನ್ನೇ ಆರಿಸಿಕೊಂಡಿದ್ದೀಯೆ, ಸಂತೋಷ, ಶುಭಸ್ಯ ಶೀಘ್ರಂ. ನಿನ್ನ ಪ್ರಯಾಣಕ್ಕೆ ಎಲ್ಲಾ ಸಿದ್ಧಮಾಡಿಕೊ" ಎಂದು ಹೇಳಿ ಒಳಕ್ಕೆ ಹೋದರು.

ಯಾವುದನ್ನು ತಾನು ತುಂಬಾ ದೊಡ್ಡ ರಾದ್ಧಾಂತವಾಗುತ್ತದೆಂದು ತಿಳಿದಿದ್ದನೋ ಅದು ಇಷ್ಟು ಸಲೀಸಾಗಿ ನಡೆದದ್ದು ನೋಡಿ ಭೀಮಪನಿಗೆ ಸೋಜಿಗ, ಸಂತೋಷ. ಎರಡೂ ಒಟ್ಟಿಗೆ ಆದುವು. ಅಗ್ರಹಾರದಲ್ಲಿ ಎದುರಾಗಬಹುದಾದ ವಿರೋಧಕ್ಕೆ ಭೀಮಪ ಹೆದರಿದವನಲ್ಲ. ತನ್ನ ಜನ್ಮಧಾತರ ಪ್ರತಿಭಟನೆಗಷ್ಟೇ ಭೀಮಪ ಭಯಪಟ್ಟಿದ್ದ. ಈಗ ಅದು ಕೂಡ ಹೂವು ಎತ್ತಿದಂತೆ ನಿರಾಯಾಸವಾಗಿ ನೆರವೇರಿದ ಮೇಲೆ ಅವನಿಗೆ ಸಗ್ಗವೇ ಕೈಗೆಟುಕಿದಂತಾಯಿತು. ಚತುರ್ಭುಜನಾಗಿ ಮುಂದಿನ ಕಾರ್ಯದಲ್ಲಿ ತೊಡಗಿದ.

## ೩

ಬಂಕಾಪುರ ರಾಷ್ಟ್ರಕೂಟರ ಅಧೀನದಲ್ಲೇ ಇದ್ದ ನಗರ. ಅದು ಪ್ರಾಚೀನವಾದ ಧಾರ್ಮಿಕ ಸಾಂಸ್ಕೃತಿಕ ಕೇಂದ್ರವಾಗಿದ್ದರೂ ಕಾರಣಾಂತರಗಳಿಂದ ಪಾಳುಬೀಳ ತೊಡಗಿತ್ತು. ಆದರೆ ಅಮೋಘವರ್ಷ ನೃಪತುಂಗನ ಬಲಗೈಯಂತಿದ್ದ ಮಹಾ ಸೇನಾಪತಿ ವೀರ ಬಂಕೆಯ ಮತ್ತೆ ಜೀರ್ಣೋದ್ಧಾರ ಮಾಡಿದ. ಮುಚ್ಚಿಹೋಗಿದ್ದ ಹಳೆಯ ತಟಾಕಗಳನ್ನು ಹೂಳು ತೆಗಿಸಿ ಏರಿ ಸರಿಪಡಿಸಿ ನೀರು ನಿಲ್ಲುವಂತೆ ಮಾಡಿದ್ದ; ಪುಷ್ಕರಣಿಗಳನು ಅಗೆಯಿಸಿದ್ದ; ಉದಕದಾನಫಲ ಕಟ್ಟಿಕೊಂಡ. ಹಳೆಯ ಬಸದಿಗಳನ್ನು ನೇರ್ಪುಗೊಳಿಸಿದ. ಹೊಸ ಬಸದಿಗಳನ್ನು ಕಟ್ಟಿಸಿಕೊಟ್ಟ. ಈಗದು ನವೀನವಾಗಿ ನಿರ್ಮಾಣವಾದ ನಗರದಂತೆ ಕಾಣತೊಡಗಿತು. ಅದರಿಂದ ಅವನ ಹೆಸರನ್ನೇ ನಗರಕ್ಕಿಟ್ಟರು. ಅಂದಿನಿಂದ ಅದಕ್ಕೆ ಬಂಕಾಪುರವೆಂಬುದೇ ಜನಪ್ರಿಯ ನಾಮಕರಣವಾಯಿತು.

ಮಹಾವೀರನಾದ ಬಂಕೆಯ ನಿಷ್ಠಾವಂತ ಜೈನ ಶ್ರಾವಕ. ಕಡುಗಲಿಯಾಗಿ ಕಾದಾಡುತ್ತಿದ್ದುದು ಸ್ವಾಮಿನಿಷ್ಠೆಗಾಗಿ, ರಾಷ್ಟ್ರಕ್ಕಾಗಿ, ಜೋಳದ ಪಾಳಿಗಾಗಿ, ಕರ್ತವ್ಯವೆಂದು ಪ್ರಭು ಋಣವನ್ನು ಸಲ್ಲಿಸುತ್ತಿದ್ದ. ಕಾದಾಟಗಳಿಲ್ಲದ ಬಿಡುವಿನ ವೇಳೆಯನ್ನು ಬಸದಿಗಳಲ್ಲೇ ಕಳೆಯುತ್ತಿದ್ದ. ಬಂಕೆಯನ ಮಗನೇ ಲೋಕಾದಿತ್ಯ. ತಂದೆಯಂತೆ ಮಗ. ತಂದೆ ಮಕ್ಕಳ ಸೇವೆಗೆ ಮೆಚ್ಚಿದ ದಣಿ, ಬನವಾಸಿ ಹನ್ನೆರಡು ಸಾವಿರವನ್ನು ಉಂಬಳಿಯಾಗಿ ಕೊಟ್ಟುಬಿಟ್ಟಿದ್ದ. ಅದನ್ನು ಲೋಕಾದಿತ್ಯ ರಾಜ್ಯಪಾಲನಾಗಿ ಆಳುತ್ತಾ ರಾಷ್ಟ್ರಕೂಟರ ಸಾಮಂತರಲ್ಲೊಬ್ಬನಾದನು.

ಬನವಾಸಿ ಹನ್ನೆರಡು ಸಾವಿರದ ರಾಜ್ಯಪಾಲ ಲೋಕಾದಿತ್ಯನಿಗೆ ಧರ್ಮಗುರು ಗುಣಭದ್ರಾಚಾರ್ಯರು. ಅವರು ಮಾನ್ಯಖೇಟವನ್ನು ಬಿಟ್ಟಮೇಲೆ, ಬಂಕಾಪುರದಲ್ಲೇ ಇರುವಂತೆ ಲೋಕಾದಿತ್ಯ ಕೈಮುಗಿದು ವಿನಯದಿಂದ ಬೇಡಿಕೊಂಡ. "ಜೈನ ಮುನಿಗಳಿಗೆ ವಾಸಸ್ಥಳವೆಂಬುದೇ ಇಲ್ಲ. ಅವರು ಒಂದೇ ಕಡೆ ಇರುವವರೂ ಅಲ್ಲ. ಚಾತುರ್ಮಾಸಕ್ಕೆ ನಿಲ್ಲುವ ನಾಲ್ಕು ತಿಂಗಳ ಮಳೆಗಾಲದ ಇರುವಿಕೆಯೂ ಹೆಚ್ಚು. ಅದು ಬಿಟ್ಟರೆ ಧರ್ಮವಿಹಾರವೇ ಅವರ ಬದುಕು. ಹೀಗಿರುವಾಗ ನಮಗೆ ಮಾನ್ಯಖೇಟವೇನು ಬಂಕಾಪುರವೇನು? ಮಾನ್ಯಖೇಟ, ಚಿತ್ರಕೂಟ,

ವಾಟಗ್ರಾಮ, ಬಂಕಾಪುರ, ಪುಲಿಗೆರೆ, ಕಳ್ವಪ್ಪು, ಕೊಪ್ಪಳ, ಕಿಸುವೊಳಲು, ಒಂಕುಂದ– ಇವೆಲ್ಲ ನಮಗೆ ಸಮಾನ ನಕ್ಷತ್ರಗಳು. ಗುರುಗಳಾದ ಜಿನಸೇನರು, ಅವರ ಗುರುಗಳಾದ ವೀರಸೇನರು ಎಲ್ಲರೂ ಈ ಸ್ಥಳಗಳಲ್ಲಿ ಇದ್ದು ಸಿದ್ಧಾಂತ ಅಭ್ಯಾಸ ಮಾಡಿದವರು. ಚಂದ್ರಸೇನ, ಆರ್ಯನಂದಿ ಮುಂತಾದ ಪಂಚಸ್ತೂಪಾನ್ವಯಕ್ಕೆ ಸೇರಿದ ಗುರು ಪರಂಪರೆಯ ಮುನಿಗಳೆಲ್ಲ ಇಲ್ಲಿ ಧರ್ಮ ಪ್ರಸಾರ ಮಾಡಿದವರು. ಅದಿರಂದ ನೀವು ನಮಗೆ ಒತ್ತಾಯಪಡಿಸಬೇಡಿ. ಧರ್ಮ ಧ್ಯಾನಗಳಿಗೆ ಪ್ರಶಾಂತವಾದ ಯಾವ ಸ್ಥಳವಾದರೂ ಆದೀತು. ಇಂತಹುದೇ ಆಗಬೇಕೆಂಬ ನಿರ್ಬಂಧವಿಲ್ಲ" ಎಂದು ಆಚಾರ್ಯ ಗುಣಭದ್ರರು ಎಷ್ಟೇ ನಿರಾಕರಿಸಿದರೂ ಲೋಕಾದಿತ್ಯ ಬಿಡಲಿಲ್ಲ.

ಆಚಾರ್ಯರ ಚರಣಕಮಲಗಳಿಗೆ ಸಾಷ್ಟಾಂಗಪ್ರಣಾಮ ಮಾಡಿ "ಸ್ವಾಮಿನ್, ಕಾಯಾ ವಾಚಾ ಮನಸಾ ಶುದ್ಧಿಯಿಂದ ಪ್ರಾರ್ಥಿಸುತ್ತಿದ್ದೇನೆ. ತಾವು ಬಂಕಾಪುರಕ್ಕೆ ದಯಮಾಡಿಸಿ ಧರ್ಮಪ್ರಭಾವನೆ ಮಾಡಬೇಕು. ಉತ್ತರ ಪುರಾಣದ ರಚನೆ ನಿಲ್ಲಬಾರದು. ಅದು ತಮ್ಮ ಆಚಾರ್ಯರು ಅಪ್ಪಣೆ ಕೊಡಿಸಿದ ಕರ್ತವ್ಯ. ಅದರ ರಚನೆಯಿಂದ ಲೋಕಕ್ಕೂ ಲಾಭವಿದೆ. ಅಲ್ಲದೆ ತಮ್ಮ ತಪಸ್ಸಿಗೆ ತಕ್ಕ ವಾತಾವರಣ, ಬಂಕಾಪುರ ಮತ್ತು ಸುತ್ತಲ ಬನವಾಸಿ ನಾಡಿನಲ್ಲಿದೆ. ಜೈನಗೃಹಸ್ಥರೆಲ್ಲ ತಮ್ಮ ಆಗಮನದಿಂದ ಸಂತೋಷಭರಿತರಾಗುತ್ತಾರೆ" ಎಂಬುದಾಗಿ ಪರಿಪರಿಯಾಗಿ ಕೋರಿದನು. ಕಡೆಗೆ ಆಚಾರ್ಯರು ಒಪ್ಪಿಗೆ ಕಳಿಸಿಕೊಟ್ಟರು. ಒಪ್ಪಿಗೆ ಕೊಡಲು ಪ್ರಬಲವಾದ ಕಾರಣ ಗುರುಋಣವನ್ನು ನೆರವೇರಿಸಬೇಕಾದದ್ದು. ಉತ್ತರ ಪುರಾಣದ ರಚನೆ ಧರ್ಮತೀರ್ಥಂಕರರವರೆಗೆ ಬಂದು ನಿಂತುಹೋಗಿತ್ತು. ಈ ಮಧ್ಯೆ ಆತ್ಮಾನುಶಾಸನ ಹಾಗೂ ಜಿನದತ್ತ ಚರಿತೆ ಎಂಬೆರಡು ಖಂಡಕಾವ್ಯಗಳನ್ನು ರಚಿಸಿದ್ದಾಗಿತ್ತು. ಆದರೂ ಮಹಾಪುರಾಣದ ಉತ್ತರಾರ್ಧದ ರಚನೆ ಮಾತ್ರ ಮುಂದುವರೆದಿರಲಿಲ್ಲ. ಅದಕ್ಕೆ ಕಾರಣವೂ ಇತ್ತು.

ಅತಿಶಯ ಧವಳ ನೃಪತುಂಗನ ಕಾಲದಲ್ಲಿ ಜೈನಮತಕ್ಕೆ ದೊರೆತ ಪ್ರೋತ್ಸಾಹ ಅವನ ಮಗ ಇಮ್ಮಡಿ ಕೃಷ್ಣನ ಕಾಲಕ್ಕೆ ಇಳಿಮುಖವಾಯಿತು. ನೃಪತುಂಗ ಪ್ರಾರಂಭದಲ್ಲಿ ಜೈನಮತಕ್ಕೆ ಅಪಾರವಾದ ಆಶ್ರಯ ಪ್ರಚಾರ ಪ್ರೋತ್ಸಾಹಗಳನ್ನಿತ್ತ. ಜೈನಾಗಮಗಳ ಪ್ರಚಾರಕ್ಕೆ ನೆರವಾಗಿ ಅತಿಶಯ ಧವಳನೆಂಬ ಕೀರ್ತಿಗೆ ಪಾತ್ರನಾದ. ಆದರೆ ಜಿನಸೇನರು ನಿರ್ವಾಣರಾದ ಮೇಲೆ, ಆತ ಕೂಡ ಉಳಿದೆಲ್ಲ ಧರ್ಮಗಳಂತೆ ಜೈನಧರ್ಮವನ್ನೂ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿರುವ ಧರ್ಮಗಳಲ್ಲೊಂದಷ್ಟೆ ಎಂಬಂತೆ ಕಂಡನು. ಆತ ಪರಿಸ್ಥಿತಿಯ ಕೂಸಾಗಿದ್ದು ಬೇರೇನೂ ಮಾಡುವಂತಿರಲಿಲ್ಲ. ಅರಮನೆಯ ರಾಜಗುರುಗಳಾಗಿದ್ದ ಜಿನಸೇನರ ಸ್ಥಾನದಲ್ಲಿ

ಗುಣಭದ್ರರನ್ನು ಆರಿಸಲಾಗಿತ್ತಾದರೂ ಅವರನ್ನು ಮೊದಲಿನಂತೆ ಕಾಣಲು, ಧರ್ಮ ಜಿಜ್ಞಾಸೆ ಮಾಡಲು, ಲೌಕಿಕಾಲೌಕಿಕಗಳನ್ನು ಚರ್ಚಿಸಲೂ ಆಗುತ್ತಿರಲಿಲ್ಲ. ಮೇಲಿಂದ ಮೇಲೆ ಒದಗುತ್ತಿದ್ದ ಯುದ್ಧಗಳೂ, ಗಡಿ ಕಾಳಗಗಳೂ ಅದಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ. ಅಲ್ಲದೆ ಕಡೆಕಡೆಗೆ ಅರಮನೆಯ ಪರಿಸರವೂ ಕಲುಷಿತವಾಗತೊಡಗಿತ್ತು. ವಂಶದ ಕುಡಿಯಾದ ಇಮ್ಮಡಿ ಕೃಷ್ಣನ ಸ್ವಭಾವ ಹಿತದಾಯಕವಾಗಿರಲಿಲ್ಲ. ಅದರಿಂದ ಅವನನ್ನು ರಾಜಗುರು ಗುಣಭದ್ರಾಚಾರ್ಯರ ಶಿಷ್ಯತ್ವದಲ್ಲಿ ಬಿಟ್ಟ. ತಾನು ಜಿನಸೇನರ ಶಿಷ್ಯನಾಗಿ ಪಡೆದ ಅತುಳ ಲಾಭ ಪರಂಪರೆಯನ್ನು ತನ್ನ ಮಗ ಅವರಲ್ಲಿ ಗಳಿಸುವನೆಂಬ ಭರವಸೆಯಿಟ್ಟ.

ತಾನೊಂದು ಬಗೆದರೆ ದೈವ ಮತ್ತೊಂದು ಬಗೆಯುತ್ತದಂತೆ. ಇಮ್ಮಡಿ ಕೃಷ್ಣನ ಬಗೆಗೆ ಚಕ್ರವರ್ತಿ ಎಣಿಸಿದಂತೆ ಆಗಲಿಲ್ಲ. ಹಗೆಗಳನ್ನು ಬಗ್ಗುಬಡಿವ ಕಾಳಗಗಳಲ್ಲಿ ಸಾಮ್ರಾಟ ತೊಡಗಿ, ವರ್ಷದ ಬಹುಕಾಲ ರಾಜಧಾನಿ ಬಿಟ್ಟು ಹೊರಗೇ ಇರುತ್ತಿದ್ದ. ಇಂಥ ಸಮಯವನ್ನೇ ಕೆಲವರು ಕಾಯುತ್ತಿದ್ದರು. ಪರಸಮಯ ವಾದಿಗಳು ಹಲವರು ಜಿನಸೇನರ ಪ್ರಭಾವದಿಂದ ನೃಪತುಂಗನನ್ನು ಬೇರ್ಪಡಿಸಲು ಪ್ರಯತ್ನಿಸುತ್ತಿದ್ದರು. ಅದು ಸಾಧ್ಯವಾದದ್ದು ಜಿನಸೇನರು ಪರಲೋಕವಾಸಿಗಳಾದ ಮೇಲೆ. ಜಿನಸೇನರ ಮರಣದಿಂದ ಚಕ್ರವರ್ತಿ, ತಂದೆಯನ್ನು ಕಳೆದುಕೊಂಡ ತಬ್ಬಲಿಯಂತೆ ಗೋಳಿಟ್ಟಾಗಲಂತೂ ಅಸಹಿಷ್ಣುಗಳು ಮನಸ್ಸಿನಲ್ಲೇ ಅವನನ್ನು ಹಿಂಡಿದ್ದರು. ಈಗ ಅವರಿಗೆಲ್ಲ ರೆಕ್ಕೆಪುಕ್ಕಗಳು ಬಂದಂತಾಯಿತು. ಅವರೆಲ್ಲ ಕಿಶೋರ ಕೃಷ್ಣನನ್ನು ಆಶ್ರಯಿಸಿದರು. ಅರಮನೆಯ ಇನ್ನು ಕೆಲವು ಅಧಿಕಾರಿಗಳಿಗೆ ಚಕ್ರವರ್ತಿಯ ಮೇಲೆ ಒಳಗೊಳಗೇ ಕುದಿಯಿತ್ತು. ಅವರ ಕೂಟ ಮಾಟ ಕುತಂತ್ರಗಳಾವುವೂ ಚಕ್ರವರ್ತಿಯ ಆಳವಾದ ಅನುಭವದತ್ತ ವಿವೇಕದೆದುರು ಫಲಿಸುತ್ತಿರಲಿಲ್ಲ. ಅಲ್ಲದೆ ಚಕ್ರವರ್ತಿಯ ದೀರ್ಘಾವಧಿಯ ಆಳ್ವಿಕೆ ಅವರಿಗೆ ಆಶಾದಾಯಕವಾಗಿರದೆ ಬೇಸರಕ್ಕೆ ಕಾರಣವಾಗಿತ್ತು. ಈಗ ಅವರು ಕೂಡ ಕುಮಾರ ಕೃಷ್ಣನನ್ನೇ ಆಶ್ರಯಿಸಿದರು. ಈ ಇತ್ತಂಡದವರೂ ಇಮ್ಮಡಿ ಕೃಷ್ಣನ ಬೆಳೆಯುವ ಎಳೆಯ ಬುದ್ಧಿಯ ಬುಡಕ್ಕೆ ಬೆರಕೆಯ ನೀರನ್ನೇ ಎರೆದರು. ದುರ್ಬೋಧನೆಯನೇ ತುಂಬಿದರು. ಗುಣಭದ್ರರ ಬೋಧನೆಯ ವಿಧಾನ ಎಳೆಯನಿಗೆ ತುಂಬಾ ಹಿಡಿಸಿತ್ತು. ಆದುದರಿಂದ ಆದಷ್ಟೂ ಗುಣಭದ್ರರ ವಜ್ರಕವಚವಿಲ್ಲದಂತೆ ಮಾಡಲೆತ್ನಿಸಿ, ಯಶಸ್ವಿಯಾದರು. ಗುಣಭದ್ರರು ಇರುತ್ತಿದ್ದ ಚೈತ್ಯಾಲಯಕ್ಕೇ ಹೋಗಿ ಶಿಕ್ಷಣ ಪಡೆದು ಬರುತ್ತಿದ್ದ ಕುಮಾರ ಕೃಷ್ಣನ ತಲೆಗೆ ವಿಚಿತ್ರ ಆಲೋಚನೆಯ ಸೂಚನೆ ಕೊಟ್ಟರು. 'ಕುಮಾರರೇ, ನೀವೀಗ ಚಿಕ್ಕವರಾದರೂ ಯುವರಾಜರು. ಮುಂದೆ

ಚಕ್ರವರ್ತಿಗಳಾಗಬೇಕಾದವರು. ನಾಳೆ ನಾಡನ್ನು ಆಳಬೇಕಾದ ನೀವೇ ಬಸದಿಯ ನೆಲದಲ್ಲಿ ಕುಳಿತು ನಾಡಾಡಿಯಂತೆ ಓದಿ ಬರುವುದೇ? ಸರಿಯಲ್ಲ ಪ್ರಭೂ. ನೀವೇ ಇರುವ ಅರಮನೆಗೆ ಗುರುಗಳು ಬಂದು ಬೋಧಿಸುವುದು ಉಚಿತ.":

ಅದರಂತೆ ಕುಮಾರ ಕೃಷ್ಣ ಗುಣಭದ್ರರಲ್ಲಿ ಬಿನ್ನೈಸಿಕೊಂಡ. ಅವರು "ಚಿರಂಜೀವಿ, ನಿನಗೆ ಈ ವಿಷಯ ಇನ್ನೂ ಚೆನ್ನಾಗಿ ತಿಳಿಯದೆಂದು ತೋರುತ್ತದೆ. ಈ ಜಿನಮುನಿಗಳು ತಮ್ಮೆಡೆಗೆ ಧರ್ಮ ಇಲ್ಲವೇ ಜ್ಞಾನಭಿಕುಗಳಾಗಿ ಬಂದವರಿಗೆ ಮಾತ್ರ ಬೋಧಿಸುತ್ತಾರೆಯೇ ಹೊರತು ಅವರೆಂದಿಗೂ ತಾವಾಗಿ ಹೋಗಿ ಅಯಾಚಿತರಿಗೆ ಬೋಧಿಸುವುದಿಲ್ಲ. ನೃಪತುಂಗರು ಕೂಡ ಜಿನಸೇನರಲ್ಲಿ ಹೀಗಿಯೇ, ಇಲ್ಲಿಗೆ ಬಂದೇ ಕಲಿತರು. ನಮ್ಮದು ಪ್ರತಿಫಲಾಪೇಕ್ಷೆಯಿಲ್ಲದೆ ಕೇವಲ ಲೋಕಕಲ್ಯಾಣಾರ್ಥವಾಗಿ ಕೊಡುವ ಶಿಕ್ಷಣ. ಅರಮನೆಯನ್ನು ಬಿಟ್ಟು ಜ್ಞಾನದಾಹದಿಂದಗುರುಮನೆಗೆ ಬಂದು ಕಲಿಯುವುದು ನಿಜವಾದ ಕಲಿಕೆ. ಇದನ್ನು, ಸ್ವಲ್ಪಕಾಲ ಇದ್ದು ಬಂದ, ಗುರುಕುಲ ವಾಸದಲ್ಲಿ ನೀನು ಅರಿತಿದ್ದೀಯೆ. ಅಲ್ಲದೆ ಇಲ್ಲಿ ಚೈತ್ಯಾಲಯದ ನಿರ್ಮಲ ವಾತಾವರಣದಲ್ಲಿ ಸಮತಾ ಭಾವದಿಂದ ಆತ್ಮೋನ್ನತಿಯನ್ನು ಕಂಡುಕೊಳ್ಳಬಹುದು."

ಗುಣಭದ್ರಾಚಾರ್ಯರ ಮಾತು ಹುಡುಗನ ಮನಸ್ಸಿಗೆ ಹಿಡಿಸಿತು. ಆತ ಒಪ್ಪಿಕೊಂಡ. ಉಳಿದವರು ಅಲ್ಲಿಗೆ ಬಿಡಲಿಲ್ಲ. ಅವರು ಮತ್ತೆ ಹುಳಿ ಹಿಂಡಿದರು. ಆಚಾರ್ಯರನ್ನು ಒತ್ತಾಯಪಡಿಸಿದ. ಅವರು ಹಿಂದಿನ ಮಾತನ್ನೇ ಹೇಳಿದರು. ಅದಕ್ಕೆ ಹಗೆಗಳು ಸರಿಯಾಗಿ ಬೇರೊಂದು ಯೋಜನೆ ಮುಂದಿಟ್ಟರು: "ಅವರೇ ರಾಜಗುರುಗಳಾಗಿಬೇಕೆಂದು ಶಾಸನವಿದೆಯೇ? ಅವರಲ್ಲದಿದ್ದರೆ ಮತ್ತೊಬ್ಬರು. ವಿದ್ವಾಂಸರಿಗೆ ಮಳಖೇಡದಲ್ಲಿ ಕೊರತೆಯೆ? ನಾಳೆಯೇ ಬೇರೊಬ್ಬ ಪಂಡಿತರನ್ನು, ಅರಮನೆಗೆ ಬಂದು ಪಾಠ ಹೇಳುವಂತೆ ವ್ಯವಸ್ಥೆ ಮಾಡಿದರಾಯಿತು. ಸನ್ನಿಧಾನದ ಸೇವೆಗೆ ಸಾಕಷ್ಟು ಸೂರಿಗಳು ಸಿದ್ಧರಿದ್ದಾರೆ."

ಕೃಷ್ಣನ ಮನಸ್ಸು ಡೋಲಾಯಮಾನವಾಯಿತು. ಒಂದು ಕಡೆ ಅಭಿಮಾನ ಕ್ಷಾತ್ರರಕ್ತದ ಒತ್ತಡ, ರಾಜಸ ಗುಣದ ರಿಂಗಣ, ತಾನು ಕರೆದರೂ ಅರಮನೆಗೆ ಬರಲೊಪ್ಪಲಿಲ್ಲವೆಂಬ ಕಿನಿಮುನಿಸು. ಇನ್ನೊಂದು ಕಡೆ ಭೀತಿ. ನಾಳೆ ತಂದೆ ಏನಂದಾರೋ ಎಂಬ ಹೆದರಿಕೆ. ನುಂಗಲಾರದ ತುತ್ತು. ಕಡೆಗೆ ಗುಣಭದ್ರರನ್ನು ರಾಜಗುರುಗಳಾಗಿಯೇ ಮುಂದುವರಿಸಿ ತನಗೆ ಬೋಧಿಸಲು, ಬೇರೊಬ್ಬರನ್ನು ಗುರುವಾಗಿ ಸ್ವೀಕರಿಸಲು ಒಪ್ಪಿದ. ಅದರಂತೆ ಮರುದಿವಸ ಇನ್ನೊಬ್ಬ ವಿದ್ವಾಂಸರು ಅರಮನೆಗೇ ಬಂದು ಕಲಿಸತೊಡಗಿದರು. ಆರೇಳು ವರ್ಷಗಳಲ್ಲಿ ಕುಮಾರನನ್ನು

ಸಂಪೂರ್ಣವಾಗಿ ತಮ್ಮವನನ್ನಾಗಿಸಿದರು.

ಚಕ್ರವರ್ತಿ ಕುಮಾರನಲ್ಲಾಗುತ್ತಿದ್ದ ವ್ಯತ್ಯಾಸವನ್ನು ಗುರುತಿಸಿದ. ಗುಣಭದ್ರರನ್ನು ಬಿಟ್ಟು ಬೇರೊಬ್ಬರಲ್ಲಿ ಶಿಷ್ಯತ್ವ ಗ್ರಹಿಸಿದ್ದಕ್ಕೆ ಪ್ರತಿಭಟಿಸಿದ. ಕುಮಾರ ಅದಕ್ಕೆ ತಂದೆಯನ್ನು ವಿರೋಧಿಸದೆ ನಿಜ ಮರೆ ಮಾಡಿ ಬೇರೆ ಕಾರಣ ತಿಳಿಸಿದ. ಕುಮಾರನ ಕೈವಾರಿಗಳು ಕೂಡ ಸುಳ್ಳು ಹೇಳಿದರು. ಅವನ್ನು ಅಮೂಲಾಗ್ರವಾಗಿ ಪರಿಶೀಲಿಸುವ ವ್ಯವಧಾನ ಸಾಲದೆ ಸುಮ್ಮನಾದ. ಪ್ರಾಪ್ತವಯಸ್ಕನಾದ ಕುಮಾರನಿಗೆ ವಿವಾಹ ಮಹೋತ್ಸವ ನಡೆಸುತ್ತಿದ್ದಂಥೆಯೇ ಮಲೆತು ನಿಂತ ಚೋಳರನ್ನು ಸದೆ ಬಡಿಯಲು ಹೊರಟ. ಇದರ ನಡುವೆ ವೈರಿಗಳು ಕುಮಾರನಿಗೆ ಅಧಿಕಾರ ದಾಹದ ಕಳ್ಳು ಕುಡಿಸಿದರು. ತಂದೆಯನ್ನೇ ಹತ್ತಿಕ್ಕಿ ಸಿಂಹಾಸನ ಹತ್ತುವ ವಿಷಭೀಜ ಬಿತ್ತಿದರು: 'ಯುವರಾಜರೇ, ನೀವು ಇನ್ನೂ ಎಷ್ಟು ವರ್ಷ ಯುವರಾಜರಾಗಿಯೇ ಇರುವುದು? ನಿಮ್ಮನ್ನು ಮಹಾರಾಜರೆಂದು ಕರೆಯುವುದೆಂದು? ನೀವು ಚಕ್ರವರ್ತಿಯಾಗಿ ರತ್ನಸಿಂಹಾಸನದಲ್ಲಿ ಕುಳಿತುಕೊಳ್ಳುವುದನ್ನು ನಾವು ಈ ಜನ್ಮದಲ್ಲಿ ನೋಡುವ ಭಾಗ್ಯ ಪಡೆದು ಬಂದಿಲ್ಲವೆಂದು ಕಾಣುತ್ತದೆ. ಈಗಲೂ ಭಗವಾನ್ ಗುಣಭದ್ರಾಚಾರ್ಯರು ಹೇಳಿದರೆ ಸಾಕು; ಚಕ್ರವರ್ತಿಗಳು ಒಪ್ಪುವರು."

ಕುಮಾರನ ತಲೆಯಲ್ಲಿ ವಿಪ್ಲವವೇ ನಡೆಯಿತು. 'ಹೌದು, ಇವರೆಲ್ಲ ಹೇಳುವುದು ನಿಜ. ತಂದೆಯವರು ಅರ್ಧಶತಮಾನ ಕಾಲ ಈ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಆಳಿದ್ದಾರೆ. ಇನ್ನೆಷ್ಟು ಕಾಲ ಆಳುವುದು? ತಂದೆಯವರು ನನಗೇನೂ ಕಡಿಮೆ ಮಾಡಿಲ್ಲ. ಯುವರಾಜನನ್ನಾಗಿಸಿದ್ದಾರೆ, ಸರಿಯೆ! ಇಪ್ಪತ್ತಾರರ ಹರಯದಲ್ಲಿರುವಾಗಲೂ ನಾನು ಸಿಂಹಾಸನ ಹತ್ತದಿದ್ದರೆ? ಯೌವ್ವನ ಜಾರಿದ ಮೇಲೆ ಚಕ್ರವರ್ತಿಯಾದರೆ ಭೋಗಿಸುವುದೇನು? ಈಗ ನಾನೇನು ಮಾಡಲಿ? ಮೊದಲಾಗಿ, ತಂದೆಯನ್ನು ಎದುರಿಸಿ ನಿಲ್ಲುವ ಎದೆಗಾರಿಕೆಯಿಲ್ಲ. ಎರಡನೆಯದಾಗಿ ಜನತೆಯ ಕಣ್ಣಲ್ಲಿ ಅದು ಸರಿಯಾದ ಕ್ರಮವಾಗದು. ಹಾಗಾದರೆ ತಂದೆಯವರನ್ನು ಈ ವಿಷಯವಾಗಿ ಕೇಳುವುದೆ? ಅದೂ ಆಗದ ಮಾತು. ಏನೆಂದು ಕೇಳುವುದು? ನೀವು ಸಿಂಹಾಸನ ಬಿಟ್ಟುಕೊಡಿ ಎನ್ನುವುದ......? ಛೆ ಛೆ! ಅದು ಸಾಧ್ಯವಿಲ್ಲ. ಬೇರೆ ದಾರಿ! ಅದೇ ಸರಿ!! ಗುಣಭದ್ರರೊಬ್ಬರೇ ಈ ವಿಷಯ ತಂದೆಯೊಡನೆ ಪ್ರಸ್ತಾಪಿಸಬಲ್ಲವರು' ಹಗೆಗಳ ಯೋಜನೆ ಕೈಗೂಡಿತ್ತು. ರಾಜಾಶ್ವ ಖುರಪುಟವಿಟ್ಟು ನಡೆದಿತ್ತು.

ಬಹಳ ದಿನಗಳಾದ ಮೇಲೆ ಬಂದ ಯುವರಾಜ ಕೃಷ್ಣನನ್ನು ನಗುಮೊಗದಿಂದಲೇ ಆಚಾರ್ಯರು ಬರಮಾಡಿಕೊಂಡರು. ಅಳುಕಿನಿಂದಲೇ ಕುಮಾರ

ವಿಷಯ ಪ್ರಸ್ತಾಪಿಸಿದ. ಹೆಡೆಮೆಟ್ಟಿದವರಂತೆ ಆಚಾರ್ಯರು ಚಕಿತರಾದರು. "ಕುಮಾರ ನಿನ್ನ ಬಾಯಲ್ಲಿ ಇಂಥ ಮಾತು ಬರುವುದೆ? ರಾಷ್ಟ್ರಕೂಟ ಮನೆತನಕ್ಕೆ ಇದು ಅಗೌರವ, ಕಳಂಕ. ಎಂಥ ಅಪಶಕುನದ ನುಡಿಯಿದೆಂಬುದರ ಕಲ್ಪನೆಯಿಲ್ಲದೆ ನೀನು ಹೀಗೆ ಹೇಳಿದ್ದೀಯೆ. ಅಷ್ಟಕ್ಕೂ ಸಿಂಹಾಸನವೆಂಬುದು ಹೂವಿನ ರಾಶಿಯಲ್ಲ. ಅದು ಮುಳ್ಳಿನ ಹಾಸಿಗೆ. ದೂರಕ್ಕೆ ಅದು ನುಣ್ಣಗೆ. ಕುಳಿತ ಮೇಲೆ ತಣ್ಣಗೆ. ಪಿಶುಣರ ಮಾತಿಗೆ ಕಿವಿಗೊಡಬೇಡ."

"ಆಚಾರ್ಯರೇ, ನಾನು ತಮ್ಮಿಂದ ಹಿತವಚನ ಕೇಳಲು ಬಂದಿಲ್ಲ. ತಾವು ಈ ಶಿಷ್ಯನ ಪ್ರಾರ್ಥನೆಯನ್ನು ಈಡೇರಿಸಿ ಕೊಡಬೇಕು." ಮಾತಿನಲ್ಲಿ ನಯವಿದ್ದರೂ ವಿನಯವಿರಲಿಲ್ಲ. ಅಧಿಕಾರ ಮಿಶ್ರವಾದ ನುಡಿಯಿಂದ ಆಚಾರ್ಯರು ವಿಸ್ಮಿತರಾದರು.

"ರೋಗಿಗೆ ಒಳಿತಾಗಲೆಂದು ಪಥ್ಯ ಹೇಳುವರು. ಅದನ್ನು ಆತ ಅರ್ಥಮಾಡಿಕೊಂಡರೆ ಸರಿ, ಇಲ್ಲವಾದರೆ ಅವನಿಗೆ ಕೇಡು. ಅದೇನೇ ಇರಲಿ. ನೀನು ಹೇಳಿದ ಕೆಲಸ ನಮ್ಮಿಂದ ಎಂದೆಂದೂ ಸಾಧ್ಯವಿಲ್ಲ, ಸೂರ್ಯ ಪಶ್ಚಿಮದಲ್ಲಿ ಮುಳುಗುವನೇ ಹೊರತು, ಹುಟ್ಟಲಾರ."

ಯುವರಾಜ ಕೃಷ್ಣ ದುರ್ದಾನ ತೆಗೆದುಕೊಂಡವನಂತೆ ಬಿರುಗಾಳಿಯ ಹಾಗೆ ಆಚಾರ್ಯರ ಬಳಿಯಿಂದ ಎದ್ದು ಹೊರಟ. ಒಂದು ವಾರ ಯಾರೊಡನೆಯೂ ಸೇರಲಿಲ್ಲ. ಸಿಡಿಮಿಡಿಯಾಗಿ ಬುಸುಗುಟ್ಟುತ್ತಿದ್ದ. ಗುಣಭದ್ರರ ಮೇಲೆ ಎಲ್ಲಿಲ್ಲದ ಕೋಪ ಬಂತು. ಅವರಿಗೆ ಪ್ರತೀಕಾರವೆಸಗುವುದು ಸಾಧ್ಯವಿಲ್ಲದ ಸಂಗತಿ. ಆದರೂ ತಾನು ಏನು ಬೇಕಾದರೂ ಮಾಡಬಲ್ಲನೆಂಬುದನ್ನು ತೋರಿಸಬೇಕೆನ್ನಿಸಿತು. ಒಡನೆಯೇ ತಾನು ಶೈವನಾದುದಾಗಿ ಸಾರಿದ. ಜೈನಧರ್ಮ ಬಿಟ್ಟನೆಂಬುದನ್ನು ಕೇಳಿ, ಆಚಾರ್ಯರು ಹೇಳಿಕಳಿಸುವುದಾಗಿ ಭಾವಿಸಿದ. ಅವನೆಣಿಕೆ ಹುಸಿಯಾಯಿತು.

ಆಚಾರ್ಯ ಗುಣಭದ್ರರು ಕೋಪಗೊಳ್ಳಲಿಲ್ಲ. ಕೋಪತಾಪಗಳು ಜಿನಮುನಿಗೆಲ್ಲಿಂದ ಬರಬೇಕು! 'ಲೋಕದ ರೂಢಿ, ಮಾನವ ಸ್ವಭಾವ ಹೀಗೆ ತಾನೆ. ಇದರಲ್ಲಿ ಯುವರಾಜ ಅಪವಾದವಲ್ಲ' ಎಂದುಕೊಂಡರು. ಅವರಿಗೆ ಇನ್ನು ಮಾನ್ಯಖೇಟದಲ್ಲಿ ಇರುವುದು ಸರಿಕಾಣಲಿಲ್ಲ. ಗುರುಗಳ ಸ್ಮರಣೆಯಾಯಿತು. ಭಗವಾನ್ ಜಿನಸೇನರು ಯಶಃಶರೀರಗಳಾಗುವ ಮುನ್ನ ಕಡೆಯ ದಿನಗಳಲ್ಲಿ ನಡೆದ ಘಟನೆ ನೆನಪಾಯಿತು.

ತೊಂಬತ್ತೈದರ ಹಣ್ಣಾದ ಮಹರ್ಷಿ ಜಿನಸೇನರು, ಪೂರ್ವಪುರಾಣದ ರಚನೆಮುಗಿಯುತ್ತಾ ಬಂದಂತೆ ತಮ್ಮ ಆಯಸ್ಸು ತೀರುತ್ತಾ ಬಂದುದನ್ನು

ಗುರುತಿಸಿದರು. ಇನ್ನು ೧೬೨೦ ಶ್ಲೋಕಗಳನ್ನು ರಚಿಸಿದರೆ ಅಲ್ಲಿಗೆ ಪೂರ್ವ ಪುರಾಣ ರಚನೆ ಮುಗಿಯುತ್ತಿತ್ತು. ಆದರೆ ವಯೋಧರ್ಮದಿಂದ ಅದೂ ಸಾಧ್ಯವಾಗದಾಯಿತು. ಶಿಷ್ಯರಲ್ಲಿ ಯಾರಿಗಾದರೂ ಮುಂದಿನ ಬರವಣಿಗೆಯನ್ನು ವಹಿಸಬೇಕೆಂದು ನಿರ್ಧರಿಸಿದರು. ಅಂತೂ ಮಹಾಪುರಾಣದ ರಚನೆ ನಿರ್ವಹಿಸಬಲ್ಲ ಸಮರ್ಥ ಶಿಷ್ಯನನ್ನು ಆರಿಸುವುದಕ್ಕೆ ಒಂದು ಉಪಾಯ ಹೊಳೆಯಿತು.

ಒಂದು ದಿನ ಬೆಳಿಗ್ಗೆ ಪೂಜಾವಿಧಿಯೆಲ್ಲ ಮುಗಿದ ಮೇಲೆ ಆಶ್ರಮದ ಬಳಿಯ ದೊಡ್ಡ ಆಲದ ಮರದ ಬುಡದ ಬಳಿಯಿದ್ದ ಜಗತಿಯ ಮೇಲೆ ಕುಳಿತರು. ಶಾಸ್ತ್ರದ ಜೊತೆಗೆ ಸಾಹಿತ್ಯವನ್ನೇ ವಿಶೇಷವಾಗಿ ಅಧ್ಯಯನ ಮಾಡುತ್ತಿದ್ದ ವಟುಗಳನ್ನು ಹತ್ತಿರಕ್ಕೆ ಕರೆದರು. ನಾನಾ ವಿಧವಾಗಿ ಪರಿಶೀಲಿಸಿದ ಮೇಲೆ ಅವರಲ್ಲಿ ಇಬ್ಬರು ಶಿಷ್ಯರು ಬಹಳ ಬುದ್ಧಿಶಾಲಿಗಳಾಗಿ ತೋರಿದರು. ಅವರಿಬ್ಬರನ್ನು ಮತ್ತೆ ಪರೀಕ್ಷಿಸಬೇಕಾಯಿತು. ಏಕೆಂದರೆ ಪುರಾಣ ರಚನೆಗೆ ಕಾವ್ಯರಚನೆಯ ಶಕ್ತಿ ಅಗತ್ಯ. ಆಗ ಅವರಿಬ್ಬರನ್ನೂ ಜೊತೆಯಲ್ಲಿ ಕರೆದುಕೊಂಡು ಅಷ್ಟು ದೂರ ಹೋದರು.

ಅಲ್ಲಿ ಎದುರುಗಡೆ ಒಂದು ಒಣ ಮರವಿತ್ತು. ಅದನ್ನು ತೋರಿಸಿ "ಅದನ್ನು ಕಾವ್ಯವಾಣಿಯಲ್ಲಿ ವರ್ಣಿಸಿ" ಎಂದರು. ಒಬ್ಬ ಶಿಷ್ಯ "ಶುಷ್ಕಂ ಕಾಷ್ಠಂ ತಿಷ್ಠತ್ಯಗ್ರೆ" ಎಂದನು. ಇನ್ನೊಬ್ಬ ಶಿಷ್ಯ "ನೀರಸ ತರುರಿಹ ವಿಲಸತಿ ಪುರತಃ" ಎಂದು ಹೇಳಿದನು. ಅವನ ವಾಣಿಯಲ್ಲಿ ರಸವಿತ್ತು, ಕಾವ್ಯ ಗುಣವಿತ್ತು. ಆತನೇ ಗುಣಭದ್ರ ಕೂಡಲೇ ಗುರುಗಳಾದ ಭಗವಾನ್ ಜಿನಸೇನಾಚಾರ್ಯರು "ಗುಣಭದ್ರಾ, ಇಂದಿನಿಂದ ನೀನು ನನ್ನ ಉತ್ತರಾಧಿಕಾರಿ. ಮಹಾಪುರಾಣವನ್ನು ಪೂರ್ತಿಗೊಳಿಸುವ ಹೊಣೆಯನ್ನು ನಿನಗೆ ವಹಿಸಿಕೊಡುತ್ತಿದ್ದೇನೆ. ನನ್ನ ಆಯುಷ್ಯ ಮುಗಿಯಿತು. ನನ್ನ ಸಹಪಾಠಿಗಳಲ್ಲೊಬ್ಬರಾದ ದಶರಥ ಮುನಿಗಳಲ್ಲಿ ಇನ್ನೆರಡು ವರ್ಷ ಅಭ್ಯಾಸ ನಡೆಸಿ, ಅನಂತರ ಉತ್ತರಪುರಾಣ ರಚನೆಗೆ ತೊಡಗಬಹುದು ಧರ್ಮ ವೃದ್ಧಿರಸ್ತು" ಎಂದು ಮೈದಡವಿ ಆಶೀರ್ವದಿಸಿದರು. ಅಂದಿನ ಸಂಜೆಯೇ ಅವರು ಮುಕ್ತಿಯನ್ನೈದಿದರು.

ಅವರ ಪವಿತ್ರ ಹಸ್ತಸ್ಪರ್ಶದ ನೆನಪಾಗಿ ಈಗ ಮತ್ತೆ ಮೈ ನವಿರೆದ್ದಿತು. ಆಚಾರ್ಯರಿಂದ ಆಜ್ಞಪ್ತರಾಗಿದ್ದೂ ಅವರ ಆಶಯ ನೆರವೇರಲು ನಿಧಾನವಾಗಿತ್ತು. ಯುವರಾಜನ ನಡತೆ ಹೀಗಾದ ಮೇಲೆ ಇನ್ನು ಮಾನ್ಯಖೇಟ ಬಿಡುವುದಂತೂ ಸರಿಯೇ. ಇಲ್ಲಿಂದ ಹೊರಡುವುದೆಲ್ಲಿಗೆ? ಚಿತ್ರಕೂಟಕ್ಕೆ? ಅದು ಇಲ್ಲಿಂದ ಹತ್ತು

ದಿನದ ಪ್ರಯಾಣ. ಚಿತ್ರಕೂಟ ಗುರುಗಳ ಗುರುಗಳಾದ ವೀರಸೇನರು ಸಿದ್ಧಾಂತ ಅಭ್ಯಾಸ ನಡೆಸಿದ ಪ್ರಶಸ್ತ ಸ್ಥಳ ಅಥವಾ ವಾಟ ಗ್ರಾಮಕ್ಕೆ ತೆರಳುವುದೇ? ಇಲ್ಲಿಂದ ಆರೇಳು ದಿನಗಳ ಪ್ರಯಾಣದ ಅಂತರ. ಗುರುಗಳೊಡನೆ ಹಲವು ಸಲ ಹೋಗಿಬಂದ ಧಾರ್ಮಿಕ ಕ್ಷೇತ್ರ. ಅಥವಾ ಈ ಎಲ್ಲಾ ಜನ ಸಂಮರ್ದವಿರುವ ನಗರಗಳನ್ನು ಬಿಟ್ಟು ಕಳ್ವಪ್ಪು ಇಲ್ಲವೆ ಕೊಪಣಾಚಾಲಕ್ಕೆ ಹೋಗಿ ಪುರಾಣ ರಚನೆಗೂ ತಪಸ್ಸಿಗೂ ತೊಡಗುವುದೆ?

ಹೀಗೆ ಯೋಚಿಸುತ್ತಿರುವಾಗಲೇ ಬನವಾಸಿಯ ರಾಜ್ಯಪಾಲ ಲೋಕಾದಿತ್ಯ ಬಂದು ಬಿನ್ನೈಸಿಕೊಂಡಿದ್ದು. ರಾಜಧಾನಿಯ ಆಗುಹೋಗುಗಳ ಬಗೆಗೆ ತನ್ನ ಗೂಢಚಾರದಿಂದ ತಿಳಿದ ಲೋಕಾದಿತ್ಯ ಕೂಡಲೇ ಧಾವಿಸಿ ಬಂದಿದ್ದ. ಆತನಿಗೆ "ಆಗಲಿ, ನೋಡೋಣ"ವೆಂದು ಹೇಳಿ ಕಳಿಸಿದ ಮೇಲೂ ಪ್ರಯಾಣ ನಿರ್ಧಾರವಾಗಿರಲಿಲ್ಲ. ಆ ಸಮಯಕ್ಕೆ ಸರಿಯಾಗಿ ಅವರ ಪರಮ ಭಕ್ತರಲ್ಲಿ ಒಬ್ಬನಾದ ಬಂಕೆಯ ಬಂದು ಕಂಡ. ಬಂಕೆಯ ಲೋಕಾದಿತ್ಯನ ತಂದಯಷ್ಟೇ ಅಲ್ಲ; ರಾಷ್ಟ್ರಕೂಟರ ತಲೆಮಣಿ. ಆತ ಮಹಾವೀರನಾಗಿರುವಂತೆ ಮಹಾ ಜಿನಭಕ್ತನೂ ಆಗಿದ್ದನೆಂಬುದು ನಾಡಿನ ಪಡೆ ಮಾತು. ಆತ ಮಗನ ಬೇಡಿಕೆಯನ್ನು ಪುಷ್ಟೀಕರಿಸಿ ಗುರುಗಳನ್ನು ಬಂಕಾಪುರದತ್ತಲೇ ಪ್ರಯಾಣ ಬೆಳೆಸುವಂತೆ ಯಾಚಿಸಿದ. ಅಲ್ಲದೆ ದಾರಿಯುದ್ದಕ್ಕೂ ಆಚಾರ್ಯರ ಆಗಮನ ವಿಚಾರ ತಿಳಿಸಿ ಆಹಾರ ದಾನದ ವ್ಯವಸ್ಥೆ ಕೂಡ ಮಾಡಿರುವುದಾಗಿ ತಿಳಿಸಿದ.

ಗುಣಭದ್ರಾಚಾರ್ಯರು ಸ್ವಲ್ಪ ದಿನಗಳ ಮಟ್ಟಿಗಾದರೂ ಬಂಕಾಪುರದಲ್ಲಿರುವುದೆಂದು ನಿಶ್ಚಯಿಸಿಕೊಂಡು ಪಯಣ ಬೆಳೆಸಿದರು. ಮಾರ್ಗದುದ್ದಕ್ಕೂ ಮಾನ್ಯಖೇಟದ ಮಹಾಜನತೆ ಗತ್ಯಂತರವಿಲ್ಲದೆ ಬೀಳ್ಕೊಟ್ಟರು. ಅವರು ಅಲ್ಲಿಂದ ಹೊರಟಿದ್ದು ಎಲ್ಲರಿಗೂ ಅಚ್ಚರಿ. ಭಕ್ತಿಗೌರವಗಳಿಂದ ಪೊಡಮಟ್ಟು ದರ್ಶನ ಪಡೆದರು. ಶ್ರೀವಿಜಯ ಕವಿಗಂತೂ ಹೃದಯವೇ ನಿರ್ಗಮಿಸಿದಂತಾಯಿತು. ಚಂದ್ರಪ್ರಭ ಚರಿತೆಯ ರಚನೆಯಲ್ಲಿ ಅವರು ತೋರಿದ ಸಹಕಾರವನ್ನು ಶ್ರೀವಿಜಯ ನೆನೆನೆನೆದು ಕಂಬನಿದುಂಬಿದ.

ಆರು ದಿನಗಳ ಪ್ರಯಾಣ ಮುಗಿಯುತ್ತಿದ್ದಂತೆಯೇ ಬಂಕಾಪುರ ಮುಟ್ಟಿದ್ದರು. ಊರ ಹೊರಗಿನ ವನದ ನಡುವೆಯಿದ್ದ ನೂತನ ನಿರ್ಮಿತ ಆದಿನಾಥ ಚೈತ್ಯಾಲಯದಲ್ಲಿ ಅವರು ಇಳಿಯಲು ಪೂರ್ವಭಾವಿ ಸಿದ್ಧತೆ ನಡೆದಿತ್ತು. ನಗರದ ಹೆಬ್ಬಾಗಿಲು ಬಳಿ ರಾಜೋಚಿತ ಗೌರವ ಭಕ್ತಿಗಳಿಂದ ಲೋಕಾದಿತ್ಯ ಬರಮಾಡಿಕೊಂಡ. ಬಂಕಾಪುರ ಭಕ್ತರ ಬೀಡು, ಭವ್ಯರ ನಾಡು. ಊರಿನಲ್ಲಿ

ಹಲವರು ಬಸದಿಗಳಿವೆಯೆಂದು ಎತ್ತರದ ಮಾನಸ್ತಂಭಗಳು ಸಾರುತ್ತಿದ್ದವು.

ಬನವಾಸಿಯ ಮಡಿಲಲ್ಲಿ ಬಂಕಾಪುರ ಶಾಂತವಾಗಿತ್ತು. ಗುಣಭದ್ರರಿಗೆ ತಮ್ಮ ಬರವಣಿಗೆ ಮುಂದುವರಿಸಲು ಪ್ರಶಸ್ತವಾದ ಸ್ಥಳವಿದೆನ್ನಿಸಿತು. ಅದರಂತೆ ಅಲ್ಲಿಯೇ ಉತ್ತರ ಪುರಾಣದ ಬರವಣಿಗೆಯನ್ನು ಮುಂದುವರಿಸಿದರು. ಧರ್ಮ ವಿಹಾರಕ್ಕೆ ಹೋಗಿ ಬರಲು ಚಿತ್ರಕೂಟ, ಪುಲಿಗೆರೆ, ಕಳ್ವಪ್ಪು ವಾರದೊಳಗಿನ ಪ್ರಯಾಣದಳತೆಯಲ್ಲಿದ್ದುವು. ವಾಟಗ್ರಾಮದಲ್ಲಿದ್ದ ಅವರ ಕಿರಿಯ ಸಹಪಾಟಿ ಹಾಗೂ ಶಿಷ್ಯರಾದ ಲೋಕಸೇನ ಮುನಿಗಳಿಗೂ ಹೇಳಿ ಕಳಿಸಿದರು. ಬಂಕಾಪುರಕ್ಕೆ ಬಂದು ಇನ್ನೂ ಹದಿನೈದು ದಿನಗಳಾಗಿರಲಿಲ್ಲ. ರಾಜಧಾನಿಯಿಂದ ದುರ್ವಾರ್ತೆ ಬಂತು.

ಅತ್ತ ಮಳಖೇಡದಲ್ಲಿ ಬಿರುಗಾಳಿ ಬೀಸಿತ್ತು.

ಇಮ್ಮಡಿ ಕೃಷ್ಣನ ಮನದಿಂಗಿತ ಅವನ ನಡೆನುಡಿಗಳಲ್ಲಿ ಎದ್ದು ಕಾಣುತ್ತಿತ್ತು. ಗುಣಭದ್ರರು ರಾಜಧಾನಿ ಬಿಟ್ಟು ಹೋಗಲು ಅವನೂ ಕಾರಣವಿರಬೇಕೆನ್ನಿಸಿತು. ಎಳೆತನದಿಂದ ಅರ್ಧ ಶತಮಾನ ಕಾಲ ಆಳುವುದರಲ್ಲೇ ಆಯಸ್ಸು ಕಳೆದು ನೃಪತುಂಗ ವೈರಾಗ್ಯಪರನಾದ. ಜಿನಸೇನರ ನಿರ್ವಾಣ, ಗುಣಭದ್ರರ ನಿರ್ಗಮನ, ನಿರಂತರ ಯುದ್ಧ ಜೀವನ, ಕುಮಾರನ ಸ್ವೇಚ್ಛಾಜೀವನ, ಅರಮನೆಯ ಕೆಲವು ಅಧಿಕಾರಿಗಳ ಒಳಸಂಚು ಮೊದಲಾದುವೆಲ್ಲ ಸೇರಿ ನೃಪತುಂಗನನ್ನು ಹಿಂಡಿ ಹಿಪ್ಪೇಕಾಯಿ ಮಾಡಿದುವು. ಜಿನಸೇನರ ಧರ್ಮಬೋಧನೆ ಒಂದೊಂದಾಗಿ ಬಂದು ಮುತ್ತಿದಂತಾಯಿತು. ಕಳ್ವಪ್ಪಿನ ಶಾಸನವನ್ನು ಒಮ್ಮೆ ಶ್ರೀವಿಜಯ ವಿವರಿಸಿದ್ದು ನೆನಪಾಯಿತು:

> ಸುರಚಾರಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್
> ತೋರಿಬೇಗಂ
> ಪಿರಿಗುಂ ಶ್ರೀರೂಪಲೀಲಾ ಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
> ಪರಮಾರ್ಥಂ ಮೆಚ್ಚೆನಾನೀ ಧರಣಿಯೊಳಿರವಾನೆಂದು ಸನ್ಯಾಸನಂಗೆ
> ಯ್ದುದರು ಸತ್ವನ್ ನಂದಿಸೇನಪ್ರವರ ಮುನಿವರನ್ ದೇವಲೋಕಕ್ಕೆ
> ಸಂದಾನ್॥

ಸರಿಯಾದ ಮಾತು, ಜಂಗಮ ಜಿನಶಾಸನದಂತೆ ಕನ್ನಡ ನಾಡಿನಲ್ಲಿ ಸುಳಿದಾಡಿದ ಜಿನಸೇನರು ಕೂಡ ಇದನ್ನೇ ಸಾರಿದ್ದರು. ಇನ್ನು ಎಷ್ಟು ವರ್ಷ ಸಿಂಹಾಸನಾಧಿಪತಿಯಾಗಿ ಭೂಮಂಡಲವನ್ನು ಆಳುವುದು? ನಾನಾಗಿ

ಸಂತೋಷದಿಂದ ಕೊಡಬೇಕಾಗಿದ್ದನ್ನು ಈಗ ಮಗ ತಾನಾಗಿ ಕೇಳುವುದಕ್ಕೆ ಸಿದ್ಧನಾಗಿದ್ದಾನೆ. ಇನ್ನು ವಿಳಂಬಿಸಿದರೆ ಎದುರು ಬೀಳಲೂ ಹಿಂಜರಿಯ., ಅವನದಾದರೂ ಏನು ತಪ್ಪು? ಅವನಿಗೆ ಹಾಗೆ ಅನ್ನಿಸುವುದು ಸಹಜ ತಾನೆ? ಅವನದೂ ಕ್ಷಾತ್ರರಕ್ತವಲ್ಲವೆ? ನನಗಾದರೂ ಬೇಗ ಈ ಜ್ಞಾನೋದಯ ಆಗಬಾರದಿತ್ತೆ? ಈ ಭೋಗಸಾಗರಕ್ಕೆ ಪಾರವೆಲ್ಲಿ? ಅಪರಾಧ ನನ್ನದೇ!

ಹೀಗೆಲ್ಲ ಚಿಂತಿಸಿದವನೇ ಇಮ್ಮಡಿ ಕೃಷ್ಣನಿಗೆ ಪಟ್ಟ ಬಂಧೋತ್ಸವಕ್ಕೆ ಒಮ್ಮೆಲೆ ಆತುರಾತುರವಾಗಿ ವ್ಯವಸ್ಥೆ ಮಾಡಿದ. ಚಕ್ರವರ್ತಿಯ ಅನಿರೀಕ್ಷಿತ ನಿರ್ಧಾರದಿಂದ ಕೃಷ್ಣ ಕೂಡ ಆಶ್ಚರ್ಯಚಕಿತನಾದ. ಪಟ್ಟಾಭಿಷೇಕೋತ್ಸವವಾದ ಮರು ದಿನವೇ ನೃಪತುಂಗ ದಶರಥ ಆಚಾರ್ಯರನ್ನು ಬರಮಾಡಿಕೊಂಡು ಸಲ್ಲೇಖನ ಸ್ವೀಕರಿಸಿದ. ಕುಮಾರ, ಮಂತ್ರಿ, ಸೇನಾಪತಿ, ಶ್ರೀವಿಜಯ, ಸಾಮಂತ ಮನ್ನೆಯರಾದಿಯಾಗಿ ಯಾರು ಎಷ್ಟೇ ತಡೆದರೂ ಏನು ಪ್ರಯೋಜನವಾಗಲಿಲ್ಲ. "ಕಾಲಲಬ್ಧಿ ಕೂಡಿ ಬಂದಿರುವ ಈ ಆಸನ್ನಭವ್ಯಜೀವಿಗೆ ಮುಕ್ತಿ ಬಾ ಎಂದು ಕೈ ಬೀಸಿ ಕರೆಯುತ್ತಿದೆ. ನಾವು ಯಾರೂ ಅಡ್ಡಿ ಬರುವುದು ಸರಿಯಲ್ಲ" ಎಂದು ದಶರಥ ಆಚಾರ್ಯರು ತಿಳಿಸಿದ ಮೇಲೆ ವಿಧಿಯಿಲ್ಲದೆ ಎಲ್ಲಾ ಸುಮ್ಮನಾದರು. ಚೆನ್ನಾಗಿ ಮಾಗಿದ ಹಣ್ಣು ಮರದಿಂದ ತೊಟ್ಟು ಕಳಚಿ ಬೀಳುವಂತೆ ಪಕ್ವಜೀವ ಒಂದು ವಾರ ಇರುವುದರೊಳಗೆಯೇ ಊರ್ಧ್ವಗಾಮಿಯಾಯಿತು. ಕನಸಿನ ಲೋಕದಲ್ಲಿ ನಡೆಯುವಂತೆ ಕೆಲವು ದಿನಗಳಲ್ಲೇ ಈ ಘಟನೆಗಳು ನಡೆದವು.

ನೃಪತುಂಗನನ್ನು ಆತ್ಮೀಯರೂ ಜೈನಾಚಾರ್ಯರು ಕರೆಯುತ್ತಿದ್ದುದು ಬೊದ್ದಣರಾಯನೆಂದು. "ಬೊದ್ದಣರಾಯ ಕನ್ನಡ ನಾಡನ್ನು ತುಂಬ ವಿವೇಕ ದಕ್ಷತೆ ಧರ್ಮದೃಷ್ಟಿಗಳಿಂದ ಆಳಿದ. ಎಲ್ಲಾ ಧರ್ಮಗಳಿಗಳೂ ಸಮಾನತೆಯಿಂದ ಆಶ್ರಯ ಪ್ರೋತ್ಸಾಹವಿತ್ತ. ಕಲೆ ಸಂಸ್ಕೃತಿ ಸಾಹಿತ್ಯಗಳನ್ನು ಉದ್ಧರಿಸಿದ. ನಭೂತೋ ನಭವಿಷ್ಯತಿ ಎಂಬ ಸಾಲಿಗೆ ಸೇರಿದ ಭವ್ಯಜೀವ. ಆ ಜೀವದ ಕಡೆಯ ಯಾತ್ರೆ ನಮ್ಮನ್ನೆಲ್ಲ ಎಚ್ಚರಿಸುತ್ತಿದೆ"–ಗುಣಭದ್ರರು ಲೋಕಾದಿತ್ಯನಿಗೆ ಉಪದೇಶಿಸಿದರು.

# ೪

ಬನವಾಸಿ ಮಂಡಲಕ್ಕೆ ಗಂಗಮಂಡಲದಷ್ಟು ವೆಂಗಿಮಂಡಲ ಹತ್ತಿರವಿರಲಿಲ್ಲ. ಆದರೂ ಮನಸ್ಸಿದ್ದೆಡೆ ಮಾರ್ಗವಿದ್ದೇ ಇರುತ್ತದೆ. ವೆಂಗಿಪಳುವಿನಿಂದ ಬಂಕಾಪುರಕ್ಕೆ ಹದಿನಾಲ್ಕು ದಿನಗಳ ಪ್ರಯಾಣ. ವೆಂಗಿಪಳುವಿನಿಂದ ಮಳಖೇಡಕ್ಕೆ ಹತ್ತೂವರೆ ದಿನಗಳ ಪ್ರಮಾಣದ ದೂರ. ಕೊಮರಯ್ಯ ಭೀಮಪನೊಡನೆ ಅತ್ಯುತ್ತಮ ಜಾತಿಯ ಅರಬಿ ಠಾಕಣಗಳನ್ನು ಹತ್ತಿ ಅಯ್ದು ದಿನಗಳಲ್ಲಿ ಮಳಖೇಡಕ್ಕೆ ಹೋಗುತ್ತಿದ್ದ. ಎರಡು ಮೂರು ದಿನ ಅಲ್ಲಿದ್ದು ನಿತ್ಯ ಗುಣಭದ್ರರನ್ನು ಕಾಣುತ್ತಿದ್ದ. ಬೀಮಪ ಪ್ರಾಪ್ತವಯಸ್ಕನಾಗುವವರೆಗೂ ಮಳಖೇಡ ಒಂಕುಂದ ಕೊಪಣ ಕಿಸುವೊಳಲು ಪುಲಿಗೆರೆಗಳಲ್ಲಿ ಗುಣಭದ್ರರ ದರ್ಶನವಾಗುತ್ತಿತ್ತು. ಭೀಮಪ ವಿವಾಹಯೋಗ್ಯನಾಗುವ ವಯಸ್ಸು ಮುಟ್ಟುತ್ತಿದ್ದಂತೆ ಅತ್ತ ಗುಣಭದ್ರರು ಬಂಕಾಪುರಕ್ಕೆ ದಯಮಾಡಿಸಿದ್ದರು. ಆರುದಿನಗಳ ಕುದುರೆ ಪ್ರಯಾಣ ಹಿಡಿಯುತ್ತಿದ್ದುದರಿಂದ ಕೊಮರಯ್ಯ ಬರುತ್ತಿದ್ದುದು ಮೂರು ತಿಂಗಳಿಗೊಮ್ಮೆ. ಆದರೆ ಭೀಮಪ ಹೆಸರಿಗೆ ತಕ್ಕಂತೆ ಭೀಮಕಾಯನಾಗಿದ್ದ. ಅವನ ಶಕ್ತಿ ಪಾಂಡಿತ್ಯ ವಿವೇಕ ಹಾಗೂ ಜೈನಧರ್ಮ ಪ್ರೇಮ ಕಂಡು, ಬನವಾಸಿ ಹನ್ನೆರಡು ಸಾವಿರದ ಮಂಡಲಾಧಿಪತಿ, ಲೋಕಾದಿತ್ಯ ಸಂಪ್ರೀತನಾಗಿದ್ದ. ಎರಡು ವರ್ಷಗಳ ನಿರಂತರ ಪರಿಚಯ ಗಾಢವಾದ ಸ್ನೇಹಕ್ಕೆ ಕಾರಣವಾಯಿತು. ಲೋಕಾದಿತ್ಯ ಭೀಮಪರು ಗುರುಗಳ ಸನ್ನಿಧಿಯಲ್ಲಿ ಗಂಟೆಗಟ್ಟಲೆ ದಿನಗಟ್ಟಲೆ ಕುಳಿತು ಚರ್ಚಿಸುತ್ತಿದ್ದರು. ಭೀಮಪ ಯಾವುದೇ ಕಾರ್ಯವನ್ನು ಪ್ರಾಮಾಣಿಕವಾಗಿ ಸಮರ್ಥನಾಗಿ ನಿರ್ವಹಿಸಬಲ್ಲನೆಂಬ ವಿಶ್ವಾಸ ಮೂಡಿತು. ಭೀಮಪನಿಗೂ ಲೋಕಾದಿತ್ಯನನ್ನು ಕಂಡು ಸೋದರಪ್ರೇಮವುಂಟಾಯಿತು. ತನ್ನ ಎದೆಯಾಸೆಯನ್ನು ಲೋಕಾದಿತ್ಯನಲ್ಲಿ ತೋಡಿಕೊಂಡ. ಆತ ಗುರುಗಳೊಡನೆ ಭೀಮಪನ ಮತಾಂತರ ವಿಚಾರ ಪ್ರಸ್ತಾಪಿಸಿದ.

"ಸ್ವಾಮಿನ್, ಭೀಮಪಯ್ಯನವರು ಜೈನಧರ್ಮವನ್ನು ಸ್ವೀಕರಿಸುವವರಾಗಿದ್ದಾರೆ. ತಾವು ಅಪ್ಪಣೆ ಕೊಡಬೇಕೆಂದು ಬೇಡುತ್ತಿದ್ದಾರೆ."

"ಅದಕ್ಕೆ ಕಾರಣವೇನು?"

"ಇದೇನು ಆಚಾರ್ಯಾ ತಾವು ಹೀಗೆ ಕೇಳುವಿರಿ?"

"ಹೌದು ಲೋಕಾದಿತ್ಯ. ಸುಸಂಸ್ಕೃತರಾದವರು ಮತಾಂತರ ಪಡೆದರೆ ಅದಕ್ಕೆ ವಿಶಿಷ್ಟವಾದೊಂದು ಶುದ್ಧ ಕಾರಣವಿರುತ್ತದೆಂದು ಭಾವಿಸಬೇಕು."

"ತಮಗೆ ತಿಳಿಯದುದು ಇವರ ವಿಚಾರದಲ್ಲಿ ಯಾವುದೂ ಇಲ್ಲ ಆಚಾರ್ಯ. ಅಭಿಮಾನಚಂದ್ರರ ಕಾಲದಿಂದಲೂ ತಾವು ಇವರ ಮನೆತನದವರನ್ನೆಲ್ಲ ಬಲ್ಲಿರಿ. ಕೊಮರಯ್ಯ ಕೂಡ ತಮ್ಮ ಶಿಷ್ಯರಂತೆಯೇ ಇದ್ದಾರೆ."

"ನಿಜ. ಕೊಮರಯ್ಯ ವೇದ ಓದಿ ಪಾರಂಗತನಾಗಿರುವಂತೆ ಜಿನವಾಣಿ ಪ್ರಣೀತ ಆಗಮಗಳನ್ನೂ ಅಭ್ಯಾಸ ಮಾಡಿರುವುದನ್ನು ಬಲ್ಲೆ. ಆತ ಮತಾಂತರಕ್ಕೆ ಮನಸ್ಸು ಮಾಡಿದ್ದರೂ ಸುಮ್ಮನಾದುದೂ ತಿಳಿದಿದೆ."

"ಕೊಮರಯ್ಯ ತಮ್ಮ ಪರಿಚಯ ಪ್ರಭಾವ ಪಡೆದ ಮೇಲೆ ಮತಾಂತರಕ್ಕೆ ಮನಸ್ಸು ಹಾತೊರೆದರೂ ಅಗ್ರಹಾರವಾಸದಿಂದ ಆತ ಎದೆಗುಂದಬೇಕಾಯಿತು. ಈಗಲೂ ಆತನ ಚಿತ್ತ ಅತ್ತ ಇತ್ತ ತೂಗಾಡುತ್ತಿದೆ. ಆದರೆ ಭೀಮಪ ಮಾತ್ರ ಗಟ್ಟಿ ಮಾಡಬಿಟ್ಟಿದ್ದಾನೆ."

"ನಿಜವೇ ಭೀಮಪ?"

"ಸತ್ಯ ಸ್ವಾಮಿನ್, ತಂದೆಯವರು ಎರಡು ದಶಕಗಳಿಂದ ಜೈನಧರ್ಮದ ಶಾಸ್ತ್ರೋಕ್ತ ಸ್ವೀಕಾರವನ್ನು ಮುಂದೂಡುತ್ತಾ ಬಂದಿದ್ದಾರೆ. ಆದರೆ ೨೦ ವರ್ಷಗಳಿಂದ ಮನೆಯೆಲ್ಲ ಜಿನಧರ್ಮದ ಪರಿಮಳದಿಂದ ಮಗಮಗಿಸತೊಡಗಿದೆ. ಮನೆಯಲ್ಲಿ ತಂದೆಯವರೇ ನನಗೆ ವೇದಾದಿ ಪುರಾಣಸ್ಮೃತಿಗಳ ಜೊತೆಗೆ ಜೈನಾಗಮಗಳನ್ನೂ ಅಭ್ಯಾಸ ಮಾಡಿಸಿದ್ದಾರೆ. ಪೂರ್ವಪುರಾಣ ಪೂರ್ತಿ ಪಾಠವಾಗಿದೆಯಲ್ಲದೆ ನಿತ್ಯಪಾರಾಯಣ ನಡೆಯುತ್ತಿದೆ. ಶ್ರೀವಿಜಯರ ಚಂದ್ರಪ್ರಭಪುರಾಣ ಕಂಠಪಾಠವಾಗಿದೆ."

"ಈಗ ನೀನು ಜೈನಧರ್ಮ ಸ್ವೀಕರಿಸಬೇಕೆಂದಿರುವುದು ಯಾರ ಹಾಗೂ ಯಾವ ಪ್ರಲೋಭನೆಗೂ ಒಳಗಾಗಿ ಅಲ್ಲ ತಾನೆ?"

"ಇಲ್ಲ ಇಲ್ಲ. ಯಾರ ಬಲವಂತಕ್ಕೂ ಆರಿಸಿಕೊಂಡುದಲ್ಲ. ನಾನಾಗಿ ಅಂತಃಕರಣಪೂರ್ವಕವಾಗಿ ಅಕ್ಕರೆಯಿಂದ ಒಪ್ಪಿಕೊಂಡ ಧರ್ಮವಿದು."

"ಹಾಗಾದರೆ ಈ ಮತಾಂತರಕ್ಕೆ ಕಾರಣವಿರಬೇಕಲ್ಲವೆ?"

"ಕೇವಲ ಈ ಧರ್ಮದ ತಿರುಳು ಹಿರಿದಾದುದೆಂಬ ತುಂಬು ನಂಬುಗೆಯೇ ಪರಿವರ್ತನೆಗೆ ಮೂಲಕಾರಣ. ತಂದೆ ಪ್ರಚ್ಛನ್ನ ಜೈನರಾಗಿದ್ದರು. ಇನ್ನೂ ಅದೆಷ್ಟು ಕಾಲ ಈ ಅಜ್ಞಾತ ಆರಾಧನೆ? ಒಳಗೆ ಜೈನ, ಹೊರಗೆ ಬ್ರಾಹ್ಮಣ! ಈ ನಾಟಕಕ್ಕೆ

ಮಂಗಳ ಹಾಡಲಿದ್ದೇನೆ."

"ಜೀವನವೇ ನಾಟಕವಷ್ಟೆ!"

"ಆ ನಾಟಕದಲ್ಲಿ ಮತ್ತೆ ನಾಟಕ ಆಡುವುದು ಸರಿಯಲ್ಲವೆನ್ನಿಸಿದೆ. ತಮಗೆ ಆಗಲೇ ನಿವೇದಿಸಿದಂತೆ ಅಪ್ಪನ ಕಾಲಕ್ಕೂ ಮೊದಲೇ ನಮ್ಮ ಮನೆಯಲ್ಲಿ ಜಿನಧರ್ಮ ಸ್ವೀಕಾರಕ್ಕೆ ಸರಿಯಾದ ನಾಂದಿಯಾಗಿಬಿಟ್ಟಿದೆ. ಈಗ ಅದಕ್ಕೆ ಶಾಸ್ತ್ರೋಕ್ತ ವಿಧಿವಿಧಾನದಂತೆ ಪರಿಷ್ಕಾರ ಪುರಸ್ಕಾರ ಬೇಕಾಗಿದೆ."

"ಹಾಗಾದರೆ ನೀನು ವೈದಿಕಧರ್ಮವನ್ನು ದ್ವೇಷದಿಂದ ಬಿಟ್ಟಿಯೇನು?"

"ಇಲ್ಲ ಆಚಾರ್ಯ. ಜಾತಿಗಳಲ್ಲಿ ವಿಪ್ರಕುಲ ಉತ್ತಮವಾದುದೆಂದು ನನ್ನ ಭಾವನೆ. ಅದರ ಬಗೆಗೆ ಗೌರವ ಕಡಮೆಯಾಗಿಲ್ಲ. ಅದರಂತೆ ಧರ್ಮಗಳಲ್ಲಿ ದೊರೆಧರ್ಮ ಜಿನಧರ್ಮವೆಂದು ನಂಬಿಕೆ ಉಂಟಾಗಿದೆ. ವಿಪ್ರನು ಜೈನನಾಗುವುದು ಬಂಗಾರದ ಹೂವಿಗೆ ಪರಿಮಳ ಬಂದಂತೆ ಎಂದುಕೊಂಡಿದ್ದೇನೆ."

"ತುಂಬ ಸಂತೋಷವಾಯಿತು, ನಿನ್ನ ಮಾತೆಲ್ಲ ಕೇಳಿ. ನಿನ್ನ ಮನಸ್ಸನ್ನು ಒರೆಗೆ ಹಚ್ಚಿ ಪರೀಕ್ಷಿಸಿ ನೋಡುವ ಸಲುವಾಗಿ ಈ ಕೆದಕು ಪ್ರಶ್ನೆಗಳನ್ನ ಕೇಳಿದ್ದಾಯಿತು. ಜೈನಧರ್ಮದ ಇತಿಹಾಸದಲ್ಲಿ ಎಂದೂ ಬಲಾತ್ಕಾರವಾಗಿ ಮತಾಂತರಗೊಳಿಸಿದ ಉದಾಹರಣೆಗಳಿಲ್ಲ. ತನ್ನನ್ನೇ ನಂಬಿ ಬಂದವರಿಗೆ ಆಸರೆ ಕೊಟ್ಟಿದೆ. ಯಾವ ಧರ್ಮವೂ ಯಾರೊಬ್ಬರ ಗುತ್ತಿಗೆಯಲ್ಲ. ಯಾರು ಯಾವ ಧರ್ಮವನ್ನು ಬೇಕಾದರೂ ಪಾಲಿಸುವ ಅಧಿಕಾರವಿದೆ. ಎಲ್ಲಾ ಧರ್ಮಗಳೂ ಪರಸ್ಪರ ಪೂರಕ ಧರ್ಮಗಳೇ. ವೈದಿಕ ಜೈನ ಶೈವ ಧರ್ಮಗಳೂ ಇದಕ್ಕೆ ಹೊರತಲ್ಲ. ನೀನು ಜಿನ ಧರ್ಮವನ್ನು ಆತ್ಮಸಂತೋಷದಿಂದ ಈಗ ಸ್ವೀಕರಿಸಲಿರುವುದು ಒಪ್ಪುವ ಮಾತು. ಅದಕ್ಕೆ ನಮ್ಮ ಆಶೀರ್ವಾದವಿದೆ."

ಭೀಮಪಯ್ಯ ಹಾಗೂ ಲೋಕಾದಿತ್ಯನ ಮುಖಗಳು ಅರಳಿದವು. ಆಚಾರ್ಯರ ಅಪ್ಪಣೆ ದೊರೆತದ್ದು ಕಲ್ಪವೃಕ್ಷ ವಶವಾದಂತೆ ಆಯಿತು. ಒಡನೆಯೇ ಪಂಚಾಂಗ ನೋಡಿ ಶುಭ ವಾರ ತಿಥಿ ನಕ್ಷತ್ರ ಮುಹೂರ್ತಗಳನ್ನು ನಿಷ್ಕರ್ಷಿಸಲಾಯಿತು. ಅದಾದ ಕೂಡಲೇ ಭೀಮ ಬಂಕಾಪುರದಿಂದ ವೆಂಗಿಪಳುವಿಗೆ ಧಾವಿಸಿದ. ಆಶ್ವಾರೋಹಿ ಭೀಮ ಆರು ದಿನಗಳ ಪ್ರಯಾಣಾಂತರವನ್ನು ನಾಲ್ಕು ದಿನಗಳಲ್ಲಿ ಮುಗಿಸಿದ್ದ. ತಂದೆಯೊಡನೆ ಮತಾಂತರದ ವಿಷಯವಾಗಿ ಮಾತುಕತೆಯಾಯಿತು. ಅವರೂ ಒಪ್ಪಿಗೆ ಕೊಟ್ಟಾಯಿತು. ಭೀಮನ ಹೊಸ ಬಾಳಿನ ಗುದ್ದಲಿ ಪೂಜೆಗೆ ಎಲ್ಲಾ ಸಿದ್ಧತೆಯೂ ಭರದಿಂದ ಸಾಗಿತು.

ಶಕವರ್ಷ ೮೧೭ರ ಜ್ಯೇಷ್ಠಮಾಸದ ಬಹುಳ ಬೃಹಸ್ಪತಿವಾರ. ಬಂಕಾಪುರ

ಹಬ್ಬದ ಹೊದಿಕೆಯನ್ನು ಹೊದ್ದಿದೆ. ಮನೆಗಳೂ ಬಸದಿಗಳೂ ಸುಣ್ಣಬಣ್ಣ ಕಾರಣೆಗಳಿಂದಲೂ ತಳಿರು ತೋರಣಗಳಿಂದಲೂ ಅಲಂಕೃತವಾಗಿವೆ. ಎಲ್ಲೆಲ್ಲೂ ಸಡಗರ ತುಂಬಿ ತುಳುಕುತ್ತಿದೆ. ಅಲ್ಲಲ್ಲಿ ಹಸಿರುವಾಣಿ ಚಪ್ಪರಗಳು ಕಂಗೊಳಿಸುತ್ತಿವೆ. ನಗರದಲ್ಲಿ ಎಲ್ಲರ ಬಾಯಲ್ಲೂ ಒಂದೇ ಮಾತು; ಭೀಮಪಯ್ಯ ಮತಾಂತರಗೊಂಡು ಜಿನಧರ್ಮ ಸ್ವೀಕರಿಸಲು ಬರುತ್ತಾನೆ!

ಅಲ್ಲಿ ವೆಂಗಿಪಳುವಿನ ಅಗ್ರಹಾರದ ಎಲ್ಲರ ಬಾಯಲ್ಲೂ ಅದೇ ಮಾತು ಭೀಮಪಯ್ಯ ವೈದಿಕ ಧರ್ಮ ಬಿಟ್ಟು ಹೋಗುತ್ತಿದ್ದಾನೆ! ಬಗೆಬಗೆಯಾದ ಪ್ರತಿಕ್ರಿಯೆಗಳು ಕೇಳಿಬಂದುವು:

"ಎಂಥ ಕೇಡುಗಾಲ ಬಂತಪ್ಪಾ ಇದು."

"ಪ್ರಳಯ ಆಗುವುದು ನಿಶ್ಚಯ."

"ಯಾರೋ ಕಿತಾಪತಿ ಮಾಡಿದ್ದಾರೆಂಬುದರಲ್ಲಿ ಅನುಮಾನವಿಲ್ಲ."

"ಅವನಿಗೆ ಎಲ್ಲೋ ತಲೆ ಕೆಟ್ಟಿರಬೇಕು."

"ತಂದೆಯಾದವನು ನಿದ್ದೆ ಮಾಡುತ್ತಿದ್ದಾನೋ? ಬುದ್ಧಿ ಹೇಳಬಾರದೆ?

"ಮೊದಲು ಅವರಿಗೆ ಬಹಿಷ್ಕಾರ ಹಾಕಬೇಕು."

"ಹಾಳಾಗಿ ಹೋಗಲಿ ಬಿಡಿ. ಇಂಥವರು ತೊಲಗುವುದೇ ಲೇಸು."

ಇಲ್ಲಿ ಬಂಕಾಪುರದಲ್ಲಿ ನಗರದ ನಡುವಿನ ಬೃಹತ್ ಶಾಂತಿನಾಥ ಚೈತ್ಯಾಲಯದಲ್ಲಿ ವ್ರತ ಸಂಸ್ಕಾರಕ್ಕೆ ಎಲ್ಲಾ ವ್ಯವಸ್ಥೆಗಳು ನಡೆದಿದ್ದುವು. ಲೋಕಾದಿತ್ಯನಿಗೆ ತಾನು ಕಟ್ಟಿಸಿದ ಇಲ್ಲವೇ ತನ್ನ ತಂದೆಯವರು ನಿರ್ಮಿಸಿದ ನೂತನ ಚೈತ್ಯಾಲಯಗಳಲ್ಲೊಂದರಲ್ಲಿ ಈ ಧಾರ್ಮಿಕ ವಿಧಿ ನಡೆಯಬೇಕೆಂಬ ತುಂಬು ಹಂಬಲವಿತ್ತು. ಆದರೆ ಆಚಾರ್ಯರು ಶಾಂತಿನಾಥ ತೀರ್ಥಂಕರರ ಬಸದಿಯನ್ನು ಆರಿಸಿಬಿಟ್ಟಿದ್ದರು. ತನ್ನ ಅಪೇಕ್ಷೆಯ ವಿಚಾರವನ್ನು ಭಕ್ತಿ ಪುರಸ್ಸರವಾಗಿ ವಿಜ್ಞಾಪಿಸಿಕೊಂಡಾಗ, ಆ ಬಸದಿಯನ್ನೇ ಆರಿಸಿಕೊಂಡುದರ ಔಚಿತ್ಯದ ಹಿನ್ನೆಲೆ ಮನದಟ್ಟಾಯಿತು:

"ಲೋಕಾದಿತ್ಯ, ಶಾಂತೀಶ್ವರ ಬಸದಿ ಬಂಕಾಪುರದ ಅತ್ಯಂತ ಹಳೆಯ ಬಸದಿ. ಪೂಜ್ಯಪಾದರು ಕೂಡ ಪೂಜೆಮಾಡಿದ್ದ ಬಸದಿ. ಶ್ರೀ ಪೂಜ್ಯಪಾದ ಆಚಾರ್ಯರು ಸಿದ್ಧಾಂತದಲ್ಲಿನ ಸಂದೇಹ ನಿವಾರಣೆಗಾಗಿ ಪೂರ್ವವಿದೇಹಕ್ಕೆ ಹೋಗಿ ಸಮವಸರಣದಲ್ಲಿದ್ದ ಶ್ರೀ ಜಿನಪತಿಗಳಿಂದ ಸಂದೇಹ ನಿವಾರಣೆ ಮಾಡಿಕೊಂಡು ಬರುವಾಗ ಸೂರ್ಯ ಕಿರಣದ ಉಷ್ಣದಿಂದ ದೃಷ್ಟಿಯನ್ನು ಕಳೆದುಕೊಂಡರು. ಆಗ ಬಂಕಾಪುರದ ಶಾಂತಿನಾಥ ಮಂದಿರದಲ್ಲಿ ಶಾಂತಿ

ಅಷ್ಟಕವನ್ನು ಭಕ್ತಿಯಿಂದ ಸ್ತುತಿಸಲಾಗಿ ಕಳೆದುಹೋದ ದೃಷ್ಟಿ ಪುನಃ ಬಂದಿತು. ಅಲ್ಲದೆ ದಶಭಕ್ತಿಗಳಲ್ಲಿ ಶಾಂತಿಭಕ್ತಿಯೂ ಒಂದು. ಶಾಂತಿಭಕ್ತಿಯಲ್ಲಿ ಶಾಂತಿ ತೀರ್ಥಂಕರರ ಸ್ತೋತ್ರ ಹಾಗೂ ಅದರ ಪಠಣದಿಂದ ನಾನಾ ಪ್ರಕಾರವಾದ ವಿಘ್ನ ವ್ಯಾದಿಗಳು ನಾಶವಾಗುವ ವಿಚಾರವೂ ವರ್ಣಿತವಾಗಿದೆ. ಎರಡನೆಯದಾಗಿ ನನ್ನ ಉತ್ತರ ಪುರಾಣ ರಚನೆ ಶಾಂತಿನಾಥಸ್ವಾಮಿ ಚರಿತೆಯವರೆಗೆ ಬಂದು ನಿಂತುಹೋಗಿತ್ತು. ಈಗ ಇಲ್ಲಿಗೆ ಬಂದ ಮೇಲೆ ಮತ್ತೆ ಶಾಂತಿನಾಥರ ಚರಿತೆಯಲ್ಲಿಂದ ಮುಂದುವರೆದಿದೆ. ಈ ಸ್ಥಳ ಮಹಿಮೆಯನ್ನು ಕಡೆಗಣಿಸಬಾರದು. ಭೀಮಪಯ್ಯನ ನೂತನ ಜೀವನ ಮತ್ತೂ ವಿನೂತನವಾಗಿ ವಿಕಸಿತವಾಗಲು ಅಂಕುರಾರ್ಪಣೆ ಇಲ್ಲಿಂದಲೇ ಆಗುವುದು ಒಳಿತಲ್ಲವೆ?"

ಆಚಾರ್ಯರ ಮಾತು ಸರ್ವಸಮ್ಮತವಾದ ರೀತಿಯಲ್ಲಿತ್ತು. ಲೋಕಾದಿತ್ಯ ಸಂತೋಷದಿಂದ ಒಪ್ಪಿ ಅಪ್ಪಣೆ ಪಡೆದು ಹೊರಟ. ಅಷ್ಟು ಹೊತ್ತಿಗೆ ಭೀಮಪಯ್ಯ ಬರುತ್ತಿರುವ ವರ್ತಮಾನ ತಿಳಿಯಿತು.

ಭೀಮಪನನ್ನು ಭವ್ಯವಾದ ಮೆರವಣಿಗೆಯಲ್ಲಿ ನಗರದ ಮುಖ್ಯ ಬೀದಿಗಳಲ್ಲೆಲ್ಲ ಕರೆದೊಯ್ಯಲಾಯಿತು. ಮಂಗಳವಾದ್ಯಗಳು ಮೊಳಗುತ್ತಿವೆ. ಮಂತ್ರಘೋಷ ನಿನದಿಸುತ್ತಿದೆ. ವ್ರಚಿಹ್ನೆದ ಕುರುಹಾಗಿ ಭೀಮ ಯಜ್ಞೋಪವೀತ ಧರಿಸಿದ್ದ. ಮೊದಲು ವ್ರತಧಾರಣೆ ಮಾಡುವ ದೀಕ್ಷೆಯಾಯಿತು. ಆಜೈನ ಭವ್ಯರು ಜೈನತ್ವವನ್ನು ಸ್ವೀಕರಿಸಲು ಬಯಸಿ ಬಂದಾಗ ಕೊಡುವ ಉಪದೇಶ ನೀಡಲಾಯಿತು. ಆನಂತರ ಜೈನ ಶ್ರಾವಕ ಧರ್ಮ ಸ್ವೀಕಾರ ವಿಧಿ ಆಯಿತು. ಈ ದೀಕ್ಷಾವತಾರ ಕ್ರಿಯೆಯಾದ ಮೇಲೆ ವ್ರತಲಾಭವಾಯಿತು.

ಅಲ್ಲಿಂದ ಶಾಂತೀಶ್ವರ ಜಿನಾಲಯದೊಳಕ್ಕೆ ಬರಮಾಡಿ ಭೀಮಪಯ್ಯನನ್ನು ಗುಣಭದ್ರರ ಬಳಿಗೆ ಕರೆದೊಯ್ಯಲಾಯಿತು. ಅಲ್ಲಿ ಪಂಚನಮಸ್ಕಾರದ ಉಪದೇಶವಾಡಿ ಸ್ಥಾನಲಾಭ ಉಂಟು ಮಾಡಿದರು. ತದನಂತರ ಆರ್ಯಷಟ್‌ಕರ್ಮಗಳನ್ನು ಸ್ವೀಕರಿಸಿ ವರ್ಣಲಾಭಕ್ರಿಯೆಯಿಂದ ಪೂರ್ಣವಾಗಿ ಜೈನನಾದನು. ಆಗ ಆಚಾರ್ಯ ಗುಣಭದ್ರರು ಗುರು ಕೃಪೆಯಿಂದ "ಭೀಮಪಯ್ಯ ನೀನು ಇಂದು ಪುನರ್‌ಜನ್ಮ ಹೊಂದಿದಂತೆ. ಇದು ಚಾರಿತ್ರ ಮೂಲಕ ಆದ ಜನ್ಮ, ಅಯೋನಿ ಸಂಭವ ಜನ್ಮ. ಇಂದಿನಿಂದ ನೀನು ಬ್ರತ ಅಧ್ಯಯನಗಳಿಂದ ಪುಷ್ಟನಾಗು" ಎಂದು ಮೈದಡವಿ ಆಶೀರ್ವದಿಸಿದರು. ಶಾಂತೀಶ್ವರ ಸ್ವಾಮಿಗೆ ಪೂಜಾಭಿಷೇಕಗಳಾದ ಮೇಲೆ ಭೀಮಪನ ನೆತ್ತಿಗೆ ತೀರ್ಥ ಹಾಕಿದರು. ಪ್ರಸಾದ ವಿನಿಯೋಗವಾಯಿತು.

ಬಂಕಾಪುರದ ಜೈನಗೃಹಸ್ಥರು ಭೀಮಪಯ್ಯನನ್ನು ಮುತ್ತುವರೆದರು. ಎಲ್ಲರೂ ಅವರವರ ಮನೆಗೆ ಊಟಕ್ಕೆ ಬರುವಂತೆ ಕರೆದರು. ಜೈನಶ್ರಾವಕನಾದ ಮೊದಲ ದಿನದ ಆಹಾರವಿಧಿ ತಂತಮ್ಮ ಮನೆಗಳಲ್ಲೇ ಆಗಲೆಂದು ಬಂದವರೆಲ್ಲರ ಹಂಬಲ. ಆದರೆ ರಾಜ್ಯಪಾಲ ಲೋಕಾದಿತ್ಯ ಆ ಭಾಗ್ಯ ತನ್ನದಾಗಲೆಂದೇ ಎಲ್ಲರಂತೆ ಬೇಡಿಕೊಂಡ. ಎಲ್ಲರೂ ಅಂದು ಅರಮನೆಯಲ್ಲೇ ಊಟ ಮಾಡಿ ಹರಸಬೇಕೆಂದು ಕೋರಿದ. ತನ್ನ ಒಲವಿನ ಗೆಳೆಯನ ಬಾಳಿನಲ್ಲಿ ಮೊದಲಾದ ಹೊಸ ಒಸಗೆಯೆಂದು ಔತಣಕೂಟ ಏರ್ಪಡಿಸುವುದು ಕರ್ತವ್ಯವಷ್ಟೇಅಲ್ಲ ಮಹದಾನಂದವೆಂದು ತಿಳಿದಿದ್ದ. ಅದರಂತೆ ಅಂದಿನ ಸಡಗರ ಮಂಡಲಾಧಿಪತಿಯ ಅರಮನೆಯಲ್ಲಿ ನಡೆಯಿತು.

ಕೆಲವು ಸಂಪ್ರದಾಯ ಶರಣರಾದ ಶ್ರಾವಕರಲ್ಲಿ "ಅಜೈನರು ಜೈನರಾದುದು ಸಮಂಜಸವೆ?" ಎಂಬ ಸಂದೇಹ ಉಂಟಾಯಿತು. ಅದನ್ನು ಗುಣಭದ್ರಾಚಾರ್ಯರಲ್ಲಿ ಪ್ರಸ್ತಾಪಿಸುವಷ್ಟು ಎದೆಗಾರಿಕೆ ಬರಲಿಲ್ಲ. ಅಲ್ಲದೆ ಭಗವಾನ್ ಗುಣಭದ್ರಾಚಾರ್ಯರೇ ಒಪ್ಪಿದ ಮೇಲೆ ಅದರ ಶಾಸ್ತ್ರಶುದ್ಧಿಯ ವಿಚಾರದಲ್ಲಿ ಪ್ರಶ್ನೆಗೆ ಅವಕಾಶವಿಲ್ಲವೆಂದು ಎಲ್ಲರ ಭಾವನೆ. ಹೀಗಿದ್ದೂ ಒಂದು ಹಿಡಿ ಮಡಿವಂತ ಶ್ರಾವಕರು ಗುಟ್ಟಾಗಿ ಲೋಕಸೇನಾಚಾರ್ಯರನ್ನು ಕಂಡು ಅರಿಕೆ ಮಾಡಿಕೊಂಡರು.

ಲೋಕಸೇನರು ಎಂದಿನಂತೆ ಮಂದಸ್ಮಿತರಾಗಿಯೇ ಉಪದೇಶಿಸಿದರು. "ಅಜೈನರು ಜೈನರಾಗುವುದು ಹೊಸದೇನೂ ಅಲ್ಲ. ಅದರ ವಿಧಿಯ ವಿವರಣೆ ಮಹಾಪುರಾಣದಲ್ಲೇ ಇದೆ. ದೀಕ್ಷಾನ್ವಯ ಕ್ರಿಯೆಗಳಿಂದ ಭವ್ಯತ್ಮರಾದ ಅಜೈನರಿಗೆ ಜೈನತ್ವವನ್ನು ಪಡೆಯುವ ಅವಕಾಶವನ್ನು ಪ್ರಥಮ ತೀರ್ಥಂಕರರೇ ಕಲ್ಪಿಸಿಕೊಟ್ಟಿದ್ದಾರೆ. ವರ್ಣದ ಆಧಾರ ಜಾತಿಯೊಂದೇ ಅಲ್ಲ. ಕೇವಲ ಹುಟ್ಟಿನಿಂದಲೇ ಸಂಪೂರ್ಣವಾಗಿ ಒಂದು ಜಾತಿಯವರಾಗುವುದಿಲ್ಲ. ನಮ್ಮ ಆಚರಣೆ ನಡವಳಿಕೆಯಿಂದ ಅದು ನಿರ್ಧಾರವಾಗುತ್ತದೆ. ಯಾರೇ ಇರಲಿ, ಅವರು ಭವ್ಯರಿದ್ದು ಸನ್ಮಾರ್ಗವನ್ನು ಸ್ವೀಕರಿಸಲು ಮನಃಪೂರ್ವಕವಾಗಿ ಅಪೇಕ್ಷಿಸಿದರೆ ಅದಕ್ಕೆ ಅಡ್ಡಿ ಬರುವುದು ಸಾಧ್ಯವಿಲ್ಲ. ಅಂಥ ಅಧಿಕಾರ ಯಾರಿಗೂ ಇಲ್ಲ. ಭೀಮಪಯ್ಯನವರು ಜೈನಧರ್ಮ ಸ್ವೀಕರಿಸದ್ದಾಗಿದೆ. ಈಗ ಅವರಿಗೆ ಸಮಾನ ಧರ್ಮಾಧಿಕಾರವನ್ನು ಕೊಡಬೇಕಾದುದು ಜೈನ ಸಮಾಜದ ಆದ್ಯ ಕರ್ತವ್ಯ." ಮಡಿವಂತ ಕೂಪ ಮಂಡೂಕಗಳಿಗೆ ಲೋಕಸೇನಾಚಾರ್ಯರ ಮಾತುಗಳು ಕಣ್ಣು ತೆರೆಸಿದುವು.

ಭೀಮಪಯ್ಯನ ಜೈನಧರ್ಮ ಸ್ವೀಕಾರ ವಿಧಿ ವಿಧಾನಗಳನ್ನು ನೋಡಲು ಸಹಸ್ರಾರು ಜನ ನೆರೆದಿದ್ದರು. ವೆಂಗಿ ವಿಷಯಕ್ಕೆ ಸೇರಿದ ಕಮ್ಮೆನಾಡಿನ ಪುಂಗನೂರಿನಿಂದ ನಾಗಮಯ್ಯ ಬಂದಿದ್ದ. ಪೂರ್ವ ಚಾಳುಕ್ಯರ ಸೀಮೆಯಿಂದ

ದಲ್ಲಪ ಬಂದಿದ್ದ. ಇವರಲ್ಲದೆ ದೂರದಲ್ಲಿ ಕುಳಿತು ಒಬ್ಬ ಮೂಕನಂತೆ ಮೌನವಾಗಿದ್ದು ಕಣ್ತುಂಬ ನೋಡಿ ಎದೆ ತುಂಬಿ ಆನಂದಪಟ್ಟ ಹಿರಿಯ ವ್ಯಕ್ತಿಯಿದ್ದ. ಆತನೇ ಅಣ್ಣಿಗೆರೆಯ ಜೋಯಿಸ ಸಿಂಘ. ಈ ಮತಾಂತರ ಸಮಾರಂಭಧಲ್ಲಿ ಪಾಲುಗೊಳ್ಳಲು ಅಣ್ಣಿಗೆರೆಯಿಂದ ಬಂದಿದ್ದ. ಇಲ್ಲಿನ ಧಾರ್ಮಿಕ ವಿಧಿಗಳು, ಅವನ ಮನಸ್ಸನ್ನು ಇಪ್ಪತ್ತು ವರ್ಷಗಳ ಹಿಂದಕ್ಕೆ ಎಳೆದುವು. ಅಂದು ಅವನಿಗಾಗಿ ಇಂತಹುದೇ ಒಂದು ಸಮಾರಂಭ ನೆರೆದಿತ್ತು.

* * * *

ಜೋಯಿಸ ಸಿಂಘ ಜಿನಸೇನರ ಪಾರ್ಶ್ವಾಭ್ಯುದಯ ಹಾಗೂ ವರ್ಧಮಾನ ಪುರಾಣಗಳನ್ನು ಓದಿ ಬಹುವಾಗಿ ಮೆಚ್ಚಿಕೊಂಡಿದ್ದನು. ವಾಸ್ತವವಾಗಿ ಅವನ್ನು ಓದಲು ಪ್ರೇರಣೆಯೊದಗಿದ ಪ್ರಸಂಗವೇ ಸೋಜಿಗದಾಯಕವಾಗಿತ್ತು. ಪುನ್ನಾಟ ಸಂಘದ ಜಿನಸೇನರು ಕೂಡ ಆ ಕಾಲದಲ್ಲಿ ಹೆಸರಾಂತ ಬರೆಹಗಾರರಾಗಿದ್ದರು. ಅವರು ಹರಿವಂಶ ಪುರಾಣವನ್ನು ರಚಿಸಿದ ಮೇಲಂತೂ ಕೀರ್ತಿ ಎಲ್ಲೆಡೆಯಲ್ಲೂ ಹಬ್ಬಿತ್ತು. ಜೋಯಿಸ ಸಿಂಘ ವೈದಿಕ ವೃತ್ತಿಗೌರವ ನಿಮಿತ್ತವಾಗಿ ಅಣ್ಣಿಗೆರೆಯಿಂದ ಪುಲಿಗೆರೆಗೆ ಒಮ್ಮೆ ಬಂದಾಗ ಅಲ್ಲಿನ ವೈದಿಕ ವಿದ್ವಾಂಸ ಮಂಡಳಿ ಪುನ್ನಾಟ ಸಂಘದ ಜಿನಸೇನರ ಪಾಂಡಿತ್ಯವನ್ನು ಕೊಂಡಾಡುತ್ತಿತ್ತು. ಕೇವಲ ಕುತೂಹಲಕ್ಕೆಂದು ಅದರ ಓಲೆಗ್ರಂಥ ಪ್ರತಿಯೊಂದನ್ನು ದೊರಕಿಸಿಕೊಂಡು ಜೋಯಿಸ ಸಿಂಘ ಓದತೊಡಗಿದ.

ಓದಿದಂತೆಲ್ಲ ಕುತೂಹಲ ಆಸಕ್ತಿಯಾಗಿ ಪರಿಣಮಿಸಿತು. ಆಸಕ್ತಿ ಅಭಿರುಚಿಯಾಯಿತು. ಪುನ್ನಾಟ ಸಂಘದ ಜಿನಸೇನರು ತಮ್ಮ ಹರಿವಂಶದಲ್ಲಿ "ಸೇನಸಂಘದ ಜಿನಸೇನರು ಪಾರ್ಶ್ವಾಭ್ಯುದಯ ಹಾಗೂ ವರ್ಧಮಾನ ಪುರಾಣಗಳನ್ನು ರಚಿಸಿ ಕೀರ್ತಿತರಾಗುತ್ತಿದ್ದಾರೆ" ಎಂದು ತಿಳಿಸಿದ್ದರು. ಶಾಸ್ತ್ರವಿಧಿಗಳಲ್ಲಿ ತೊಡಗಿದ್ದರೂ ಜೋಯಿಸ ಸಿಂಘ ಶುಷ್ಕವೈಯಾಕರಣ ಜಾತಿಯವನಾಗಿರಲಿಲ್ಲ. ಸಾಹಿತ್ಯದಲ್ಲಿ ವಿಶೇಷವಾದ ಮಮತೆಯುಳ್ಳವನಾಗಿದ್ದ ಕಾರಣ ಸೇನ ಸಂಘದ ಜಿನಸೇನರ ಕೃತಿಗಳನ್ನೂ ಸಂಪ್ರತಿಕಾರರ ಮೂಲಕ ಸಂಪಾದಿಸಿಕೊಂಡ. ಅದರಲ್ಲಿ ತಮ್ಮ ಒಡನಾಡಿಯಾದ ವಿನಯಸೇನರ ಒತ್ತಾಯದಿಂದ ಪಾರ್ಶ್ವಾಭ್ಯುದಯ ಕಾವ್ಯ ರಚಿಸಿರುವುದಾಗಿ ಜಿನಸೇನರು ಹೇಳಿಕೊಂಡಿದ್ದರು. ವರ್ಧಮಾನ ಪುರಾಣ ಓದಿದ ಮೇಲೆ ಸೇನಸಂಘದ ಜಿನಸೇನರನ್ನು ದರ್ಶನ ಮಾಡಬೇಕೆನ್ನಿಸಿತು.

"ಮಹಾಕವಿಯಾದವನು ಯಾವ ಮತದವರಾದರೇನು? ಮಹಾಕವಿಗೆ ಮತವೆಲ್ಲಿದೆ? ಜಿನಸೇನಮುನಿ ಕವಿಗಳ ಜಾತಿಗೆ ಸೇರಿದವನು"– ಹೀಗೆಂದು

ತೀರ್ಮಾನಿಸಿದ ಜೋಯಿಸಸಿಂಘ ಮಾನ್ಯಖೇಟಕ್ಕೆ ಹೊರಟ. ಅಲ್ಲಿ ಒಂದು ಸಲ ಮಾತ್ರ ಅವರನ್ನು ಕಾಣುವುದು ಸಾಧ್ಯವಾಯಿತು. ಜಿನಸೇನರ ದರ್ಶನಕ್ಕೆ ಚಕ್ರವರ್ತಿಗಳಾದಿಯಾಗಿ ಸಾಮಂತ ಮಂಡಲೇಶ್ವರ ಮನ್ನೆಯರೂ ಮಂತ್ರಿ ಸೇನಾಪತಿ ವಣಿಗ್ ವರೇಣ್ಯರೂ ಸದಾ ಪಾಳಿ ನಿಂತಿರುತ್ತಿದ್ದರು. ಅವರ ಬಳಿ ಬಿಡುವಿನಲ್ಲಿ ಮಾತಾಡುವ ಅನುವಾಗಲಿಲ್ಲ. ಆದರೂ ಅವರ ಮೂವರು ಶಿಷ್ಯರ ಪರಿಚಯುವಾಯಿತು. ಅವರೇ ಗುಣಭದ್ರರು, ಲೋಕಸೇನರು ಮತ್ತು ವಿನಯಸೇನರು.

ಮಳಖೇಡದಿಂದ ಅಣ್ಣಿಗೆರೆಗೆ ಹಿಂತಿರುಗುವಾಗ ಜೊತೆಯಲ್ಲಿ ಜಯಧವಲಾ ಟೀಕೆಯನ್ನು ತಂದಿದ್ದ. ಪಾರಿಭಾಷಿಕ ಶಬ್ದಗಳಿಂದ ನಿಬಿಡವಾಗಿದ್ದ ಅದರ ಅಭ್ಯಾಸ ಮೊದಲೆರಡು ಕೃತಿಗಳ ವ್ಯಾಸಂಗದಂತೆ ಸುಲಭವಾಗಲಿಲ್ಲ ಮತ್ತೊಮ್ಮೆ ಜಿನಸೇನರನ್ನು ಕಾಣಬೇಕೆಂದು ಅಂದುಕೊಂಡ. ಅಷ್ಟರಲ್ಲಿ ಜಿನಸೇನರು ಕಾಲವಶರಾದ ಕರಾಳ ವಾರ್ತೆ ಕೇಳಿ ತತ್ತರಿಸಿ ಹೋದ. ತನ್ನ ಮೂಕ ಶೋಕವನ್ನು ಇದ್ದಲ್ಲಿಂದಲೇ ತೋಡಿಕೊಂಡ.

ಅದಾದ ಒಂದು ವರುಷಕ್ಕೆ ವಿನಯಸೇನರು ಪುಲಿಗೆರೆಯಲ್ಲಿ ಚಾತುರ್ಮಾಸಕ್ಕೆ ಬಂದು ನಿಂತರು. ಆಗ ಜೋಯಿಸ ಸಿಂಘನಿಗೆ ಅದಮ್ಯ ಉತ್ಸಾಹ ಉಕ್ಕಿ ಹರಿದಂತಾಯಿತು. ವಾರಕ್ಕೊಮ್ಮೆ ಹೋಗಿ ಗಂಟೆಗಟ್ಟಲೆ ಅವರೊಡನೆ ಆತ್ಮತತ್ವವಿಚಾರವಾಗಿ ಕರ್ಮಧರ್ಮಗಳನ್ನು ಕುರಿತು ಚರ್ಚಿಸ ಹತ್ತಿದ. ಕಡೆ ಕಡೆಗೆ ದಿನವೆಲ್ಲ ಅವರ ಮಾತು ನಡೆಯತೊಡಗಿತು. ಜೋಯಿಸ ಸಿಂಘನ ತಂದೆಯೂ, ಸ್ಯಾದ್ವದ ವಿದ್ಯಾಪತಿ ವಿದ್ಯಾನಂದಿಗಳ ಪ್ರಭಾವಕ್ಕೆ ಒಳಗಾಗಿದ್ದು ಅದು ಹೇಗೋ ಮತ್ತೆ ಪ್ರತ್ಯೇಕವಾಗಿಯೇ ಉಳಿದು ಬಿಟ್ಟಿದ್ದ. ಆದರೆ ಮಗ ಮಾತ್ರ ಜೈನಗುರುಗಳ ಧರ್ಮಬೋಧನೆಗೆ ಸಂಪೂರ್ಣ ಅರ್ಪಿತನಾದ. ವಿನಯುಸೇನರಿಗೆ ತಾನು ಸ್ವಯಿಚ್ಛೆಯಿಂದ ಜೈನಧರ್ಮ ಸ್ವೀಕರಿಸಲು ಸಿದ್ಧನಿರುವುದನ್ನು ನಿವೇದಿಸಿಕೊಂಡ.

ವಿನಯಸೇನರು ಈ ಭವ್ಯಜೀವ ಇನ್ನೂ ಪಕ್ವವಾಗಲೆಂದುಕೊಂಡರು. ಅದೇ ಸಮಯದಲ್ಲಿ ಬಂಕಾಪುರದಲ್ಲಿ ಚಾತುರ್ಮಾಸಕ್ಕೆ ನಿಂತಿದ್ದ ಲೋಕಸೇನರಲ್ಲಿಗೆ ಜೋಯಿಸ ಸಿಂಘನನ್ನು ಕಳಿಸಿದರು. ಅಣ್ಣಿಗೆರೆಗೆ ಪುಲಿಗೆರೆಯಂತೆ ಬಂಕಾಪುರವೂ ಹತ್ತಿರವೇ. ಜೋಯಿಸ ಸಿಂಘ ಲೋಕಸೇನರನ್ನು ಹೋಗಿ ಕಂಡ. ಅವರ ಅಯಸ್ಕಾಂತ ವ್ಯಕ್ತಿತ್ವ ಅವನನ್ನು ಪೂರ್ಣವಾಗಿ ಗೆದ್ದು ತನ್ನದನ್ನಾಗಿಸಿಕೊಂಡಿತು. ಲೋಕಸೇನರು ಮೂರು ನಾಲ್ಕು ಬಾರಿ ಅವನನ್ನು ಬರಮಾಡಿಕೊಂಡರು.

ಕಡೆಗೆ ಚಾತುರ್ಮಾಸ ಕಳೆದ ಮೇಲೆ ಜೈನ ಧರ್ಮಕ್ಕೆ ದೀಕ್ಷೆ ಕೊಡುವ ಕ್ರಿಯೆ ಇಟ್ಟುಕೊಳ್ಳುವಂತೆ ನಿಶ್ಚಯಿಸಿದರು.

ಪುಲಿಗೆರೆಯಲ್ಲಿ ಶಕವರ್ಷ ೮೦೦ರ ಕಾರ್ತಿಕಮಾಸ ಶುಕ್ರವಾರ ಬೆಳಿಗ್ಗೆ ! ಪುಲಿಗೆರೆಯ ದೊಡ್ಡ ಬಸದಿಯಲ್ಲಿ ಎಲ್ಲಾ ಧಾರ್ಮಿಕ ವಿಧಿಯ ಏರ್ಪಾಟೂ ನಡೆಯಿತು. ವೀರಸೇನರ ಪ್ರಶಿಷ್ಯರಲ್ಲಿ ಒಬ್ಬರಾದ ವಿನಯಸೇನರು ಅಲ್ಲಿಯೇ ಇದ್ದರು. ವಿನಯಸೇನರ ಪ್ರತಿಭಾವಂತ ಶಿಷ್ಯ ಕುಮಾರಸೇನರೂ, ಬಂಕಾಪುರದಿಂದ ಲೋಕಸೇನರೂ, ವಾಟಗ್ರಾಮದಿಂದ ದಶರಥ ಆಚಾರ್ಯರೂ ಬಂದಿದ್ದರು. ಚಿತ್ರಕೂಟದಲ್ಲೇ ಇದ್ದರೂ ಗುಣಭದ್ರರು ಶುಭಸಂದೇಶ ಮಾತ್ರ ಕಳಿಸಿ ಹರಸಿದ್ದರು. ಅಂದಿನ ಶ್ರಾವಕ ಮುಂದಾಳು ವೀರ ಬಂಕರಸ. ಆತನ ಜತೆಯಾಳು ಪುಂಗನೂರಿನ ನಾಗಮಯ್ಯ. ಆತ ಕಮ್ಮೆನಾಡಿನಿಂದ ಬಂದಿದ್ದ. ಅಂದು ಕೂಡ ಮಠಾಧಿಪತಿಗಳು ಶುಭಾಶೀರ್ವಾದಗಳನ್ನು ಹೇಳಿ ಕಳಿಸಿದ್ದರು. ಮಳಖೇಡ, ಕೊಪ್ಪಳ, ಒಂಕುಂದ, ಕಿಸುವೊಳಲು, ವಾಟಗ್ರಾಮ, ಚಿತ್ರಕೂಟ, ಬಂಕಾಪುರ ಕಳ್ವಪ್ಪುಗಳಿಂದ ಧರ್ಮಬಾಂಧವರನೇಕರು ಬಂದು ಹರಸಿ ಆನಂದಿಸಿದ್ದರು. ಚಕ್ರವರ್ತಿಗಳಾದ ಇಮ್ಮಡಿ ಕೃಷ್ಣರ ಪ್ರತಿನಿಧಿಯಾಗಿ ಶ್ರೀವಿಜಯಕವಿ ಆಗಮಿಸಿದ್ದ. ಅದರಂತೆ ನಾಗನಂದಿ ಮುನಿಯ ಶಿಷ್ಯನೂ ಭಾವಕೀರ್ತಿ ಮುನಿಯ ಬಳಿ ವಿದ್ಯೆ ಕಲಿತವನೂ ಆದ ಅಸಗಕವಿ ಕೂಡ ದಯಮಾಡಿಸಿದ್ದ.

* * * *

ಹಿರಿಯ ಕವಿಗಳ, ಮಹಾನ್ ಗುರುಗಳ ಸಮ್ಮುಖದಲ್ಲಿ ನಡೆದ ತನ್ನ ಮತಾಂತರದ ದೃಶ್ಯ ಹೃದಯ ಪಟಲದ ಮೇಲೆ ಹಾದು ಹೋಯಿತು. ಜೋಯಿಸ ಸಿಂಘನಿಗೆ ಕಾಲಾಂತರದಲ್ಲಿ ತನ್ನ ಮಗಳೂ ಅಳಿಯನೂ ಸಂತೋಷದಿಂದ ಜಿನಧರ್ಮವನ್ನವಲಂಭಿಸಿದ್ದು ನೆನಪಾಯಿತು. ಜೋಯಿಸ ಸಿಂಘನಿಗೆ ಭೀಮಪಯ್ಯನ ಗಂಭೀರ ನಡತೆ, ಚುರುಕು ಬುದ್ಧಿ, ದಷ್ಟಪುಷ್ಟ ಮೈಕಟ್ಟು ಬಹುವಾಗಿ ಹಿಡಿಸಿದವು. ಗುಣಭದ್ರರೂ ಲೋಕಸೇನರೂ ಜೋಯಿಸ ಸಿಂಘನನ್ನು ಭೀಮಪನಿಗೆ ಪರಿಚಯ ಮಾಡಿಕೊಟ್ಟರು. "ನಿಮ್ಮ ಹೆಸರು ಹಲವು ಸಲ ಗುರುಗಳ ಬಾಯಲ್ಲಿ ಕೇಳಿದ್ದೆ. ಇಂದು ನೀವು ಬಂದದ್ದು ಸಂತೋಷ. ನಿಮ್ಮಂಥ ಹಿರಿಯರು ಕಿರಿಯರನ್ನು ಹರಸಬೇಕು" ಎಂದು ಭೀಮಪ ಕೈಮುಗಿದ. ಜೋಯಿಸ ಸಿಂಘನಿಗೆ ಅವನ ವಿನಯವಂತಿಕೆ ಕಂಡು ಹೃದಯ ತುಂಬಿ ಬಂತು. "ಚಿರಂಜೀವಿಯಾಗಿ ಬಾಳು" ಎಂದು ಮೈಮುಟ್ಟಿ ಹರಸಿ, "ಇಷ್ಟು ಹತ್ತಿರ ಎಂತೂ ಬಂದಿದ್ದಾಗಿದೆ. ಅಣ್ಣಿಗೆರೆ ಇಲ್ಲಿಗೆ ಎರಡು ದಿನದ ಪ್ರಯಾಣ. ಬಂದು ಹೋಗಬಹುದಲ್ಲವೆ?. ಎಂದ"

"ತುಂಬ ಸಂತೋಷದಿಂದ ಬರುವೆ. ಆದರೆ ಈಗಲ್ಲ, ಇನ್ನೊಮ್ಮೆ. ಈ ಸಲ ದಯವಿಟ್ಟು ಮನ್ನಿಸಿ" ಎಂದು ಉತ್ತರಕೊಟ್ಟು ಬೀಳ್ಕೊಟ್ಟ.

ಜೋಯಿಸ ಸಿಂಘ ಅಣ್ಣಿಗೆರೆಗೆ ಹೋದವನೇ ತನ್ನ ಮಗಳು ಅಳಿಯನೊಡನೆ ನಡೆದ ವಿಚಾರವನ್ನು ನಿರೂಪಿಸಿದ. ಅವನಿಗೆ ಅದುವರೆಗೂ ತಲೆಯಲ್ಲಿ ಕೊರೆಯುತ್ತಿದ್ದ ಒಂದೇ ಒಂದು ಚಿಂತೆ ಇತ್ತು. ಅದರ ಹೊರತು ಆತ ಆನಂದ ಸಂಸಾರಿ. ಜೋಯಿಸ ಸಿಂಘ ತನ್ನ ಮಗಳ ಮನೆಯಲ್ಲೆ ಉಳಿಯಲು ಮಗನ ವಿರೋಧವೇ ಮುಖ್ಯ ಕಾರಣವಾಗಿತ್ತು. ಮಗ, ತಂದೆ ಮತಾಂತರಗೊಂಡುದನ್ನು ತೀವ್ರವಾಗಿ ಪ್ರತಿಭಟಿಸಿದ್ದ. ಅವನ ಕೋಪವನ್ನು, ತಂಗಿ ಮತ್ತು ಭಾವ ಕೂಡ ಮತಾಂತರಗೊಂಡದ್ದು, ಎರಡುಪಟ್ಟು ಹೆಚ್ಚಿಸಿತ್ತು. ಅದರಿಂದ ತಾಳ್ಮೆ ತಪ್ಪಿ "ನೀವೆಲ್ಲ ಒಂದೇ ಎಂದು ತೋರುತ್ತದೆ. ಹಾಗಾದರೆ ಇಲ್ಲೇಕೆ ಬರುವಿರಿ? ಒಟ್ಟಿಗೆ ಇದ್ದು ಪಂಚ ನಮಸ್ಕಾರ ಪಠಿಸಬಹುದಲ್ಲಾ" ಎಂದು ಕಟಕಿಯಾಡಿದ್ದ. ಅಂದಿನಿಂದ ಜೋಯಿಸ ತನ್ನ ಅಳಿಯನ ಮನೆಯಲ್ಲೇ ಅವನ ಪ್ರಾರ್ಥನೆಯ ಮೇರೆಗೆ ಇದ್ದುಬಿಟ್ಟ.

## ೫

ಜೋಯಿಸನ ಸಮಯವೆಲ್ಲ ಸ್ವಾಧ್ಯಾಯ, ಬೆಳಿಗ್ಗೆ ಸಂಜೆ ಬಸದಿಯಲ್ಲಿನ ಪೂಜೆಗೆ ಹೋಗಿ ಬರುವುದರಲ್ಲೇ ಕಳೆಯುತ್ತಿತ್ತು. ಮೊಮ್ಮಗಳು ಹುಟ್ಟಿದ ಮೇಲಂತೂ ಅವನ ಬಾಳಿಗೆ ಹೊಸ ಬೆಳಕೇ ಬಂದಂತಾಯಿತು. ಮೊಮ್ಮಗಳಿಗೆ ಅಬ್ಬಣಬ್ಬೆ ಎಂದು ನಾಮಕರಣ ಮಾಡಿದರು. ಜೋಯಿಸ ಸಿಂಘ ಸ್ವಯಂ ಜ್ಯೋತಿಷ್ಯಶಾಸ್ತ್ರ ಪಾರಂಗತ. ಪಂಚಾಂಗವೆಲ್ಲ ಅವನ ಬೆರಳು ನಾಲಗೆ ತುದಿಯಲ್ಲೇ ಇತ್ತು. ಮೊಮ್ಮಗಳು ಹುಟ್ಟಿದ ಮುಹೂರ್ತ ಅತ್ಯಂತ ಪ್ರಶಸ್ತವಾಗಿತ್ತು, ಅಬ್ಬಣಬ್ಬೆ ತಾತನ ರಕ್ಷೆ ಶಿಕ್ಷಣಗಳ ಆಶ್ರಯದಲ್ಲಿ ದಿನೇ ದಿನೇ ವಿದ್ಯಾದೇವತೆಯಂತೆ ಬೆಳೆದಳು. ಸಂಗೀತ ಶಾಸ್ತ್ರ ಸಾಹಿತ್ಯಗಳ ತ್ರಿವೇಣಿ ಸಂಗಮದ ಪುತ್ಥಳಿಯಾಗಿ ಕಂಗೊಳಿಸಿದಳು. ಅಣ್ಣಿಗೆರೆಯ ಸುತ್ತಮುತ್ತಲ ಹತ್ತು ಗ್ರಾಮಗಳಲ್ಲಿ ಅಬ್ಬಣಬ್ಬೆಯ ಬುದ್ಧಿಯನ್ನು ಎಲ್ಲರೂ ಕೊಂಡಾಡುವವರೆ.

ಇಷ್ಟಾದರೂ ಜೋಯಿಸ ಸಿಂಘ, ಅವನ ಮಗಳು ಹಾಗೂ ಅಳಿಯಂದಿರ ಮಗಳು ತಲೆನವಿರಗಂಟಿಗಿಂತ ಕಿರಿದಾಗುವ ಪ್ರಸಂಗ ಬಂತು. ಅಬ್ಬಣಬ್ಬೆಯ ಪ್ರಾಯ ದಿನಗಳೆದಂತೆ ಹೆಚ್ಚುತ್ತಾ ಬಂತು. ಹನ್ನೆರಡು ವರ್ಷದೊಳಗೆ ಮದುವೆ ಮಾಡಬೇಕಿತ್ತು. ಆದರೆ ತಕ್ಕವರ ಸಿಗಲಿಲ್ಲ. ಹೊಸದಾಗಿ ಜೈನಮತಕ್ಕೆ ಬಂದವರು, ಅವರ ಮನೆಯ ಹೆಣ್ಣುಮಗಳನ್ನು ಹೇಗೆ ತಂದುಕೊಳ್ಳುವುದೆಂದು ಕೆಲವರ ಪ್ರಶ್ನೆ. "ಅಂಥ ಬುದ್ಧಿವಂತ ಹುಡುಗಿಯನ್ನು ಕೈಹಿಡಿಯಲು ಪುಣ್ಯ ಮಾಡಿರಬೇಕು" ಎಂದು ಬಾಯುಪಚಾರ ಹೇಳುವರು. ಆದರೆ ಸಂಬಂಧ ಬೆಲೆಸಲು ಹಿಂದು ಮುಂದು ನೋಡುವರು. ಜೋಯಿಸನ ಹಳೆಯ ಅಗ್ರಹಾರದವರು "ನಮ್ಮ ಧರ್ಮದಲ್ಲೇ ಇದ್ದಿದ್ದರೆ ಈ ಕಷ್ಟ ಬರುತ್ತಿತ್ತೆ? ನೋಡೀಗ, ನೀನು ಇಥೋ ಭ್ರಷ್ಟ ತಥೋ ಭ್ರಷ್ಟ" ಎಂದು ಹಂಗಿಸುವರು. ಅಬ್ಬಣಬ್ಬೆಯ ಜಾಣ್ಮೆ ಚೆಲುವು ಚಟುವಟಿಕೆ ಕಂಡು ಮೆಚ್ಚಿದ ಜವ್ವನಿಗರಿಗೆ ಅವರ ಮನೆಯವರು ಅಡ್ಡಿಯಾದರು.

ಹೀಗಾಗಿ ಅಬ್ಬಣಬ್ಬೆಗೆ ಹದಿನಾರರ ಹರೆಯು ಬಂದರೂ ಮದುವೆಯಾಗದಿದ್ದುದು ತಂದೆತಾಯಿಗಿಂತ ಹೆಚ್ಚಾಗಿ ತಾತನ ಚಿಂತೆಗೆ ಕಾರಣವಾಗಿತ್ತು. "ಹದಿನಾರು ವರ್ಷದ ಕನ್ಯೆಯನ್ನು ಮದುವೆ ಮಾಡಿಕೊಡದೆ

ಮನೆಯಲ್ಲೇ ಕೂಡಿಸಿದ್ದಾರಲ್ಲಾ, ಅವರಿಗೆ ಬಹಿಷ್ಕಾರ ಹಾಕಬೇಕು" ಎಂದು ಆಗದವರು ಅಂದದ್ದು ಕಿವಿಗೆ ಬಿತ್ತು. ಆ ದಿನವಿಡೀ ಮನೆಯಲ್ಲಿ ಯಾರೂ ನೀರು ಕೂಡ ಕುಡಿಯಲಿಲ್ಲ. ರಾತ್ರಿ ನಿದ್ರೆ ಬರಲಿಲ್ಲ. ಮುಖಗಳೆಲ್ಲ ಕಂದಿ ಕುಂದಿದುವು. ಅಂಥ ದುಸ್ಥಿತಿಯಲ್ಲಿದ್ದಾಗ ಬಂದ ಸುದ್ಧಿ ಭೀಮಪಯ್ಯನ ಮತಾಂತರಕ್ಕೆ ಸಂಬಂಧಿಸಿದ್ದು.

ಭೀಮಪಯ್ಯನನ್ನು ನೋಡಿ ಬಂದ ಮೇಲೆ ಜೋಯಿಸನ ತಲೆಯಲ್ಲಿ ಶುಭ ಭಾವನೆ ಸುಳಿಯಿತು. ಆತನೇ ತನ್ನ ಮೊಮ್ಮಗಳಿಗೆ ಯೋಗ್ಯ ವರನೆಂದು ಅನ್ನಿಸಿತು. ಮಗಳು ಅಳಿಯನೊಡನೆ ಪ್ರಸ್ತಾಪಿಸಿದ. ಅವರದು ಒಂದೇ ಉತ್ತರ "ನೀವು ಹಿರಿಯರು ಒಪ್ಪಿದರೆ ಆಯಿತು. ಇರುವ ಒಬ್ಬಳೇ ಮಗಳನ್ನು ಸರಿಯಾದ ವರನಿಗೆ ಕೊಟ್ಟು ನಾಲ್ಕು ಅಕ್ಷತೆ ಕಾಳು ಹಾಕಿ ಹರಸುವುದಕ್ಕಿಂತ ಬೇರೇನು ಬೇಕು?" ಜೋಯಿಸಸಿಂಘ ಇದನ್ನು ಗುರುಗಳ ಗಮನಕ್ಕೆ ತರುವುದು ಲೇಸೆಂದು ಬಸದಿಗೆ ಧಾವಿಸಿದ. ಬಸದಿಯಲ್ಲಿ ಅಷ್ಟಾಹ್ನಿಕರ ಸಮಯ. ವೀರಸೇನರ ಪ್ರಶಿಷ್ಯ ಕುಮಾರಸೇನರು ದಯಮಾಡಿಸಿ ಮೂರು ದಿನಗಳಾಗಿತ್ತು. ತಮ್ಮ ಗುರು ವಿನಯಸೇನರ ಅಪ್ಪಣೆ ಪಡೆದು ಕುಮಾರಸೇನರೇ ಒಂದು ಪ್ರತ್ಯೇಕ ಸಂಘವನ್ನು ಪ್ರಾರಂಭಿಸಿದ್ದರು. ಅದಕ್ಕೆ ಕಾಷ್ಠಾಸಂಘವೆಂದು ನಾಮಕರಣ ಮಾಡಿದ್ದರು. ಕುಮಾರಸೇನರು ಜೋಯಿಸನ ವಿಷಯವೆಲ್ಲ ತಿಳಿದು "ತಥಾಸ್ತು. ಶುಭವಾಗಲಿ. ಉತ್ತಮ ವಸ್ತು ಉತ್ತಮ ಸ್ಥಳವನ್ನೇ ಸೇರಿದಂತಾಯಿತು. ಭೀಮಪಯ್ಯ ಸುಯೋಗ್ಯ. ಅಬ್ಬಣಬ್ಬೆಗೆ ತಕ್ಕವರ. ಎಲ್ಲ ವಿಧದಲ್ಲೂ ಸಂಬಂಧ ಚೆನ್ನಾಗಿದೆ. ಧಾರ್ಮಿಕ ದೃಷ್ಟಿಯಿಂದಲೂ ವರಸಾಮ್ಯ ಒಪ್ಪವಾಗಿದೆ" ಎಂದು ಅಪ್ಪಣೆ ಕೊಡಿಸಿದರು.

ಇನ್ನು ಮುಂದಿನ ದಾರಿ ಸುಗಮವಾಯಿತೆನ್ನಿಸಿತು. ಆದರೂ ಇದನ್ನು ಭೀಮಪಯ್ಯನೊಡನೆ ಮಾತನಾಡುವುದು ಹೇಗೆ? ಅಲ್ಲದೆ ಮದುವೆ ವಿಷಯ ಹಿರಿಯರೊಡನೆ ಪ್ರಸ್ತಾಪಿಸುವುದು ಕ್ರಮ. ದೈವ ಮಾಡಿದಂತೆ ಆಗಲಿ ಎಂದು ಅಳಿಯರೊಡನೆ ವೆಂಗಿವಿಷಯದತ್ತ ಹೊರಟ. ವೆಂಗಿದೇಶದ ದಾರಿಯಲ್ಲಿ ಕಮ್ಮೆನಾಡು ಕಾಣಿಸಿತು. ಕೂಡಲೆ ಹಳೆಯ ಗೆಳೆಯ ನಾಗಮಯ್ಯನ ನೆನಪಾಯಿತು. ನಾಗಮಯ್ಯನನ್ನು ನೆನೆಪಿಸಿಕೊಂಡೊಡನೆಯೇ ಜೋಯಿಸನಿಗೆ ಬಲ ಬಂದಂತಾಯಿತು. ಆತನನ್ನು ಹಿಡಿದರೆ ಹೊರಟ ಕೆಲಸ ಹೂ ಎತ್ತಿದಂತೆ ಎನ್ನಿಸಿತು.

ಕಮ್ಮೆನಾಡಿನ ಪುಂಗನೂರಿಗೆ ಹೋದ. ಅಲ್ಲಿ ನಾಗಮಯ್ಯನ ಭವ್ಯವಾದ ಸೌಧದಲ್ಲಿ ಆದರೋಪಚಾರಗಳಾದುವು. ಬಂದ ವಿಚಾರ ತಿಳಿಸಿದ, ನಾಗಮಯ್ಯ ಜೊತೆಯಲ್ಲಿ ಬರಲು ಒಪ್ಪಿದ. ಮರುದಿನ ದೊಡ್ಡ ಆರು ಕುದುರೆಗಳನ್ನು ಹೂಡಿದ

ರಥದಲ್ಲಿ ಹೊರಟರು. ಜೊತೆಯಲ್ಲಿ ನಾಗಮಯ್ಯನ ಇಬ್ಬರು ಚಿಕ್ಕಮಕ್ಕಳು ಮಲ್ಲಪ, ಪುನ್ನಮಯ್ಯ ಕೂಡ ಹೊರಟರು. ವೆಂಗಿಪಳುವಿಗೆ ಹೋಗಿ ವಿಚಾರಿಸಿದರು. ವಸಂತ ಅಗ್ರಹಾರದ ಮನೆಯಲ್ಲಿ ಕೊಮರಯ್ಯ ಇರುವುದಾಗಿ ತಿಳಿಯಿತು. ಅಲ್ಲಿಗೇ ಹೋದರು. ಕೊಮರಯ್ಯ ಆದರದಿಂದ ಬರಮಾಡಿಕೊಂಡ. ಹಣ್ಣು ಹಾಲು ಆದಮೇಲೆ ಬಂದ ಬರವನ್ನು ತಿಳಿಸಿದರು. ಕೊಮರಯ್ಯ ಎಲ್ಲಾ ವಿಚಾರಿಸಿಕೊಂಡು ಒಪ್ಪಿಗೆ ತಿಳಿಸುವುದಾಗಿ ಹೇಳಿಕಳಿಸಿದ. ಅನಂತರ ಭೀಮಪನಿಗೂ ತಿಳಿಸಿದ. ಗುರು ಹಿರಿಯುರಲ್ಲಿ ಅರಿಕೆ ಮಾಡಿದ. ಗುಣಭದ್ರರು ಲೋಕಾದಿತ್ಯರಾದಿಯಾಗಿ ಎಲ್ಲರೂ ಯಾವ ಅಭ್ಯಂತರವಿಲ್ಲವೆಂದರು.

ಲಗ್ನ ಕಟ್ಟಿಸಿದರು. ಮದುವೆ ಸರಳವಾಗಿ ಅಣ್ಣಿಗೆರೆಯಲ್ಲೇ ನಡೆಯಿತು. ಅರಮನೆ ಗುರುಮನೆಗಳಿಂದ ಉಡುಗೊರೆ ಹರಕೆಗಳು ಬಂದುವು. ಬೀಗರಿಷ್ಟರೆಲ್ಲ ಬಂದಿದ್ದರು. ಕೆಲವರಿಗೆ ಮನಸ್ಸಿದ್ದರೂ ಅವರಿವರ ಆಪಾದನೆಗೆ ಪಕ್ಕಾಗಬಾರದೆಂದು ಬರಲಿಲ್ಲ. ಭೀಮಪ ಅಬ್ಬಣಬ್ಬೆಯರು ದಂಪತಿಗಳಾದರು. ಜೋಯಿಸ ಸಿಂಘ ನೆಮ್ಮದಿಯ ನಿಟ್ಟುಸಿರಿಟ್ಟ. ಹೆಣ್ಣು ಹೆತ್ತ ಒಡಲು ತಣ್ಣಗಾಯಿತು.

ಅನುಕೂಲ ದಾಂಪತ್ಯ ಭೀಮಪಯ್ಯನದು. ಸತಿಪತಿಗಳು ಇಬ್ಬರೂ ಬಲ್ಲಿದರು. ವಿದ್ಯಾಪಾರಂಗತರಿರುವಂತೆ ಶಾಸ್ತ್ರ ವಿಶಾರದರೂ ಆಗಿದ್ದರು. ತನ್ನ ಮನೋಧರ್ಮಕ್ಕೆ ಅನುಗುಣವಾದ ಹೆಂಡತಿ ದೊರೆತಳೆಂದು ಭೀಮಪ ಹರ್ಷಿಸಿದ. ತನ್ನ ತಿಳಿವಿಗೆ ತಕ್ಕ ಗಂಡ ದೊರೆತನೆಂಬ ತೃಪ್ತಿ ಅಬ್ಬಣಬ್ಬೆಗೆ. ಮದುಮಕ್ಕಳು ಅಣ್ಣಿಗೆರೆಯಿಂದ ಹೊರಟು ವಸಂತ ಕೊಟ್ಟೂರು ನಿಡುಗಂದಿ ವಿಕ್ರಮಪುರ ಅಗ್ರಹಾರಗಳಲ್ಲಿ ಕೆಲವು ಕಾಲ ಇದ್ದು ಬಂದರು. ಆಚಾರ್ಯರನ್ನೂ ತೀರ್ಥಕ್ಷೇತ್ರಗಳನ್ನೂ ಯಾತ್ರಾಸ್ಥಳಗಳನ್ನೂ ದರ್ಶಿಸಿ ಬಂದರು. ಬನವಾಸಿಯ ಚೆಲುವನ್ನು ಆಸ್ವಾದಿಸಿ ಬಂದರು. ಕಡೆಗೆ ಹೊಸ ಬದುಕು ಪುಲಿಗೆರೆಯಲ್ಲಿ ಪ್ರಾರಂಭವಾಯಿತು. ಲೋಕಾದಿತ್ಯನ ಪರವಾಗಿ ಭೀಮಪ ಪುಲಿಗೆರೆಯ ಪ್ರತಿನಿಧಿಯಾಗಿ ನಿಂತ.

ಭೀಮಪನೂ ತಂದೆಯಂತೆ ಕಾವ್ಯರಚನೆಯ ಪರಿಪಾಟವಿಟ್ಟುಕೊಂಡಿದ್ದ. ಆದರೆ ಅವನ ಆಸಕ್ತಿ ವಾಗ್ಮಿತೆಯಲ್ಲಿ ಹೆಚ್ಚು. ಭೀಮಪನ ಮಾತೆಂದರೆ ಮೋಡಿ. ಅವನ ವಾಗ್ವೈಭವ ಪುಲಿಗೆರೆಯ ಮನೆಮಾತು. ಬಸದಿಯಲ್ಲಿ ಆಗಾಗ್ಗೆ ಸಂಜೆ ಹೊತ್ತು ಜಿನಸೇನ ಶ್ರೀವಿಜಯಾದಿಗಳ ಕೃತಿಗಳನ್ನು ಗಮಕ ರೂಪದಲ್ಲಿ ಹಾಡಿ ವ್ಯಾಖ್ಯಾನೋಪನ್ಯಾಸಗಳನ್ನಿತ್ತು ಆನಂದಪಡಿಸುತ್ತಿದ್ದ.

ಅಬ್ಬಣಬ್ಬೆ ಬಂದ ಮನೆ ಸಂದ ಮನೆ ಎರಡೂ ಸಾಹಿತ್ಯ ಧರ್ಮಗಳ ಆಗರವಾಗಿ ತನ್ನ ಮನೋಧರ್ಮಕ್ಕೆ ಒಗ್ಗಿದುದು ಸುಕೃತವೆಂದು ಸುಖಿಸಿದಳು.

ವಿನಯಸೇನರು ಹಾಗೂ ಅವರ ಶಿಷ್ಯ ಕುಮಾಸೇನರ ಪ್ರಭಾವ ವಲಯದಲ್ಲಿ, ಅಣ್ಣಿಗೆರೆಯಲ್ಲಿದ್ದಾಗ, ಬೆಳೆದಿದ್ದಳು. ಈಗ ಗಂಡನ ಮನೆಗೆ ಬಂದ ಮೇಲೆ ಗುಣಭದ್ರರ ಲೋಕಸೇನರ ದರ್ಶನಭಾಗ್ಯ ದೊರೆಯಿತು. ಹೊಸದಾಗಿ ಜೈನಧರ್ಮಕ್ಕೆ ಮತಾಂತರಗೊಂಡವರೆಂದು ಅಲ್ಲಿ ಇಲ್ಲಿ ಜೈನಗುರುಗಳು ಅಸಡ್ಡೆಯಿಂದ ಕಾಣಲಿಲ್ಲ. ಹಾಗೆಂದು ವಿಶೇಷವಾದ ಮಮತೆಯೂ ತೋರಲಿಲ್ಲ. ಎಲ್ಲರಂತೆ ಇವರನ್ನು ಕಂಡರು. ಜೈನ ಮುನಿಗಳ ಸ್ವಭಾವವೇ ಹಾಗಿತ್ತು. ಕುಮಾರಸೇನರು ಕಾಷ್ಠಾಸಂಘವನ್ನು ಪ್ರಾರಂಭಿಸಿದ ದಿನವಂತೂ ಅಣ್ಣಿಗೆರೆಯಲ್ಲಿ ಮೊದಲು ಆಹಾರ ದಾನ ಮಾಡಿದವರು ಜೋಯಿಸ ಸಿಂಘ ಮತ್ತು ಅಬ್ಬಣಬ್ಬೆ. ಈಗಂತೂ ಪುಲಿಗೆರೆ ಬಂದ ಎಷ್ಟೋ ಜಿನಮುನಿಗಳಿಗೆ ಎಲ್ಲಾ ಶ್ರಾವಕರಂತೆ ಭೀಮಪ ಅಬ್ಬಣಬ್ಬೆಯರೂ ಆಹಾರ ದಾನ ಮಾಡುತ್ತಿದ್ದರು.

ಈ ಮಧ್ಯೆ ಕೆಲವು ದುಃಖದ ವಾರ್ತೆ ಕೇಳಿ ಬಂತು, ಯಮಸ್ಯ ಕರುಣಂ ನಾಸ್ತಿ. ಜಿನಸೇನರ ನಿರ್ವಾಣ ಆದ ಮೇಲೆ ನೃಪತುಂಗನ ಸಾವು ಮಾತ್ರ ಕೇಳಿದ್ದ ಕರ್ಣಾಟಕ ಮತ್ತೆ ಒಂದು ದಶಕ ಅಂಥ ಹಿರಿಯ ಜೀವಿಗಳನ್ನು ಕಳೆದುಕೊಂಡಿರಲಿಲ್ಲ. ಒಂದು ದಶಕದಲ್ಲಿ ದಶರಥ ಆಚಾರ್ಯರ ಮತ್ತು ಶ್ರೀವಿಜಯರ ಇಹಲೋಕ ಯಾತ್ರೆ ಪೂರೈಸಿತು. ಅದಾದ ಒಂದು ದಶಕದೊಳಗೆ ವಿನಯಸೇನರ ನಿರ್ವಾಣವಾಯಿತು. ಆದರೆ ಬಂಕಾಪುರದಲ್ಲಿ ಅದರ ಮರುವರುಷವೇ ಎಲ್ಲಾ ಗುರುವಿಯೋಗ ಮರೆಸುವ ಶುಭ ಘಟನೆ ನಡೆಯಿತು. ಆಚಾರ್ಯ ಗುಣಭದ್ರರು ಉತ್ತರ ಪುರಾಣವನ್ನು ಶಕ ಸಂವತ್ ೮೨೦ರಲ್ಲಿ ಮುಗಿಸಿದರು.

ಆದರೆ ಅದಾದ ಒಂದು ವಾರದಲ್ಲೇ ಅವರು ಮುಕ್ತಿಗೆ ಸಂದರು. ಗುಣಭದ್ರರ ಅಂತಿಮ ದರ್ಶನಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಜನ ಬಂಕಾಪುರದಲ್ಲಿ ಸೇರಿದ್ದರು. ಅವರ ಕಡೆಯ ಯಾತ್ರೆಯಲ್ಲಿ ದುಃಖತಪ್ತರಾಗಿ ತತ್ತರಿಸಿದವರಲ್ಲಿ ಭೀಮಪ ಅಬ್ಬಣಬ್ಬೆಯರೂ ಸೇರಿದ್ದರು. ಲೋಕಾದಿತ್ಯನಂತೂ ದಿಕ್ಕು ತೋಚದವನಂತಾದ. ಲೋಕಸೇನರು ಶ್ರಾವಕರಿಗೆಲ್ಲ ಸಮಾಧಾನ ಪಡಿಸಿ ಧರ್ಮೋಪದೇಶವಿತ್ತರು. ಉತ್ತರ ಪುರಾಣದ ಕಡೆಯ ಕೆಲವು ಮಂಗಳ ಶ್ಲೋಕಗಳನ್ನು ಬರೆದುಕೊಟ್ಟರು. ಆಮೇಲೆ ಉತ್ತರ ಪುರಾಣವನ್ನು ಪಟ್ಟದಾನೆಯ ಮೇಲಿಟ್ಟು ಬಂಕಾಪುರದ ರಾಜಬೀದಿಯಲ್ಲಿ ರಾಜಮರ್ಯಾದೆಯೊಡನೆ ಮೆರವಣಿಗೆ ಮಾಡಿದರು. ಲೋಕಾದಿತ್ಯ ಉತ್ತರ ಪುರಾಣದ ನೂರಾರು ಪ್ರತಿಗಳನ್ನು ಮಾಡಿಸಿ ಅಂದು ಹಂಚಿದನು. ಬಸದಿಗಳಲ್ಲಿ ವಿಶೇಷ ಪೂಜಾಭಿಷೇಕ ನಡೆದುವು.

ಮತ್ತೆ ಒಂದು ವರ್ಷ ಕಳೆಯುವದರಲ್ಲಿ ಬಂಕಾಪುರದಲ್ಲಿ ಲೋಕಸೇನರೂ,

ಅಣ್ಣಿಗೆರೆಯಲಿ ಜೋಯಿಸ ಸಿಂಗನೂ ಕಡೆಯ ಉಸಿರೆಳೆದರು. ಜೋಯಿಸ ಸಿಂಘ ಸಾಯುವ ಒಂದೆರಡು ದಿವಸ ಹಿಂದೆ ಭೀಮಪ ಅಬ್ಬಣಬ್ಬೆಯರೊಡನೆ ಆಡಿದ ಕಡೆಯ ಮಾತುಗಳು ನೆನಪಾದವು. "ಭೀಮಾ, ಈ ಮೊಮ್ಮಗಳನ್ನು ನಿನ್ನ ಮಡಿಲಿಗೆ ಹಾಕಿ ಹೋಗುತ್ತಿದ್ದೇನೆ. ಅವಳು ಒಳ್ಳೆಯ ಹುಡುಗಿ. ಓದು ಬರಹದಲ್ಲಿ ಮುಂದು. ಪುರಾಣ ಕಾವ್ಯ ಇತಿಹಾಸಗಳನ್ನು ಪಠಿಸುತ್ತಾ ಮನೆಗೆಲಸ ಮರೆತರೆ ಮನ್ನಿಸು. ಮರಿಮಗುವನ್ನು ನೋಡಿ ಸಾಯಬೇಕೆಂದಿದ್ದೆ. ಸಾಧ್ಯವಾಗಲಿಲ್ಲ. ಯಶೋವಂತನಾಗಿ ಬಾಳು. ಎರಡೂ ಮನೆಗೆ ಕೀರ್ತಿ ತರುವ ಸುಪುತ್ರ ನಿಮಗೆ ಹುಟ್ಟಲಿ."

ತನ್ನ ತಾತನ ಸಾವು ಅಬ್ಬಣಬ್ಬೆಯನ್ನು ಶೋಕಸಾಗರದಲ್ಲಿ ಮುಳುಗಿಸಿತು. ತಂದೆಯಂತೆ ಸಾಕಿ, ತಾಯಂತೆ ಸಲಹಿ, ಗುರುವಿನಂತೆ ಕಲಿಸಿದ್ದ ತಾತನ ಅಗಲಿಕೆ ಅವಳ ಪಾಲಿಗೆ ಭರಿಸಲಾದ ನೋವು. ತಾತನ ಮರಣದಿಂದ ಅಣ್ಣಿಗೆರೆ ಶೂನ್ಯವೆನ್ನಿಸಿತು. ಒಂದೂವರೆ ತಿಂಗಳು ಅಲ್ಲಿ ಇರುವುದರೊಳಗೆ ಮತ್ತೆ ಪುಲಿಗೆರೆಯಿಂದ ತುರ್ತು ಕರೆ ಬಂತು. ಸುಖವಾಗಲಿ ಇಲ್ಲ ದುಃಖವಾಗಲಿ ಬಿಡಿಯಾಗಿ ಬರುವುದಿಲ್ಲವಂತೆ. ಬಂದರೆ ಹತ್ತಾರು ದುಃಖಗಳು ಇಲ್ಲವೇ ಹತ್ತಾರು ಸುಖಗಳು ಬರುತ್ತವಂತೆ. ಅದರಂತೆ ಪುಲಿಗೆರೆಗೆ ಬಂದೊಡನೆಯೇ ಬಂಕಾಪುರಕ್ಕೆ ಗಂಡನೊಡನೆ ಧಾವಿಸಬೇಕಾಯಿತು.

ಗುಣಭದ್ರ, ಲೋಕಸೇನ ಆಚಾರ್ಯರ ನಿರ್ವಾಣದಿಂದ ಲೋಕಾದಿತ್ಯ ವೈರಾಗ್ಯಪರನಾದ. ಅವರಿಗೆ ನಿಸದಿಗೆಗಳನ್ನು ನಿಲ್ಲಿಸಿದ್ದ, ನಿಜ. ನಿತ್ಯ ಆ ನಿಸಿದಿಗೆಗಳನ್ನು ನೋಡನೋಡುತ್ತಾ ಸಂಸಾರದ ಅಸಾರತೆಯನ್ನೇ ಪರಿಭಾವಿಸಿದ. ಚಕ್ರವರ್ತಿಗಳ ಸಾವು, ತಂದೆಯ ವೀರಮರಣ, ಗುರುದೇವರ ಅವಸಾನ, ಅತ್ತ ಸಾಮ್ರಾಜ್ಯದ ಅವನತಿ–ಇವೆಲ್ಲ ಅವನ ವಿರಾಗವನ್ನು ಗಟ್ಟಿಗೊಳಿಸಿದುವು. ಕಡೆಗೆ ಶಕ ಸಂವತ್ ೮೨೨ರಲ್ಲಿ ವಿದ್ಯಾನಂದ ಮುನಿಗಳ ಬಳಿ ಸಲ್ಲೇಖನ ಸ್ವೀಕರಿಸಿದ.

ಬನವಾಸಿ ರಾಜ್ಯಪಾಲರ ಸಲ್ಲೇಖನ ಸ್ವೀಕಾರ!ಸುದ್ಧಿ ಬಿರುಗಾಳಿಯಾಗಿ ಎಲ್ಲೆಡೆ ಬೀಸಿತು. ಭೀಮಪ ಅಬ್ಬಣಬ್ಬೆಯರೂ ಬಂದರು. ಭೀಮಪ ಲೋಕಾದಿತ್ಯ ವೀರಕ್ಷತ್ರಿಯ ಪುತ್ರ; "ಭೀಮಾ, ಈ ಗೆಳೆಯನನ್ನು ನಗುತ್ತಾ ಬೀಳ್ಕೊಡು, ವೀರಬಂಕೆಯನ ಮಗನಾದ ನಾನು ಸಾವನ್ನು ವೀರನಂತೆ ಸಂತೋಷದಿಂದ ಸ್ವಾಗತಿಸುತ್ತಿದ್ದೇನೆ. ಸಲ್ಲೇಖನ ಪಂಡಿತ ಮರಣ. ಇದು ಹೇಡಿಗಳ ಆತ್ಮಹತ್ಯದಂತಲ್ಲ. ಇಲ್ಲಿ ಬಾ. ಬಳಿಯಲ್ಲಿ ನಿಂತು ಎಲ್ಲರಂತೆ ನೀನೂ ಪಂಚನಮಸ್ಕಾರ ಮಂತ್ರವನ್ನು ಗಟ್ಟಿಯಾಗಿ ಭಕ್ತಿಯಿಂದ ಜಪಿಸು. ಓಂ....."

ಬಂಕಾಪುರದ ಹಾಗೂ ನೆರೆಹೊರೆಯ ಶ್ರಾವಕವೃಂದ ಒಂದೇ ಸಮನೆ ತಂಡೋಪತಂಡವಾಗಿ ಸೇರುತ್ತಿದ್ದಾರೆ. ಪಂಚನಮಸ್ಕಾರ ಹೇಳುತ್ತಿದ್ದಾರೆ. ಪಂಚಪರಮೇಷ್ಠಿಗಳ ಸ್ತೋತ್ರ ಬಾನಿಗೂ ಮುಟ್ಟಿತ್ತಿದೆ. ಸುತ್ತಲ ಕಾನಿಗೂ ಹಬ್ಬುತ್ತಿದೆ. ಎಲ್ಲೆಲ್ಲೂ ಅದೇ ದಿವ್ಯಧ್ವನಿಯಾಗಿ ಪ್ರತಿಧ್ವನಿಸುತ್ತಿದೆ.

ಓಂ ಣಮೋ ಅರಿಹಂತಾಣಂ
ಣಮೋ ಸಿದ್ಧಾಣಂ
ಣಮೋ ಆಇರಿಯಾಣಂ
ಣಮೋ ಉವಜ್ಝಾಯಣಂ
ಣಮೋ ಳೋಏಸವ್ವಸಾಹೂಣಂ

ಲೋಕಾದಿತ್ಯ ಮುಗುಳು ನಗೆಯಿಂದಲೇ ಈ ಲೋಕ ಬಿಟ್ಟು ಮುಳುಗಿದ.

ಭೀಮಪ ಅಬ್ಬಣಬ್ಬೆಯರು ಈ ಸಾವು ನೋವುಗಳನ್ನು ಸಹಿಸುವುದು ಸ್ವಲ್ಪ ಕಾಲ ಕಷ್ಟವಾಯಿತು. ಬೇಡ ಬೇಡವೆಂದು ಎಷ್ಟೇ ತಡೆಹಿಡಿದರೂ ಅವರ ನೆನಪೇ ಆಗುತ್ತಿತ್ತು. ಆಗ ಭೀಮಪ ಸಾಹಿತ್ಯಾಭ್ಯಾಸದಲ್ಲಿ ಈ ಸಂಕಟವನ್ನು ಮರೆಯಲು ಎಳೆಸಿದ. ವಿದ್ಯಾನಂದರ ಕೃತಿಗಳಾದ ಶ್ಲೋಕವಾರ್ತಿಕ, ಅಷ್ಟಸಹಸ್ರಿ, ಪ್ರಮಾಣ ಪರೀಕ್ಷಾ, ಪತ್ರ ಪರೀಕ್ಷಾ, ಆಪ್ತ ಪರೀಕ್ಷಾ ಮೊದಲಾದುವನ್ನು ಓದಿ ಮುಗಿಸಿದ ಅವರ ನ್ಯಾಯಶಾಸ್ತ್ರ ಪರಿಣತಿಯನ್ನು ಕಂಡು ಬೆರಗಾದ. ಅನಂತವೀರ್ಯರ ಸಿದ್ಧಿ ವಿನಿಶ್ಚಯ ಹಾಗೂ ಪಾಲ್ಯಕೀರ್ತಿಯ ಶಾಕಟಾಯನ ವ್ಯಾಕರಣ ಮತ್ತು ಅದರ ಮೇಲೆ ಬರೆದ ಅಮೋಘವೃತ್ತಿ ಟೀಕೆ ಅಭ್ಯಸಿಸಿದ. ಯಾಪನೀಯ ಸಂಘದ ಈ ಪಾಲ್ಯಕೀರ್ತಿಗಳ ವ್ಯಾಕರಣ ಪಾಂಡಿತ್ಯಕ್ಕೆ ತಲೆದೂಗಿದ.

ಆದರೆ ಭೀಮಪನಿಗೆ ತುಂಬ ಹಿಡಿಸಿದ್ದು ಈ ಶಾಸ್ತ್ರಕೃತಿಗಳಲ್ಲ, ಸಾಹಿತ್ಯ ಕೃತಿಗಳು. ಶ್ರೀವಿಜಯರ ಕಾವ್ಯ ಓದಿ ಹಿಂದೆಯೇ ಮೆಚ್ಚಿದ್ದ. ಅನಂತರದ ಅಸಗ, ಗುಣನಂದಿ ಹಾಗೂ ಗುಣವರ್ಮರ ಕೃತಿಗಳನ್ನು ಓದಿ ತನ್ಮಯನಾದ. ಅಬ್ಬಣಬ್ಬೆಗೆ ಅವೆಲ್ಲವನ್ನೂ ಓದಿ ಹೇಳಿದ. ಅವಳಿಗೆ ಈಗ ನೆಮ್ಮದಿ ಬೇಕಿತ್ತು. ಲಾಲನೆ ಪಾಲನೆಯ ಅಗತ್ಯವಿತ್ತು. ಅಬ್ಬಣಬ್ಬೆ ತಾಯಿಯಾಗುವವಳಿದ್ದಳು. ನಿತ್ಯದ ಮನೆಗೆಲಸ ಮುಗಿಸಿ ವಾಸದೂಟವಾದ ಮೇಲೆ ಸಂಜೆಗೇ ಗಂಡನ ವ್ಯಾಖ್ಯಾನಕ್ಕೆ ಚಾಪೆ ಹಾಸಿಕೊಂಡು ನಡುಮನೆಯಲ್ಲಿ ಕುಳಿತು ಬಿಡುತ್ತಿದ್ದಳು.

ನಡುನಡುವೆ ಸರಸ ಸಂಭಾಷಣೆಯೂ ನಡೆಯುತ್ತಿತ್ತು. ಕೇಳುತ್ತಾ ಕೇಳುತ್ತಾ, ತಾನೂ ಕವಿಯತ್ರಿಯಾಗಿದ್ದರೆ ಇಂತಹ ಕೃತಿಗಳನ್ನು ರಚಿಸಬಹುದಿತ್ತೆಂದು ಯೋಚಿಸುವಳು. ಚೊಚ್ಚಲ ಹೆರಿಗೆಯ ಸಡಗರ. ಸೀಮಂತ ಮುಗಿಯುತ್ತಿದ್ದಂತೆ

ತಂದೆ ಬಂದು ತವರು ಮನೆಗೆ ಕರೆದುಕೊಂಡು ಹೋದರು. ನಾಗವರ್ಮ ಅಪ್ಪಕಬ್ಬೆಯರು ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು, ಆರೈಕೆ ಮಾಡಿದರು. ಅವಳಿಗೆ ಯಾವುದಕ್ಕೂ ಅರಕೆಯಾಗದಂತೆ ನೋಡಿಕೊಂಡರು.

ಕಾಲ ಕರ್ತವ್ಯಲೋಲ. ದುಂದುಭಿ ಸಂವತ್ಸರ ಬಂದೇ ಬಿಟ್ಟಿತು. ಚೈತ್ರಮಾಸ ಶುಕ್ರವಾರ ಸೂರ್ಯೋದಯಕ್ಕೆ ಸರಿಯಾಗಿ ಅಣ್ಣಿಗೆರೆಯಲ್ಲಿ ಅಬ್ಬಣಬ್ಬೆ ಗಂಡುಮಗುವನ್ನು ಹೆತ್ತಳು. ದುಂಡಾದ ಮುದ್ದು ಮಗು. ಭೀಮಪನಿಗೆ ಕೋಡು ಮೂಡಿದಂತಾಯಿತು. ತಂದೆಗೆ ಮೊದಲೇ ಹೇಳಿಕಳಿಸಿದ್ದ. ಕೊಮರಯ್ಯ ಧಾವಿಸಿ ಬಂದಿದ್ದ. ತನ್ನನ್ನು ತಾತನನ್ನಾಗಿ ಮಾಡಿದ ಮಗುವಿನ ಬಗೆಗೆ ಆತ ಹೆಮ್ಮೆ ತಾಳಿದ.

ಅಣ್ಣಿಗೆರೆಯ ದೊಡ್ಡ ಬಸದಿಯಲ್ಲಿ ಅದೇ ಸಮಯಕ್ಕೆ ಮಹಾಪುರಾಣದ ಪಾರಾಯಣ ನಡೆದಿತ್ತು. ಪ್ರತಿಭಾವಂತ ವಟುವೆಂದು ಖ್ಯಾತಿಗಳಿಸಿದ್ದ ದೇವೇಂದ್ರರಿಂದ ಪುರಾಣವಾಚನ. ಸ್ವಯಂ ಕವಿಗಳೂ ವ್ಯಾಕರಣಾದಿ ಶಾಸ್ತ್ರ ನಿಪುಣರೂ ಜೈನಾಚಾರ್ಯರೂ ಆದ ಗುಣನಂದಿಯವರು ನಿತ್ಯವೂ ಧರ್ಮಬಾಂಧವರಿಗೆ ಉಪದೇಶ ಕೊಡುತ್ತಿದ್ದರು. ಕೊಮರಯ್ಯ ನಾಗವರ್ಮ ಭೀಮಪಾದಿಗಳು ಬಸದಿಗೆ ಹೋಗಿ ಗುರುಗಳಿಗೆ ಅಡ್ಡಬಿದ್ದರು. ಮಗುವಿನ ಜನನ ವಿಚಾರವನ್ನು ನಿವೇದಿಸಿಕೊಂಡರು. ಗುಣನಂದಿಯವರು ಸಂತೋಷ ಸೂಚಿಸಿದರು.

"ಭೀಮಪಯ್ಯನವರೇ, ನೀವೂ ನಿಮ್ಮ ಮಾವನವರೂ ಜೈನಧರ್ಮವನ್ನೊಂದಿದ ಮೇಲೆ ನಿಮ್ಮ ಎರಡೂ ಮನೆತನಗಳಲ್ಲಿ ಬಿಡುತ್ತಿರುವ ಮೊದಲು ಹೂ ಇದು. ನೀವು ಅಜ್ಞಾನ ತಪೋನಿಕಾರನೆನಿಸಿದಂತೆ ನಿಮ್ಮ ವಂಶದ ಕುಡಿಯೂ ಲೋಕೋತ್ತರ ಪುರುಷನಾಗಿ ಬೆಳಗಲಿ" ಎಂದು ಹರಸಿದರು.

ಆಗ ಬಳಿಯಲ್ಲೇ ಕುಳಿತಿದ್ದ ದೇವೇಂದ್ರ ವಟು "ಇಂದು ಪದ್ಮಪ್ರಭ ತೀರ್ಥಂಕರರ ಚರಿತೆಯ ಭಾಗ ಪುರಾಣಪಾರಾಯಣದಲ್ಲಿ ಪ್ರಾರಂಭವಾಗಲಿದೆ. ಮಗುವಿನ ಜನನ ಇಂದೇ ಆಗಿರುವುದು ಯೋಗಾಯೋಗವೇ ಸೈ. ಮಗುವಿಗೆ ಪದ್ಮಪ್ರಭನೆಂದೇ ಏಕೆ ಹೆಸರಿಡಬಾರದು?" ಎಂದು ಸೂಚಿಸಿದ. ಆಚಾರ್ಯರು ಒಪ್ಪಿಗೆಯೆಂಬಂತೆ ತಲೆಯಾಡಿಸಿದರು. ತಾವು ಗುರುಗಳಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದಿದ್ದುದನ್ನು ಅರಿತವರಂತೆ, ಅವರೇ ಮುಂದಾಗಿ ಹೆಸರು ಸೂಚಿಸಿದ್ದು ಆಯಾಚಿತ ವರಪ್ರಸಾದ ದೊರೆತಂತಾಯಿತು. ಗುಣನಂದಿ, ದೇವೇಂದ್ರರಿಗೆ ಪೊಡಮಟ್ಟು ತೆರಳಿದರು.

ವೈಶಾಖ ಮಾಸದ ಮೊದಲ ಗುರುವಾರ ಬೆಳಗ್ಗೆ ಮಗುವಿಗೆ ಶಾಸ್ತ್ರೋಕ್ತವಾಗಿ ನಾಮಕರಣವಿಧಿಯಿಂದ ಪದ್ಮಪ್ರಭ ಎಂದು ಹೆಸರಿಟ್ಟರು. ಗುರುಹಿರಿಯರೆಲ್ಲ ಹರಸಿದರು. ಸುಮಂಗಲಿಯರು ಸಡಗರದಿಂದ ಸಿಹಿ ಹಂಚಿದರು. ಜಿನ ಶಿಶುವಿನ ಮಹಿಮೆಯನ್ನು ಹಾಡಿದರು. ಅಬ್ಬಣಬ್ಬೆಗೆ ಮೊದಲ ಮಗುವೇ ಗಂಡುಮಗುವಾಯಿತೆಂಬ ಹೆಮ್ಮೆ. ತನ್ನ ಮಗುವಿಗೆ ಇಷ್ಟೊಂದು ಜನ ಗುರುಹಿರಿಯರ ಹರಕೆ ದೊರೆತ ಸಂತಸ. ನಾಗವರ್ಮ ಅಪ್ಪಕಬ್ಬೆಯರಿಗೆ ಮೊಮ್ಮಗ ಹುಟ್ಟಿದ ಆನಂದ ಒಂದು ಕಡೆ. ಹೆರಿಗೆ ತೊಂದರೆಯಿಲ್ಲದೆ ಸುಗಮವಾಗಿ ಆದ ನೆಮ್ಮದಿ ಇನ್ನೊಂದು ಕಡೆ. ಅಳಿಯನೊಡನೆ ನಾಗವರ್ಮ ಅಣ್ಣಿಗೆರೆಯ ಮನೆ ಮನೆಗೂ ಹೋಗಿ ಸಿಹಿ ಹಂಚಿಬಂದ.

ಪದ್ಮಪ್ರಭ ಶುಕ್ಲಪಕ್ಷದ ಚಂದ್ರನಂತೆ ವರ್ಧಿಸತೊಡಗಿದ. ಅವನನ್ನು ಪದ್ಮಪ್ರಭ ಎಂಬ ಪೂರ್ತಿ ಹೆಸರಿನಿಂದ ಕರೆಯುವರು ಕಡಿಮೆ. ಪದ್ಮಪ ಎಂದೂ ಪದ್ಮ ಎಂದೂ ಪಮ್ಮಿ ಎಂದೂ ಕರೆಯುವುದುಂಟು. ಕೆಲವರ ಬಾಯಲ್ಲಿ ಪದ್ಮಪ್ಪ! ಆದರೆ ಹೆಚ್ಚಾಗಿ ಅವನಿಗೆ ಅನ್ವಯವಾದ ಹೆಸರು ಪಂಪ!! ತಂದೆ ತಾಯಿಯರಿಗೂ ಗುರುಹಿರಿಯರಿಗೂ ಅದೇ ಪ್ರಿಯವಾದ ಹೆಸರಾಯಿತು. ಪಂಪನಿಗೆ ಒಂದು ವರ್ಷ ತುಂಬುವ ತನಕ ನಾಗವರ್ಮ ಅಪ್ಪಕಬ್ಬೆಯರು ಮಗಳನ್ನು ಗಂಡನ ಮನೆಗೆ ಕಳಿಸಲಿಲ್ಲ. ಆಮೇಲೂ ಅವರಿಗೆ ಮೊಮ್ಮಗು ತುಂಬ ಒಗ್ಗಿಬಿಟ್ಟಿದ್ದರಿಂದ ಅಬ್ಬಣಬ್ಬೆಯನ್ನು ಕಳಿಸಿಕೊಡುವುದು ಕಷ್ಟವೇ ಆಯಿತು.

“ಕಿರಿಯಬ್ಬೆ, ನೀನು ಕೂಸಿನೊಂದಿಗೆ ಪುಲಿಗೆರೆಗೆ ಹೊರಟರೆ ಈ ಮನೆ ಬಿಕೋ ಎನ್ನುತ್ತದೆ. ಮಗುವನ್ನಾಗದರೂ ಬಿಟ್ಟು ಹೋಗಬಾರದೆ ಎನ್ನಿಸುತ್ತದೆ. ನಾವು ಇನ್ನು ಮೇಲೆ ಕಾಲ ಕಳೆಯುದಾದರೂ ಹೇಗೆ?” ಎಂದು ಅಪ್ಪಕಬ್ಬೆ ಮಗಳ ಬಳಿ ಅಳಲುವಳು. “ಹಿರಿಯಬ್ಬೆ, ಅಣ್ಣಿಗೆರೆ ಪುಲಿಗೆರೆಯಿಂದ ದೂರವೇ? ಇಲ್ಲಿಂದ ಮುಂಜಾವಿಗೆ ಹೊರಟರೆ ಸಂಜೆಗೆ ಅಲ್ಲಿರುವಿರಿ. ನೀವು ನೆನಸಿಕೊಂಡಾಗಲ್ಲ ಬನ್ನಿ. ಅಷ್ಟೇಕೆ? ನೀವೇ ಅಲ್ಲಿಗೆ ಬಂದು ಇದ್ದು ಬಿಡಿ ಅವರೇನು ಬೇಡ ಎಂದಾರೆ?” ಎಂದು ಅಬ್ಬಣಬ್ಬೆ ತಾಯಿಗೆ ಉತ್ತರಿಸುವಳು.

ಪುಲಿಗೆರೆಗೆ ಬಂದ ಮೇಲೆ ಈ ಸಲ ಭೀಮಪನ ಬಹಳ ದಿನದ ಇನ್ನೊಂದು ಬಯಕೆ ಈಡೇರಿತು. ತನ್ನ ತಂದೆಗೆ ವೆಂಗಿಪಳುವಿನಿಂದ ಇಲ್ಲಿಯೇ ಬಂದಿರುವಂತೆ ಬೇಡಿ ಬೇಡಿ ದಣಿದಿದ್ದ. ಪಂಪ ಹುಟ್ಟಿ ತಾತನನ್ನು ಮೋಡಿ ಮಾಡಿ ಸೆಳೆದಿದ್ದ ಕೊಮರಯ್ಯ ಪುಲಿಗೆರೆಯಲ್ಲೇ ಮಗನ ಮನೆಯಲ್ಲಿ ಮೊಮ್ಮಗನನ್ನು ಬಿಟ್ಟಿರಲಾರದೆ ನಿಂತು ಬಿಟ್ಟ. “ಭೀಮಾ ಈ ಪದ್ಮಪ ಅಯಸ್ಕಾಂತ! ನನ್ನನ್ನು ಎಲ್ಲಿಯೂ

ದೂರಹೋಗದಂತೆ ಬಲವಾಗಿ ಸೆಳೆದು ಬಿಟ್ಟಿದ್ದಾನೆ ನೋಡು" ಎನ್ನುವನು.

"ಅಪ್ಪಾ, ಇನ್ನು ನೀವು ಅತ್ತ ಇತ್ತ ಎಂದು ನಮ್ಮ ನಾಲ್ಕು ಅಗ್ರಹಾರಗಳನ್ನು ಮತ್ತೆ ಸುತ್ತುವುದು ಸರಿಯಲ್ಲ. ನೋಡಿದವರಾದರೂ ಏನೆಂದಾರು? ಮಗ ಜಾತಿ ಬಿಟ್ಟ, ತಂದೆಯನ್ನೂ ಬಿಟ್ಟ ಎಂದು ನಗರೆ? ಇಷ್ಟಕ್ಕೂ ಆ ಅಗ್ರಹಾರಗಳ ಆದಾಯ ಹಿಂದಿನಂತೆ ಎಲ್ಲಿದೆ, ತಾತನ ಕಾಲದಿಂದೀಚೆಗೆ ಆಸ್ತಿಯೆಲ್ಲ ದಾನ ಧರ್ಮಾದಿಗಳಲ್ಲಿ ಕರಗಿದೆ. ಹೆಸರಿಗೆ ನಾಲ್ಕು ಅಗ್ರಹಾರಗಳೊಡೆಯ! ಇಲ್ಲಿ ಲೋಕಾದಿತ್ಯರು ಆತ್ಮ ಸಂತೋಷಾರ್ಥವಾಗಿ ಕೊಟ್ಟ ನೆಲ ಹೊಲ ಮನೆ ಎಲ್ಲಾ ಇದೆ. ನಿತ್ಯ ಪೂಜೆಗೆ ಬಸದಿಗಳಿವೆ. ದಿನಕ್ಕೊಂದು ಬಸದಿಯಂತೆ ದರ್ಶನ ಮಾಡುತ್ತಾ ಹೊರಟರೆ ವರ್ಷ ಆದರೂ ಬಸದಿಗಳೆಲ್ಲದರ ದರ್ಶನ ಮುಗಿಯದು! ಆಚಾರ್ಯ ಶ್ರೇಷ್ಠರೆಲ್ಲರೂ ಆಗಮಿಸುತ್ತಿರುತ್ತಾರೆ."

"ಹಾಗೆ ನಿನ್ನ ಮಾತಿನಂತೆಯೇ ಆಗಲಿ ಭೀಮ. ಇಷ್ಟಕ್ಕೂ ಈ ಪೋರ ಪದ್ಮಪ ಬಿಡುವನೆ?"

ಪಂಪನಿಗೆ ತಾತನೇ ಮೊದಲ ಗುರುವಾದ. ಪಂಪನ ಉದಯಕ್ಕೆ ಪ್ರಕೃತಿಯಲ್ಲೇ ಪೂರ್ವಸಿದ್ಧತೆ ನಡೆದಿತ್ತು. ಪಂಪ ಪ್ರಕೃತಿಯ ಮಗುವಾಗಿಯೇ ಬೆಳೆದ. ತಾತನೊಡನೆ ನಿಸರ್ಗದ ಚೆಲುವಿನಲ್ಲಿ ಹಸಿರ ಸೆರಗಿನಲ್ಲಿ ಸಮೃದ್ಧವಾಗಿ ಸುಳಿದಾಡಿದ. ಹಸಿರ ಬಸಿರಲ್ಲಿ ಮರು ಹುಟ್ಟುವಡೆದ. ಕತ್ತೆತ್ತಿ ನೋಡಿದಷ್ಟೂ ಎತ್ತರವೆಂಬಂತೆ ಬೆಳೆದ ತೋರ ಮರಗಳು. ನೂರಾರು ಗಿಡ ಮರ ಬಳ್ಳಿ ಹೂಗಳು. ನಾನಾತೆರನಾದ ಕಾಡುಮೃಗಗಳು. ಹತ್ತಾರು ಜಾತಿಯ ಹಕ್ಕಿಗಳ ಕಲರವ. ಜುಳು ಜುಳು ಬಳುಕಿ ಹರಿವ ತೊರೆ ಹಳ್ಳಗಳು. ಪ್ರಕೃತಿಯ ಮಡಿಲಲ್ಲೇ ಮಣ್ಣಿನ ಮಗನಂತೆ ಬೆಳೆಯತೊಡಗಿದ್ದರಿಂದ ಎಂಟು ವರ್ಷಕ್ಕೆ ದಷ್ಟಪುಷ್ಟನಾಗಿ ಬೆಳೆದ.

# ೬

ಕೊಮರಯ್ಯ ವೆಂಗಿಪಳುವಿಗೆ ಕಾರ್ಯಗೌರವ ನಿಮಿತ್ತ ಇದ್ದಕ್ಕಿದ್ದಂತೆ ಹೊರಟ. ಭೀಮಪ, ದೇವೇಂದ್ರ ಆಚಾರ್ಯರನ್ನು ಕಾಣಲು ಬೋದನಕ್ಕೆ ಹೋಗಬೇಕಿತ್ತು. ಅದರಂತೆ ಮೂವರೂ ವೆಂಗಿಪಳುವಿಗೆ ಹೊರಟರು. ಅಬ್ಬಣಬ್ಬೆ ತುಂಬು ಗರ್ಭಿಣಿಯಾದುದರಿಂದ ಪುಲಿಗೆರೆಯಲ್ಲೇ ನಿಂತಳು. ವೇಮುಲವಾಡದಿಂದ ಬಾದಾಮಿ ಚಾಳುಕ್ಯರ ದೊರೆಯಾದ ಇಮ್ಮಡಿ ನರಸಿಂಹನಿಂದ ಕೊಮರಯ್ಯನಿಗೆ ಕರೆ ಬಂದಿತ್ತು. ಹಿಂದೆ ಬಂದ ಕರೆಯನ್ನು ಗೌರವದಿಂದ ನಿವಾರಿಸಿಕೊಂಡಿದ್ದ. ಈಗಲೂ ಹಾಗೇ ಮಾಡುವುದೆಂದು ಹೊರಟ. ಜೊತೆಗೆ ಅಲ್ಲಿಯವರೆಗೆ ತಾನೂ ಹೋಗುವ ಉದ್ದೇಶವೂ ಇತ್ತು. ಪಂಪನನ್ನು ಬೋದನದಲ್ಲಿದ್ದ ಆಚಾರ್ಯ ದೇವೇಂದ್ರರ ಗುರುಕುಲಕ್ಕೆ ಸೇರಿಸಬೇಕಿತ್ತು. ರಾಜದೂತನೊಡನೆ ಮರುದಿನವೇ ಪ್ರಮಾಣ ಕೈಗೊಂಡನು.

ಬೋದನ____

ವಿದ್ಯೆ ಸಂಸ್ಕೃತಿ ಕಲೆ ವೈಭವಗಳ ತವರುಮನೆ. ಚಾಳುಕ್ಯರಲ್ಲಿ ಕ್ರಮೇಣ ಪೂರ್ವ ಮತ್ತು ಪಶ್ಚಿಮ ಚಾಳುಕ್ಯರೆಂದು ಇಬ್ಭಾಗವಾಯಿತು. ಪಶ್ಚಿಮ ಚಾಳುಕ್ಯರಲ್ಲಿ, ಬಾದಾಮಿ ಚಾಳುಕ್ಯರೆಂಬೊಂದು ಶಾಖೆ ತಲೆದೋರಿತು. ಆ ಶಾಖೆಗೆ ಸೇರಿದ ಚಾಳುಕ್ಯ ವಂಶದವರಿಗೆ ಬೋದನ ಮೊದಲು ರಾಜಧಾನಿಯಾಗಿತ್ತು. ಅದಕ್ಕೂ ಪೂರ್ವದಲ್ಲಿ ಬೋದನ ರಾಷ್ಟ್ರಕೂಟರ ಇಂದ್ರರಾಜನ ಉಪ ರಾಜಧಾನಿಗಳಲ್ಲಿ ಒಂದಾಗಿತ್ತು. ಅನಂತರ ಚಾಳುಕ್ಯರಿಗೆ ಅದನ್ನು ಕೊಟ್ಟ ಮೇಲೆ ಬಹುಕಾಲ ಅವರಿಗೆ ಬೋದನವೇ ರಾಜಧಾನಿಯಾಗಿತ್ತು. ಇಮ್ಮಡಿ ನರಸಿಂಹನ ಕಾಲದಲ್ಲಿ ಬೋದನವನ್ನು ಮುಖ್ಯ ಪಟ್ಟಣವಾಗಿಟ್ಟುಕೊಂಡು ವೇಮುಲವಾಡನ್ನು ರಾಜಧಾನಿಯಾಗಿ ಮಾಡಲಾಗಿತ್ತು. ವೇಮುಲವಾಡಕ್ಕೆ ಲೆಂಬುಳವಪಾಟಕವೆಂಬುದು ಇನ್ನೊಂದು ಹೆಸರು.

ಈಗ ಬೋದನ ರಾಜಧಾನಿಯಲ್ಲದಿದ್ದರೂ ದೊಡ್ಡ ಗುರುಕುಲ ಹೊಂದಿತ್ತು. ನಾಡಿನ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಜೈನರ ಸಾಂಸ್ಕೃತಿಕ ಕೇಂದ್ರಗಳಲ್ಲಿ ಬೋದನಕ್ಕೆ ವಿಶಿಷ್ಟವಾದ ಸ್ಥಾನವಿತ್ತು. ಪೌದನವೆಂಬುದು ಅದಕ್ಕಿದ್ದ

ಪ್ರಾಚೀನ ಹೆಸರು. ಪೌದನ ಜನರ ಬಾಯಲ್ಲಿ ಪೋದನವಾಗಿ ಪರಿವರ್ತನೆ ಪಡೆಯಿತು. ಅದು ಮತ್ತೆ ಮಾರ್ಪಾಟಾಗಿ ಬೋದನವೆಂದಾಯಿತು. ಏಕಚಕ್ರಪುರವೆಂದು ಇದಕ್ಕೆ ಹೆಸರಿತ್ತು. ವೇಮುಲವಾಡಕ್ಕೆ ಪ್ರಯಾಣ ಹೊರಟ ಕೊಮರಯ್ಯನಿಗೆ ದೊರೆ ನರಗನ ವಂಶದ ಬೆಳವಣಿಗೆ ನೆನಪಾಯಿತು.

"ಯಾವ ಏರ್ಪಾಟು ಮಾಡುವುದು? ಯಾರಲ್ಲಿ ಬಿಡುವುದು? ಇದೇ ಚಿಂತೆಯಾಗಿದೆ. ಸುತ್ತ ಹಗೆಗಳು ಹದ್ದಿನಂತೆ ರಾಜಧಾನಿಯತ್ತಲೇ ಸದಾ ಕಣ್ಣಿಟ್ಟು ಹಾರಾಡುತ್ತಿದ್ದಾರೆ. ಅವರ ನಂಜಿನ ನೋಟಕ್ಕೆ ನಾನು ಹೆದರುವೆನೆಂದಲ್ಲ. ಆದರೆ ಕುಮಾರನ ಕ್ಷೇಮವೊಂದೇ ಚಿಂತೆಯಾಗಿದೆ. ಈ ಚಾಳುಕ್ಯ ವಂಶದ ಬಳ್ಳಿ ಅದೊಂದೇ. ಆ ಬಳ್ಳಿಯನ್ನು ಚಿವುಟುವ, ಕೀಳುವ ಕೈಗಳಿಂದ ಕಾಪಾಡಬಲ್ಲ ಆಚಾರ್ಯಶ್ರೇಷ್ಠರ ಆಸರೆ ಬೇಕಾಗಿದೆ. ಕುಮಾರ ಅರಿಗ ತಾಯಿಲ್ಲದ ತಬ್ಬಲಿ ಬೇರೆ. ಮೂರು ವರ್ಷ ಮಾನ್ಯಖೇಟದಲ್ಲಿ ಸೋದರ ಮಾವಂದಿರಾದ ಮುಮ್ಮಡಿ ಇಂದ್ರರ ಮತ್ತು ಬದ್ದೆಗರ ಅಕ್ಕರೆಯಲ್ಲಿ ಬೆಳೆದ...."

"ಕೇಳಿ ಬಲ್ಲೆ ಪ್ರಭು. ಕುಮಾರ ಅರಿಗರು ಇಂದ್ರ ಮಹಾಪ್ರಭುಗಳ ತೋಳು ತೊಟ್ಟಿಲಾಗಿದ್ದು ಅಲ್ಲಿ ವಾತ್ಸಲ್ಯದ ಅಮೃತ ಉಂಡು ಬೆಳೆದವರು."

"ಅಂಥ ಆತ್ಮೀಯತೆಯ ಆಶ್ರಯದಲ್ಲಿ ಕುಮಾರನನ್ನು ಬಿಟ್ಟು ಕಾಳಗದಲ್ಲಿ ಹೋರಾಡಿ ಬಂದುದಾಯಿತು. ಗೆಲುವು ಹೆಚ್ಚಿದಷ್ಟೂ ದೊರೆಯ ಶತ್ರುಗಳೂ ಹೆಚ್ಚುತ್ತಾರೆ. ನನ್ನ ಎದುರಾಳಿಗಳಲ್ಲಿ ಸೋತವರೆಲ್ಲ ಈಗ ಒಂದೆಡೆ ಸೇರುತ್ತಿದಾರೆ. ಅದರಿಂದಲೇ ಇನ್ನು ಕುಮಾರನನ್ನು ಎಲ್ಲಿಗೂ ಕಳಿಸುವ ಮನಸ್ಸಿಲ್ಲ. ನೀವು ರಾಜಧಾನಿಯಲ್ಲೇ ನೆಲಸಿ ಮಗುವಿಗೆ ಬೋಧಿಸುವ ಹೊಣೆ ಹೊರಬೇಕೆಂಬುದು ನಮ್ಮ ಆಸೆ."

"ಪ್ರಭೂ, ತಮ್ಮ ವಿಶ್ವಾಸಕ್ಕಾಗಿ ಆಜನ್ಮ ಋಣಿಯಾಗಿದ್ದೇನೆ. ತಮ್ಮ ಮಕ್ಕಳ ಭವಿಷ್ಯ ರೂಪಿಸವ ಹೊಣೆ, ಈ ಮುದಿ ಹೆಗಲು ಹೊರಲಾರದೇನೋ ಎಂದು ಶಂಕಿಸುವೆ."

"ನೀವು ವಯೋವೃದ್ಧರೂ ಜ್ಞಾನವೃದ್ಧರೂ ಶೀಲವೃದ್ಧರೂ ಆಗಿರುವಿರಿ. ಜೊತೆಗೆ ನಿಮ್ಮ ಚಿರಂಜೀವಿ ಭೀಮಪಯ್ಯನವರೂ ಮಹಾ ವಿದ್ವಾಂಸರೆಂದು ಕೇಳಿದ್ದೇವೆ. ಹಿರಿಯರಾದ ಜೈನಾಚಾರ್ಯರ ಶಿಷ್ಯತ್ವದ ಲಾಭ ಕೂಡ ಪಡೆದಿದ್ದಾರೆಂದೂ ಸಾಹಿತ್ಯ ಶಾಸ್ತ್ರ ಎರಡರಲ್ಲೂ ಗಟ್ಟಿಗರೆಂದೂ ಅರಮನೆಯ ಪಂಡಿತ ಮಂಡಳಿ ಮಾತಾಡುವುದನ್ನು ಆಲಿಸಿದ್ದೇವೆ. ಜೊತೆಗೆ ಅಸ್ತ್ರಶಸ್ತ್ರ ಪ್ರಯೋಗ ನೈಪುಣ್ಯವೂ ಇದೆಯಂತೆ. ತುಂಬ ಸಂತೋಷ. ಹೆಸರಿಗೆ ತಕ್ಕಂತೆ ಇದ್ದಾರೆ.

ತಂದೆ ಮಕ್ಕಳಿಬ್ಬರೂ ಸೇರಿ ಈ ತಂದೆ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಬೇಕೆಂದು ನಮ್ಮ ಅಪೇಕ್ಷೆ."

"ತಾವು ಹೇಗೆ ಹೇಳಿದರೆ ಹಾಗೆ ಆಗಲಿ ಅರಸರೇ. ತಮ್ಮ ಸೇವೆಗೆ ಪ್ರತಿಯಾಡುತ್ತಿದ್ದೇವೆಂದು ತಿಳಿಯದಿದ್ದರೆ ಒಂದು ಅರಿಕೆ ಪ್ರಭು..."

"ಗೊತ್ತಾಯಿತು ಕೊಮರಯ್ಯನವರೇ. ನೀವೂ ನಿಮ್ಮ ಮಕ್ಕಳೂ ವೈದಿಕ ಧರ್ಮ ಬಿಟ್ಟು ಜೈನಧರ್ಮ ಅವಲಂಬಿಸಿರುವ ವಿಚಾರ ತಾನೇ? ನೋಡಿ, ರಾಜನಾದವನಿಗೆ ಎಲ್ಲಾ ಧರ್ಮಗಳೂ ಸಮಾನ. ಅವರವರ ಶ್ರದ್ಧೆಗೆ ಸೇರಿದ್ದು ಅವರವರ ಧರ್ಮ. ಎಲ್ಲಾ ಧರ್ಮಗಳನ್ನೂ ಒಳಗೊಂಡ ಧರ್ಮ ರಾಷ್ಟ್ರಧರ್ಮ.....

"ಅದಲ್ಲ ಪ್ರಭು, ನಾನು ಹೇಳಬೇಕೆಂದು ಇದ್ದುದು ಕುಮಾರರ ಶಿಕ್ಷಣಾಭ್ಯಾಸ ಕುರಿತು."

"ಹಾಗಾದರೆ ಬೇಗ ಹೇಳಿ."

"ಈಗ ನನ್ನ ಮೊಮ್ಮಗ ಪಂಪನನ್ನು ಬೋದನದ ಪ್ರಸಿದ್ಧ ದೇವೇಂದ್ರ ಮುನಿಗಳ ಗುರುಕುಲಕ್ಕೆ ಸೇರಿಸಲು ಕರೆದುಕೊಂಡು ಹೋಗುತ್ತಿದ್ದೇನೆ."

"ಅರರೆ, ದೇವೇಂದ್ರರು ಈಗ ಬೋದನದ ಬಳಿಯ ಗುರುಕುಲದಲ್ಲಿದ್ದಾರಲ್ಲವೆ? ನಮಗೆ ನೆನಪೇ ಬರಲಿಲ್ಲವಲ್ಲಾ!"

"ತಾವು ಒಪ್ಪುವುದಾದರೆ ಕುಮಾರ ಅರಿಗರನ್ನೂ ಅಲ್ಲಿ ಸೇರಿಸಬಹುದೆಂದು ತೋರುತ್ತದೆ ಪ್ರಭು."

"ನಿಜವಾಗಿಯೂ ಒಳ್ಳೆಯ ಸೂಚನೆ. ನಾವು ಸಂತೋಷದಿಂದ ಒಪ್ಪುತ್ತೇವೆ. ಇಂದಿನ ಅಭಿನವ ಜಿನಸೇನರೆಂದು ಖ್ಯಾತರಾಗಿರುವ ದೇವೇಂದ್ರರ ಬಳಿ ಕುಮಾರನನ್ನು ಬಿಡಲು ನಮಗೆ ಯಾವ ಅಭ್ಯಂತರವೂ ಇಲ್ಲ. ತಾಯ ಬಳಿ ಮಗ ಇದ್ದಂಥೆ, ಅವರ ಆಶ್ರಮದಲ್ಲಿರುವುದು."

ನರಗ ದೊರೆ ಕುಮಾರ ಅರಿಗನನ್ನು ದೇವೇಂದ್ರರ ಗುರುಕುಲಕ್ಕೆ ಕಳಿಸಲು ಒಪ್ಪಿದ. ಆದರೆ ಅವನ ಆಗಮನ ವಿಚಾರವನ್ನು ಅರಿಕೆ ಮಾಡಲು ಕೊಮರಯ್ಯ ಭೀಮಪರಿಗೇ ಒಪ್ಪಿಸಲಾಯಿತು. ಇವರೆಲ್ಲ ಗುರುಕುಲ ಹೊಕ್ಕಾಗ ದೇವೇಂದ್ರರು ಅದೇ ತಾನೆ ಪ್ರಕಟವಾಗಿದ್ದ ಗುಣವರ್ಮನ ಕೃತಿಗಳ ವಿಚಾರವಾಗಿ ಸಾಹಿತ್ಯ ಪಾಠ ಮಾಡುತ್ತಿದ್ದರು. ಶೂದ್ರಕ-ಹರಿವಂಶಗಳ ಕಾವ್ಯ ಹಿರಿಮೆ ಅಪೂರ್ವವಾದುದೆಂದು ಬಣ್ಣಿಸುತ್ತಿದ್ದರು. ಪಂಪ ಆಗಲೇ ಬಾಲಕರ ಜೊತೆಯಲ್ಲಿ ಹಳೆಯ ವಿದ್ಯಾರ್ಥಿಯಂತೆ ಕುಳಿತುಬಿಟ್ಟಿದ್ದ. ದೇವೇಂದ್ರರು ಅದನ್ನು ಗಮನಿಸಿದರು.

ವಿವರಣೆ ಮುಗಿದ ಮೇಲೆ ದೇವೇಂದ್ರರು ಅಭ್ಯಾಗತರನ್ನು ಸ್ವಾಗತಿಸಿದರು.

ಭೀಮಪ ಬಂದ ಉದ್ದೇಶವನ್ನು ಸಂಕ್ಷಿಪ್ತವಾಗಿ ನಿರೂಪಿಸಿದ. ದೇವೇಂದ್ರರು ಪಂಪನ ಬರವಿಗಾಗೇ ಕಾಯುತ್ತಿದ್ದಂತೆ, ಕೂಡಲೇ ಒಪ್ಪಿಕೊಂಡರು. ಕೊಮರಯ್ಯ ಪ್ರಭುಗಳಾದ ನರಸಿಂಹದೇವರ ಕುಮಾರರು ಅಲ್ಲಿಗೇ ಶಿಕ್ಷಣಾರ್ಥಿಯಾಗಿ ಬರಲಿರುವ ಸಂಗತಿ ತಿಳಿಸಿದ. ಗುರುಗಳು ಈ ಗುರುಕುಲದಲ್ಲಿ ಜ್ಞಾನಭಿಕ್ಷುಗಳಾದ ಎಲ್ಲರಿಗೂ ಸದಾ ಸ್ವಾಗತ. ಎಂದ ಮೇಲೆ ವಿದ್ವತ್ಕುಲ ಪ್ರಸೂತರಿಗೂ ರಾಜಕುಮಾರರಿಗೆ ಸ್ವಾಗತವಿಲ್ಲವೆ? ಆದರೆ ಇಲ್ಲಿ ಇರುವ ತನಕ ಎಲ್ಲಾ ವಟುಗಳೂ ಸಮಾನವಷ್ಟೆ. ಅವರವರ ಅಪೇಕ್ಷೆ ಮೇರೆಗೆ ಹಾಗೂ ಶಕ್ತಿಗನುಗುಣವಾದ ಶಿಕ್ಷಣ ಮಾಡಲಾಗುವುದು" ಎಂದು ಉತ್ತರಿಸಿದರು.

"ಸ್ವಾಮೀಜಿಯವರೇ, ತಾವು ಈ ಮಗುವಿನ ನಾಮಕರಣದ ದಿವಸ ಹೆಸರು ಸೂಚಿಸಿ ಉಪಕರಿಸಿದಿರಿ. ಈಗ ಅದೇ ಪಂಪನನ್ನು ತಮ್ಮ ಬಳಿಗೆ ಕರೆತಂದಿದ್ದೇವೆ. ಅವನಿಗೆ ಶಿಕ್ಷಣವಿತ್ತು ಹೆಸರುವಾಸಿಯಾಗುವಂತೆ ಮಾಡುವುದು ತಮಗೆ ಸೇರಿದ್ದು. ಇಂದಿನಿಮದ ಅವನು ಈ ಗುರುಕುಲದ ವಟು."

"ಓಹೋ, ಪದ್ಮಪ್ರಭ ಹೋಗಿ ಈಗ ಪಂಪ ಎಂದಾಯಿತೆ? ನಾವು ಆಗಿನಿಂದ ಚಂಡಿಕೆವೆರಸಿದ ದುಂಡು ಮೊಗದ ಈ ಮಗುವನ್ನು ನೋಡಿ ಒಂದು ಬಗೆಯ ಮಮತೆ ಮೂಡಿದ್ದು ಏಕೆಂದು ಚಿಂತಿಸುತ್ತಿದ್ದೆವು. ಕಾರಣ ತಿಳಿಯಿತು. ಬಹಳ ಸಂತೋಷ. ಪಂಪ ಮುದ್ದಾದ ಹೆಸರು".

ಕೊಮರಯ್ಯ ಭೀಮಪ ಇನ್ನೆರಡು ದಿನ ಅಲ್ಲಿಯೇ ನಿಂತರು. ಮೂರನೆಯ ದಿವಸ ಲೆಂಬುಳಪಾಟಕದಿಂದ ಕುಮಾರ ಅರಿಕೇಸರಿ ಬಂದ. ಜೊತೆಯಲ್ಲಿ ನರಸಿಂಹ ದೊರೆಗಳು ರಾಜಗೌರವ ಮಾರ್ಯಾದೆಗಳನ್ನು ಗುರುಕುಲಕ್ಕೆ ಕಳಿಸಿದ್ದರು. ಮಂತ್ರಿ ಸೇನಾಪತಿಗಳು ಮಹಾರಾಜರು ದೇಹಾಲಾಸ್ಯದಿಂದಾಗಿ ಖುದ್ದಾಗಿ ಬರಲಾಗದುದನ್ನು ವಿನಯಪೂರ್ವಕ ಗುರುದೇವರಲ್ಲಿ ಅರಿಕೆ ಮಾಡಿಕೊಂಡರು. ಅವರು ಅಲ್ಲಿಂದ ಹಿಂತಿರುಗಿ ಹೋಗುವಾಗ ಅವರೊಡನೆ ಪಂಪನ ತಂದೆ ತಾತ ಕೂಡ ಹೊರಟರು. ಹೋಗುವಾಗ ಮತ್ತೆ ಪಂಪನನ್ನು ಹತ್ತಿರಕ್ಕೆ ಕರೆದು ಉಸಿರಿದರು. "ಪಂಪಾ, ಗುರುಗಳಿಗೆ ವಿಧೇಯನಾಗಿರು. ಸಹಪಾಟಿಗಳಿಗೆ ಅಚ್ಚುಮೆಚ್ಚಿನವನಾಗಿ ನಡೆದುಕೊ. ನಮಗೆ ಯಾವ ಕಾರಣದಿಂದಲೂ ಕರುಳು ನೋವಾಗದಂತೆ ನೋಡಿಕೊ."

ಒಡನೋದಿಗಳಾದ ಪಂಪ ಅರಿಗ ಬಹುಬೇಗ ಒಲವಿನ ಗೆಳೆಯರಾದರು. ಅವರ ಒಡನಾಟ ಗೆಳೆಯರಿಗೆಲ್ಲ ಮಾದರಿಯಾಯಿತು. ಗುರು ದೇವೇಂದ್ರರೂ ಅವರಿಬ್ಬರ ಗಾಢವಾದ ಸ್ನೇಹವನ್ನು ಗುರುತಿಸಿದರು. ಅರಿಗನ ತಂದೆ ನರಗನಿಗೂ

ಪಂಪನ ತಂದೆ ಭೀಮಪನಿಗೂ ಈ ಹುಡುಗರ ನಿಕಟ ನೇಹದ ವಿಚಾರ ತಿಳಿಯಬಂತು. ಎರಡು ಮೂರು ವರ್ಷಗಳಲ್ಲಿ ಎರಡು ಸಲ ಮಾತ್ರ ಅರಿಗ ಲೆಂಬುಳಪಾಟಕ್ಕೆ ಹೋಗಿ ಬಂದ. ಆಗ ಪಂಪನೂ ಜೊತೆಯಲ್ಲಿ ಹೋಗಿ ಬಂದ. ರಾಜನಿವಾಸದ ಜೀವನ ವಿಧಾನ ಪರಿಚಯವಾಯಿತು. ನರಗ ದೊರೆ ಪಂಪನ ಕುಶಾಗ್ರ ಬುದ್ಧಿಯನ್ನು ಗುರುತಿಸಿದ. ಮಗನಿಗೆ ತಕ್ಕ ಗೆಳೆತನ ದೊರೆತಿದೆಯೆಂದು ತೃಪ್ತಿಪಟ್ಟ. ಮತ್ತೊಮ್ಮೆ ನರಗನೇ ಗುರುಕುಲಕ್ಕೆ ಬಂದು ಹೋದ. ಆಗಲೂ ಬಾಲಕರಿಬ್ಬರೂ ಸಹಪಾಂಸು ಕ್ರೀಡಿತರಾಗಿದ್ದುದನ್ನು ಕಂಡ.

ಅರಿಗನ ಒಡನಾಟದಿಂದಾಗಿ ಪಂಪನಿಗೂ ಧಾರ್ಮಿಕ ಸಾಹಿತ್ಯಿಕ ಶಿಕ್ಷಣದ ಜೊತೆಗೆ ರಾಜರಿಗೆ ಉಚಿತವಾದ ಅಸ್ತ್ರಶಸ್ತ್ರ ಅಭ್ಯಾಸವೂ ಆಯಿತು. ಪಂಪ ಒಂದು ದಿನ ಅರಿಗನೊಡನೆ "ಅಯ್ಯಾ ಸಹವಾಸದಿಂದ ಸನ್ಯಾಸಿ ಕೆಟ್ಟಂತಾಯಿತು. ನಾನು ಅಹಿಂಸಾವ್ರತಿ, ನನ್ನ ಕೈಯಲ್ಲಿ ಈ ಆಯುಧ ಶೋಭಿಸದು. ನೀನು ರಾಜಪುತ್ರ. ನಿನಗೆ ಈ ಯುದ್ಧ ವಿದ್ಯೆ ಅಗತ್ಯ. ಜೈನನಾದ ನನಗೇಕೆ ಈ ಆಯುಧ ಕಲೆ" ಎಂದು ಕೇಳಿದ. ಬಳಿಯಲ್ಲೇ ಹೋಗುತ್ತಿದ್ದ ಗುರು ದೇವೇಂದ್ರರು ಅದನ್ನು ಕೇಳಿಸಿಕೊಂಡು ಬಂದು ಉತ್ತರಿಸಿದರು. "ಪಂಪ ಹಾಗೆಂದೂ ಇಲ್ಲ. ಅಹಿಂಸಾವ್ರತ ಹೇಡಿಯ ವ್ರತವಲ್ಲ. ಅದು ವೀರನ ಮತ್ತು ಧೀರನ ವ್ರತ. ಅದು ಅಭಾವ ವೈರಾಗ್ಯವಲ್ಲ ಮಗು. ಜೈನ ಶ್ರಾವಕರ ಬದುಕು ಎಂದೂ ದೇಶಸೇವೆಗೂ ಭಾಷಾ ಸೇವೆಗೂ ಸಮಾಜಸೇವೆಗೂ ಮುಡಿಪು. ನಾಡಿನ, ನುಡಿಯ ಹಾಗೂ ಗಡಿಯ ಕಾಪಿಗಾಗಿ ಅವರು ಕಾದಾಡಲು ಸದಾ ಸಿದ್ಧ. ಆದರೆ ತಾವಾಗಿ ತೊಂದರೆ ಕೊಡಲು ಮುಂದಾಗುವವರಲ್ಲ. ಈ ನಾಡಿನ ಇತಿಹಾಸದುದ್ದಕ್ಕೂ ಜೈನರು ದೊಡ್ಡ ಧ್ಯೇಯಗಳಿಗಾಗಿ ಮೀಸಲಾದವರು."

ಗುರುವಾಣಿ ಪಂಪನ ಎದೆಯೊಳಕ್ಕಿಳಿಯಿತು. ಪಂಪ ಕೂಡ ಕಸರತ್ತು ಮಾಡಿದ. ಗರಡಿಯಾಳಾಗಿ ದಷ್ಟಪುಷ್ಟನಾಗಿ ಬೆಳೆದ. ಬಿಲ್ವಿದ್ಯೆ ಖಡ್ಗವಿದ್ಯೆಗಳಲ್ಲಿ ಅರಿಗನಷ್ಟೇ ನಿಷ್ಣಾತನಾದ. ಯುದ್ಧ ವಿದ್ಯೆಯನ್ನು ಆಪತ್ಕಾಲದ ರಕ್ಷಾನಿಧಿಯಾಗಿರಲೆಂದಷ್ಟೇ ಕಲಿತ. "ಪಂಪಾ, ನಾಳೆ ನೀನೂ ನನ್ನೊಡನೆ ರಣರಂಗಕ್ಕೆ ಬರಬೇಕಾಗುವುದು. ಚೆನ್ನಾಗಿ ಕಲಿ" ಎಂದು ಅರಿಗನೆಂದರೆ, ಪಂಪ "ಇಲ್ಲಪ್ಪಾ, ಅಸಹಾಯಕರ, ಆಪತ್ತಿನಲ್ಲಿ ಸಿಲುಕಿದವರ ಬೆಂಗಾವಲಿಗಷ್ಟೇ ಈ ನನ್ನ ಕತ್ತಿ ಎತ್ತುವೆ" ಎನ್ನುತ್ತಿದ್ದನು.

ದಿನಗಳೆದಂತೆ ಕ್ಷತ್ರಿಯೋಚಿತ ವಿದ್ಯೆಯಲ್ಲಿ ಪಂಪನದೇ ಮೇಲುಗೈ ಎಂಬಂತೆ ಕಾಣತೊಡಗಿತು. ಚಾಪ ಚಕ್ರ ಪರಶು ಕೃಪಾಣ ಶಕ್ತಿ ತೋಮರಗಳನ್ನು ಎತ್ತಿ ಎತ್ತಿ

ತೋಳುಗಳು ಬಲಯುತವಾದುವು. ಮುಸಲ ಮಸುಂಡಿ ಭಿಂಡಿವಾಳ ಮುದ್ಗರ ಗದೆ ಮೊದಲಾದ ವಿವಿಧ ಆಯುಧ ಪ್ರಯೋಗಗಳಲ್ಲಿ ನಿಷ್ಣಾತನಾದ. ಅವನ ಅಚ್ಚರಿಯ ಪ್ರಗತಿ ಕಂಡು ರಾಜಕುಮಾರ ಅರಿಗನೇ ಬೆರಗಾಗಿ ನಿಂತ. ಪಂಪನ ಕೈಚಳಕವನ್ನು ಗುರು ದೇವೇಂದ್ರರೂ ಮೆಚ್ಚಿದರು. ಕೂಡಲೇ ಅವರಿಗೆ ಪಂಪನನ್ನು ಹೀಗೆಯೇ ಮುಂದುವರಿಯಲು ಬಿಡುವುದು ಸರಿಯಲ್ಲವೆನಿಸಿತು. ಈ ವೀರೋದಾತ್ತ ಪ್ರಕೃತಿಗೆ ನಿಲುಗಡೆ ಮಾಡಬೇಕೆನ್ನಿಸಿತು.

"ಪಂಪ ಬಾಳಿ ಬೆಳಗಬೇಕಾದ ಕ್ಷೇತ್ರ ರಣರಂಗವಲ್ಲ. ಅವನು ಲೇಖನಿ ಹಿಡಿಯಬೇಕಾದವನು. ಕಂಠ ಹಿಡಿವ ಕೈ ಕತ್ತಿ ಹಿಡಿದು ನಿಂತರೆ? ಬೇಗ ಅವನ ಗಮನವನ್ನು ಇಲ್ಲಿಯೇ ಕೇಂದ್ರೀಕರಿಸುವಂತೆ ಮಾಡಬೇಕು. ಧರ್ಮ, ಸಾಹಿತ್ಯ, ಶಾಸ್ತ್ರಗಳ ಸರಸ್ಸಿನಲ್ಲಿ ವಿಹರಿಸಬೇಕಾದ ರಾಜಹಂಸ ಕುರುಕ್ಷೇತ್ರಕ್ಕೆ ಪಯಣಿಸುವುದೆ?" ಎನ್ನಿಸಿತು. ಸ್ವಭಾವದಿಂದಲೇ ಪಂಪ ತೀಕ್ಷ್ಣಮತಿ. ದೇವೇಂದ್ರರು ಬೋಧಿಸಿದ ವಿಷಯ ಎಷ್ಟೇ ಗಹನವಾದರೂ ಗ್ರಹಿಸಿಬಿಡುತ್ತಿದ್ದ. ಅಲ್ಲದೆ ಆತ ಏಕಸಂಧಿಗ್ರಾಹಿಯಾದುದರಿಂದ ಒಮ್ಮೆ ಹೇಳಿದುದನ್ನು ಮತ್ತೆ ತಿಳಿಸುವ ಅಗತ್ಯವಿರಲಿಲ್ಲ. ಜೊತೆಗೆ ಅಸಾಧಾರಣ ಪ್ರತಿಭಾಶಾಲಿಯಾಗಿದ್ದ. ಅದರಿಂದ ಸ್ವೋಪಜ್ಞತೆ ಅವನ ಪ್ರತಿಯೊಂದು ಕಾರ್ಯದಲ್ಲೂ ಚಿಂತನೆಯಲ್ಲೂ ಎದ್ದು ಕಾಣುತ್ತಿತ್ತು. ವ್ಯಾಕರಣ ಛಂದಸ್ಸು ಶಿಕ್ಷಾನಿರುಕ್ತ ಜ್ಯೋತಿಷ ಕಲ್ಪಗಳಲ್ಲಿ ಮೇಧಾವಿಯೆನ್ನಿಸಿಕೊಂಡ. ಕಾವ್ಯಮೀಮಾಂಸೆಯಲ್ಲಿ ಬಹುಬೇಗ ಪರಿಣತನಾದ. ಭರತನ ನಾಟ್ಯಶಾಸ್ತ್ರ ಅವನಿಗೆ ಬಾಯಿಪಾಠವಾಯಿತು. ಆರ್ಯ ಪಾಣಿನಿಯ ಅಷ್ಟಾಧ್ಯಾಯಿ ಅಂಗೈ ಮೇಲಣ ನೆಲ್ಲಿಕಾಯಿ ಆಯಿತು. ಸಂಸ್ಕೃತ ಪ್ರಾಕೃತಗಳ ಸಾಹಿತ್ಯೋದ್ಯಾನದಲ್ಲಿ ಸಮೃದ್ಧನಾಗಿ ವಿಹರಿಸಿದ ರಸಚೇತನವಾಗಿ ಪಂಪ ಬೆಳೆದ.

ದೇವೇಂದ್ರ ಗುರುಗಳು ಪಂಪನಿಗೆ ಸಾಹಿತ್ಯವನ್ನೇ ವಿಶೇಷವಾಗಿ ಅಭ್ಯಾಸ ಮಾಡಲು ಅನುವು ಮಾಡಿಕೊಟ್ಟರು. ಅದರಲ್ಲಿ ಮೊದಲಿಂದ ಒಲವಿದ್ದ ಪಂಪ ಅವರ ಪ್ರೋತ್ಸಾಹದಿಂದ ಹೆಚ್ಚಿನ ಸಮಯವನ್ನು ಅದಕ್ಕೆ ಮೀಸಲಿಟ್ಟ. ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳನ್ನು ಪಾಠ ಹೇಳಿಸಿಕೊಂಡು ಪಾರಾಯಣ ಮಡಿದ. ಭಾಸ ಕಾಳಿದಾಸಾದಿಗಳ ನಾಟಕಗಳನ್ನು ಮತ್ತೆ ಮತ್ತೆ ಮನನ ಮಾಡಿದ. ತರ್ಕಶಾಸ್ತ್ರ ಷಡ್ದರ್ಶನಗಳು ಹಸ್ತಿಶಾಸ್ತ್ರ, ಅಶ್ವಶಾಸ್ತ್ರ, ಧರ್ಮಶಾಸ್ತ್ರಗಳನ್ನೂ ವ್ಯಾಸಾಂಗ ಮಾಡಿದ. ಶಿಲ್ಪಚಿತ್ರ, ಲಲಿತಕಲೆಗಳ ವಿಚಾರ ಅರಿತುಕೊಂಡ. ಸಂಸ್ಕೃತ ಪ್ರಾಕೃತಗಳಲ್ಲಿ ಕನ್ನಡಕ್ಕೆ ಸಮಾನವಾದ ಪಾಂಡಿತ್ಯ ಗಲಿಸಿದ. ವಿದ್ಯಾರ್ಥಿಗಳಿಗಾಗಿ ಮಾಸಕ್ಕೊಮ್ಮೆ ಏರ್ಪಡಿಸುತ್ತಿದ್ದ ವಾಕ್‌ಸ್ಪರ್ಧೆ ಹಾಗೂ

ವಾಚನ ಸ್ಪರ್ಧೆಗಳಲ್ಲಿ ಪಂಪ ಯಾವಾಗಲೂ ಪ್ರಪ್ರಥಮವಾಗಿ ನಿಲ್ಲುತ್ತಿದ್ದ.

ಜೈನ ಧರ್ಮದ ಆಗಮಗಳೆಲ್ಲ ಪಂಪನಿಗೆ ಕರತಲಾಮಲಕ ಫಲವಾದುವು. ಭೂತಬಲಿ ಪುಷ್ಪದಂತ ವೀರಸೇನ ಧರಸೇನರಾದಿಯಾಗಿ ಎಲ್ಲಾ ಜೈನಾಚಾರ್ಯರ ಜೀವನ ಚರಿತೆ ತಪಸ್ಸಿನ ವಿವರಗಳನ್ನು ಮನನ ಮಾಡಿದ್ದಾಯಿತು. ಧವಳ, ಮಹಾಪುರಾಣ, ಭಗವತೀ ಆರಾಧನಾ ಚೆನ್ನಾಗಿ ಕಲಿತದ್ದಾಯಿತು. ಸೇನಸಂಘದ ಜಿನಸೇನರ ಕೃತಿಗಳನ್ನಲ್ಲದೆ ಪುನ್ನಾಟ ಸಂಘದ ಜಿನಸೇನರ ಕೃತಿಗಳನ್ನೂ, ಗುಣಭದ್ರರ ಗ್ರಂಥಗಳನ್ನೂ ಅಭ್ಯಾಸ ಮಾಡಿದ. ಅಸಗ, ಶ್ರೀವಿಜಯ, ಜಯನಂದಿ, ದುರ್ವಿನೀತ, ವಿಮಲೋದಯ, ನಾಗಾರ್ಜುನ, ಗುಣನಂದಿ, ಗುಣವರ್ಮಾದಿಗಳ ಕಾವ್ಯಗಳು ಹೃದ್ಗತವಾದವು. ಸಮಂತಭದ್ರರ ರತ್ನಕರಂಡ ಶ್ರಾವಕಾಚಾರವನ್ನು ಪಠಿಸಿದಷ್ಟೇ ಶ್ರದ್ಧೆಯಿಂದ ಕುಂದಕುಂದಾಚರ್ಯರ ಪ್ರಾಕೃತ ಗ್ರಂಥಗಳನ್ನು ಅಭ್ಯಾಸ ನಡೆಸಿದ. ಸಮಯಸಾರ, ಪ್ರವಚನಸಾರ, ಜಿನಧರ್ಮದ ಸಾರವೆಂದು ತಿಳಿದ. ಸಮಂತಭದ್ರರ ಸ್ವಯಂಭೂ ಸ್ತೋತ್ರ ಹಾಗೂ ಆಪ್ತಮೀಮಾಂಸಾ ಅವನ ನಿತ್ಯದ ಪ್ರಾರ್ಥನೆಯಾಗಿತ್ತು.

ದೇವೇಂದ್ರಾಚಾರ್ಯರು ಪಂಪನಿಗೆ ಜೈನ ಧರ್ಮದ ಸೂಕ್ಷ್ಮಾತಿಸೂಕ್ಷ್ಮಗಳನ್ನೆಲ್ಲ ತಿಳಿಯಾದ ಶೈಲಿಯಲ್ಲಿ ಸರಳವಾಗಿ ತಿಳಿಸಿಕೊಟ್ಟರು. ಉಮಾಸ್ವಾಮಿಗಳ ತತ್ವಾರ್ಥಸೂತ್ರವನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ರಚಿತವಾದ ಪೂಜ್ಯಪಾದ, ಅಕಳಂಕ, ಆದಿಯಾದ ಮಹರ್ಷಿಗಳ ಮಹಾಭಾಷ್ಯಗಳನ್ನು ಪರಿಚಯಿಸಿದರು. ಅಲ್ಲಿಂದ ಒಂದೊಂದಾಗಿ ಪಾದಲಿಪ್ತಾಚಾರ್ಯರ ನಿರ್ವಾಣಕಲಿಕ, ತರಂಗವತೀಕಥಾ; ಮಾನದೇವಾಚಾರ್ಯರ ಶಾಂತಿಸ್ತವ; ಪೂಜ್ಯಪಾದಾಚಾರ್ಯರ ಜೈನೇಂದ್ರ ವ್ಯಾಕರಣ, ಇಷ್ಟೋಪದೇಶ, ಸರ್ವಾರ್ಥ ಸಿದ್ಧಿ; ಮಾನತುಂಗಾಚಾರ್ಯರ ಭಕ್ತಾಮರಸ್ತೋತ್ರ; ಅಕಳಂಕಾಚಾರ್ಯರ ತತ್ವಾರ್ಥವಾರ್ತಿಕ , ನ್ಯಾಯ ವಿನಿಶ್ಚಯ, ಸಿದ್ಧಿ ವಿನಿಶ್ಚಯ, ಅಷ್ಟಶತಿ; ರವಿಷೇಣಾಚಾರ್ಯರ ಪದ್ಮಪುರಾಣ ಮೊದಲಾದ ಕೃತಿಗಳನ್ನು ವ್ಯಾಖ್ಯಾನಿಸಿ ಬೋಧಿಸಿದರು. ತಮ್ಮ ಕಾಲದವರೆಗೆ ಅಖಂಡವಾಗಿ ಹರಿದುಬಂದ ಸಮಸ್ತಜೈನ ವಾಙ್ಮಯವನ್ನು ಶಿಷ್ಯನಿಗೆ ಹೃದ್ಗತಗೊಳಿಸಿದರು.

ಪಂಪ–ಅರಿಗ ನಾಲ್ಕು ವರ್ಷ ಒಟ್ಟಿಗೆ ಕಲಿತರು. ಅಷ್ಟರಲ್ಲಿ ಅವರು ಮತ್ತೆ ಒಟ್ಟಿಗೆ ಓದುವ ಅವಕಾಶ ತಪ್ಪುವ ಪ್ರಸಂಗ ಒದಗಿ ಬಂತು. ಲೆಂಬುಳಪಾಟಕದಿಂದ ದೊರೆ ನರಗನಿಗೆ ಆರೋಗ್ಯ ಕೆಟ್ಟಿರುವ ಕೆಟ್ಟಸುದ್ದಿ ಬಂತು. ಅರಮನೆಯ ಹೆಗ್ಗಡೆಗಳು ಮಂತ್ರಿಗಳೊಡನೆ ಗುರುಕುಲಕ್ಕೆ ಬಂದು ಬಿನ್ನೈಸಿಕೊಂಡರು.

ರಾಜಕುಮಾರನ ಓದನ್ನು ನಡುವೆಯೇ ನಿಲ್ಲಿಸಬೇಕಾದ ಅನಿವಾರ್ಯ ಪ್ರಸಂಗಕ್ಕೆ ಕ್ಷಮಾಪಣೆ ಯಾಚಿಸಿದರು. ಕುಮಾರ ಅರಿಗ ಕೂಡಲೇ ಯುವರಾಜನಾಗಿ ಅಭಿಷಿಕ್ತನಾಗಬೇಕಿತ್ತು. ಅವನಿಗೂ ಇಲ್ಲಿಂದ ಹೊರಡಲು ಅರೆಮನಸ್ಸು. ಆದರೆ ಅರಮನೆಗೆ ಹೋಗುವ ಹುಮ್ಮಸ್ಸು. ಅದು ಅವನ ವಯಸ್ಸಿಗೆ ಸಹಜವಿತ್ತು. ಹೀಗಾಗಿ ರಾಜಧಾನಿಗೆ ಸಚಿವರ ಪೆರ್ಗಡೆಗಳ ರಕ್ಷೆಯಲ್ಲಿ ಹೊರಟು ನಿಂತ. ಗುರುಗಳಿಗೆ ಪೊಡಮಟ್ಟ. "ಆಯುಷ್ಮಂತನಾಗಿ ಬಾಳು"– ಗುರುಗಳು ಆಶೀರ್ವದಿಸಿದರು. ಪಂಪನ ಬಳಿ ಬಂದ. ಆಲಂಗಿಸಿದ. ಗೆಳೆಯರ ಅಗಲುವಿಕೆ! ಅರಿಗ ಬೇಗ ಪಂಪನನ್ನು ರಾಜಧಾನಿಗೆ ಕರೆಸಿಕೊಳ್ಳುವುದಾಗಿ ತಿಳಿಸಿದ.

ಪಲ್ಲಕ್ಕಿ ಹತ್ತಿ ಕುಳಿತ ಅರಿಗನನ್ನು ಆಶ್ರಮವಾಸಿಗಳೆಲ್ಲ ಬಂದು ಬೀಳ್ಕೊಟ್ಟರು. ಕಾವಲು ಪಡೆಯ ಕಾಪಿನಲ್ಲಿ ರಾಜಕುಮಾರ ತೆರಳಿದ. ಗುರುಕುಲದ ಅಂಚಿನಲ್ಲಿದ್ದ ಉತ್ತರದ ಗುಡ್ಡ ಹತ್ತಿನಿಂತ ಪಂಪ, ಕಾಪಿನಾಳುಗಳ ನಡುವಿನ ಪಲ್ಲಕ್ಕಿ ಕಣ್ಣಿಗೆ ಕಾಣುವ ತನಕ ನೋಡಿದ.

# ೭

ಬೋದನದಿಂದ ದೇವೇಂದ್ರರು ಅವರ ಗುರು ಗುಣನಂದಿಗಳ ಅನಾರೋಗ್ಯ ಸುದ್ದಿ ತಿಳಿದು ದಕ್ಷಿಣಕ್ಕೆ ಬರಬೇಕಾಯಿತು. ಪಂಪನ ಶಿಕ್ಷಣ ಇನ್ನೂ ಪೂರ್ಣವಾಗಿರಲಿಲ್ಲ. ದೇವೇಂದ್ರರು ಕೊಪಣಕ್ಕೆ ಹೊರಟಿದ್ದು ಪಂಪನಿಗೂ ಅನುಕೂಲವಾಯಿತು. ತನ್ನ ತಂದೆ ತಾತಂದಿರಿಗೆ ಹತ್ತಿರವೇ ಆದಂತಾಯಿತು. ಅದರಿಂದ ಗುರುಗಳೊಡನೆ ಶಿಷ್ಯನೂ ಹೊರಟ. "ಏನಪ್ಪಾ ಹಸುವಿನ ಹಿಂದೆ ಬಾಲ ಎಂಬಂತೆ ಗುರುವಿನ ಜೊತೆ ಶಿಷ್ಯ ಎಂದು ನೀನೂ ಬರುವೆಯಾ?" ಎಂದು ದೇವೇಂದ್ರರು ನಕ್ಕರು. ಪಂಪ "ಆಚಾರ್ಯ ಹಸುವಿನ ಹಿಂದೆ ಶಿಷ್ಯ ಕರು ಬರುವುದು ಸಹಜವಲ್ಲವೆ? ನೀವು ಎಲ್ಲಿದ್ದರೆ ನಾನು ಅಲ್ಲಿ" ಎಂದು ಉತ್ತರಿಸಿದ.

ಬೋದನ ಬಿಟ್ಟು ಹೊರಡುವ ಸಮಯಕ್ಕೆ ಸರಿಯಾಗಿ ಗುರುಮನೆಗೆ ಎಂದು ಅರಮನೆಯಿಂದ ಕಳಿಸಿದ ಹಿರಿಯ ಗೌರವ ಕಾಣಿಕೆಗಳನ್ನು ರಾಯಸದೊಡನೆ ಪೆರ್ಗಡೆಗಳು ಅರಿಕೆಮಾಡಿ ಒಪ್ಪಿಸಿ ಹೋದರು. ದೇವೇಂದ್ರರು ಕೆಲವು ಶಿಷ್ಯರೊಡನೆ ತೆಂಕಣಕ್ಕೆ ಹೊರಟರು. ಮಾನ್ಯಖೇಟಕ್ಕೆ ಆರು ದಿನಗಳಲ್ಲೆ ತಲುಪಿದರು. ಅಲ್ಲಿ, ರಾಷ್ಟ್ರಕೂಟ ಮುಮ್ಮಡಿ ಇಂದ್ರ ಚಕ್ರವರ್ತಿಯ ಪರವಾಗಿ, ಯುವರಾಜ ನಾಲ್ಮಡಿ ಗೋವಿಂದರಾಜನು ಸಕಳ ರಾಜಮರ್ಯಾದೆಯೊಡನೆ ಬರಮಾಡಿಕೊಂಡು ಭಕ್ತಿ ಗೌರವಗಳನ್ನು ಅರ್ಪಿಸಿದನು. ಅವನಿಗೆ ಅಂಥದೊಂದು ಸದವಕಾಶ ಬೇಕಿತ್ತು. ಈ ಗೋವಿಂದನಿಗೆ ಪ್ರಭೂತವರ್ಷಗೋವಿಂದನೆಂಬ ಹೆಸರಿದ್ದರೂ. ಗೊಜ್ಜಿಗ ಎಂಬುದೇ ಜನಪ್ರಿಯ ಹೆಸರಾಗಿತ್ತು. ಗೊಜ್ಜಿಗ ಯುವರಾಜನಿದ್ದರೂ ರಾಜ್ಯದಾಹದಿಂದ ಬೇಗ ಚಕ್ರವರ್ತಿಯಾಗುವ ಮಹತ್ವಾಕಾಂಕ್ಷೆ ಹೊಂದಿದ್ದ. ಮಾನ್ಯಖೇಟದ ಜೈನ ಶ್ರೀಮಂತ ಶ್ರೇಷ್ಠಿಗಳ ವಿಶ್ವಾಸ ಗಳಿಸಿ ಒಳಗು ಮಾಡಿಕೊಳ್ಳಲು ದೇವೇಂದ್ರಾಚಾರ್ಯರನ್ನು ಸ್ವಾಗತಿಸುವ ಸಂದರ್ಭ ಲಾಭದಾಯಕವಾಗುವಂತೆ ನಿಯೋಜಿಸಿಕೊಂಡ.

ಮಾನ್ಯಖೇಟದ ಆದಿನಾಥಸ್ವಾಮಿ ಬಸದಿಯಲ್ಲಿಳಿದುಕೊಂಡ ದೇವೇಂದ್ರರನ್ನು ಮರುದಿವಸ ಚಕ್ರವರ್ತಿ ಮುಮ್ಮಡಿ ಇಂದ್ರ ಅರಮನೆಯ ಮಿತ ಪರಿವಾರದೊಡನೆ

ಬಂದು ದರ್ಶನ ಪಡೆದ. "ಭಾರತೀ ಭಾಳಪಟ್ಟ" ಎಂಬ ಪ್ರಶಸ್ತಿಯನ್ನು ಭಕ್ತಿ ಗೌರವ ಪುರಸ್ಕಾರವಾಗಿ ದೇವೇಂದ್ರರಿಗಿತ್ತ. ಇಂದ್ರನಿಗೆ ಗುರುಗಳಲ್ಲಿ ವಿಶೇಷವಾದ ಭಕ್ತಿಗೆ ಬಾಂಧವ್ಯಕ್ಕೆ ಸಂಬಂಧಿಸಿದ ಕಾರಣವಿತ್ತು. ಅದು ತನ್ನ ಸಹೋದರ ಅಳಿಯ ಅರಿಗನಿಗೆ ಬೋಧಿಸಿದ, ಬೋದನದ ಗುರು ಎಂಬುದು. ಇಂದ್ರನ ಜೊತೆಯಲ್ಲಿ ಅವನ ತಮ್ಮ ಬದ್ದೆಗನೂ ಬಂದಿದ್ದ. ಬದ್ದೆಗನೂ ಗುರುಗಳ ಕಿರಿಯ ಶಿಷ್ಯ ಪಂಪನನ್ನು ಪರಿಚಯ ಮಾಡಿಕೊಂಡ. ಅವರಲ್ಲಿ ಒಂದು ವಾರದೊಳಗೆ ತುಂಬ ಹಳಬರೆಂಬಷ್ಟು ಗೆಳೆತನ ಏರ್ಪಟ್ಟಿತು. ಅರಿಗನ ನೇಹಿಗನೆಂದು ತಿಳಿದ ಮೇಲಂತೂ ಪಂಪನನ್ನೂ ಬದ್ದೆಗ ಅರಮನೆಗೆಲ್ಲ ಬಲವಂತದಿಂದ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದ. ಚಕ್ರವರ್ತಿಗಳ ಪರಿಚಯ ಮಾಡಿಕೊಟ್ಟ. ಅರಮನೆಯ ಒಡ್ಡೋಲಗ ನೃತ್ಯಶಾಲೆ ಆಯುಧಾಗಾರ ಗಜಶಾಲೆ ಅಶ್ವಾಲಯ ಮೊದಲಾದುವನ್ನು ತೋರಿಸಿದ. ಹತ್ತು ದಿನಗಳಾದ ಮೇಲೆ ಮತ್ತೆ ದೇವೇಂದ್ರರು ಪಯಣಿಸಿದರು.

ಒಂಕುಂದದ ಸಮಸ್ತಜೈನ ಶ್ರಾವಕ ಶ್ರಾವಿಕೆಯರು ದೇವೇಂದ್ರನಿಗೆ ಭಕ್ತಿ ಪೂರ್ವಕ ಸ್ವಾಗತವಿತ್ತರು. ಒಂದು ವಾರ ಅಲ್ಲಿನ ಜೈನ ಮಠದಲ್ಲಿ ಅವರಿಂದ ಧರ್ಮೋಪದೇಶ ಕಾರ್ಯಕ್ರಮ ಏರ್ಪಡಿಸಿದ್ದರು. ಪಂಪ ತನ್ನ ದುಂದುಭಿ ಸಮಾನವಾದ ಗಂಭೀರ ಧ್ವನಿಯಿಂದ ಮಹಾಪುರಾಣವನ್ನು ವಾಚಿಸಿದ. ಒಂಕುಂದದ ಜನ ಆ ಕಿರಿಯನ ಓದುಗಾರಿಕೆಯಲ್ಲಿ ತಲ್ಲೀನರಾಗಿ ಆಲಿಸಿದರು. ಗುರುಗಳು ವಕ್ಖಾಣಿಸಿದರು. ಒಂಕುಂದಿಂದ ಕಿಸುವೊಳಲಿಗೆ ತಲಪಿದರು. ಕಿಸುವೊಳಲ ಸತ್ರದಲ್ಲಿ ಎರಡು ರಾತ್ರಿ ಮಧ್ಯಾಹ್ನ ಧರ್ಮೋಪದೇಶವಾಯಿತು. ಕಿಸುವೊಳಲಿಂದ ಮುಂದೆ ಹೊರಟು ಐಹೊಳೆ ಪಟ್ಟದಕಲ್ಲುಗಳಲ್ಲಿ ಕೂಡ ಎರಡೆರಡು ದಿನ ಇದ್ದರು. ಐಹೊಳೆಯಲ್ಲಿ ಆಚಾರ್ಯರು ಪಂಪನಿಗೆ ರವಿಕೀರ್ತಿಯ ಶಾಸನವನ್ನು ತೋರಿಸಿ ವಿವರಿಸಿದರು. ರವಿಕೀರ್ತಿ ಕಟ್ಟಿಸಿದ ಜಿನಬಸದಿಯಲ್ಲಿ ಒಂದು ದಿನ ಇದ್ದರು. ಐಹೊಳೆಯ ಜೈನಗುಹೆಯ ಶಿಲ್ಪಶ್ರೀಯನ್ನು ಮೆಚ್ಚಿದರು.

ಅಲ್ಲಿಂದ ಮರುದಿನ ಅರಣೋದಯಕ್ಕೆ ಹೊರಟು ಕೊಪಣಕ್ಕೆ ಬಂದರು. ಕೊಪಣನ ಜಿನಮಂದಿರಗಳ ಬೀಡು. ಅಲ್ಲಿನ ಬೆಟ್ಟಕ್ಕೆ ಕೊಪಣಾಚಲವೆಂದು ಭಕ್ತರು ಹೆಸರಿಟ್ಟಿದ್ದರು. ಶ್ರಾವಣ ಮಾಸಕ್ಕೆ ಇನ್ನೂ ಒಂದುವಾರವಿತ್ತು. ಅಲ್ಲಿರುವಾಗಲೇ ಗುರುಗಳಾದ ಗುಣನಂದಿಗಳು ಮೋಕ್ಷಗಾಮಿಗಳಾದ ಸುದ್ದಿ ತಿಳಿಯಿತು. "ಪಂಪ, ಈ ಸಲದ ಚಾತುರ್ಮಾಸವನ್ನು ಇಲ್ಲಿಯೇ ಕಳೆಯುವುದೆಂದು ತೋರುತ್ತದೆ" ಎಂದು ಗುರುಗಳು ಸೂಚಿಸಿದರು. ಕೊಪಣದ ಭವ್ಯವೃಂದ

ಬಂದು ಭಕ್ತಿಪೂರ್ವಕವಾಗಿ "ಹೇ ಸ್ವಾಮಿನ್, ತಾವು ಈ ಬರುವ ಚಾತುರ್ಮಾಸವನ್ನು ಇಲಿಯೇ ಕಳೆಯುವದಕ್ಕೆ ಎಲ್ಲಾ ಸಿದ್ಧತೆ ಮಾಡಿದ್ದೇವೆ" ಎಂದು ಪ್ರಾರ್ಥಿಸಿತು. ಅದರಂತೆ ಆಷಾಢ ಶುದ್ಧ ಚತುರ್ದಶಿ ಬುಧವಾರ ಸಂಜೆ ಮೊದಲನೇ ಜಾವದಲ್ಲಿ ಚಾತುರ್ಮಾಸ ವ್ರತಸ್ಥಾಪನೆಯಾಯಿತು. ಶ್ರೀ ೧೦೦೮ ಮಹಾವೀರ ಸ್ವಾಮಿಗೆ ಪಂಚಾಮೃತಾಭಿಷೇಕ ಮಾಡಿದರು. ಅನಂತರ ಶ್ರುತಗಣಧರರ ಪೂಜೆ ನಡೆಸಿದರು. ಕಡೆಗೆ ಶ್ರೀ ಆಚಾರ್ಯರ ಪೂಜೆ ನಡೆದು ಜಯಘೋಷದೊಡನೆ ಭವ್ಯರು ಆನಂದಿಸಿದರು. ಕೊಪಣನಗರಿಯಲ್ಲಿ ದೇವೇಂದ್ರರೂ ಶಿಷ್ಯರೂ ಬಂದಿಳಿದ ಸುದ್ಧಿ ಭೀಮಪನಿಗೆ ತಿಳಿಯಿತು. ಅವರು ಪುಲಿಗೆರೆ ಚಾತುರ್ಮಾಸ ಕಳೆದ ಮೇಲೆ ಬರುವುದೆಂದು ವದಂತಿ ಬಂದ ಕೂಡಲೇ, ತಾನೇ ಅಲ್ಲಿಗೆ ಹೊರಟ. ಅಬ್ಬಣಬ್ಬೆಯಂತೂ ಮಗನ್ನನು ಎಂದಿಗೆ ಕಂಡೇನೋ ಎಂದು ಕನಸು ನನಸುಗಳಲ್ಲೆಲ್ಲಾ ಹಂಬಲಿಸತೊಡಗಿದ್ದಳು. ಅವಳಿಗಿರುವಷ್ಟೇ ಭಿಮಪಯ್ಯನಿಗೂ ಆತುರವಿದ್ದರೂ ಅದನ್ನು ಹೊರಗೆ ತೋರಿಸಿಕೊಳ್ಳುತ್ತಿರಲಿಲ್ಲ. ಅಬ್ಬಣಬ್ಬೆ ಭೀಮಪರಿಬ್ಬರಿಗೂ ಇನ್ನೊಂದು ಆತುರವಿತ್ತು. ಪಂಪನಿಗೆ ತಮ್ಮ ಎರಡನೆಯ ಮಗ ಜಿನವಲ್ಲಭನನ್ನು ತೋರಿಸಿ 'ನೋಡು ನಿನ್ನ ತಮ್ಮ ಹೇಗಿದ್ದಾನೆ" ಎಂದು ಹೇಳುವ ಮನಸು.

* * * *

ಪಂಪನನ್ನು ಬೋದನದಲ್ಲಿ ಬಿಟ್ಟು ಬರುವ ಹೊತ್ತಿಗೆಲ್ಲಾ ಇಲ್ಲಿ ಅಣ್ಣಿಗೆರೆಯಲ್ಲಿ ಅಬ್ಬಣಬ್ಬೆಗೆ ಹೆರಿಗೆಯಾಗಿತ್ತು. ನಾಗವರ್ಮ ಅಪ್ಪಕಬ್ಬೆಯರು ಅಬ್ಬಣಬ್ಬೆಗೆ ಸಾಂತ್ವನಗೊಳಿಸಿದ್ದರು. "ನಿನ್ನ ಗಂಡ ದೂರದ ಊರಿಗೆ ಹೋಗಿದ್ರೆ, ಇಲ್ಲಿ ಏನಾಗುವುದೊ ಎಂದು ಹೆದರಬೇಡ ಅಬ್ಬಣಾ, ಯಕ್ಷ ಯಕ್ಷಿಯರ ರಕ್ಷೆಯಿದೆ. ಎಲ್ಲಾ ಸುಸೂತ್ರವಾಗಿ ನಡೆಯುವುದು." ಅಬ್ಬಣಬ್ಬೆ ಮೊದಲ ಸಲದಂತೆ ಈ ಬಾರಿಯೂ ಗಂಡುಮಗುವಿನ ತಾಯಿಯಾದಳು. ಕೊಂಡಕುಂದಾನ್ವಯದ ಜಯನಂದಿ ಮುನಿಗಳು ಅಪ್ಪಣೆ ಕೊಡಿಸಿದ ಪ್ರಕಾರ ಮಗುವಿಗೆ ಜಿನೇಂದ್ರ ವಲ್ಲಭನೆಂದು ಹೆಸರಿಟ್ಟರು. ವೆಂಗಿಪಳುವಿಗೆ ಹೋಗಿದ್ದ ಕೊಮರಯ್ಯನಿಗೆ ವರ್ತಮಾನ ಕಳಿಸಿದರು.

ಕೊಮರಯ್ಯ ಬಂದಮೇಲೆ ಮಗುವಿನ ಮೇಲ್ವಿಚಾರಣೆಯೆಲ್ಲಾ ಅವನಿಗೇ ಸೇರಿತು. "ಅಯ್ಯಾ ಜಿನ್ನಪ್ಪಾ, ಪಂಪ ಗುರುವಾಸ ಸೇರಿದಮೇಲೆ ನಾನೂ ದೀಕ್ಷೆ ತೆಗೆದುಕೊಳ್ಳುವಷ್ಟು ಬೇಸರವಾಗಿಬಿಟ್ಟಿತ್ತು. ಈಗ ನೀನು ಬಂದು ಮತ್ತೆ ಗೃಹಸ್ಥಾಶ್ರಮದಲ್ಲಿ ಇನ್ನು ನಾಲ್ಕು ದಿವಸ ಇರುವಂತೆ ಮಾಡಿದೆ" ಎಂದು ಹೇಳಿ

ಮಗುವನ್ನು ಮುದ್ದಿಸಿದನು. ಜಿನೇಂದ್ರವಲ್ಲಭನೆಂದು ನಾಮಕರಣವಾಗಿದ್ದರೂ ಜಿನವಲ್ಲಭನೆಂದೇ ಜನ ಕರೆಯತೊಡಗಿದರು. ಮನೆಯಲ್ಲಿ ಮಾತ್ರ ಜಿನ್ನಪ್ಪ ಎಂದು ಕರೆಯುವುದು ರೂಢಿಯಾಯಿತು. ಜಿನವಲ್ಲಭನಿಗೆ ಒಂದು ವರ್ಷ ತುಂಬಿದ್ದೇ ತಡ ಕೂಡಲೇ ಭೀಮಪ ಮಡದಿ ಮಕ್ಕಳನ್ನು ಪುಲಿಗೆರೆಗೆ ಕರೆದುಕೊಂಡು ಬಂದ. ಅವನಿಗೆ ಪುಲಿಗೆರೆಯ ದೊಡ್ಡ ಮನೆ, ಮಡದಿ ಮಗು ಇಲ್ಲದೆ ಶೂನ್ಯವೆನಿಸಿತ್ತು.

* * * *

ಜಿನವಲ್ಲಭ ಆರು ವರ್ಷದ ಮಗುವಾಗಿ ಬೆಳೆದುಬಿಟ್ಟಿದ್ದ. ಪಂಪನಿಗೆ ತನಗೊಬ್ಬ ತಮ್ಮ ಹುಟ್ಟಿ ಬೆಳೆಯುತ್ತಿರುವ ಸುದ್ದಿ ತಲುಪಿತ್ತು. ನೋಡುವ ತವಕ ಭೀಮಪ ಬಂದ ಕೂಡಲೇ ಹೊರಟುನಿಂತ. ತಂದೆಯೊಡನೆ ಪ್ರಯಾಣಕ್ಕೆ ಸಜ್ಜಾದ ಪಂಪನನ್ನು ನೋಡಿ ದೇವೇಂದ್ರರು ಮುಗುಳುನಗೆ ಬೀರಿದರು; "ಪಂಪಾ, ತಂದೆ ಬಂದೊಡನೆಯೇ ಗುರುವನ್ನು ಬಿಟ್ಟು ಹೊರಟುಬಿಟ್ಟೆಯಾ?" ಪಂಪ ಕ್ಷಣಕಾಲ ತಬ್ಬಿಬ್ಬಾದ, ಆದರೆ ಮರುಕ್ಷಣವೇ ಉತ್ತರಿಸಿದ "ಹಾಗಲ್ಲ ಗುರುದೇವಾ ಮಹಾಮಾತೃಶ್ರೀಯವರನ್ನೂ ತಮ್ಮನನ್ನೂ ನೋಡಿ ಎರಡು ದಿನ ಇದ್ದು ಬರುವೆ."

"ತಪ್ಪೇನಿಲ್ಲ ಮಗೂ ಹೋಗಿ ಬಾ, ಸನ್ಯಾಸ ಜೀವನವೇ ಬೇರೆ. ಸಂಸಾರವೇ ಬೇರೆ. ನಿನ್ನ ತಾಯಿ ಕೂಡ ಅಲ್ಲಿ ನಿನ್ನ ಬರವನ್ನೇ ಎದುರು ನೋಡುತ್ತಿರುತ್ತಾರೆ."

ಭೀಮಪ ಪಂಪ ದೇವೇಂದ್ರರಿಗೆ ಸಾಷ್ಟಾಂಗವೆರಗಿ ಹೊರಟರು. ದಾರಿ ಉದ್ದಕ್ಕೂ ಪಂಪ ಅಮ್ಮ ಹೇಗಿದ್ದಾರೆ ಅಪ್ಪಾಜಿ? ತಮ್ಮ ಹೇಗಿದ್ದಾನೆ ಅಪ್ಪಾಜಿ? ತಾತ ಎಲ್ಲಿದಾರೆ? ಅಣ್ಣಿಗೆರೆಗೆ ಹೋಗಿದ್ದಿರಾ? ಅಲ್ಲಿ ಅಜ್ಜಿ ತಾತ ಹೇಗಿದ್ದಾರೆ? ಬನವಾಸಿಗೆ ಹೋಗಿದ್ದಿರಾ? ಅಲ್ಲಿ ಆ ನದಿ ಈ ಮರ ಈ ಹಕ್ಕಿ ಪ್ರಾಣಿ ಹೇಗಿವೆ?" ಹೀಗೆ ಪ್ರಶ್ನೆಗಳನ್ನು ಮಳೆಗರೆದ. ಭೀಮಪನಿಗೆ ಮಗ ತುಂಬಾ ಬೆಳೆದವನಂತೆ ತೋರಿದ. ತನ್ನ ವಂಶದ ಬಳ್ಳಿಯನ್ನು ಅಪ್ಪ ಮುದ್ದಾಡಿದ. ಇನ್ನೂ ಮಾತನಾಡುತ್ತಿರುವಂತೆಯೇ ಪುಲಿಗೆರೆಗೆ ತಲುಪಿದ್ದರು. ಅಕ್ಕರೆಯ ತೆರೆಯಲ್ಲಿ ತೇಲಿ ಬಂದ ತಂದೆ ಮಕ್ಕಳಿಗೆ ದಾರಿ ಸವೆದದ್ದೇ ತಿಳಿಯಲಿಲ್ಲ.

ಅಬ್ಬಣಬ್ಬೆ ಮಗನ ಆಗಮನವನ್ನು ಬೆಗಿನಿಂದ ನಿರೀಕ್ಷಿಸಿ ನೂರುಬಾರಿ ಹೊರಬಾಗಿಲು ಹತ್ತಿರ ಬಂದು ಹೋದಳು. ಜಿನವಲ್ಲಭನಿಗೆ ಎಣ್ಣೆ ಸ್ನಾನ ಮಾಡಿಸಿಕೊಂಡು ಹೊಸ ಉಡಿಗೆ ತೊಡಿಗೆ ತೊಡಿಸಿದ್ದಳು. ಎರಡು ಮೂರು ಸಲ ಅವನು ಕೊಳೆ ಮಾಡಿಕೊಂಡು ಬಂದ. ಬೇರೆ ಬಟ್ಟೆ ಹಾಕಿದ್ದಾಯಿತು. ಗಾಡಿ ಬಂದು ಮನೆಯ ಮುಂದೆ ನಿಂತಿತು. ಒಂದೇ ನೆಗೆತಕ್ಕೆ ಪಂಪ ಹಾರಿ ಅರೆ

ನಿಮಿಷದಲ್ಲಿ ತಾಯಿಯ ಕಾಲಿಗೆ ನಮಸ್ಕರಿಸಿದ. ತಾಯಿ ಕೈ ಹಿಡಿದೆತ್ತಿ ಮೈದಡವಿದಳು. ಪಂಪನಿಗೆ ಅಮೃತಾಭಿಷೇಕ ಮಾಡಿದಂತಾಯಿತು. ಇಬ್ಬರಿಗೂ ಏನು ಹೇಳಬೇಕೋ ತೋಚಲಿಲ್ಲ. ತನ್ನುದ್ದ ಬೆಳೆದ ಮಗನನ್ನು ತಾಯಿ ಅಪ್ಪಿ ಮುದ್ದಾಡಿದಳು. ತೂಪಿರಿದಳು. ನೆತ್ತಿ ಮೂಸಿದಳು, ನೆಟ್ಟಿಗೆ ತೆಗೆದಳು, ದೃಷ್ಟಿ ನಿವಾಳಿಸಿದಳು, ಪೊರಕೆ ಕಡ್ಡಿ ಸುಟ್ಟಳು, ಬೊಟ್ಟಿಟ್ಟಳು, ಉಪ್ಪು ನೀವಳಿಸಿ ಒಲೆಗೆ ಹಾಕಿದಳು, ಏನು ಮಾಡಿದರೂ ಸಮಾಧಾನವಾಗದು. ಕಡೆಗೆ ಭೀಮಪನೇ ಮಾತಿಗಾರಂಭಿಸಿದ.

"ಅಬ್ಬಣ್ಣಾ, ಅಲ್ಲಿ ನೋಡು! ಜಿನ್ನಪ್ಪ ಬೆಪ್ಪಾಗಿ ಬೊಂಬೆಯಂತೆ ನಿಂತಿದ್ದಾನೆ. ಮೊದಲು ಊಟಕ್ಕೆ ಅಣಿ ಮಾಡು. ಆಮೇಲೆ ಮಾತನಾಡೋಣ". ಅಬ್ಬಣಬ್ಬೆ ಅಡಿಗೆ ಮನೆಗೆ ಹೋದಳು. ಪಂಪ ಜಿನವಲ್ಲಭನನ್ನು ಹತ್ತಿರಕ್ಕೆ ಕರೆದ. ಬೆರಗಾಗಿ ಕಣ್ಣರಳಿಸಿ ನಿಂತಿದ್ದ ಜಿನವಲ್ಲಭ ಹಿಂದು ಮುಂದು ನೋಡಿದ. ಪಂಪನೇ ಅವನ ಬಳಿಹೋಗಿ ಗಲ್ಲ ಹಿಡಿದು "ಲೋ ಪುಟ್ಟಾ! ನಾನು ಕಣೋ ನಿನ್ನಣ್ಣ" ಎಂದು ಮಾತಾಡಿಸಿದ. ಭೀಮಪ "ಜಿನ್ನಪ್ಪಾ, ಇವನೇ ನಿಮ್ಮಣ್ಣ, ಪಂಪ ಮರಿ" ಎಂದ. ಆಗ ಜಿನವಲ್ಲಭನಿಗೆ ಸಂಕೋಚ ಬಿಟ್ಟಿತು. "ಪಂಪಣ್ಣ" ಎಂದು ಮುದ್ದಾಗಿ ನುಡಿದ. ಪಂಪ ಅವನನ್ನು ಎತ್ತಿಕೊಂಡು ಗಿರ್ರನೆ ತಿರುಗಿಸಿ ಮೆಲ್ಲಗೆ ಇಳಿಸಿದ. ಕಚಗುಳಿ ಇಟ್ಟ. ಇಬ್ಬರೂ ಗಟ್ಟಿಯಾಗಿ ನಕ್ಕರು. ಅವರ ನಗೆಬುಗ್ಗೆಯನ್ನು ಮನೆ ಅನುರಣಗೊಳಿಸುತ್ತಿತ್ತು.

ಪಂಪ ಭಾವಿಯಿಂದ ನದಿಗೆ ಬಿಟ್ಟ ಮೀನಾದ. ತಮ್ಮನೊಡನೆ ಪುಲಿಗೆರೆಯಲ್ಲಾ ಸ್ವಚ್ಛಂದಲಹರಿಯೊಡನೆ ಸುತ್ತಿಬಂದ. ತನ್ನ ತಮ್ಮ ಕಲಿಯುತ್ತಿದ್ದ ಮಠಕ್ಕೆ ಹೋಗಿ ಬಂದ. ಮುಂಜಾವಿನಿಂದ ಸಂಜೆಯ ತನಕ ಪುಲಿಗೆರೆಯ ಬಸದಿಗಳನ್ನು ಒಂದೊಂದಾಗಿ ದರ್ಶಿಸಿ ಬಂದ. ಹದಿನೈದು ದಿನಗಳಲ್ಲಿ ಅಲ್ಲಿನ ಎಲ್ಲಾ ಜಿನಾಲಯಗಳನ್ನೂ ನೋಡಿ ಮುಗಿಸಿದ. ತನಗೆ ತಿಳಿದಂತೆ, ಬಸದಿಯ ಪ್ರಾಕಾರದಿಂದ ಗರ್ಭಗುಡಿಯ ತನಕ ಎಲ್ಲವನ್ನೂ ತಮ್ಮನಿಗೆ ತಿಳಿಸಿ ಹೇಳಿದ. ಚಿತ್ರಗಳನ್ನು ವಿವರಿಸಿದ. ದ್ವಾರಪಾಲಕರನ್ನೂ ಯಕ್ಷ ಯಕ್ಷಿಯರನ್ನೂ ತಮ್ಮನಿಗೆ ತೋರಿಸಿ ಪರಿಚಯಿಸಿದ. ಜಿನವಲ್ಲಭ, ತನಗೆ ಪಂಪ ಹೇಳಿದ್ದು ಏನೂ ತಿಳಿಯದಿದ್ದರೂ, ಅಣ್ಣನ ಅಗಾಧ ಜ್ಞಾನ ಕಂಡು ಬೆರಗಾದ. ಅವನ ದೃಷ್ಟಿಯಲ್ಲಿ ಪಂಪ, ತನ್ನ ಗುರುಗಳಂತೆ, ದೊಡ್ಡ ಪಂಡಿತನಾಗಿ ಕಂಡ.

ಪಂಪ ತನ್ನ ಸಮವಯಸ್ಕ ಗೆಳೆಯರನ್ನು ಕೂಡಿಕೊಂಡ. ಬನವಾಸಿಗೆ ಹೋಗಿ ಬಂದ. ಬಂಕಾಪುರದಲ್ಲಿ ಎರಡು ದಿನ ಇದ್ದು ಬಂದ. ಅಲ್ಲಿನ ೬೩

ಕಂಬದ ಬಸದಿಯ ಅದ್ಭುತ ರಚನೆಗೆ ತಲೆದೂಗಿದ. ತನ್ನ ತಂದೆ ಜೈನಧರ್ಮ ಸ್ವೀಕಾರ ಮಾಡಿದ ಶಾಂತಿನಾಥ ಬಸದಿಗೆ ಮೂರು ಬಾರಿ ಪ್ರದಕ್ಷಣೆ ಹಾಕಿ ಬಹು ಹೊತ್ತು ಕುಳಿತು ಧ್ಯಾನಿಸಿದ. ಜಿನಸ್ತುತಿಗಳನ್ನು ಗಮಕ ರೂಪವಾಗಿ ಹಾಡಿದ. ಗೆಳೆಯರೆಲ್ಲ ಪಂಪನ ಕಂಠಶ್ರೀಗೆ ಮಾರು ಹೋದರು. ಮತ್ತೆ ಮತ್ತೆ ಅವನಿಂದ ಮಹಾಪುರಾಣದಿಂದ, ಅಸಗ, ಶ್ರೀವಿಜಯ, ಗುಣವರ್ಮರ ಕಾವ್ಯಗಳಿಂದ ಶ್ಲೋಕಗಳನ್ನು ವೃತ್ತ ಕಂದಗಳನ್ನೂ ಹಾಡಿಸಿ ಆನಂದಿಸಿದರು.

ಬಂಕಾಪುರದಿಂದ ಪುಲಿಗೆರೆಗೆ ತರುಣ ಗುಂಪು ಹೊರಟಿತು. ದಾರಿಯಲಿ ಪಂಪನ ಸಾಹಸವನ್ನು ಬೆಳಕಿಗೆ ತರುವ ಘಟನೆಯೊಂದು ನಡೆಯಿತು. ಜಗತ್ತನ್ನೇ ಮರೆತು ಹದಿನಾರರ ಹರೆಯದ ಹುಡುಗರು ಕೇಕೆ ಹಾಕಿಕೊಂಡು ಬನವಾಸಿಯ ಬಿದಿರು ಮೆಳೆಯು ಕಾಡಿನ ನಡುವೆ ಹೊರಟಿದ್ದಾರೆ. ಇದ್ದಕ್ಕಿದ್ದ ಹಾಗೆ ಇಡೀ ಕಾಡೇ ನಡುಗಿ ಮರುನುಡಿದ ಕೂಗೊಂದು ಕೇಳಿಬಂತು. ಪಕ್ಕಕ್ಕೆ ತಿರುಗಿ ನೋಡುತ್ತಾರೆ, ದೊಡ್ಡ ಗುಡ್ಡವೇ ಮೈತಾಳಿ ನಿಂತಂತೆ ಒಂಟಿ ಸಲಗ ಸೊಂಡಿಲೆತ್ತಿ ಬಾಯಗಲಿಸಿ ಘೀಳಿಡುತ್ತಿದೆ. ಹುಡುಗರೆಲ್ಲಾ ಹೆದರಿ ದಿಕ್ಕಾಪಾಲರಾಗಿ ಓಡತೊಡಗಿದರು. ಯಾರಿಗೂ ಏನು ಮಾಡಬೇಕೆಂಬುದೇ ತೋಚಲಿಲ್ಲ.

ಪಂಪ ಸ್ವಲ್ಪ ಹೊತ್ತು ವಿಹ್ವಲನಾಗಿ ಅತ್ತಿತ್ತ ನೋಡಿದ. ಆದರೆ ಒಡನೆಯೇ ಕಾರ್ಯಪ್ರವೃತ್ತನಾದ. ಪಂಚನಮಸ್ಕಾರ ಪಠಿಸಿದ. ತಾನು ಗುರುಗಳ ಮುಖೇನ ಕಲಿತ ಗಜಶಾಸ್ತ್ರದ ಪ್ರಯೋಗಕ್ಕೆ ಇದೊಂದು ಅಗ್ನಿಪರೀಕ್ಷೆಯೆಂದು ತಿಳಿದ. ಇದರಲ್ಲಿ ಗೆಲ್ಲಬೇಕೆಂದು ಪಟ್ಟುಹಿಡಿದ. ಸಲಗದ ರೋಷ ಇಳಿಸಿ ವಶಪಡಿಸಿಕೊಳ್ಳಲು ಮುಂದಾದ. ಮಾವಟಿಗರಂತೆ ಧ್ವನಿಮಾಡಿದ. ಇಳಿಜಾರು ಇರುವ ಕಡೆ ಓಡಿದ. ಆನೆ ಇಳಿಜಾರಿನಲ್ಲಿ ಓಡುವುದು ನಿಧಾನ. ಹೀಗೆ ನಾಲ್ಕೈದು ಬಾರಿ ಮಾಡಿ ಕಡೆಗೆ ಅದನ್ನು ಹತೋಟಿಗೆ ತಂದು ಹತ್ತಿ ಕುಳಿತು ಪ್ರೀತಿಯಿಂದ ನೇವರಿಸಿದ. ಆನೆ ಪಂಪನ ಅಡಿಯಾಳಿನಂತಾಯಿತು.

ಸುದ್ದಿ ಪುಲಿಗೆರೆಯಲಿ ತಿಳಿಯಿತು. ಊರಿಗೆ ಊರೇ ನೋಡಲು ಓಡಿಬಂತು. ಪಂಪ ಆನೆಯ ಮೇಲೆ ಕುಳಿತೇ ಪುಲಿಗೆರೆ ಪ್ರವೇಶಿಸಿದ. ಎಲ್ಲರೂ ಹುಡುಗನ ಸಾಹಸವನ್ನು ಕೊಂಡಾಡುವವರೇ. ವೀರೋಚಿತ ಸ್ವಾಗತ ದೊರೆಯಿತು. "ಅಹಿಂಸಾ ತತ್ವವನ್ನೇ ಉಂಡು ಅರಗಿಸಿ ಲೋಕಕ್ಕೆ ಬೋಧಿಸುವ ಮುನಿಜನದ ಹರಕೆ ಆರೈಕೆಯಲ್ಲಿ, ಜೈನಗುರುಕುಲದಲ್ಲಿ ಬೆಳೆದರೂ ಪಂಪನ ಕಲಿತನ ಕುಂಠಿತವಾಗಿಲ್ಲ. ಬೆಳೆಯುವ ಪೈರು ಮೊಳಕೆಯಲ್ಲಿ"— ಬಗೆ ಬಗೆಯಾಗಿ ಕೊಂಡಾಡಿದರು. ಪುಲಿಗೆರೆಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಾಯಿತು.

ಹುಡುಗರು ಆಲದೆಲೆಯ ಕೊಂಬೆಗಳನ್ನೂ, ಕಬ್ಬಿನ ಜಲ್ಲೆಗಳನ್ನೂ, ಎಳೆಗರಿಕೆಯ ಮೆದೆಗಳನ್ನೂ ಕೈಯಲ್ಲಿ ಹಿಡಿದು ನಿಲ್ಲುತ್ತಿದ್ದರು. ಆನೆ ತನ್ನ ಸೊಂಡಲಿನಿಂದ ಅದನ್ನು ಮೆಲ್ಲಗೆ ತೆಗೆದುಕೊಂಡು ಸೊಂಡಿಲು ಮಡಿಚಿ ಬಾಯಿಗಿಡುತ್ತಿತ್ತು. ಮಕ್ಕಳೆಲ್ಲಾ ಗೆಲುವಿನಿಂದ ಮೊಗವರಳಿಸಿ ಓ ಎಂದು ಚಪ್ಪಾಳೆಯಿಕ್ಕುವರು. ತೆಂಗಿನಕಾಯಿ, ಬೆಲ್ಲ ತಂದು ತಿನ್ನಿಸುವರು.

ಭೀಮಪ ಅಬ್ಬಣಬ್ಬೆಯರು ತಮ್ಮ ಮನೆಯ ಮುಂದೆ ಮಗ ಆನೆ ಹತ್ತಿ ಕುಳಿತು ಬಂದಾಗ ನೋಡಿ ನೋಡಿ ತಣಿದರು. ಜಿನವಲ್ಲಭನಿಗೆ ತೋರಿಸಿದರು. ಆರತಿ ಮಾಡಿದರು. ನಗೆನೀರು ಕಣ್ಣಂಚಿನಲ್ಲಿ ಚೆಲ್ಲವರಿಯಿತು. ಜನ ಜಯಕಾರವಿಟ್ಟರು. ಹೆತ್ತ ಕರುಳು ನಲಿಯಿತು. ಪಂಪ ಮುಂದೆ ಆನೆಯನ್ನು ಬಸದಿಯತ್ತ ನಡೆಸಿದ. ಬಸದಿಗೇ ಅದನ್ನು ವಹಿಸಿಕೊಟ್ಟ. ಗೆಳೆಯರ ಗುಂಪಿನಲ್ಲಿ ಪಂಪ ವೀರ ನಾಯಕ!

ಶ್ರಾವಣ ಭಾದ್ರಪದ ಅಶ್ವಯುಜ ಕಾರ್ತೀಕ ಮಾಸಗಳು ಚಾತುರ್ಮಾಸದ ತಿಂಗಳುಗಳು. ನೋಡನೋಡುತ್ತಿರುವಂತೆಯೇ ನಾಲ್ಕು ತಿಂಗಳು ನಾಲ್ಕು ದಿನಗಳಂತೆ ಕಳೆದು ಹೋದುವು. ದೇವೇಂದ್ರ ಗುರುಗಳು ಪಂಪನಿಗೆ ಹೇಳಿಕಳಿಸಿದರು. ಭೀಮಪ ಹೋಗಿ ಬಿಟ್ಟು ಬಂದ. ಪಂಪನಿಗೆ ಮತ್ತೆ ಗುರುಗಳೊಡನೆ ಪ್ರವಾಸವೂ ಪಾಠ ಪ್ರವಚನವೂ ಮುಂದುವರೆಯಿತು. ಸಂಸ್ಕೃತದಷ್ಟೇ ಪ್ರಾಕೃತದಲ್ಲೂ ಪಾಠವಾಯಿತು. ರಾಜರಿಗೆ ವಿಶಿಷ್ಟವಾದ ಅನ್ವೀಕ್ಷಕೀ ತ್ರಯಿ ವಾರ್ತಾ ದಂಡನೀತಿ ಮೊದಲಾದವನ್ನೂ ಕಲಿಸಿದರು. ಕೌಟಿಲ್ಯನ ಅರ್ಥಶಾಸ್ತ್ರವನ್ನು ವಿವರಿಸಿದರು. ಚತುರ್ವೇದ ಷಡಂಗ ಪುರಾಣ ತರ್ಕ ಮೀಮಾಂಸಾ ಧರ್ಮಶಾಸ್ತ್ರಗಳ ಆಳವಾದ ಅಧ್ಯಯನ ನಡೆಯಿತು. ಜೊತೆಗೆ ಆಯುರ್ವೇದವನ್ನು ಸಿದ್ಧಾಂತ ಪ್ರಯೋಗಗಳ ಮೂಲಕ ಮನದಟ್ಟು ಮಾಡಿಕೊಟ್ಟರು. ಧನುರ್ವೇದ ಗಾಂಧರ್ವವೇದಗಳನ್ನೂ ಪರಿಚಯ ರೂಪವಾಗಿ ತಿಳಿಸಿಕೊಟ್ಟರು.

ಕೊಪಣದಲ್ಲಿ ಉಳಿದ ಜೈನ ಆಚಾರ್ಯರ ಸಾನ್ನಿಧ್ಯದ ಜತೆಗೆ ಹೊಸ ಶಿಕ್ಷಣವೂ ದೊರೆಯಿತು. ಪಂಪನಿಗೆ ನಾನಾ ಮುಖ ಪ್ರತಿಭಾಶಾಲಿಗಳ ಬೋಧನೆಯ ಲಾಭಲಭಿಸಿತು. ನಿಘಂಟು ನಿರುಕ್ತ ವ್ಯಾಕರಣ ಕಾವ್ಯ ಛಂದಸ್ಸು ಒಂದೊಂದರಲ್ಲೂ ನಿಷ್ಣಾತರಾದ ಪ್ರಕಾಂಡ ಪಂಡಿತಾಚಾರ್ಯರ ಮಂಡಲಿಯಲ್ಲಿ ಬೆರೆತ. ಅವರ ಪರಿಸರದಲ್ಲಿ ಬೆಳದ. ಗಂಧದ ಒಡನಾಟದಂತಾಯಿತು. ಅದಕ್ಕೆ ತಕ್ಕ ಸಂದರ್ಭವೂ ಒದಗಿ ಬಂತು.

ದೇವೇಂದ್ರರು ಭವ್ಯಶ್ರಾವಕ ಶ್ರಾವಿಕೆಯರ ಪ್ರಾರ್ಥನೆ ಮೇರೆಗೆ ಮತ್ತೆ

ಒಂಕುಂದ ಕಿಸುವೊಳಲು ಪಟ್ಟದಕಲ್ಲು ಐಹೊಳೆ ಮೊದಲಾದ ನಗರಗಳಿಗೆ ಹೋಗಿ ಬರಬೇಕಾಯಿತು. ಪಂಪನನ್ನು ಉಳಿದ ಆಚಾರ್ಯರ ವಾತಾವರಣದಲ್ಲೇ ಕೆಲವು ಕಾಲ ಕಲಿಯಲು ಅವಕಾಶ ಮಾಡಿಕೊಟ್ಟು ತಾವೊಬ್ಬರೇ ಹೋಗಿ ಬಂದರು. ಅಲ್ಲಿನ ಮಹಾಜನರು ನೆರೆಹೊರೆಯ ಗ್ರಾಮಗಳ ಗಾವುಂಡ ಮತ್ತು ಇತರ ಗ್ರಾಮಭೋಜಕರೂ ದೇವೇಂದ್ರರಿಗೆ ಭಕ್ತಿಗೌರವ ಮರ್ಯಾದೆಗಳನ್ನು ನಿವೇದಿಸಿದರು. ಹಲವಾರು ಸಾಮಂತರೂ ಮಂಡಲೇಶ್ವರರೂ ಬಂದು ಪೂಜಿಸಿ ಹೋದರು.

ಚೈತ್ರಮಾಸ ಮುಗಿಯುವ ಹೊತ್ತಿಗೆ ಗುರು ಶಿಷ್ಯರು ಪುಲಿಗೆರೆಗೆ ಬಂದರು. ಅಲ್ಲಿ ವೈಶಾಖಪೂರ್ತಿ ಇದ್ದರು. ಜೇಷ್ಠಮಾಸದಲ್ಲಿ ಬನವಾಸಿ ಮಂಡಲದ ಮೂಲಕ ಹೊರಟರು. ಬಂಕಾಪುರ ತಲುಪಿದರು. ಏಳು ದಿನ ಇದ್ದರು. ಅಲ್ಲಿಂದ ಸಮೀಪದ ನಾಗರಖಂಡಕ್ಕೆ ಹೋಗಿ ಬಂದರು. ಗುರುಗಳು ಪಂಪನಿಗೆ ಅದರ ಪರಿಚಯ ನಿರೂಪಿಸಿದರು; "ಪಂಪ, ಈ ನಾಗರ ಖಂಡವನ್ನು ಎರಡೂವರೆ ದಶಕಗಳ ಹಿಂದೆ ಜಿನಭಕ್ತನಾದ ನಾಗಾರ್ಜುನ ಆಳಿದ. ಅವನು ರಾಷ್ಟ್ರಕೂಟರ ಸ್ವಾಮಿಭಕ್ತ ಕೂಡ. ಇಮ್ಮಡಿ ಕೃಷ್ಣರಾಜನಿಗೆ ಅನೇಕ ಯುದ್ಧಗಳಲ್ಲಿ ನೆರವಾದ ಮಾಂಡಲೀಕ ನಾಗಾರ್ಜುನ, ಕಾದಾಡುತ್ತಾ ಪ್ರಭು ಸೇವೆಗೆ ಶರೀರವನ್ನು ತೆತ್ತ ಕಲಿಯಾತ."

"ನಾಗಾರ್ಜುನನ ಮಡದಿ ಜಕ್ಕಿಯಬ್ಬೆ. ಗಂಡನಿಗೆ ತಕ್ಕ ಹೆಂಡತಿ. ಜಕ್ಕಿಯಬ್ಬೆ ಅಪರೂಪಳಾದ ವೀರ ಮಹಿಳೆ. ಪತಿಯ ಪರೋಕ್ಷದಲ್ಲಿ ನಾಗರ ಖಂಡವನ್ನು ಮಂಡಲಾಧಿಪಳಾಗಿ ಇಪ್ಪತ್ತು ವರ್ಷ ಆಳಿದಳು. ಜಕ್ಕಿಯಬ್ಬೆ ಮಹಾಜಿನಭಕ್ತಗಳಾಗಿದ್ದು ತನ್ನ ನಾಡಿನಲ್ಲಿ ಧರ್ಮಪ್ರಭಾವನೆಯೆಸಗಿದಳು. ನಾವು ನೋಡಿಬಂದ ಮೂರು ಚೈತ್ಯಾಲಯಗಳಲ್ಲಿ ಒಂದು ನಾಗಾರ್ಜುನ ಕಟ್ಟಿಸಿದ್ದು, ಇನ್ನೆರಡು ಜಕ್ಕಿಯಬ್ಬೆ ನಿರ್ಮಿಸಿದ್ದು, ಅಲ್ಲಿ ಕಾಣುವ ಅರಮನೆ ಆ ಆದರ್ಶ ದಂಪತಿಗಳ ಪಾರ್ಥಿವ ಶರೀರ ಬಾಳಿದ ಭವ್ಯಬೀಡು."

ಬನವಾಸಿಯಿಂದ ಪೊಂಬುಚ್ಚಕ್ಕೆ ಆಗಮಿಸಿದರು. ಅಲ್ಲಿ ಪದ್ಮಾವತೀದೇವಿಯವರ ಹಾಗೂ ಲೊಕ್ಕಿಗಿಡದ ಮಹಾತ್ಮ್ಯೆಯನ್ನೂ ಪಂಪನಿಗೆ ವಿವರಿಸಿದರು. ಮುತ್ತಿನ ಕೊಳ ತೋರಿಸುತ್ತಾ "ಮನುಷ್ಯ ಸ್ವಾರ್ಥಿಯಾದರೆ ದೈವ ಧರ್ಮ ಎಲ್ಲವನ್ನೂ ಮರೆಯುತ್ತಾನೆ ಎಂಬುದನ್ನು ಈ ಮುತ್ತಿನ ಕೆರೆ ಸಾರುತ್ತಿದೆ" ಎಂದು ತಿಳಿಸಿದರು. ಅಲ್ಲಿಂದ ಹೊರಟು ಕುಂದಾದ್ರಿ ಸೇರಿದರು. "ಕುಂದಕುಂದಾಚಾರ್ಯರು ತಪಸ್ಸು ಮಾಡಿದ ಸ್ಥಳಗಳಲ್ಲಿ ಕುಂದಾದ್ರಿಯೂ ಒಂದು. ಅವರಿಂದಲೆ ಈ ಬೆಟ್ಟಕ್ಕೆ ಕುಂದಾದ್ರಿ ಎಂಬ ಹೆಸರು ಬಂತು. ನಿಸರ್ಗದ

ಒಡಲಲ್ಲಿ ಈ ಪ್ರಶಾಂತ ನಿಲ್ದಾಣ ಎಷ್ಟು ರಮ್ಯವಾಗಿದೆ. ನೋಡು. ಯತಿಗಳಿಗೂ ಕುಂದಾದ್ರಿ ಕೈ ಬೀಸಿ ಕರೆಯುವಂತಿದೆ. ಭವದಲ್ಲಿದ್ದೂ ಅಭವದತ್ತ ಸಾಗಿದ ಭವ್ಯ ಜೀವದ ಉರ್ಧ್ವಯಾತ್ರೆಯಂತೆ ಇದರ ಎತ್ತರ ಬಿತ್ತರ ಕಂಗೊಳಿಸುತ್ತದೆ"— ಗುರುಗಳ ವಿವರಣೆ ಉತ್ಪ್ರೇಕ್ಷೆಯಲ್ಲವೆಂದು ಕಣ್ಣಾಡಿಸಿದ ಪಂಪನಿಗೆ ಮನವರಿಕೆಯಾಯಿತು.

ಕುಂದಾದ್ರಿಯಲ್ಲಿ ಮೂರು ದಿವಸ ಇದ್ದು ಮನಸ್ಸಿಲ್ಲದೆ ಮತ್ತೆ ಪ್ರಯಾಣ ಬೆಳೆಸಿದ್ದಾಯಿತು. ಘಟ್ಟವಿಳಿದು ಮೂಡಬಿದರೆಗೆ ಬಂದರು. ಮೂಡಬಿದರೆಯಲ್ಲಿ ಶ್ರಾವಕರೆಲ್ಲ ಬಹುಪಾಲು ವರ್ತಕರು, ರತ್ನಪಡಿಗಳು. ಅವರುಗಳು ದೇವೇಂದ್ರರಿಗೂ ಪಂಪನಿಗೂ ಗುರುಬಸದಿಯಲ್ಲಿ ಇಳಿಸಿದರು. ಸಿದ್ಧಾಂತ ಬಸದಿಯಲ್ಲಿ ಧರ್ಮೋಪದೇಶ ಪುರಾಣಶ್ರವಣ ಏರ್ಪಾಟಾಯಿತು. ನೆರೆಯ ಕರಾವಳಿಯ ಸಣ್ಣ ಪುಟ್ಟ ರಾಜರೆಲ್ಲ ಜೈನ ಮತಾವಲಂಬಿಗಳು. ಅವರೆಲ್ಲ ದೇವೇಂದ್ರ ದರ್ಶನ ಪಡೆದು ಪೂಜಿಸಿ ಹೋದರು. ಮೂಡಬಿದರೆಯಲ್ಲಿ ಪ್ರವಚನ ಕೊಡುತ್ತಾ ದೇವೇಂದ್ರರು: "ನಿಮ್ಮಲ್ಲಿ ಹೆಚ್ಚು ಜನ ವ್ಯಾಪಾರದಲ್ಲಿ ತೊಡಗಿದ್ದೀರಿ. ಜೀವನ ನಿರ್ವಹಣೆಯಲ್ಲಿ ವಾಣಿಜ್ಯ ವ್ಯವಹಾರ ಪ್ರಧಾನವಾದುದು, ನಿಜ. ಆದರೆ ಲಾಭಗಳಿಕೆಯೊಂದೇ ಅದರ ಗುರಿಯಾಗಬಾರದು. ಜನತೆಯ ಬದುಕು ಸುಗಮವಾಗಿ ಸಾಗಲು ಸಹಕಾರಿಯಾಗುವಂತಿರಬೇಕು. ವ್ಯಾಪಾರ ಸಹಜವೆನಿಸುವ ಆಮಿಷಕ್ಕೆ ಮೋಸಕ್ಕೆ ಒಳಗಾಗದೆ ಸತ್ಯದ ಚೌಕಟ್ಟಿನಲ್ಲೇ ಬಾಳಿ" ಎಂದು ಸೂಚಿಸಿದರು.

ಮೂಡಬಿದರೆಯಿಂದ ಕರಾವಳಿಯ ತೀರದ ಕೆಲವು ಪಾಳೆಯಪಟ್ಟುಗಳ ಶ್ರಾವಕ ವೃಂದವನ್ನು ಹರಸುತ್ತಾ ಕಡೆಗೆ ಕಳ್ವಪ್ಪಿಗೆ ಬಂದರು. ತೌರನ್ನು ಹೊಕ್ಕ ಮಕ್ಕಳಂತೆ ಕಳ್ವಪ್ಪು ಪ್ರವೇಶಿಸಿದರು. ಕಳ್ವಪ್ಪಿನ ಬೆಟ್ಟ ದರ್ಶನ ಪಡೆದು ಮಠದ ಬಸದಿಯಲ್ಲಿ ವಸತಿ ಮಾಡಿದರು. ಸತ್ರದಲ್ಲಿ ನಿತ್ಯ ಆಹಾರ ಸ್ನಾನಾದಿಗಳಿಗೆ ವ್ಯವಸ್ಥೆಯಾಯಿತು. ಪಂಪನಿಗೆ ದೇವೇಂದ್ರರು ನಿತ್ಯ ಕಳ್ವಪ್ಪಿನ ಬೆಟ್ಟದ ಹಿರಿಮೆಯನ್ನು ಒಂದೊಂದಾಗಿ ಪರಿಚಯ ಮಾಡಿಕೊಡತೊಡಗಿದರು. ಅಲ್ಲಿನ ನೂರಾರು ಶಿಲಾಶಾಸನಗಳನ್ನು ಓದಿಕೊಟ್ಟರು. ಚಂದ್ರಗುಪ್ತ ಭದ್ರಬಾಹುಗಳೊಡನೆ ಬಂದಿಳಿದ ತಾಣವನ್ನು ತೋರಿಸಿದರು. ಭದ್ರಬಾಹು ಭಟಾರರು ತಪಸ್ಸು ಮಾಡಿ ಮೋಕ್ಷಕ್ಕೆ ಹೋದ ಪವಿತ್ರಸ್ಥಳವನ್ನು ಪಂಪ ಪೂಜಿಸಿದ. ಅವರಿಗೆ ನಿರ್ಮಿಸಿದ ನಿಸಿದಿಗೆಯನ್ನು ಓದಿ ವಂದಿಸಿದ. ಚಂದ್ರಗುಪ್ತ ದೀಕ್ಷಾ ನಂತರ ಕುಳಿತು ತಪವೆಸಗಿದ ಗುಹೆಯನ್ನೂ, ಚಂದ್ರಗುಪ್ತ ಬಸದಿಯನ್ನೂ ಸುತ್ತುಹಾಕಿ ಬಂದ. ದೇವೇಂದ್ರರು ಇತರ ನಿಸದಿಗೆಗಳನ್ನು ಓದಿ ತಿಳಿದರು. ಲೌಕಿಕದ ಸುಖ ಜೀವನ ತೃಣಸದೃಶವೆಂದು ನಿರಾಕರಿಸಿ

ದೇವಲೋಕಕ್ಕೆ ಸಂದ ಮುನಿಪ್ರವರರ ಚರಿತೆಯನ್ನು ಬಿತ್ತರಿಸಿದರು.

"ಪಂಪ, ಈ ಕಳ್ವಪ್ಪು ಕರ್ನಾಟಕದ ಇತಿಹಾಸಕ್ಕೆ ಉಗಮಕೇಂದ್ರ. ಜೈನಧರ್ಮದ ಮೂಲಚೂಲ ಕುರಿತು ಪ್ರಸ್ತಾಪಿಸಬೇಕಾದರೆ ಇಲ್ಲಿಂದಲೇ ಆರಂಭಿಸಬೇಕಾಗುತ್ತದೆ. ಕನ್ನಡನಾಡು ಹೇಗೆ ಜಿನಧರ್ಮಕ್ಕೆ ಆವಾಸಸ್ಥಾನವಾಗಿದೆಯೆಂಬುದನ್ನು ಇಲ್ಲಿನ ಒಂದೊಂದು ಅಂಗಲವೂ ಸಾರುತ್ತದೆ. ಭೋಗಕ್ಕಿಂತ ತ್ಯಾಗ ವೈರಾಗ್ಯ ದೊಡ್ಡದೆಂಬ ಸಂದೇಶ ಇಲ್ಲಿನ ಗಾಳಿಯಲ್ಲಿ ಸುಳಿಯುತ್ತಿದೆ. ಕಳ್ವಪ್ಪಿಗೆ ಕಟವಪ್ರವೆಂಬ ಸಂಸ್ಕೃತ ಹೆಸರು ಬಂದಿದೆ. ವೆಳ್ಗೊಳ ಬೆಳ್ಗೊಳವೆಂಬುದು ಇತ್ತೀಚಿನ ಹೆಸರು. ಇದೊ ಅಲ್ಲಿ ಕಾಣುವ ದೊಡ್ಡ ಬೆಟ್ಟ ಮತ್ತು ಈ ಚಿಕ್ಕ ಬೆಟ್ಟಗಳ ನಡುವೆ ನೋಡು. ದೈವಕೃಪೆ ನೀರಾಗಿ ಕರಗಿರುವ ಆ ಕೊಳ ಅದರ ನಿರ್ಮಲೋದಕದಿಂದಾಗಿ ವೆಳ್ಗೊಳ, ಬೆಳ್ಗೊಳ ಎಂಬ ಹೆಸರು ರೂಢಿಗೆ ಬರಲು ಕಾರಣ.

ಕಳ್ವಪ್ಪು ಶ್ರಮಣರ ಆಗರ. ಭವ್ಯಜೀವಿಗಳ ಬಿಡಾರ. ಎಷ್ಟೊಂದು ಚೇತನಗಳು ಇಲ್ಲಿ ಮುಕ್ತಿಕಂಡಿವೆ! ಇದು ಸಂಸ್ಕೃತಿ ಕಲೆಗಳ ಕೇಂದ್ರ ಕೂಡ. ಸಾಹಿತ್ಯಕ್ಕೆ ಇಲ್ಲಿ ಪ್ರೋತ್ಸಾಹ ದೊರೆತಿದೆ. ಇಲ್ಲಿನ ಗುರುಕುಲ ಹಳೆಯದೂ ಹಿರಿದೂ ಆಗಿದೆ. ಯತಿವರೇಣ್ಯರೂ ಕ್ಷುಲ್ಲಕರೂ ನಿರ್ಗ್ರಂಥರೂ ಐಲಕರೂ ಶ್ರಾವಕ ಶ್ರಾವಿಕೆಯರೂ ಆರ್ಯಿಕೆಯರೂ ಇಲ್ಲಿ ದೀಕ್ಷೆ ಪಡೆದಿದ್ದಾರೆ, ತಪವೆಸಗಿದ್ದಾರೆ, ಸಲ್ಲೇಖನ ವ್ರತಧಾರಿಯಾಗಿದ್ದಾರೆ. ಸ್ವರ್ಗಾಗ್ರವನ್ನೇರಿದ್ದಾರೆ. ಅವರ ಸಂಚಾರದಿಂದ ಪಾವನವಾದ ಪವಿತ್ರ ನೆಲವಿದು. ಅತ್ತ ಕೊಪಣಾಚಲ, ಇತ್ತ ಕಳ್ವಪ್ಪು–ಇವು ಜಿನಶಾಸನ ದೇವತೆಯ ಎರಡು ಕಣ್ಣುಗಳು. ತೆಂಕಣ ಬಡಗಣ ಮೂಡಣ ಪಡುವಣ–ಎಲ್ಲಾ ಕಡೆಗಳಿಂದ ಇಲ್ಲಿ ಭಕ್ತಾದಿಗಳು ನಿತ್ಯ ಬಂದು ಹೋಗುತ್ತಿರುತ್ತಾರೆ. ಜಿನಧರ್ಮದ ಪ್ರಭಾವನೆ ಮಾಡುವಲ್ಲಿ ಕಳ್ವಪ್ಪಿನ ಪಾತ್ರ ಪ್ರಮುಖ."

ದೇವೇಂದ್ರರು ದಾರಿದೀಪವಾಗಿ ನಿಂತು ಕಳ್ವಪ್ಪಿನ ಕತೆಯನ್ನೆಲ್ಲ ಸುರುಳಿಬಿಚ್ಚಿ ಬಿಡಿಯಾಗಿ ಮನದಟ್ಟು ಮಾಡಿಕೊಟ್ಟರು. ಪಂಪನಿಗೆ ತಾನು ಎಂಥ ಸ್ಥಳದಲ್ಲಿದ್ದೇನೆಂಬ ಅರಿವಾಗಿ ಆನಂದ ವಿಸ್ಮಿತನಾದ. ತಿಂಗಳುಗಳು ಉರುಳಿಹೋದದ್ದು ತಿಳಿಯಲೇ ಇಲ್ಲ. ಮತ್ತೆ ಚಾತುರ್ಮಾಸ ಬಂತು. ಅದನ್ನು ಕಳ್ವಪ್ಪಿನಲ್ಲೇ ನಡೆಸಲಾಯಿತು. ಅಂದು ವ್ರತಸ್ಥಾಪನೆಯಾದ ಸಂಜೆ____

ಅಲ್ಲಿನ ಗುರುಕುಲದ ವಿದ್ಯಾರ್ಥಿಗಳಿಂದ ಆದಿ ತೀರ್ಥಂಕರನ ಪಂಚಕಲ್ಯಾಣ ನೃತ್ಯ ನಾಟಕ ನಡೆಯಿತು. ಗರ್ಭಾವತರೋತ್ಸವ ಜನ್ಮಾಭಿಷೇಕೋತ್ಸವ ಅಭಿನಯ ಸಿದ್ಧಾಯಿತು. ಇನ್ನು ಪರಿನಿಷ್ಕ್ರಮಣ ಕಲ್ಯಾಣ. ಆದಿದೇವನ ಆಸ್ಥಾನ. ದೇವೇಂದ್ರನ

ಮುಂದಾಳುತನ. ದೇವನರ್ತಕಿ ನೀಲಾಂಜನೆಯ ನರ್ತನ. ಆದಿದೇವ ಭೋಗ ಮಗ್ನನಾಗಿದ್ದಾನೆ. ಅವನನ್ನು ಎಚ್ಚರಿಸಿ ಭೋಗದ ನೀರಗುಳ್ಳೆತನವನ್ನು ಸಾರಬೇಕಾಗುತ್ತದೆ. ನೀಲಾಂಜನೆ ಅಚ್ಚರಸಿ ನಚ್ಚಣಿ. ಆದರೂ ಆಯು ಮುಗಿಯುತ್ತದೆ. ಆಗ ಅವಳು ಅದೃಶ್ಯಳಾಗುವ ಪ್ರಸಂಗ. ಎಣೆಯಿಲ್ಲದ ಚೆಲುವು ಕಣ್ಣೆದುರಿನಲ್ಲೇ ಕರಗಿ ಮರೆಯಾಗುವುದನ್ನೂ, ಸಂಸಾರದ ಅಸಾರತೆಯನ್ನೂ ನೃತ್ಯ ರೂಪಕದಲ್ಲಿ ಪರಿಣಾಮಕಾರಿಯಾಗಿ ಪ್ರದರ್ಶಿಸಿದರು. ಪಂಪ ತನ್ಮಯನಾಗಿ ನೋಡಿದ. ಪಂಚಕಲ್ಯಾಣಗಳ ವಿಧಿ ವಿಧಾನಗಳ ಪ್ರತಿಪಾದನೆ ನೆನಪಿನೋವರಿಯಲ್ಲಿ ಅಚ್ಚಳಿಯದೆ ನಿಂತಿತು.

ಪಂಪನಿಗೆ ಕನ್ನಡ ನಾಡಿನ ಚರಿತ್ರೆಯ ವಿಚಾರ ಗುರುಕುಲದಲ್ಲಿ ಕಲಿತುದಕ್ಕಿಂತ ಹೆಚ್ಚಾಗಿ ಕಳ್ವಪ್ಪಿನಲ್ಲಿ ತಿಳಿಯಿತು. ಕಟವಪ್ರದ ಬುಡದಿಂದ ತುದಿ ತನಕ ಅಂಗುಲಂಗುಲವೂ ಶಾಸನಗಳಿಂದ ಇಡಿಕಿರಿದಿತ್ತು. ಕನ್ನಡ ನಾಡಿನಲ್ಲಿ ಆಗಿಹೋದ ರಾಜಮನ್ನೆಯರ ಪ್ರಜೆಗಳನೇಕರ ಪರಿಚಯ ಆ ಶಾಸನಗಳ ಮೂಲಕ ಉಂಟಾಯಿತು. ಅವುಗಳಲ್ಲಿ ಪಂಪನ ಮನಸ್ಸು ಮೆಚ್ಚಿಕೊಂಡಿದ್ದ ಗಂಗವಂಶದ ದೊರೆಗಳು ಜಿನಧರ್ಮದ ಅನುಯಾಯಿಗಳಾಗಿ ತೋರುತ್ತಾ ಬಂದಿರುವ ಅಖಂಡ ನಿಷ್ಠೆ. ಗಂಗಮನೆತನದ ಹುಟ್ಟು ಬೆಳವಣಿಗೆ ಕುರಿತು ಕುತೂಹಲವಾಯಿತು. ಗುರುಗಳನ್ನು ಕೇಳಿದ. ಅವರು ಮಹಾಬಲಯ್ಯನ ಕಡೆ ಬೆರಳು ಮಾಡಿದರು. ಸಂಜೆ ಆಹೋಸವಾದ ಮೇಲೆ ಇಬ್ಬರೂ ಕಲೆತರು. ಮಹಾಬಲಯ್ಯ ಮೈಯೆಲ್ಲಾ ಬಾಯಾಗಿ ಹೇಳಿದ—

“ಸಮ್ಯಕ್ತ್ವಸಂಪನ್ನ ಗಂಗಕುಲ ಜೈನಧರ್ಮವನ್ನೇ ನೆಮ್ಮಿ ನಿಂತಿತ್ತು. ಕಾನೂರುಗಣದ ಸಿಂಹನಂದಿ ಎಂಬ ಜಿನಮುನಿಗಳ ಅನುಗ್ರಹದಿಂದ ಕಡಪಾ ಪ್ರದೇಶದ ಪೆರೂರಿನಲ್ಲಿ ದಡಿಗ ಮತ್ತು ಮಾಧವರಿಂದ ಗಂಗವಾಡಿ ತೊಂಭತ್ತಾರು ಸಾವಿರ ಉಗಮವಾಯಿತು. ಅದರ ಹುಟ್ಟಿಗೆ ಕಾರಣರಾದ ಸಿಂಹನಂದಿಗಳು ಕರ್ಣಿಕಾರ ಹೂಗಳ ದಳಗಳಿಂದ ಕಿರೀಟ ಮಾಡಿ ಶಿಷ್ಯರ ತಲೆಯ ಮೇಲಿಟ್ಟು 'ದಡಿಗಾ, ಇನ್ನು ಮುಂದೆ ನಿನ್ನ ಹೆಸರು ಕೊಂಗಣಿವರ್ಮ ಎಂದು. ನಿನ್ನ ಮಗ ಮಾಧವ ಯುವರಾಜನಾಗಿ ನಿನ್ನ ನೆರವಿಗೆ ನಿಲ್ಲುತ್ತಾನೆ. ಕನ್ನಡ ನಾಡನ್ನು ಚೆನ್ನಾಗಿ ಆಳಿ. ಜನತೆಗೆ ಅನಿಷ್ಟವಾದುದನ್ನು ಎಂದೂ ಮಾಡಬೇಡಿ. ಎಂದಿಗೂ ಕೊಟ್ಟ ಮಾತಿಗೆ ತಪ್ಪಬೇಡಿ. ಜಿನಶಾಸನವನ್ನು ಮೀರಬೇಡಿ. ಕಂಡವರ ಹೆಣ್ಣನ್ನು ಕಾಮಿಸಬಾರದು. ಮಾಂಸಮದ್ಯಗಳನ್ನು ಸೇವಿಸಕೂಡದು. ಕೆಟ್ಟವರೊಡನೆ ಕೂಡಬೇಡಿ. ಬೇಡಿದವರಿಗೆ ಇಲ್ಲವೆನ್ನದೆ ಕೈಲಾದುದನ್ನು ನೀಡಬೇಕು. ಕಳದಿಂದ

ಕಾಲು ತೆಗೆಯದೆ ಹಗೆಗಳನ್ನು ಎದುರಿಸಬೇಕು. ಕಲಿತನ ನಿಮಗೆ ಕೈದುವಾಗಲಿ' ಎಂದು ಹರಸಿದರು. ಅವರಿತ್ತ ನವಿಲುಗರಿಯ ಪಿಂಛ ಗಂಗರ ಪತಾಕೆಯಾಯಿತು.

"ಸಿಂಹನಂದಿ ಯತಿಗಳ ಹರಕೆ ಹೊತ್ತು ಹುಟ್ಟಿದ ಗಂಗವಾಡಿ ಬೇಗ ಬೇಗ ದಾಂಗುಡಿಯಿಟ್ಟಿತು. ಕುವಲಾಪುರ ಮೊದಲು ಅವರ ರಾಜಧಾನಿಯಾಗಿತ್ತು. ಅದರ ಬಳಿಯ ನಂದಿಗಿರಿಯಲ್ಲಿ ಬಲವಾದ ಕೋಟೆಕಟ್ಟಿಕೊಂಡಿದ್ದರು. ಆದರೆ ಮಾಧವನಾದ ಮೇಲೆ ಬಂದ ಹರಿವರ್ಮನ ಕಾಲಕ್ಕೆ ಗಂಗರ ರಾಜಧಾನಿ ಕುವಲಾಲದಿಂದ ತಲವನಪುರಕ್ಕೆ ಬದಲಾಯಿತು. ಇದಕ್ಕೆ ತಲಕಾಡೆಂಬುದು ರೂಢಿಯ ಹೆಸರು. ಕಳೆದ ಇನ್ನೂರು ವರ್ಷಗಳಿಂದ ಅವರು ತಲಕಾಡಿನ ಗಂಗರೆಂದೇ ಹೆಸರು ಗಳಿಸಿದ್ದಾರೆ. ವಿಷ್ಣುಗೋಪ, ಇಮ್ಮಡಿ ತಡಂಗಾಲ ಮಾಧವ ಆಳಿದರು. ತಡಂಗಾಲ ಮಾಧವ ಮುದುಕೊಟ್ಟೂರು ವಿಷಯದಲ್ಲಿನ ಪೆರ್ಬೊಳಲು ನಗರದ ಚೈತ್ಯಾಲಯಕ್ಕೆ ಆಚಾರ್ಯ ವೀರದೇವರ ಹಿತನುಡಿಯಂತೆ ಕುಮಾರಪುರವನ್ನೇ ದತ್ತಿಯಾಗಿ ಬಿಟ್ಟ. ಅವನ ಮಗ ಕೊಂಗುಣಿ ಅವಿನೀತಿ ಎಳೆಯನಿರುವಾಗಲೇ ಪಟ್ಟ ಹತ್ತಿದನು. ರಾಜಗುರು ವಿಜಯಕೀರ್ತಿಗಳ ಹರಕೆ ಅವನನ್ನು ಬಹುಕಾಲ ಕಾಪಾಡಿತು. ವಿಜಯಕೀರ್ತಿಗಳ ಶಿಷ್ಯತ್ವದಿಂದ ಸ್ವಯಂ ದೊಡ್ಡ ಪಂಡಿತನಾದ ಅವಿನೀತಿ ಜಿನ ಧರ್ಮೋದ್ಧಾರಕನಾದ. ಅವಿನೀತನ ಮಡದಿಯರಲ್ಲೊಬ್ಬಳು ಪುನ್ನಾಡಿನ ರಾಜಕುಮಾರಿ ಜೇಷ್ಠಾ. ಮಹಾಜ್ಞಾನಿಯಾದ ದುರ್ವಿನೀತ ಮಹಾಯೋಧನೂ ಮಹಾತ್ಯಾಗಿಯೂ ಆಗಿದ್ದ. ಅವನ ಶಾಸ್ತ್ರ ಸಾಹಿತ್ಯ ಪರಿಣತಿಯ ಖ್ಯಾತಿ ಕೇಳಿ ಭಾರವಿ ಕವಿ ಕೂಡ ಆಸ್ಥಾನಕ್ಕೆ ಬಂದು ಹೋಗಿದ್ದ. ಪೂಜ್ಯಪಾದರ ಶಿಷ್ಯತ್ವಲಾಭ ಬಾಲ್ಯದಲ್ಲಿ ಒಂದೆರಡು ವರ್ಷ ದುರ್ವಿನೀತನಿಗೆ ದೊರೆತಿತ್ತು.

"ದುರ್ವಿನೀತನ ಮಾದರಿಯನ್ನು ಮುಂದುವರಿಸಿದನು ಅವನ ಮಗ ಮುಷ್ಕರ. ಮೊಕ್ಕನೆಂಬುದು ಅವನಿಗಿದ್ದ ಜನಪ್ರಿಯ ಹೆಸರು. ಪುಲಿಗೆರೆಯನ್ನು ನೀವು ನೋಡಿರುವ ಮೊಕ್ಕರ ಬಸದಿಯನ್ನು ಆತನೇ ನಿಂತು ಕಟ್ಟಿಸಿದ್ದಲ್ಲದೆ ಪಂಚಕಲ್ಯಾಣ ಮೂರ್ತಿ ಪ್ರತಿಷ್ಠಾಪನೆ ಕೂಡ ಮಾಡಿಸಿದನು." ಮುಂದೆ ಬಂದ ತ್ರಿವಿಕ್ರಮ, ಭೂವಿಕ್ರಮ, ಒಂದನೆಯ ಶಿವಮಾರರ ಕಾಲದಲ್ಲಿ ಗಂಗ ಸಾಮ್ರಾಜ್ಯ ಸ್ಥಾಯಿಯಾಗಿತ್ತು. ಮತ್ತೆ ಅದರ ವೈಭವವನ್ನು ಶ್ರೀಪುರುಷ ಎತ್ತಿ ಹಿಡಿದ. ಅವನ ಗಜಶಾಸ್ತ್ರ ಕನ್ನಡನಾಡಿನ ಮನೆಮಾತು ತಾನೆ? ಅವನ ಮಗ ಶಿವಮಾರ. ತರುವಾಯ ರಾಜಮಲ್ಲ ರಾಷ್ಟ್ರಕೂಟರ ಮಹಾ ಸೇನಾಧಿಪತಿ ವೀರಬಂಕೆಯನ ಏಟುಗಳಿಂದ ತತ್ತರಿಸಿಹೋದರೂ ಮತ್ತೆ ಚೇತರಿಸಿಕೊಂಡು ವಳ್ಳಿಮಲೈನಲ್ಲಿ ಜೈನಗುಹೆಗಳನ್ನು

ಮಾಡಿಸಿದ ಹೆಸರು ರಾಜಮಲ್ಲನದು.

"ರಾಜಮಲ್ಲನ ಮಗ ಎರೆಯಗಂಗನು ನೀತಿಮಾರ್ಗ ಎಂಬ ಹೆಸರಿನಿಂದ ಚರಿತ್ರ ಪುರುಷನಾಗಿದ್ದಾನೆ. ರಾಜಮಡು ಕಾಳಗದಲ್ಲಿ ರಾಷ್ಟ್ರಕೂಟರಿಗೂ ಸೋಲಿನ ರುಚಿ ತೋರಿಸಿ ರಣವಿಕ್ರಮಾದಿತ್ಯನಾದ ನೀತಿಮಾರ್ಗನು ಸಾಹಿತ್ಯ ಕಲೆಗಳ ಪೋಷಕ. ಆತ ಪುನ್ನಾಟ ಸಂಘದ ಜಿನಸೇನರ ಶಿಷ್ಯನಾಗಿದ್ದು ಅಹಿಂಸಾಧರ್ಮಕ್ಕೆ ಆಶ್ರಯದಾತನಾಗಿದ್ದ. ನನ್ನ ತೀರ್ಥರೂಪರು ಆ ದೊರೆಯ ಜೋಳದ ಪಾಳಿಯಲ್ಲಿ ಬಾಳಿ ಬೆಳೆದವರು. ನೀತಿಮಾರ್ಗ ದೊರೆಯ ಹಿರಿಯ ಮಕ್ಕಳೇ ನನ್ನ ಪ್ರಭು ರಾಜಮಲ್ಲ ಸತ್ಯವಾಕ್ಯರು. ಅವರ ಕಾಲದಲ್ಲಿ ದಂಡನಾಯಕನಾಗಿ ವೆಂಗಿಯ ಚಾಲುಕ್ಯರೊಡನೆ ರೇಮಿಯ ಕದನದಲ್ಲಿ ನಡೆಸಿದ ಸಾಹಸದ ಹೋರಾಟ ನಡೆಸಿಕೊಂಡರೂ ಈಗಲೂ ಮೈನವಿರೇಳುತ್ತದೆ. ಆದರೆ ಆ ಉದಾರ ಗುಣದ ಗಣಿಯಾದ ನನ್ನ ದಣಿಯ ದುರಂತ ಸಾವು ನೋಡುವ ದುರ್ವಿಧಿ ನಮ್ಮ ಪಾಲಿಗೆ ಬರಬಾರದಿತ್ತು.

"ಎಂಟೂವರೆ ವರ್ಷದ ಹಿಂದೆ ಒಂದು ದಿನ ವಿಜಯಿಗಳಾಗಿ ಕಾಳಗದಿಂದ ರಾಜಧಾನಿಗೆ ಬರುತ್ತಾ ಕೊಂಬಾಳೆಯಲ್ಲಿ ಬೀಡು ಬಿಟ್ಟಿದ್ದೆವು. ಸಂಜೆ ಸಂಧ್ಯಾವಂದನೆ ಮುಗಿಸಿ ಬಂದ ಪ್ರಭುಗಳು ಹಾಲು ಕುಡಿಯಲು ಕುಳಿತಿದ್ದಾರೆ. ದಾಸಿ ಹೊನ್ನ ಗಿಂಡಿಗೆಯಿಂದ ಬಟ್ಟಲಿಗೆ ಬಿಸಿಯ ಕೆನೆವಾಲನ್ನು ಬಗ್ಗಿಸುತ್ತಿದ್ದಾಳೆ. ಒಮ್ಮೆಲೇ ಪ್ರಭುಗಳ ಗಂಟಲಲ್ಲಿ ಶ್ಲೇಷ್ಮ ಸಿಕ್ಕಿಹಾಕಿಕೊಂಡು ಬಿಕ್ಕಳಿಕೆ ಪ್ರಾರಂಭವಾಯಿತು. ಅಬ್ಬ ಆ ಬಿಕ್ಕಳಿಕೆಯೇ! ಏನು ಮಾಡಿದರೂ ನಿಲ್ಲಲಿಲ್ಲ. ನಿಮಿಷ ನಿಮಿಷಕ್ಕೂ ಏರುತ್ತಾ ರಾಜವೈದ್ಯರು ಬರುವುದರೊಳಗೆ ಏದುಸಿರು ಬಿಡುತ್ತಾ ಅರಸರು ಅಸುನೀಗಿದರು."

ಮಹಾಬಲಯ್ಯನವರ ಕಣ್ಣೀರು ನಿಲ್ಲಲು ಕೆಲವು ನಿಮಿಷಗಳೇ ಬೇಕಾದುವು. ನಿಶೆಯ ನೀರವತೆಯಲ್ಲಿ ಚೈತ್ಯಾಲಯದ ಗಂಟಾ ನಿನಾದ ಮೌನ ಮುರಿಯಿತು. ಮಹಾಬಲಯ್ಯ ಮತ್ತೆ ಮಾತು ಮುಂದುವರಿಸಿದ.

* * * *

"ರಾಜಮಲ್ಲ ಸತ್ಯವಾಕ್ಯರ ಅಕಾಲ ಮರಣದಿಂದ ದಿಕ್ಕೇ ತೋಚಲಿಲ್ಲ. ಪಟ್ಟಾಭಿಷಿಕ್ತರಾಗಲು ಯುವರಾಜರಾಗಿದ್ದ ಎರೆಯಪ್ಪರನ್ನೇ ಒಗ್ಗೊರಲಿನಿಂದ ಆಯ್ಕೆ ಮಾಡಲಾಯಿತು. ಇಮ್ಮಡಿ ನೀತಿಮಾರ್ಗರೆಂಬ ಹೆಸರಿನಿಂದ ಸಿಂಹಾಸನ ಹತ್ತಿದರು. ಆಡಳಿತದ ಅನುಭವವಿತ್ತು. ನುಗುನಾಡು, ನವಿಲೆ ನಾಡುಗಳನ್ನು ಯುವರಾಜರಾಗಿ ಆಳಿದರು. ಈಗ ಪ್ರಭುವಾಗಿ ಪ್ರಜೆಗಳ ಪ್ರೇಮ

ಸೊರೆಗೊಂಡಿದ್ದಾರೆ. ಕಳೆದ ತಿಂಗಳಷ್ಟೇ ಪೆಂಜೇರಿನಲ್ಲಿ ನಡೆದ ಭೀಕರ ಕಾಳಗದಲ್ಲಿ ನೊಳಂಬ ಅರಸ ಮಹೇಂದ್ರನನ್ನು ಕೊಂದ ಈ ಪ್ರಭು 'ಮಹೇಂದ್ರಾಂತಕ' ಬಿರುದಾಂಕಿತರಾಗಿ ಇದೀಗ ರಾಜಧಾನಿಗೆ ಹಿಂತಿರುಗಿದ್ದಾರೆ. ರಾಜಧಾನಿಗೆ ಬಂದ ಕೂಡಲೇ ಮೊದಲು ಪ್ರಭುಗಳು ಕೇಳಿದ ಸುದ್ದಿ ಆಚಾರ್ಯವರೇಣ್ಯ ದೇವೇಂದ್ರ ಕೀರ್ತಿಗಳ ಶುಭ ಆಗಮನದ ಒಸಗೆ. ಕೂಡಲೇ ರಾಜಮರ್ಯಾದೆಗಳನ್ನು ಕಳಿಸಿದ್ದಲ್ಲದೆ ರಾಜಕುಮಾರ ನರಸಿಂಹ ದೇವರನ್ನೂ ಮಹಾರಾಣಿ ಜಾಕಾದೇವಿಯವರನ್ನೂ ನನ್ನೊಡನೆ ಪ್ರಭು ನಿಷ್ಠೆ ಭಕ್ತಿಗಳನ್ನು ನಿವೇದಿಸಲು ಕಳಿಸಿದ್ದಾರೆ. ಯುದ್ಧವ್ರಣಗಳಿನ್ನೂ ಪೂರ್ಣ ಮಾಗಿಲ್ಲ. ಇಲ್ಲವಾದರೆ ಖಾವಂದರೇ ಖುದ್ದಾಗಿ ದಯಮಾಡಿಸುತ್ತಿದ್ದರು. ಪಂಪ ನೀನೂ ಒಮ್ಮೆ ನಮ್ಮ ರಾಜಧಾನಿಗೆ ತಪ್ಪದೆ ಬರಬೇಕು."

"ಮಹಾಬಲಯ್ಯನವರೇ, ನಾನು ವಿದ್ಯಾಭ್ಯಾಸ ಕಾಲದಲ್ಲಿ ಈಗಾಗಲೇ ಸಾಕಷ್ಟು ದೇಶ ಸುತ್ತಿದ್ದಾಗಿದೆ. ಇನ್ನು ತಲಕಾಡು ಎಂದು ಕಳ್ವಪ್ಪಿನಿಂದ ಪ್ರವಾಸಕ್ಕೆ ತೊಡಗಿದರೆ ನನ್ನ ಶಿಕ್ಷಣಕ್ಕೆ ಇತಿಶ್ರೀ ಹಾಡಿದಂತೆಯೇ."

"ಹಾಗೆ ತಿಳಿಯಬಾರದು ಚಿರಂಜೀವಿ. ಗುರುಗಳೊಡನೆ ನೀನೆಸಗಿದ ಪ್ರಯಾಣ ವ್ಯರ್ಥವಲ್ಲ. ದೇಶ ಸುತ್ತಿ, ಕೋಶ ತಿರುವಿ ಜ್ಞಾನ ಪಡೆಯಬೇಕೆನ್ನುತ್ತಾರೆ. ನಿನಗೆ ಎರಡೂ ಬಗೆಯಲ್ಲಿ ಲಾಭವಾಗಿದೆ. ನಾಡಿನ ಗಡಿಗಳನ್ನೂ, ಜನರನ್ನೂ, ಉಡಿಗೆ ತೊಡಿಗೆ ಆಹಾರ ವಿಹಾರಗಳನ್ನೂ ಗುರುತಿಸಿದ್ದೀಯೆ. ಇದು ದೊಡ್ಡ ಗಳಿಕೆ. ಜನರ ಬದುಕಿನ ನಿಕಟ ಪರಿಚಯದಿಂದ ಕಲಿತ ಓದು ಪ್ರಮುಖವಾದುದೇ."

"ಪೂಜ್ಯರೇ, ನಾನು ಹೇಳಿದ ಮಾತನ್ನು ತಾವು ತುಂಬ ಆಳವಾಗಿ ಗಂಭೀರ ಪರಿಶೀಲನೆಗೆ ಕೊಂಡೊಯ್ದಿರಿ. ತಮ್ಮ ಮಾತೆಲ್ಲ ನಿಜವೇ. ಬೋದನದ ಗುರುಕುಲವೆಲ್ಲಿ, ಈ ಕಳ್ವಪ್ಪು ಎಲ್ಲಿ ? ಇದೆಲ್ಲಾ ನನ್ನ ಪುಣ್ಯವಿಶೇಷದಿಂದ ದೊರೆತ ಪ್ರವಾಸ ಲಾಭವೆಂದು ತಿಳಿಯುತ್ತೇನೆ."

"ಹಾಗಾದರೆ ಪರ್ಯಾಯವಾಗಿ ನಮ್ಮ ನಗರಕ್ಕೆ ಬರಲು ಒಪ್ಪಿದಂತಾಯಿತು!"

"ಬರಬಾರದೆಂದೇನೋ ಭಾವನೆಯಿಲ್ಲ. ಯಾವುದಕ್ಕೂ ಲಗುಬಿಗು ನೋಡಿ ಗುರುಗಳೊಡನೆ ವಿಚಾರಿಸಿ ತಿಳಿಸುತ್ತೇನೆ."

"ಓಹೋ! ಹಾಗೆಯೇ ಆಗಲಿ. ಆಚಾರ್ಯರಲ್ಲಿ ನಾನೂ ಅರಿಕೆ ಮಾಡಿಕೊಳ್ಳುತ್ತೇನೆ. ನನ್ನ ಮಡದಿ ಕಾಳಲಾದೇವಿ ಕೂಡ ಈ ವಿಚಾರದಲ್ಲಿ ಆಸಕ್ತಳಾಗಿದ್ದಾಳೆ."

"ಕಾಳಬ್ಬೆಯವರು ಕಳೆದ ವಾರದಿಂದ ಇಲ್ಲಿರುವುದು ದೂರದ ನನ್ನ

ಹೆತ್ತಬ್ಬೆಯೇ ಇಲ್ಲಿಗೆ ಬಂದಂತಾಗಿದೆ. ಒಡಲ ಮಗನಂತೆ ನನಗೆ ಅದೆಷ್ಟು ಪ್ರೀತಿ ತೋರಿದ್ದಾರೆ. ಪೂಜ್ಯರೆ, ನೀವು ಊರಿಂದ ತಂದ ತಿಂಡಿತಿನಿಸುಗಳ ಬುಟ್ಟಿಗಳೆಲ್ಲ ಖಾಲಿ ಮಾಡಿದ ಹಿರಿಮೆ ನನ್ನದೆಂಬುದನ್ನು ನೀವು ಬಲ್ಲಿರಾ?"

"ನಾವು ಅದನ್ನು ತಂದದ್ದಕ್ಕೆ ಸಾರ್ಥಕವಾಯಿತು ಮಗೂ" ಎಂದು ಮಹಾಬಲಯ್ಯನವರು ಪಂಪನ ಹೆಗಲನ್ನು ಮೆಲ್ಲಗೆ ಕುಲುಕಿದರು. ಎತ್ತರದ ಮೈಕಟ್ಟು, ಕಂಚಿನ ಕೈಗಳು, ಮಿಂಚಿನ ಕಣ್ಣನೋಟ, ಅನ್ವರ್ಥಕವಾದ ಹೆಸರಿನ ಮಹಾಬಲಯ್ಯನವರ ನಿಲುವು ಪಂಪನಿಗೆ ತುಂಬಾ ಹಿಡಿಸಿತು. 'ಆ ವಜ್ರ ಕಾಯದಲ್ಲಿ ಎಂಥ ಮೃದು ಮನಸ್ಸು! ಮೃದೂನಿ ಕುಸುಮಾದಪಿ' ನಾಲಗೆ ನುಡಿಯಿತು.

ತನ್ನ ತಾಯಿ ರಾಜಮಾತೆಯೊಡನೆ ಆಗಮಿಸಿದ್ದ ನರಸಿಂಹದೇವ ಪಂಪನಿಗಿಂತ ಮೂರು ವರ್ಷ ದೊಡ್ಡವನು. ಒಂದೇ ವಾರಗೆಯವರಾದುದರಿಂದ ಬೇಗ ಒಲವಿನ ಗೆಳೆಯರಾದರು. ಕುಮಾರ ನರಸಿಂಹದೇವ ಮತ್ತು ಪಂಪ ಸಮಾನ ಅಭಿರುಚಿಯುಳ್ಳವರಾಗಿದ್ದರು. ಪಂಪನೊಡನೆ ರಾಜಕುವರ ಶಾಸ್ತ್ರ ಸಾಹಿತ್ಯ ಕಲೆಗಳ ವಿಚಾರದಲ್ಲಿ ಚರ್ಚಿಸಿದ. ಕಳ್ವಪ್ಪಿನ ಬಸದಿಗಳ ಶಿಲ್ಪಕಲೆ ವಿಚಾರ ನಿತ್ಯ ಪರಿಶೀಲನೆ ನಡೆಸಿದರು. ದ್ರಾವಿಡ ವೇಸರ ನಾಗರ ಶಿಲ್ಪಗಳ ವ್ಯತ್ಯಾಸಗಳನ್ನು ಗುರುತಿಸಿದರು. ಸ್ತ್ರೀ ಶಿಲೆ, ಪುರುಷ ಶಿಲೆ, ನಪುಂಸಕ ಶಿಲೆಗಳ ಪರಿಚಯ ಮಾಡಿಕೊಂಡರು. ದೇವಾಲಯ ನಿರ್ಮಾಣ ವಿಧಾನ, ಮೂರ್ತಿಗಳ ಪ್ರಮಾಣ, ಶಿಲ್ಪಗಳು, ಮಾನಸ್ತಂಭ_ಎಲ್ಲಾ ಮನದಟ್ಟಾದವು. ನರಸಿಂಹನಿಂದ ಪಂಪನಿಗೆ ಕಳ್ವಪ್ಪಿನ ಸುತ್ತಮುತ್ತ ಕುದುರೆ ಹತ್ತಿ ಹೋಗಿ ಬರಲು ಅವಕಾಶ ದೊರೆಯಿತು.

ಇಬ್ಬರೂ ಒಬ್ಬರಿಗಿಂತ ಒಬ್ಬರು ಪಳಗಿದ ಅಶ್ವಾರೋಹಿಗಳು. ಅಡ್ಡವಾದ ಗುಡ್ಡಗಳನ್ನು ಜಾಣ್ಮೆಯಿಂದ ದಾಟುತ್ತಿದ್ದರು. ಕಳ್ವಪ್ಪಿನಲ್ಲಿ ಉಪಯೋಗಿಸಲು ಸಾಧ್ಯವಿಲ್ಲದ ಬಿಲ್ಲು ಬತ್ತಳಿಕೆಗಳನ್ನು ಬಯಲಿನಲ್ಲಿ ಬಿಚ್ಚಿದರು. ದೂರದ ಮರ ಗಿಡಗಳ ಚಿಗುರೆಲೆಗಳ ಸುಳಿಗಳಿಗೆ ಗುರಿಯಿಟ್ಟು ಬಾಣ ಬಿಡುತ್ತಿದ್ದರು. ಪಂಪನ ಲಕ್ಷ್ಯ ವಿದ್ಯೆಯ ಪ್ರಾವೀಣ್ಯತೆ ಕಂಡು ಅರಗುವರ ಅವಾಕ್ಕಾದ. ಅಭ್ಯಾಸಕ್ಕೆಂದು ಕುಸ್ತಿಗೆ ನಿಂತಾಗ ಅವನು ಸಡ್ಡು ಹೊಡೆದು ನಿಂತರೆ ಗುಡ್ಡಗಳು ಹೊಳಲುಗೊಡುತ್ತಿದ್ದವು. ಸಾಮು ಮಾಡಿ ಉಕ್ಕಿನ ಮಾಂಸಖಂಡಗಳ ಮಾಟದಂತಾದ ಪಂಪನ ಮೈಕಟ್ಟು ವೀರಯೋಧನಿಗೆ ಹೇಳಿ ಮಾಡಿಸಿದಂತಿತ್ತು. ಪಂಪನ ದನಿಯೂ ದುಂದುಭಿ ಮಾರ್ದನಿಯಾಗಿ ನುಡಿಯುತ್ತಿತ್ತು. ಕಾಡಿನ ಎಲ್ಲಾ ಹಕ್ಕಿಗಳ ಕಲರವವನ್ನು ಚಾಚೂತಪ್ಪದೆ ಅನುಕರಿಸುತ್ತಿದ್ದ. ವನ್ಯಶ್ರೀಯ ಅಂಗುಲಂಗುಲವನ್ನೂ ಹೆಸರಿಸಿ ತಿಳಿಸುತ್ತಿದ್ದ. ಅವುಗಳ ಋತುಮಾನ

ವ್ಯತ್ಯಾಸಗಳನ್ನೂ ಔಷಧ ಗುಣವನ್ನೂ ವಯೋಮಾನವನ್ನೂ ಹೂವಿನ ವಿನ್ಯಾಸವನ್ನೂ ವಿವರಿಸುತ್ತಿದ್ದ. ಪಂಪನ ಪರಿಚಯ ಹೆಚ್ಚಿದಂತೆಲ್ಲಾ ರಾಜಕುಮಾರನಿಗೆ ಅಚ್ಚರಿಯೂ ಮೆಚ್ಚುಗೆಯೂ ನೂರ್ಮಡಿಯಾದುವು.

"ಪಂಪ, ನೀನು ಈ ವಯಸ್ಸಿಗೇ ವಿಶ್ವಕೋಶವನ್ನು ತಿರುವಿ ಹಾಕಿದಷ್ಟು ತಿಳಿದಿದ್ದೀಯೇ. ನಿನ್ನಿಂದ ನಾನು ತುಂಬಾ ಕಲಿತುದಾಯಿತು."

"ನರಸಿಂಹಾ, ದೊರೆಗಳಿಗೆ ಹೊಗಳಿಕೆ ಪ್ರಿಯವೆಂದಷ್ಟೇ ಕೇಳಿದ್ದೆ. ಈಗ ಅರಮನೆಯವರು ಹೊಗಳಲೂ ಬಲ್ಲರೆಂದಾಯಿತು!"

"ನಾನು ಹೊಗಳಲಿಲ್ಲ ನೇಹಿಗಾ, ಇರುವ ವಿಚಾರವಷ್ಟೇ ಹೇಳಿದೆ. ನಿನ್ನ ಗೆಳೆತನ ನನಗೆ ದೊಡ್ಡ ಲಾಭ."

"ನಿನ್ನಿಂದ ನಾನು ಕಲಿತುದು ಕಡಮೆಯೇ? ನಿನ್ನ ಅಶ್ವಶಾಸ್ತ್ರ ಹಾಗೂ ಗಜಶಾಸ್ತ್ರ ವೈದುಷ್ಯ ನನ್ನನ್ನು ಬೆಕ್ಕಸಪಡಿಸಿದೆ. ಅಸ್ತ್ರ ನೈಪುಣ್ಯವೇನು ಕಡಿಮೆಯೇ? ನ್ಯಾಯಶಾಸ್ತ್ರವೆಲ್ಲ ಬಲ್ಲೆ. ಆದರ್ಶ ರಾಜನ ಲಕ್ಷಣಗಳನ್ನೆಲ್ಲ ಹೇಳಿದ್ದೀಯೆ. ಅರಮನೆಯ ಬಾಳು ನಿನ್ನಿಂದಾಗಿ ನನಗೆ ಈಗ ಅಂಗೈ ಮೇಲಣ ನೆಲ್ಲಿಕಾಯಿ. ಯುದ್ಧ ವಿದ್ಯೆ ಗುರುಕುದಲ್ಲಿ ಕೇಳಿ ತಿಳಿದಿದ್ದೆ. ಈಗ ನಿನ್ನಿಂದ ಕಣ್ಣಿಗೆ ಕಟ್ಟಿದಂತಾಗಿದೆ. ಇದೆಲ್ಲ ಏನು ಕಡಿಮೆ ಗಳಿಕೆಯೇ? ನಾನಂತೂ ಬಿಲ್ಲುಂಬೆರಗಾಗಿದ್ದೇನೆ."

"ಸರಿಸರಿ, ಒಬ್ಬರನ್ನೊಬ್ಬರು ಹೊಗಳಿಕೊಂಡು ಹೊತ್ತು ಕಳೆಯುವುದು ಬೇಡ. ಕಳ್ವಪ್ಪಿಗೆ ಬಂದು ಚಂದ್ರಗಿರಿ ದರ್ಶನ, ಯತಿವರೇಣ್ಯರಿಗೆ ಆಹರ ದನಲಾಭ, ಪರಮಪೂಜ್ಯ ದೇವೇಂದ್ರ ಕೀರ್ತಿಗಳ ಸನ್ನಿಧಿ ಪುಣ್ಯಗಳಷ್ಟೇ ನಿನ್ನ ಗೆಳೆತನ ಗಳಿಕೆಯೂ ನನ್ನ ಬಾಳಿನ ಅಮೃತಗಳಿಗೆಯೆಂದು ತಿಳಿಯುತ್ತೇನೆ."

"ತುಂಬಾ ದೊಡ್ಡ ಮಾತು ಹೇಳಿದೆ ರಾಜಕುಮರ. ನನ್ನ ತುದಿನಾಲಗೆಯ ಮಾತೂ ಅದೇ ಆಗಿದೆ. ಯಾವ ಜನ್ಮದ ಮೈತ್ರಿಯೋ ಹೀಗೆ ನಮ್ಮಿಬ್ಬರನ್ನೂ ಕೂಡಿಸಿದೆ. ದೇವತೆಗಳು ವಿಹರಿಸುವ ಈ ನೆಲದಲ್ಲಿ ನಮ್ಮ ಮಿತ್ರತ್ವದ ಬೆಸುಗೆಯಾಗಿದೆ."

"ಮಿತ್ರಾ, ನಾಡಿದ್ದು ನಾವು ಗಂಗವಾಡಿಗೆ ಮರುಳುತ್ತಿದ್ದೇವೆ. ನೀನೂ ನಮ್ಮೊಡನೆ ಬರಬೇಕು. ಅಪ್ಪಾಜಿಯವರಿಗೆ ನಿನ್ನ ಪರಿಚಯ ಮಾಡಿಕೊಡುವೆ. ಮಹಾಮಾತೃಶ್ರೀಯವರೂ ನಿನ್ನನ್ನು ಚೂಟಿ ಹುಡುಗನೆಂದು ಹೊಗಳಿದ್ದಾರೆ."

"ಗೆಳೆಯಾ, ನಿನ್ನ ಕಳಕಳಿಯ ಕರೆ ಕೇಳಿ ಈಗಲೇ ಒಪ್ಪಿಗೆ ಕೊಡಲು ಮನಸ್ಸಾಗುತ್ತಿದೆ. ಆದರೆ ಆಚಾರ್ಯರಲ್ಲಿ ಅರಿಕೆ ಮಾಡಿ ನೋಡುತ್ತೇನೆ."

"ನೀನು ವಿಜ್ಞಾಪಿಸಿದರೆ ಗುರುವರೇಣ್ಯರು ಎಂದೂ ಆಗದೆನ್ನರು. ಎಷ್ಟೇ

ಆಗಲಿ ನೀನು ಅವರ ಅಂತರಂಗದ ಅಚ್ಚುಮೆಚ್ಚಿನ ಚಟ್ಟವಲ್ಲವೇ?"

ಇಬ್ಬರೂ ಬಾಯ್ತುಂಬ ನಕ್ಕರು. ಪಂಪನೆಂದ "ನರಸಿಂಹ, ಊರೊಳಗಿನ ದೊಡ್ಡ ಬಸದಿಯಲ್ಲಿ ಸಂಜೆ ಪೂಜೆಗೆ ಸಮಯವಾಯಿತು. ಹೊರಡೋಣವೆ?"

"ಇನ್ನೂ ಮಾತನಾಡುವ ಮನಸ್ಸು ಇದೆ. ಸ್ವಾಮಿಯ ಪೂಜೆಯಾದ ಕೂಡಲೇ ಸ್ವಾಧ್ಯಾಯಕ್ಕೆ ಗುರುಗಳ ಬಳಿ ಪದ್ಮಪೀಠನಾಗಿಬಿಡುತ್ತೀಯೆ. ಮತ್ತೆ ನೀನು ನನಗೆ ಸಿಗುವುದು ನಾಳೆಯೇ."

"ಓದಿನ ಕ್ರಮ ವಿಪರೀತವಾಗದಂತೆ ನೋಡಿಕೊಳ್ಳಬೇಕಲ್ಲವೆ?"

"ಅದು ನಿಜವೇ, ಆದರೆ ನೀನು ಕಾಣುವುದು ನಾಳೆ. ಕಾಣುವ ತನಕ ತವಕ. ಅಯ್ಯಾ ಪಂಪಾ, ಈಗ ನೀನು ಓದಿರುವುದು ಸಾಕು. ಅಪ್ಪಾಜಿಗೆ ಹೇಳುವೆ, ನಮ್ಮ ಒಡ್ಡೋಲಗದಲ್ಲಿ ಪಂಡಿತನಾಗಿ ನಿನ್ನನ್ನು ನೇಮಿಸಿಕೊಳ್ಳುವಂತೆ, ಬರುವೆ ತಾನೇ?"

"ಓಹೋ, ನಿನ್ನ ಮಾತು ಕೇಳಿ ತಲೆ ಏಕೋ ನಿಲ್ಲುತ್ತಿಲ್ಲ. ಅದು ಹೆಚ್ಚು ಸುತ್ತುವಂತೆ ಮಾಡಬಾರದು. ಇನ್ನೂ ನಾನು ಕಲಿಯಬೇಕಾದುದು ಬ್ರಹ್ಮಾಂಡದಷ್ಟಿದೆ. ನಡೆ ನಡೆ ಊರೊಳಕ್ಕೆ ಹೋಗೋಣ."

ನರಸಿಂಹನಿಗೆ ನಿರಾಶೆಯೇ ಆಯಿತು. ಇಬ್ಬರೂ ಕಳ್ವಪ್ಪಿನ ಬುಡದ ಬಿಡಾರಗಳತ್ತ ನಡೆದರು. ಗಂಗವಾಡಿಯ ಗುಡಾರಗಳು ಹತ್ತಿರವಾಗುತ್ತಿದ್ದಂತೆ ಪಂಜು ಹಿಡಿದು ಅರಮನೆಯ ಬೆಂಗಾವಲಿನವರು ರಾಜಕುಮಾರನನ್ನು ಕರೆಯಲು ಬರುತ್ತಿದ್ದುದು ಕಾಣಿಸಿತು. ಪಂಪ ನರಸಿಂಹರು ಅನಿವಾರ್ಯವಾಗಿ ಬೇರೆ ದಾರಿ ಹಿಡಿದರು.

ಮರುದಿವಸ ಪಂಪ ಗುರುಗಳಲ್ಲಿ ಮುಂಜಾವಿನ ಅಭ್ಯಾಸ ಮುಗಿದ ಮೇಲೆ ಗಂಗವಾಡಿಗೆ ಹೋಗಿ ಬರುವ ಮಾತು ತೆಗೆದ. ಪಂಪನಿಗೆ ಗುರುಗಳ ಅನುಮತಿ ದೊರೆಯಿತು. ಆರು ದಿನಗಳಲ್ಲಿ ಹೋಗಿಬರುವ ವ್ಯವಸ್ಥೆಯಾಯಿತು. ಮಹಾಬಲಯ್ಯ ಕಾಳಲಾದೇವಿಯವರೂ ಜಾಕಬ್ಬೆಯವರೂ ಸಂತೋಷಭರಿತರಾದರು., ಗುರುಗಳ ರಾಯಭಾರಿಯಂತೆ ಕಂಡ ಪಂಪ ನರಸಿಂಹರೊಂದಾಗಿ ಅಶ್ವಾರೋಹಿಗಳಾಗಿ ಹೊರಟರು, ಉಳಿದವರು ಶಿಬಿಕೆಯಲ್ಲೂ, ಪಲ್ಲಕ್ಕಿಯಲ್ಲೂ ಹೊರಟರು.

ಎರಡು ದಿನ ಮಾತ್ರ ರಾಜಧಾನಿಯಲ್ಲಿದ್ದ ಪಂಪನಿಗೆ ದೊರೆ ರಾಜಮಲ್ಲರ ಪ್ರಭು ಪ್ರೀತಿ ದೊರೆಯಿತು. ನರಸಿಂಹನ ತಮ್ಮ ರಾಚಮಲ್ಲನ ಪರಿಚಯವಾಯಿತು. ಗಂಗವಾಡಿಯ ಶ್ರಾವಕರ ಮನೆಗಳವರೆಲ್ಲ ಪಂಪನನ್ನು ಅಕ್ಕರೆಯಿಂದ ಕಂಡರು.

ಎಲ್ಲರ ಮನೆಯಲ್ಲೂ ಊಟವೋ ಉಪಹಾರವೋ ಹಣ್ಣೋ ಹಾಲೋ ಏನಾದರೂ ತೆಗೆದುಕೊಳ್ಳಲು ಒತ್ತಾಯ. ಎರಡೂ ದಿವಸ ಪಂಪ ಮಹಾಬಲಯ್ಯನವರ ಮನೆಯಲ್ಲೇ ಇಳಿದುಕೊಂಡಿದ್ದ.

ಕಾಳಲಾದೇವಿಯಂತೂ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಮಮತೆ ತೋರಿದಳು. ಇನ್ನು ಪಂಪನಿಗೆ ಒಂದೆರಡು ತಿಂಗಳು ಇಲ್ಲಿದ್ದರೆ ತಾನು ಬಕಾಸುರನಾಗಿ ಬೆಳೆಯಬೇಕಾದೀತೆನ್ನಿಸಿತು! ಮೂರನೆಯ ದಿವಸ ಕಳ್ವಪ್ಪಿನತ್ತ ಪಂಪ ಜಾತ್ಯಶ್ವ ಹತ್ತಿ ಪ್ರಯಾಣ ಬೆಳೆಸಿದ. ನರಸಿಂಹ ರಾಚಮಲ್ಲರು ಆರು ಗಾವುದ ಜೊತೆಯಲ್ಲಿ ಬಂದು ಪಂಪನಿಗೆ ಅನೇಕ ಪ್ರೀತಿಯ ಉಡುಗೊರೆಗಳನ್ನಿತ್ತು ಬೀಳ್ಕೊಟ್ಟರು.

# ೮

ಅಂದು ಬೆಳಗ್ಗೆ ಸ್ನಾನ ಜಪಾದಿಗಳನ್ನು ಬೇಗ ಮುಗಿಸಿ ಪಂಪ ಚಂದ್ರಗಿರಿ ಹತ್ತಿದ. ಭದ್ರಬಾಹು ಗುಹೆಯ ಬಳಿ ಕುಳಿತು ಗುಹೆಯತ್ತ ನೋಡಿದ. ನೋಡಿದಂತೆಲ್ಲ ತನ್ನ ಗುರುಗಳ ನೆನಪೇ ಮರುಕಳಿಸಿತು. ತೆಂಕಣದ ಹೆಸರನ್ನು ಎಂದೆಂದೂ ಹಸಿರಾಗಿಸಿದ ಗುರು ಭದ್ರಬಾಹು. ಅವರು ತಪವೆಸಗಿ ಮುಕ್ತಿಯ ಮಹಾಮನೆಗೆ ನಡೆದ ಪರಮ ವಿತ್ರ ಸ್ಥಾನ ಈ ಕಣ್ಣೆದುರಿಗಿನ ಗುಹೆ. ಕಿರಿದಾದ ಕತ್ತಲೆಯ ಗುಹೆಯಲ್ಲಿ ಹಿರಿದಾದ ಬೆಳಕು ಸುಳಿದಾಡಿ ಇತಿಹಾಸ ನಿರ್ಮಿಸಿತ್ತು!

ಈಗ ತನ್ನ ಗುರು ಕನ್ನಡ ನಾಡಿನಲ್ಲಿ ಅಂತಹುದೇ ಹೊಸ ಪವಾಡವೆಸಗುತ್ತಿದ್ದಾರೆ. ಆಚಾರ್ಯವರ್ಯ ದೇವೇಂದ್ರ ಮುನೀಂದ್ರರು ರಾಜಾಧಿರಾಜರುಗಳಿಂದ ಪೂಜಿತರು. ಭಾರತೀಭಾಳಭಟ್ಟ ಎಂಬ ಬಿರುದಾಂಕಿತರು. ಕವಿವಾದಿ ಗಮಕಿ ತಾರ್ಕಿಕರು. ಅದ್ವಿತೀಯ ವಾಗ್ಮಿವರೇಣ್ಯರು. ಷಡಂಗ ಪಾರಂಗತರು. ಆದರೆ ಶುಷ್ಕವೈಯಾಕರಣರಲ್ಲ. ಹಿಂದಿನ ದಿನ ಗುರುಗಳಾಡಿದ ಮಾತುಗಳು ಪಂಪನ ಕಿವಿಕದವನ್ನು ತಟ್ಟಿದುವು:

"ಪಂಪಾ, ಪುರಾಣ ವಸ್ತುವನ್ನು ಪ್ರತಿಪಾದಿಸುವಾಗಲೂ ಅದು ಕಾವ್ಯವಾಗಿ ಬರಬೇಕು. ಧರ್ಮವಾಗಲಿ ಸಿದ್ಧಾಂತವಾಗಲಿ, ನೀತಿ ತತ್ವಗಳಾಗಲಿ, ಕಡೆಗೆ ಯಾವುದೇ ಒಂದು ವರ್ಣಣೆಯಾಗಲಿ ಅದನ್ನು ಕಾವ್ಯಕ್ಕೆ ವಸ್ತುವನ್ನಾಗಿಕೊಂಡ ಮೇಲೆ, ಅದು ಎಷ್ಟರ ಮಟ್ಟಿಗೆ ಕಾವ್ಯವಾಗಿ ಬಂದಿದೆ ಎಂಬುದೇ ಪ್ರಧಾನ. ಉಳಿದುದೆಲ್ಲ, ಗೌಣವಲ್ಲದಿದ್ದರೂ, ಅನುಷಂಗಿಕ. ಏಕೆಂದರೆ ಅದನ್ನು ಶಾಸ್ತ್ರವಾಗಿ ಗದ್ಯಗ್ರಂಥವಾಗಿ ಬರೆಯಬಹುದು. ಅದನ್ನೇ ಕಾವ್ಯವೆಂದು ರಚಿಸಹೊರಡುವುದರ ಅಗತ್ಯವಿಲ್ಲ. ಹಾಗೆಂದು ಕಾವ್ಯವೇ ಶ್ರೇಷ್ಠ, ಉಳಿದುದೆಲ್ಲ ನಿಕೃಷ್ಠ ಎಂದೂ ಅರ್ಥವಲ್ಲ. ತತ್ವಸಿದ್ಧಾಂತ ಧರ್ಮಗಳು ಕಾವ್ಯಕ್ಕಿಂತಲೂ ಉನ್ನತವಾದುದಿರಬಹುದು. ಅವುಗಳು ಮಾನವನನ್ನು ಮುಕ್ತಿಗೊಯ್ಯಬಲ್ಲ ಇಹದಿಂದ ಉದ್ಧರಿಸುವ ವಿಷಯಗಳಿರಬಹುದು. ಆ ವಿಚಾರ ಬೇರೆ, ಆದರೆ ಅವು ಕಾವ್ಯ ಪ್ರಾಕಾರದೊಳಕ್ಕೆ ಪ್ರವೇಶ ಪಡೆಯುವಾಗ ಮಾತ್ರ ಕಾವ್ಯದ ವೇಷ ತೊಟ್ಟೇ ಬರಬೇಕು. ಅಷ್ಟೇಕೆ ಆ ವೇಷ ತೊಲಗಿ ಸ್ಫೂರ್ತಿ ಆವೇಶ ತುಂಬಿ ಕಡೆಗೆ ಅವು ಕಾವ್ಯವೇ ಆಗಿಬಿಡಬೇಕು.

ಅಂಥ ಕಾವ್ಯವೇ ನಾಲ್ಕು ಕಾಲ ನಿಲ್ಲಬಲ್ಲ ಮಹಾಕಾವ್ಯವಾಗಲು ಸಾಧ್ಯ."

ಗುರುಗಳು ತನ್ನನ್ನೇ ನೋಡಿಕೊಂಡು ಈ ಮಾತುಗಳನ್ನು ಆಡಿದ್ದರು. ಹಸಿರು ಗೋಡೆಗೆಸದ ಕಲ್ಲಿನಂತೆ ತನ್ನ ಎದೆಯಾಳದಲ್ಲಿ ಅದು ನೇರ ನಾಟಿತ್ತು. ಈಗ ಒಮ್ಮೆಲೆ ತನ್ನ ಓದಿನ ಕಾಲದಲ್ಲಿ ಇಂಥ ಮಾತುಗಳೆಲ್ಲೊ ಬಂದಿದ್ದಂತೆ ನೆನಪಾಯಿತು. ಹೌದು, ಭಗವಾನ ಜಿನಸೇನಾಚಾರ್ಯರು ಪೂರ್ವಪುರಾಣದಲ್ಲಿ ಮೊದಲ ಪರ್ವದಲ್ಲೇ ಈ ವಿಚಾರ ತಿಳಿಸಿದ್ದಾರೆ: "ಕವಿಯ ಭಾವ ಇಲ್ಲವೇ ಕಾರ್ಯವಾದ ಕಾವ್ಯ ಸರ್ವಸಮ್ಮತ ಅರ್ಥದಿಂದ ಕೂಡಿರಬೇಕು. ದೋಷರಹಿತವೂ ಸೌಂದರ್ಯಸಹಿತವೂ ಆಗಿರಬೇಕು. ಅಂತಹ ಕಾವ್ಯ ಸರಸ್ವತಿಯ ಮುಖಕಮಲ. ಪ್ರಾಚೀನ ಕಾಲದೊಡನೆ ಸಂಬಂಧಪಟ್ಟುಕೊಂಡು ಧರ್ಮಾರ್ಥ ಕಾಮಗಳ ಫಲವನ್ನು ಪ್ರದರ್ಶಿಸುವುದು ಮಹಾಕಾವ್ಯ. ಮಹಾಕವಿ ಒಂದು ದೊಡ್ಡ ಮರವಿದ್ದಂತೆ, ಪ್ರತಿಭೆಯ ಅದರ ಬೇರು ಮಾಧುರ್ಯಾದಿಗುಣಗಳು ಅದರ ಎತ್ತರವಾದ ಟೊಂಗೆಗಳು. ಉತ್ತಮ ಶಬ್ದಗಳು ಎಲೆಗಳು ಇವೆಲ್ಲ ಇದ್ದ ವೃಕ್ಷವೇ ಯಶಸ್ಸೆಂಬ ಪುಷ್ಪಗುಚ್ಛಗಳನ್ನು ಧಾರಣ ಮಾಡುವುದು. ಇಂತಹ ಕಾವ್ಯ ಲಕ್ಷಣಗಳಿಂದ ಕೂಡಿದ ಈ ಮಹಾಕಾವ್ಯದಲ್ಲಿ ರಸಗಳ ರಸಾಯನವನ್ನು ಸಾಕಷ್ಟು ಸವಿಯಿರಿ. ಅದರಿಂದ ನಿಮ್ಮ ಯಶಸ್ಸು ಕಲ್ಪಾಂತರಸ್ಥಾಯಿಯಾಗಿ ನಿಲ್ಲುತ್ತದೆ."

ಪಂಪನಿಗೆ ತಾನೂ ಬರೆದರೆ ಈ ಬಗೆಯ ಅಚಂದ್ರಾರ್ಕಸ್ಥಾಯಿಯಾದ ಮಹಾಕಾವ್ಯವನ್ನೇ ಬರೆಯಬೇಕೆನ್ನಿಸಿತು. ಅಷ್ಟರಲ್ಲಿ ತನ್ನ ಹೆಸರನ್ನು ಕರೆದಂತೆ ಕೇಳಿಸಿತು. ತಿರುಗಿ ನೋಡಿದ. ಗುರುಗಳೇ ಬರುತ್ತಿದ್ದಾರೆ. "ಪಂಪಾ, ನಿನ್ನನ್ನು ಎಷ್ಟು ಹುಡುಕುವುದು? ಕಳ್ವಪ್ಪಿನ ಬೆಟ್ಟಗಳಲ್ಲಿ ಒಬ್ಬನೇ ಹೊರಟು ಬಿಡುವುದೇ?"

"ಏಕೆ ಗುರುಗಳೇ? ನಾನೇನು ಕಂಕಳ ಕೂಸೆ?"

"ಇಲ್ಲಿ ದುಷ್ಟ ಮೃಗಗಳು ಪೊದೆಗಳಲ್ಲಿ, ತೋಪುಗಳಲ್ಲಿ, ಎದುರಿನ ದೊಡ್ಡ ಬೆಟ್ಟದಲ್ಲಿ ಸೇರಿಕೊಂಡಿವೆಯಂತೆ. ಅದಕ್ಕಾಗಿ ನಿನ್ನ ಬಗೆಗೆ ಗಾಬರಿಪಟ್ಟೆವು. ಅದಿರಲಿ, ಇದೇನು ನೀನು ಹೀಗೆ ಯೋಚಿಸುತ್ತಾ ಕುಳಿತಿದ್ದೀಯೆ? ಇಲಿ ತುಂಬಾ ದಿನ ನಿಂತೆವೆಂದು ಬೇಸರವೊ?"

"ಕಳ್ವಪ್ಪಿನ ವಾಸ ಬೇಸರ ತರುವುದುಂಟೆ ಆಚಾರ್ಯ? ಈ ಅಮೃತದ ಮಡುವಿನಲ್ಲಿ ಮಿಂದೂ ಮಿಂದೂ ದಿನ ದಿನವೂ ಧನ್ಯನಾಗುತ್ತಿದ್ದೇನೆ."

"ಹಾಗಾದರೆ ಏನು ಊರಿನ ಕಡೆಯ ನೆನಪಾಯಿತೆ?"

"ಅದೂ ಇಲ್ಲ ಗುರುದೇವ. ನಿನ್ನೆ ತಾವು ಕಾವ್ಯರಚನೆಗೆ ಅಗತ್ಯವಾದ ಸಿದ್ಧತೆ ವಿಚಾರದಲ್ಲಿ ಆಡಿದ ಎಚ್ಚರದ ಮಾತುಗಳನ್ನು ಮೆಲುಕು ಹಾಕುತ್ತಿದ್ದೆ,

ಅಷ್ಟೇ."

"ಅದು ತುಂಬ ಒಳ್ಳೆಯದೆ. ಕಾವ್ಯಕ್ಕೆ ವಸ್ತು ಕುರಿತು ಆಯ್ಕೆ ಮಾಡಿಕೋ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ..."

"ಆದರೆ ಎಂದರೆ? ಅನುಮಾನ ಬಗೆಹರಿಸಿ ಸ್ವಾಮಿನ್."

"ಇನ್ನು ಮೂರು ವರ್ಷವಾದರೂ ನೀನು ಕಾವ್ಯರಚನೆಗೆ ತೊಡಗಬೇಡ. ನಾವು ಹೀಗೆ ನುಡಿದೆವೆಂದು ಬೇಸರಪಡಬಾರದು. ತಂದೆಯ ವಾಗ್ಮಿತೆ, ತಾತನ ಕವಿತ್ವಶಕ್ತಿ ಎರಡನ್ನು ಮೈಗೂಡಿಕೊಳ್ಳುತ್ತಿದ್ದೀಯೆ. ಇಬ್ಬರನ್ನು ಮೀರಿಸಿದ ಪ್ರತಿಭಾಶಾಲಿಯಾಗುವೆ. ಸ್ವಲ್ಪಕಾಲ ಮಾತ್ರ ನಿಧಾನಿಸು."

"ಅಷ್ಟೇ ತಾನೇ ಆಚಾರ್ಯ! ತಾವು ಇನ್ನು ಹತ್ತು ವರ್ಷ ತೆಪ್ಪಗಿರುವಂತೆ ಅಪ್ಪಣೆ ಕೊಟ್ಟರೂ ಅದನ್ನು ನೆತ್ತಿಯಲ್ಲಿ ಹೊತ್ತೇನು."

"ಸಂತೋಷ ಮಗು. ನಿನ್ನ ಹಿತಕ್ಕಾಗಿಯೇ ಈ ಮಾತನ್ನು ಹೇಳಿದ್ದು, ಒಳಗಿನ ಒತ್ತಡ ಹೆಚ್ಚಿದಾಗ ಕಾವ್ಯ ಹೊರಬರಲೇಬೇಕು. ಸರಿ ಸರಿ ಮಧ್ಯಾಹ್ನವಾಗ ತೊಡಗಿತು. ಬಿಸಿಲಿನ ಧಗೆ ಹೆಚ್ಚುತ್ತಿದೆ. ಮಠಕ್ಕೆ ಹೋಗೋಣ ನಡೆ."

ಗುರು ಶಿಷ್ಯರು ತಾಯಿ ಮಕ್ಕಳಂತೆ ಬೆಟ್ಟವಿಳಿದು ಮಠದತ್ತ ಹೊರಟರು. ಮರು ದಿವಸವೇ ಕಳ್ವಪ್ಪಿನಿಂದ ಹೊರಟರು. ಪ್ರಯಾಣ ಮತ್ತೆ ಪುಲಿಗೆರೆಯ ಕಡೆಗೆ. ಪುಲಿಗೆರೆಯಲ್ಲಿ ಮೂರು ವಾರ ತಂಗಿದ್ದಾಯಿತು. ಪುಲಿಗೆರೆಯಲ್ಲಿ ಪುನಃ ತಂದೆತಾಯಿಗಳನ್ನು ತಮ್ಮನನ್ನೂ ನೋಡಿ ಸುಖಿಸಿದ್ದಾಯಿತು. ಜಿನವಲ್ಲಭನಿಗೆ ಪುಲಿಗೆರೆಯಲ್ಲೇ ಓದಿಸುವ ಏರ್ಪಾಟಾಗಿತ್ತು. ಪಂಪ ಭೀಮಪನಿಗೆ "ಅಪ್ಪಾಜೀ, ಜಿನ್ನಣನನ್ನೂ ನನ್ನೊಡನೆ ಕಳಿಸಬಹುದಲ್ಲವೆ? ಇಬ್ಬರೂ ಬೋಧನದ ಗುರುಕುಲದಲ್ಲೇ ಕಲಿತಂತೆ ಆಗುವುದು" ಎಂದು ಸೂಚಿಸಿದ. ಆದರೆ ಭೀಮಪ "ನೀವು ಇಬ್ಬರೂ ನಮಗೆ ಎರಡು ಕಣ್ಣುಗಳಿದ್ದಂತೆ. ಇಬ್ಬರೂ ನಮ್ಮನ್ನು ಬಿಟ್ಟು ಬಹುದೂರದ ಗುರುಕುಲದಲ್ಲಿ ಇದ್ದರೆ ಹೆತ್ತ ಕರುಳು ಕೇಳೀತೆ ಮಗೂ? ಎಂತೂ ನೀನು ಪರಮ ಪೂಜ್ಯ ದೇವೇಂದ್ರರ ಪದತಲದಲಿ ಶಿಷ್ಯತ್ವದಿಂದ ಬೋದನದಲ್ಲಿದ್ದೀಯೇ. ಇಲ್ಲಿ ಜಿನವಲ್ಲಭನಿಗೆ, ನಿನ್ನ ಗುರುಗಳಂತೆ ಕೊಂಡಕುಂದಾನ್ವಯಕ್ಕೇ ಸೇರಿದ ದೇಶ್ಯ ಗಣದ ಪೊತ್ತಗೆ ಮಾರ್ಗವಲಂಬಿ. ಜಯಗೊಂಡಸಿದ್ಧಾಂತದೇವರು ಆಚಾರ್ಯರಾಗಿದ್ದಾರೆ. ಜಿನವಲ್ಲಭ ಇಲ್ಲಿಯ ಗುರುಕುಲದಲ್ಲೇ ಕಲಿಯಲಿ ಬಿಡು" ಎಂದನು.

ಕಳ್ವಪ್ಪುವಿಗೆ ಬಂದ ಮಾರ್ಗದಲ್ಲೇ ತೆರಳಿ ಕೊಪಣಕ್ಕೆ ತಲುಪಿದರು. ಕೊಪಣದಲ್ಲಿ ನಾಲ್ಕು ವಾರವಿದ್ದು ಆನಂದತುಂದಿಲರಾದರು. ಕೊಪಣಾಚಲ

ಹತ್ತಿಳಿದು ಪಯಣಿಸಿ ಮಾನ್ಯಖೇಟಕ್ಕೆ ಬಂದರು. ಮಾನ್ಯಖೇಟದ ರಾಜಕೀಯ ಚದುರಂಗದಾಟವಾಗಿತ್ತು. ಮುಮ್ಮಡಿ ಇಂದ್ರ ಅಕಾಲ ಮರಣವನ್ನಪ್ಪಿದ. ಈಗ ಇಮ್ಮಡಿ ಅಮೋಘವರ್ಷ ಚಕ್ರವರ್ತಿಯಾಗಿದ್ದ. ಒಂದು ವರ್ಷದಲ್ಲೇ ಮಹತ್ತರ ಮಾರ್ಪಾಟು ನೆರೆದಿತ್ತು. ಆದರೆ ನಾಲ್ವಡಿ ಗೋವಿಂದ ಸಿಂಹಾಸನವೇರಲು ಅಣಿಮಾಡಿಕೊಳ್ಳುತ್ತಿದ್ದ.

ಮುಮ್ಮಡಿ ಇಂದ್ರನಂತೆಯೇ ಇಮ್ಮಡಿ ಅಮೋಘವರ್ಷನೂ ಗುರುಶಿಷ್ಯರನ್ನು ಗೌರವಿಸಿದ. ದೇವೇಂದ್ರರು ಒಂದು ವಾರ ರಾಷ್ಟ್ರಕೂಟರ ರಾಜಧಾನಿಯಲ್ಲಿದ್ದರು. ಮುಮ್ಮಡಿ ಇಂದ್ರನ ತಮ್ಮ ಬದ್ದೆಗ ಹಿಂದಿನಂತೆ ಪಂಪನನ್ನು ಕಂಡು ಹರ್ಷಿಸಿದ. ರಾಜಧಾನಿಯಲ್ಲೇ ಇದ್ದು ಬಿಡುವಂತೆ ಕೇಳಿಕೊಂಡ. ಪಂಪ ಬದ್ದೆಗನ ಗೆಳೆತನಕ್ಕೆ ಮಾರುಹೋದ. ಇಬ್ಬರೂ ಅರಿಗನ ವಿಚಾರವಾಗಿ ಬಹುವಾದ ಮಾತುಗಳನ್ನಾಡಿದರು. ಒಂದು ವಾರ ಅಪ್ಪರಲ್ಲೇ ಮುಗಿದಿತ್ತು. ದೇವೇಂದ್ರರು ಮುಂದೆ ಪಯಣಿಸಿದರು, ಶಿಷ್ಯನೊಡನೆ, ಇಪ್ಪತ್ತು ದಿನಗಳಲ್ಲಿ ಗುರುಕುಲ ತಲುಪಿಸಿದರು. ಬೋದನ ಗುರು ಶಿಷ್ಯರನ್ನು ಬರಮಾಡಿಕೊಂಡು ಒಸಗೆ ಹಾಡಿತು. ಗೋವುಗಳೂ ಕರುಗಳೂ ಬಾಲವೆತ್ತಿ ಕುಣಿಯುತ್ತಾ ಬಂದುವು. ನೆಗೆನೆಗೆದು ಬಂದುವು. ಗೆಳೆಯರ ಗುಂಪು ಕೇಕೆ ಹಾಕಿ ನಲಿಯಿತು.

ಪಂಪನಿಗಾಗಿ ಆಶ್ರಮದಲ್ಲಿ ದೊಡ್ಡ ಸ್ವಾಗತವೇ ಕಾದಿತ್ತು. ವೇಮುಲವಾಡದಿಂದ ಅರಮನೆಯ ಕರೆ ಎರಡು ಸಲ ಬಂದಿತ್ತು. ಯುವರಾಜ ಇಮ್ಮಡಿ ಅರಿಕೇಸರಿ ಪಂಪನಿಗಾಗಿ ಕರೆಕಳಿಸಿದ್ದ. ಅರಿಕೇಸರಿಗೆ ಪಂಪನನ್ನು ನೋಡಿ ಎರಡೇ ವರ್ಷವಾಗಿದ್ದರೂ ಎರಡು ಯುಗಗಳಾಯಿತೆನ್ನಿಸಿತ್ತು. ಅಲ್ಲದೆ ಪೂಜ್ಯ ವಿದ್ಯಾಗುರುಗಳಿಗೆ ಗುರುಕಾಣಿಕೆ ಅರಿಕೆ ಮಾಡಲು ತಂದೆಯವರೇ ತಿಳಿಸಿದ್ದರು. ಗುರುಗಳು ಬೋದನಕ್ಕೆ ಬಂದೊಡನೆ ಅವರ ಆಗಮನದ ಸುವಾರ್ತೆ ತಿಳಿಸಲು ವ್ಯವಸ್ಥೆಮಾಡಿ ತನ್ನ ಅರಮನೆಯ ಕಾಪಿನಾಳುಗಳನ್ನು ಬಿಟ್ಟು ಹೋಗಿದ್ದ. ಅದರಂತೆ ಆಶ್ರಮಕ್ಕೆ ಅಶ್ವಾರೋಹಿಗಳಾಗಿ ಅರಮನೆಯಾಳುಗಳು ವೇಮುಲವಾಡಕ್ಕೆ ದೌಡಾಯಿಸಿದರು. ವಾರದೊಳಗೆ ಯುವರಾಜ ಅರಿಕೇಸರಿ ಅರಮನೆಯ ಪರಿಮಿತ ಪರಿವಾರದೊಡನೆ ಬೋದನದ ಗುರುಕುಲಕ್ಕೆ ಬಂದ. ಮರುದಿವಸ ದೊರೆ ನರಸಿಂಹದೇವರೂ ಮಹಾರಾಣಿಯವರೂ ರಾಜಪರಿವಾರವೂ ಬರುವ ವಿಚಾರವನ್ನು ಅರಿಕೆ ಮಾಡಿದ. ಅನಂತರ ಅರಿಕೇಸರಿ ಪಂಪನೊಡನೆ ಆಶ್ರಮದ ಹಳೆಯ ಗೆಳೆಯರನ್ನು ಮಾತನಾಡಿಸಲು ಹೊರಟ. ಪಂಪ ಅರಿಕೇಸರಿಯರು ನಡುರಾತ್ರಿಯ ತನಕ ನೂರಾರು ವಿಷಯ ಕುರಿತು ಮಾತನಾಡಿದರು. ಘಳಿಗೆಯ

ಮಾಣಿಗಳು ಘಟಿಕಾಸ್ಥಾನದಿಂದ ನಟ್ಟಿರುಳಿನ ಕಹಳೆ ಕೊಟ್ಟಾಗಲೇ ಅವರಿಗೆ ಹೊತ್ತಿನ ಪರಿವೆಯುಂಟಾದದ್ದು. "ಮಿಕ್ಕ ಮಾತನ್ನು ನಾಳೆ ಆಡಿ ಮುಗಿಸೋಣ," ಎಂದು ನಕ್ಕು ಮಲಗಿದರು.

ಮರುದಿನದ ಅರುಣೋದಯಕ್ಕಾಗಲೇ ಗುರುಕುಲ ಚಟುವಟಿಕೆಯಲ್ಲಿತ್ತು. ವಟುಗಳು ಬಳಿಯಲ್ಲೇ ಹರಿಯುತ್ತಿದ್ದ ನದಿಯ ಸ್ನಾನ ಘಟ್ಟಗಳಲ್ಲಿ ಮಿಂದುಬಂದರು. ಎಳೆವಿಸಿಲು ಗುರುಕುಲವನ್ನು ಬಂಗಾರದ ಬೆಳಕಿನಲ್ಲಿ ತೋಯಿಸಿತ್ತು. ಕೆಲವರು ಕಮಲದ ಬೀಜರಾಶಿಗಳನ್ನು ಆರಿಸುತ್ತಿದ್ದರು. ಕೆಲವರು ಎಲೆವನೆಗಳನ್ನು ಸರಿಪಡಿಸುತ್ತಿದ್ದರು. ಅಲ್ಲಲ್ಲಿ ದಂಡ ಒತ್ತುವವರೂ ಮುಂಜ ಮೇಖಲೆಗಳನ್ನು ಒಪ್ಪುಮಾಡುವವರೂ ಸಮಿತ್ತು ಕುಶಗಳನ್ನು ತರಲು ಹೊರಟ ಹಿರಿಯರೂ ಕಾಣುತ್ತಿದ್ದರು. ಧೌತವಲ್ಕಲಗಳನ್ನು ಒಗೆದು ಮಡಿ ಮಾಡಿ ಒಣಗಿ ಹಾಕುತ್ತಿದ್ದರು. ಅಕ್ಷಮಣಿಯನ್ನು ಸಿದ್ಧಮಾಡುತ್ತಿದ್ದ ವಟುಗಳ ತಂಡದಲ್ಲಿ ಪೋಣಿಸಿ ಮುಗಿದ ಜಪಸರವನ್ನು ಎಚ್ಚರದಿಂದ ಒಳಕ್ಕೆ ಕೊಂಡೊಯ್ಯುತ್ತಿದ್ದವರು ಕೆಲವರು. ಮರಗಿಡ ಬಳ್ಳಿಗಳಿಗೆ ಪಾತಿಮಾಡುವುದರಲ್ಲೂ, ನೀರೆರೆಯುವುದರಲ್ಲೂ ಎಳೆಯರು ಕೆಲವರು ಹುರುಪಿನಲ್ಲಿದ್ದರು. ಬಿದಿರಿನ ದೊಡ್ಡ ಬುಟ್ಟಿಗಳಲ್ಲಿ ಹೂ ಬಿಡಿಸುತ್ತಿದ್ದವರು ಹಲವರು. ಓಲೆಕಟ್ಟುಗಳನ್ನು ತಂದು ಧೂಳು ಕೊಳೆ ಕೊಡವಿ ಸರಿಯಾಗಿ ಕಟ್ಟಿ ಇಡುತ್ತಿದ್ದವರು ಕೆಲವರು.

ಅತಿಥಿಗಳನ್ನೂ ಅಭ್ಯಾಗತರನ್ನೂ ಆಧರಿಸಲು ಅಣಿಯಾದ ತಂಡದವರು ದೂರ ದೂರದವರೆಗೆ ಕಣ್ಣು ಹಾಯಿಸಿ ಕೊರಳು ಚಾಚಿ ಕತ್ತೆತ್ತಿ ನೋಡುತ್ತಿದ್ದರು. ಯಾರಾದರೂ ಬಂದಾರೇ ಸತ್ಕರಿಸೇವೆಯೇ ಎಂದು ಮೈಯೆಲ್ಲಾ ಕಣ್ಣಾಗಿ ನೋಡುತ್ತಿದ್ದರು, ಕಿವಿಯಾಗಿ ಕೇಳುತ್ತಿದ್ದರು. ಇನ್ನೊಂದು ಕಡೆ ಧರ್ಮಶಾಸ್ತ್ರಗಳನ್ನೂ ಪೂರ್ವಪುರಾಣವನ್ನೂ ಉತ್ತರ ಪುರಾಣವನ್ನೂ ಆಗಮ ಪ್ರತಿಯನ್ನೂ ಓದುವುದರಲ್ಲಿ ದೊಡ್ಡ ತಂಡವೇ ತೊಡಗಿತ್ತು. ಆಯಾ ಗುಂಪಿನ ಗುರುಗಳನ್ನು ಆಗಾಗ್ಗೆ ಬಂದು ವಿಚಾರಿಸುತ್ತಿದ್ದರು. ಅನುಮಾನ ಪರಿಹರಿಸಿಕೊಳ್ಳುತ್ತಿದ್ದರು. ತತ್ವ ನಿರೀಕ್ಷಣೆಯಲ್ಲಿ ತಲ್ಲೀನರಾಗುತ್ತಿದ್ದರು.

ಮತ್ತೊಂದು ಕಡೆ ಮುನಿಗಳ ಸಂಘ ಯೋಗದ ಉನ್ನತಿಯಲ್ಲಿ ಮಗ್ನವಾಗಿತ್ತು. ಅವರುಗಳಿಂದಾಗಿ ಗುರುಕುಲಕ್ಕೆ ತಪೋವನದ ಶೋಭೆ ಬಂದಿತ್ತು. ಉದ್ದಿಷ್ಟವಿರತರೂ, ಅನುಮತಿವಿರತರೂ, ಐಲಕರೂ, ಕ್ಷುಲ್ಲಕರೂ ಆತ್ಮಕಲ್ಯಾಣ ಚಿಂತನೆಯಲ್ಲಿ ತನ್ಮಯವಾಗಿದ್ದರು. ಆಗಮಾದಿ ಶಾಸ್ತ್ರ ಗ್ರಂಥಗಳಿಂದ ಸ್ವಾಧ್ಯಾಯ ನಡೆಸುತ್ತಿದ್ದರು. ಯೋಗಿ ವೃಂದಾರಕರ ದರ್ಶನ ಭಾಗ್ಯಕ್ಕಾಗಿ ಬೋದನದ

ಶ್ರಾವಕ ಶ್ರಾವಕಿಯರು ತಂಡತಂಡವಾಗಿ ಬಂದು ಹೋಗುತ್ತಿದ್ದರು. ಗೋಮಯ ಹಚ್ಚಿ ತೊಳೆದು ಗುರುಕುಲದ ನೆಲವನ್ನು ಹಸನು ಮಾಡಿದ್ದರು. ಅಲ್ಲಲ್ಲಿ ರಂಗವಲ್ಲಿಯ ಚೆಲುವು ಎದ್ದು ಕಾಣುತ್ತಿತ್ತು. ಗುರುಕುಲದ ನಡುವೆ ಅಶೋಕವೃಕ್ಷದ ಬಳಿಯ ವಿಶಾಲವಾದ ಆಲದ ನೆರಳಲ್ಲಿ ಸಸ್ತಿಶ್ರೀ ದೇವೇಂದ್ರರು ಕುಳಿತಿರುತ್ತಿದ್ದರು. ಗುರುಕುಲದ ಕೇಂದ್ರಬಿಂದು ಅವರೇ ಎಂಬುದು ತಾನಾಗಿ ತಿಳಿದು ಬರುತ್ತಿತ್ತು.

ಮಗದೊಂದು ಕಡೆ ಯುವರಾಜ ಅರಿಕೇಸರಿ ಬಿಟ್ಟ ಕಣ್ಣಿಂದ ಇದೆಲ್ಲವನ್ನೂ ಸಾಕ್ಷೀಪ್ರಜ್ಞೆಯಂತೆ ನೋಡುತ್ತಾ ನಿಂತಿದ್ದಾನೆ. ತಾನು ಕೆಲವು ವರ್ಷ ಇಲ್ಲಿ ಕಲಿತದ್ದೂ, ಇಲಿನ ವಟುಗಳಲ್ಲೊಬ್ಬನಾಗಿ ಕಲೆತು ಕಲಿತದ್ದೂ ನೆನಪಾಯಿತು. ಅರಮನೆಯ ಬದುಕಿಗಿಂತ ಇಲ್ಲಿನ ಬಾಳೇ ಆನಂದಮಯ ಹಾಗೂ ಆತಂಕರಹಿತವೆನ್ನಿಸಿತು. ಗುರುಕುಲದ ಅಂಚಿನಲ್ಲೇ ಸಂಚರಿಸಿದರೆ ಇನ್ನೂರು ಮಾರು ಆದಮೇಲೆ ದಿನ್ನೆ. ಅಲ್ಲಿಂದ ನೋಡಿದರೆ ಬೋದನ ಕಾಣುತ್ತಿತ್ತು. ಇನ್ನೂ ಮೂರು ನಾಲ್ಕು ವರ್ಷವಾದರೂ ಇಲ್ಲಿ ಇರಬೇಕಿತ್ತೆನಿಸಿತು. ಆದರೆ ಅಷ್ಟರಲ್ಲಿ ಅಪ್ಪಾಜಿಯ ಕರೆ ಬಂದಿತ್ತು. ಇಲ್ಲಿಂದ ಹೊರಟಾಗ ಲೌಕಿಕದ ವಿಚಾರದಲ್ಲಿ ಏನೂ ತಿಳಿಯದ ಹಸುಳೆ. ಆದರೆ ಈ ಎರಡು ವರ್ಷದಲ್ಲಿ ಅರಮನೆಯ ಬದುಕು ಅದೆಷ್ಟು ಹೊಸ ವಿಷಯಗಳ ಪಾಠ ಕಲಿಸಿತ್ತು. ಆದರೂ.....

ಅರಿಕೇಸರಿಯ ಆಲೋಚನೆಯನ್ನು ಖರಪುಟ ದನಿ ಎಚ್ಚರಿಸಿತು. ಅರಸರ ಆಗಮನ ಸಾರುವ ಕಹಳೆ ಹರೆ ಕೊಂಬು ಜಯಕಾರ ಪರಾಕುಗಳು ಮೊಳಗಿದವು. ಮನೆವೆರ್ಗಡೆಗಳೂ ಪಾರುಪತ್ಯಗಾರರೂ ದರ್ಬಾರು ಬಕ್ಷಿಗಳೂ ಒಬ್ಬೊಬ್ಬರಾಗಿ ಬರತೊಡಗಿದರು. ಬೋದನ ಹಾಗೂ ನೆರೆಹೊರೆಯ ಹಳ್ಳಿಗಳಿಂದ ಮಹಾಜನರೂ ಗಾವುಂಡಾದಿಗಳೂ ಕಿರಿಯ ಸಾಮಂತ ಮನ್ನೆಯರೂ ಉಪಸ್ಥಿತರಾದರು. ಗುರುಕುಲದ ಹೆಬ್ಬಾಗಿಲು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಹೆಬ್ಬಾಗಿಲು ದಾಟಿ ನೂರು ಅಡಿ ಬರುತ್ತಿದ್ದಂತೆ ಎಡಕ್ಕೆ ದೊಡ್ಡ ಚಪ್ಪರ ಕಟ್ಟಿತ್ತು. ಎಲ್ಲೆಲ್ಲೂ ಹಸಿರುವಾಣಿ.

ಬೋದನ ನಗರದಲ್ಲೂ ಗುರುಕುಲದಿಂದ ರಾಜರ ಬಿಡಾರದ ತನಕ ಉದ್ದಕ್ಕೂ ಚಪ್ಪರಗಳು ಸಿದ್ಧವಾಗಿದ್ದವು. ಬಾಳೆಗಿಡಗಳನ್ನೂ ಗೊನೆಗಳೊಡನೆ ಕಟ್ಟಿದ್ದರು. ಮಿರಿಮಿರಿ ಮಿಂಚುವ ಕೆಂದೆಂಗು ಅಡಕೆ ಗೊನೆಗಳನ್ನೂ ತೂಗಿಬಿಟ್ಟಿದ್ದರು. ತೆಂಗಿನ ಗರಿಗಳಿಂದ ಹಾಸಿ ಕಟ್ಟಿದ ಚಪ್ಪರಕ್ಕೆ ಅಲ್ಲಲ್ಲಿ ಹೊಂಬಾಳೆಗಳಿಂದ ಸಿಂಗರಿಸಿದ್ದರು. ಅಂದು ನರಸಿಂಹ ಪ್ರಭುಗಳು, ಅವರ ತಂದೆಯುವರ ಕಾಲದಲ್ಲಿ ಬೋದನ ರಾಜಧಾನಿಯಾಗಿದ್ದಾಗ ಕಟ್ಟಿಸಿದ

ಅರಮನೆಯಲ್ಲೇ ಇಳಿದುಕೊಳ್ಳಲು ಏರ್ಪಾಟಾಗಿತ್ತು. ಭಾಣಸವೆರ್ಗಡೆಗಳು ಉಳಿದ ಉಗ್ರಾಣಿಕರೊಡನೆ ಬಂದುದಾಗಿತ್ತು. ಶಾಸನ ಸಂಚಾರಿಗಳು ಈ ಎಲ್ಲಾ ಏರ್ಪಾಟನ್ನೂ ಗೃಹಮಹತ್ತರರ ಸಹಕಾರದಿಂದ ಖುದ್ದಾಗಿ ನೋಡಿದ್ದರು. ರಹಸ್ಯಾಧಿಕೃತರು ಅನೇಕ ಕಡೆ ಮಾರುವೇಷಗಳಿಂದ ಸಂಚರಿಸುತ್ತಿದ್ದರು.

ನರಸಿಂಹ ಪ್ರಭುಗಳ ಸಾಲಂಕೃತ ರಥ ಆಶ್ರಮದ ಹೆಬ್ಬಾಗಿಲು ಬಳಿಗೆ ಬರುತ್ತಿದ್ದಂತೆ ಸೇರಿದ್ದ ಸಹಸ್ರ ಸಹಸ್ರ ಸಂಖ್ಯೆಯ ಜನತೆ ಮುಗಿಲು ಮುಟ್ಟುವ ಉದ್ಘೋಷ ಮಾಡಿತು. ದೊರೆ ರಥವನ್ನು ಹತ್ತು ಅಡಿ ದೂರದಲ್ಲೇ ನಿಲ್ಲಿಸಿ ಇಳಿದರು. ಆಶ್ರಮದ ಪರವಾಗಿ ಪಂಪ ಗೌರವ ಸೂಚಕ ಪುಷ್ಪಹಾರ ಹಾಕಿ ಪೊಡಮಟ್ಟ. ಪಂಪನ ಪಕ್ಕದಲ್ಲೇ ಅರಿಕೇಸರಿ ಮುಗಳುನಗೆ ಸೂಸುತ್ತಾ ನಿಂತಿದ್ದ.

ಮಹಾರಾಜರನ್ನೂ ಯುವರಾಜರನ್ನೂ ಒಂದೆಡೆ ನೋಡುವ ಸೌಭಾಗ್ಯ ದೊರೆತ ಆನಂದದಿಂದ ಜನತೆ ಕುಣಿದಾಡಿತು. ನರಗದೊರೆ ಮಿತಪರಿವಾರದೊಡನೆ ಆಚಾರ್ಯ ದೇವೇಂದ್ರರ ಬಳಿಗೆ ಹೋದ. ಅವರಿಗೆ ಸಾಷ್ಟಾಂಗ ಎರಗಿದ ಆಚಾರ್ಯರು "ಧರ್ಮವೃದ್ಧಿರಸ್ತು, ಆಯುಷ್ಮಾನ್‌ಭವ" ಎಂದು ಹರಸಿದರು. ಉಭಯಕುಶಲೋಪರಿ ಸಾಂಪ್ರತದ ಮಾತುಕತೆ ಆಯಿತು. ಅನಂತರ ಸಪಾದಲಕ್ಷ ಕ್ಷಿತಿಯೊಡೆಯ ನರಗ ದೊರೆ ದೇವೇಂದ್ರರಿಗೆ ಪ್ರಜೆಗಳ ಪರವಾಗಿ ಗೌರ ಸನ್ಮಾನಗಳನ್ನಿತ್ತ. ಗುಡಿ ಶಂಖ ಚಾಮರ ಬೆಳ್ಗೊಡೆ ಫಳಿಗಾದಿಗಳನ್ನು ಗೌರವಪುರಸ್ಸರನಾಗಿ ದೇವೇಂದ್ರರಿಗೆ ಅರ್ಪಿಸಿ ಸನ್ಮಾನಿಸಿದ. ಅಂದು ಮಧ್ಯಾಹ್ನ ಚರಿಗೆಯ ಸಮಯಕ್ಕೆ ಸರಿಯಾಗಿ ಜಿನಮುನಿಗಳಿಗೆ ಮಡಿಯಿಂದ ನಿಂತು ಭಕ್ತಿ ಪೂರ್ವಕವಾಗಿ ಆಹಾರ ದಾನವಿತ್ತ.

ಅನಂತರ ಬೋದನದ ಅರಮನೆಗೆ ತೆರಳಿ ಊಟ ವಿಶ್ರಾಂತಿಗಳನ್ನು ಪಡೆದ, ಸಾಯಂಕಾಲದ ಒಡ್ಡೋಲಗದಲ್ಲಿ ಅಲ್ಲಿಗೆ ಬಂದಿದ್ದವರಿಗೆಲ್ಲ ದರ್ಶನವಿತ್ತ. ಕಷ್ಟ ಸುಖಗಳನ್ನು ವಿಚಾರಿಸಿದ. ಅಂದು ಬಂದ ಕಪ್ಪ ಕಾಣಿಕೆಗಳನ್ನು ಬೋದನದ ಗುರುಕುಲಕ್ಕೂ ಅಲ್ಲಿನ ಸಕಲ ಧರ್ಮಗಳ ದೇವಾಲಯಗಳ ಜೀರ್ಣೋದ್ಧಾರಕ್ಕೂ ಬಳಸಲು ಅಪ್ಪಣೆ ಮಾಡಿದ. ಬೇಹುಗಾರರಿಂದ ಸುದ್ದಿ ಸಂಗ್ರಹಿಸಿದ. ಸಂಜೆ ಪಂಜಿನ ಬೆಳಕಿನಲ್ಲಿ ಮಲ್ಲರ ಕಾಳಗವನ್ನೂ, ನೃತ್ಯವನ್ನೂ ನೋಡಿದ. ಸಂಗೀತಗಾರರ ಸಂಗೀತವನ್ನು ಕೇಳಿದ. ಪಗರಣಿಗರ ವೇಷದಾಟ ನೋಡಿ ಆನಂದಿಸಿದ. ಕವಿ ಗಮಕಿ ವಿದ್ವಾಂಸರಿಗೆ ಮನ್ನಣೆ ನೀಡಿದ. ಬಂದ ಜನ ಪ್ರಭುವನ್ನು ಕೊಂಡಾಡಿದರು. ದೊರೆಗಳ ಹತ್ತಿರದಲ್ಲೇ, ಯುವರಾಜ ಅರಿಕೇಸರಿಯ ಬಳಿ, ಕುಳಿತಿದ್ದ ಪಂಪ ಇದೆಲ್ಲವನ್ನೂ ಮೈಯೆಲ್ಲಾ ಕಣ್ಣಾಗಿ ನೋಡಿದ.

ಮಾರನೆಯ ದಿವಸ ಬೆಳಗ್ಗೆ ಮತ್ತೊಮ್ಮೆ ಗುರುಕುಲಕ್ಕೆ ದೊರೆಗಳ ಆಗಮನವಾಯಿತು. ಕೆಲವು ನಿಮಿಷ ಮಾತ್ರದ ಈ ಸಂದರ್ಶನದ ನಂತರ ಅರಸರು ವೇಮುಲವಾಡಕ್ಕೆ ಪಯಣಿಸಿದರು. ಹೋಗುವ ಮುನ್ನ ನರಗ ದೊರೆ ಆಶ್ರಮದ ವಿದ್ಯಾರ್ಥಿಗಳ ಊಟ ವಸತಿ ಸೌಕರ್ಯಕ್ಕಾಗಿ ಬೋದನದ ಅರಮನೆಯ ಅಸ್ತಿಯಲ್ಲಿ ಒಂದು ಪಾಲು ದತ್ತಿ ಹಾಕಿಸಿಕೊಟ್ಟ. ಊರಿನ ಬಡಗಣ ದೆಸೆಯ ನೀರಾವರಿಯ ನೆಲವೆಲ್ಲ ಗುರುಕುಲಕ್ಕೆ ಸೇರಿತು. ಅಲ್ಲಿನ ಬೆಳೆಯೆಲ್ಲ ಗುರುಕುಲ ಸೇರುವ ವ್ಯವಸ್ಥೆಯಾಯಿತು. ಅರಮನೆಯಿಂದ ತುರುಹಟ್ಟಿಯಿಂದ ನೂರು ಗೋವುಗಳನ್ನು ಗುರುಕುಲದ ಕ್ಷೀರಾಗಾರಕ್ಕೆ ಕಳಿಸಲಾಯಿತು. ನಗರಕ್ಕೆ ಪಡುವಣ ದೆಸೆಗಿದ್ದ ಅರಸರ ಆಸ್ತಿಗೆ ಸೇರಿದ್ದ ಕಾಡಿನ ಒಂದು ಭಾಗವನ್ನು ಗುರುಕುಲದವರೆಗೆ ನೀರು ಕಾಯಿಸಲೂ ಅಡಿಗೆಮಾಡಲೂ ಬೇಕಾದ ಕಟ್ಟಿಗೆ ಸೌದೆ ಸರಬರಾಜಿಗೆ ಉಂಬಳಿ ಹಾಕಿಕೊಡಲಾಯಿತು. ನರಗ ದೊರೆಯ ಕಣ್ಣಾಸರೆಯಿಂದ ಈ ಎಲ್ಲಾ ಸವಲತ್ತುಗಳೂ ದೊರೆತವು.

ಎರಡು ದಿನಗಳಾದ ಮೇಲೆ ಅರಿಕೇಸರಿಯೊಡನೆ ಪಂಪನೂ ಗುರುಗಳ ಅನುಮತಿ ಪಡೆದು ವೇಮುಲವಾಡಕ್ಕೆ ಹೊರಟ. 'ಕೆಲವು ದಿನವಸಗಳ ತನಕವಷ್ಟೇ ಪಂಪ ರಾಜಧಾನಿಯಲ್ಲಿ ಇದ್ದು ಬರಲು ಪೂಜ್ಯರು ಆದೇಶವೀಯಬೇಕು' ಎಂದು ಅರಿಕೇಸರಿ ಅರಿಕೆ ಮಾಡಿಕೊಂಡ ಮೇಲೆ ಅನುಮೋದನೆ ದೊರೆತದ್ದು. ಪಂಪನಿಗೆ ತಾನೇ ಕೇಳಲು ಸಂಕೋಚ. ಸಮ್ಮತಿ ಸಿಕ್ಕಕೂಡಲೇ ಗೆಳೆಯರಿಬ್ಬರೂ ಕುದುರೆ ಹತ್ತಿ ನಸುಕಿನಲ್ಲೇ ಹೊರಟರು. ಅವರ ವೇಗದಲ್ಲಿ ಅರಮನೆಯ ಕಾಪಿನಾಳುಗಳಿಗೆ ಹಿಂಬಾಲಿಸಿ ಹೋಗಲು ಆಗುತ್ತಿರಲಿಲ್ಲ. ಅಲ್ಲದೆ ಇಬ್ಬರೂ ಅಶ್ವಹೃದಯವರಿತ ನಿಷ್ಣಾತರು. ಸಲುಗೆಯ ಪೈಪೋಟಿಯಿಂದ ದೌಡಾಯಿಸದರು.

ಪಂಪ ಅರಿಕೇಸರಿಯರು ವೇಮುಲವಾಡವನ್ನೂ ನೆರೆಹೊರೆಯ ಚಾರಿತ್ರಿಕ ಸ್ಥಳಗಳನ್ನೂ ಹಲವು ಸಲ ನೋಡಿ ಬಂದರು. ಅರಿಕೇಸರಿಗೆ ಅವೆಲ್ಲ ಚಿರ ಪರಿಚಿತವಾಗಿದ್ದರೂ ಮತ್ತೊಮ್ಮೆ ಸುತ್ತಿಬಂದ. ಪಂಪನಂತೂ ಇರುಳಲ್ಲಿ ಎಕ್ಕಲಗಾನ ಬಯಲಾಟ ತಾಳಮದ್ದಳೆ ನುಡಿಸುವುದು ನೋಡಿ ಬರುತ್ತಿದ್ದ. ಪುರಾಣ ಪ್ರವಚನ ಕೇಳಿಬರುತ್ತಿದ್ದ. ಮುಂಜಾವಿನಲ್ಲಿ ಕುದುರೆ ಹತ್ತಿ ಹೊರಟು ಬಳಿಯ ಹಳ್ಳಿಗಳಿಂದ ಜಾನಪದ ಗೀತೆಗಳನ್ನು ಕೇಳಿ ಆನಂದಿಸುತ್ತಿದ್ದ. ಅರಮನೆಯ ಗಜಶಾಲೆ, ಕುದುರೆಲಾಯ, ಅಸ್ತ್ರಶಸ್ತ್ರಗಳ ಆಯುಧಾಗಾರ, ಗರಡಿ ಮನೆ ಎಲ್ಲಾ ನೋಡಿದ. ಒಂದೇ ರೆಂಬೆಯ ಜೋಡಿ ಹೂಗಳಂತೆ ಪಂಪ ಅರಿಗರು ಕಾಣುತ್ತಿದ್ದರು. ಅರಮನೆಯಲ್ಲೂ ಅವರನ್ನು ಅವಳಿಜವಳಿ ಎಂದು ಕರೆಯತೊಡಗಿದರು. ನರಸಿಂಹ

ಪ್ರಭು ಕೂಡ, ಈ ವಿಚಾರವಾಗಿ ಪ್ರಸ್ತಾಪಿಸಿದ್ದುಂಟು.

"ಪಂಪಾ, ನೀನು ನಮ್ಮ ಅರಮನೆಯಲ್ಲೇ ಇದ್ದುಬಿಡು. ಯುವರಾಜನಿಗೂ ನಿನ್ನನ್ನು ಕಂಡರೆ ಪಂಚಪ್ರಾಣ. ನೀವಿಬ್ಬರೂ ಕೆಳೆತನದ ಕಂದಲ್ಗಳಂತೆ ಕಂಗೊಳಿಸುತ್ತಿದ್ದೀರಿ. ನಿನ್ನ ತಂದೆಯವರಿಗೆ ಹೇಳಿಕಳಿಸಿ ಕರೆಸುತ್ತೇನೆ."

"ಮಹಾಸ್ವಾಮಿ, ನನ್ನ ವ್ಯಾಸಾಂಗ ಮುಗಿದ ಮೇಲೆ ಈ ವಿಚಾರವಾಗಿ ತಾವು ಅಪ್ಪಣೆ ಕೊಡಿಸಿದಂತೆ ಆದೀತು. ಈಗ ನಾನು ಗುರುಕುಲದ ಅಧೀನವೆಂಬುದನ್ನು ತಾವು ಬಲ್ಲಿರಿ."

"ಅಹುದು ಮಗು. ನಿನ್ನ ವಿದ್ಯಾಭ್ಯಾಸಾವಧಿ ಮುಗಿದ ಮೇಲೆ ಭೀಮಪಯ್ಯನವರ ಅಪ್ಪಣೆ ಪಡೆದು ಇಲ್ಲಿಗೆ ಬಂದು ಬಿಡು. ನಮ್ಮ ಆಸ್ಥಾನದಲ್ಲಿಯ ಪಂಡಿತ ಮಂಡಳಿಯಲ್ಲಿ ನೀನು ಒಬ್ಬನಾಗಿ ಸೇರಬಹುದು."

"ತಮ್ಮ ಚಿತ್ತ ಪ್ರಭು."

ಪಂಪನಿಗೆ ಭವಿಷ್ಯದತ್ತ ಒಂದು ಸೂಚನೆ ದೊರೆತಂತಾಗಿ ಚೈತನ್ಯ ಚಿಮ್ಮಿತು, ಆತ್ಮವಿಶ್ವಾಸ ಹೆಚ್ಚಿತು. ಆಳುವ ಒಡೆಯರ ಪರಸ್ಪರ ಮೆಚ್ಚುಗೆ ಗಳಿಸಿದ ನಾನು ಇನ್ನೂ ಚೆನ್ನಾಗಿ ಕಲಿಯಬೇಕು ಎಂದು ಮನದೊಳಗೆ ತೀರ್ಮಾನಿಸಿದ.

ಮಿಂಚಿ ಮಾಯವಾಗುವ ಮುಗುಳು ನಗೆಯಂತೆ ಒಂದು ತಿಂಗಳು ಉರುಳಿತು. ಅರಿಕೇಸರಿಯ ಕಳೆತನದ ಅಭಿಷೇಕದಲ್ಲಿ ದಿನಗಳು ಉರುಳಿದುದು ತಿಳಿಯಲೇ ಇಲ್ಲ. ಅರಿಕೇಸರಿ "ಪಂಪಾ, ನೀನು ಓದಿದ್ದು ಸಾಕು, ಇಲ್ಲೇ ಇದ್ದು ಬಿಡು" ಎಂದು ಮತ್ತೆ ಮತ್ತೆ ಒತ್ತಾಯಿಸಿದ. ಇರುವ ಮನಸ್ಸೇ! ಆದರೂ ಕಲಿಕೆಯ ಹಂಬಲ ಒಳಗಿನ ಕರೆಯಾಗಿ ಗುರಿಯತ್ತ ಧಾವಿಸಲು ಪ್ರಚೋದಿಸಿತು. ಭಾರವಾದ ಹೃದಯದಿಂದ ಅರಿಕೇಸರಿ ಪಂಪನನ್ನು ಕಳಿಸಿಕೊಟ್ಟ.

* * * *

ನಿಗದಿಗೊಳಿಸಿದ್ದ ಎಲ್ಲಾ ಸನ್ನಿಯನಗಳಲ್ಲೂ ಉತ್ತೀರ್ಣಗೊಂಡು ಗುರುಕುಲದಲ್ಲಿ ಪಂಪ ಎಲ್ಲರ ಕಣ್ಮಣಿಯಾಗಿ ಬೆಳೆದು ನಿಂತ. ಅವನು ಬರೆದುಕೊಡುತ್ತಿದ್ದ ಹಾಡುಗಳನ್ನು ಓರಗೆಯವರು ಹಾಡಿ ಹುರಿದುಂಬಿಸುತ್ತಿದ್ದರು. ಪಂಪನೇ ಅವುಗಳಿಗೆ ಸ್ವರಸಂಯೋಜನೆ ಹಾಕಿಕೊಡುತ್ತಿದ್ದ. ಅವನ ರಾಗತಾಳ ಜ್ಞಾನ ಕಂಡು ಒಡನಾಡಿಗಳಿಗೆ ಹೆಮ್ಮೆ ನಿತ್ಯ ಹೊಸ ಹೊಸ ಮುಕ್ತಕಗಳನ್ನೋ ಸುಭಾಷಿತಗಳನ್ನೊ ಹಾಡನ್ನೊ ರಚಿಸುವ ಅವನ ಸಹಜ ಸ್ಫೂರ್ತಿ ಎಲ್ಲರ ಮೆಚ್ಚುಗೆ ಗಳಿಸಿತು. ಅವನ ಜ್ಞಾನದಾಹ ಅಸೀಮವಾಗಿತ್ತು. ಗುರುಕುಲಾಶ್ರಮದ ಶ್ರುತಭಂಡಾರದ ಎಲ್ಲಾ ಓಲೆ ಗ್ರಂಥಗಳನ್ನೂ ಅಮೂಲಾಗ್ರವಾಗಿ ತಿರಿವಿ

ಹಾಕತೊಡಗಿದ. ವ್ಯಾಸಭಾರತ ಮತ್ತು ವಾಲ್ಮೀಕಿ ರಾಮಾಯಣ ಕಾವ್ಯಗಳನ್ನು ಪದೇ ಪದೇ ಓದುವುದು ಸರಿಯಾದುದೇ ಎಂಬ ಸಂಶಯ ಕಾಡಿಸಿತು. ಕೂಡಲೇ ಗುರುಗಳ ಹತ್ತಿರ ಹೊರಟ.

"ಸ್ವಾಮಿನ್, ಜಿನಸೇನರ ಗುಣಭದ್ರರಂತೆ ವ್ಯಾಸವಾಲ್ಮೀಕಿಗಳೂ ನನ್ನ ಎದೆಯಾಳದಲ್ಲಿ ಮನೆಮಾಡಿದ್ದಾರೆ. ಅವರ ಹೆಜ್ಜೆ ಗುರುತುಗಳನ್ನು ಹಿಂಬಾಲಿಸಲೂ ಅಮೋಘ ಶಕ್ತಿ ಬೇಕೆನಿಸುತ್ತದೆ. ನಾವುಗಳು ಅನ್ಯಧರ್ಮಿಯರಾದ ಪ್ರತಿಭಾಪುತ್ರರ ಕೃತಿಗಳನ್ನೂ ತಿಳಿಯುವುದು ಲೇಸಲ್ಲವೆ?'

"ಅಹುದು ಚಿರಂಜೀವಿ. ಗುಣಪಕ್ಷಪಾತಿಗಳಿಗೆ ಧರ್ಮ ಎಂದೂ ಅಡ್ಡ ಬರದು, ಪ್ರತಿಭೆಗೆ ಪಾಂಡಿತ್ಯ ಔನ್ನತ್ಯಗಳು ಗಾಳಿ ಬೆಳಕು ಇದ್ದಂತೆ. ಒಳ್ಳೆಯ ಗಾಳಿ ಬೆಳಕು ಯಾವ ಕಡೆಯಿಂದ ಬಂದರೂ ಬರಮಾಡಿಕೊಳ್ಳಬೇಕು. ಆರೋಗ್ಯದ ದೃಷ್ಟಿಯಿಂದ ಅದು ಸ್ವಾಗತಾರ್ಹ. ಹಿಂದೆ ಭಾಸ ಭವಭೂತಿ ಕಾಳಿದಾಸಾದಿಗಳ ಕೃತಿಗಳನ್ನು ನಾವೇ ಹೇಳಿದ್ದೆವಲ್ಲಾ. ಈಗೇಕೆ ಈ ಅನುಮಾನ?"

"ಗುರುಕುದಲ್ಲಿ ಚಾತುರ್ಮಾಸಕ್ಕೆ ಇಳಿದಿದ್ದ ಯತಿಗಳೊಬ್ಬರು ಹಾಗೆ ಸೂಚಿಸಿದರು."

"ತಪ್ಪು ಮಗು. ಸಾಹಿತ್ಯಕ್ಕೆ ಜಾತಿಸೂತಕವಿಲ್ಲ. ವಾಲ್ಮೀಕಿ ಬೇಡ, ವ್ಯಾಸಬೆಸ್ತ, ಕಾಳಿದಾಸ ಕುರುಬ, ಹಾಗೆಂದು ಅವರ ಮಹಾಪುರುಷತನಕ್ಕೆ ಕುಂದಾಯಿತೆ? ಆತ್ಮನಿಗೆ ಜಾತಿ ಎಲ್ಲಿದೆ ಮಗು."

"ಸರಿ ಗುರುದೇವಾ, ನನ್ನ ಸಂದೇಹ ಪರಿಹಾರವಾಯಿತು."

"ಇರು, ಹೋಗಬೇಡ ಕುಳಿತುಕೊ. ಎಂತೂ ಮಾತಿಗೆ ತೊಡಗಿದ್ದಾಗಿದೆ. ಪಂಪಾ, ಇನ್ನು ಗುರು ಮುಖೇನ ನೀನು ಕಲಿಯುವುದು ಮುಗಿಯಿತು. ಏಕಸಂಧಿ ಗ್ರಾಹಿಯಾದ ನಿನ್ನ ಮುಂದೆ ಓಜರೆ ಚಟ್ಟರ್ ಎಂಬಂತಾಗಿರುವುದು ಇಲ್ಲಿನ ಗುರುವೃಂದಕ್ಕೆ ಕಾರಣವಾಗಿದೆ. ನಿನ್ನ ಮುಂದಿನ ಓದು, ಬದುಕಿನ ದಾರಿ ಕುರಿತು ನಿರ್ಧಾರ ಮಾಡಿಕೊಳ್ಳಲು ಈಗ ಕಾಲ ಬಂದಿದೆ."

"ಗುರುದೇವಾ, ತಮ್ಮ ಆಶ್ರಮ ಬಿಡುವುದೆಂದರೆ ನನಗೆ ಜೀವ ಬಿಟ್ಟಂತೆ ಎನ್ನಿಸುತ್ತದೆ."

"ಅಗಲಿಕೆ ಅನಿವಾರ್ಯ ಮಗು. ಶಿಷ್ಯಾದಿಚ್ಛೇತ್ ಪರಾಜಯಂ ಎಂಬಂತೆ ಗುರುವನ್ನೂ ಮೀರಿಸಿದ ಶಿಷ್ಯನೆಂದು ನೀನು ಲೋಕ ವಿಖ್ಯಾತನಾಗಬೇಕು."

"ಅಂಥ ಯೋಗ್ಯತೆ ನನ್ನಲ್ಲಿದೆಯೆ ಆಚಾರ್ಯ!"

"ಇದೆಯೆಂಬುದು ನನ್ನಿ. ಪಾಂಡಿತ್ಯ ಪ್ರತಿಭೆಗಳ ವಿದ್ಯುದಾಲಿಂಗನ

ನಿನ್ನಲ್ಲಾಗಿದೆ. ಅದಕ್ಕೆ ಸೇರಬೇಕಾದ ಮತ್ತೊಂದು ಜ್ಞಾನವೆಂದರೆ ಲೋಕಾನುಭವ. ಅದನ್ನು ಗುರುಗಳಿಂದ ಪಡೆಯಲಾಗದು. ಬದುಕೇ ಅನುಭವದ ಪರಿಪರಿಯ ಪಾಠ ಕಲಿಸುವ ಶ್ರೇಷ್ಠಗುರು. ಹಿರಿಯ ಮಟ್ಟದ ಕಾವ್ಯದ ಹುಟ್ಟಿಗೆ ಪಾಂಡಿತ್ಯ ಪ್ರತಿಭೆ ಲೋಕಾನುಭವಗಳ ಮುಪ್ಪುರಿಯೇ ಮೂಲ ಕಾರಣ. ಸ್ಫೂರ್ತಿ ಪ್ರೇರಣೆಯನ್ನು ಒದಗಿಸುತ್ತದೆ. ಆ ಬಗೆಯ ಕಾಲ ನಿಲುವ ಕಾವ್ಯದ ಅವತರಣ ನಿನ್ನ ಮೂಲಕ ಆದೀತೆಂಬ ಭರವಸೆಯಿದೆ."

"ದಿವ್ಯಾಶೀರ್ವಾದದಿಂದ ಪುನೀತಗಾತ್ರನಾದೆ ಆಚಾರ್ಯ, ನಾನಿನ್ನು ಮರು ಹುಟ್ಟುವಡೆದ ಹೊಸ ಮಗು."

"ಪ್ರಬುದ್ಧ ಶಿಷ್ಯನಾದ ನೀನು ಕೇವಲ ಶಿಷ್ಯನಾಮಧಾರಿಯಲ್ಲ, ಶಿಷ್ಯೋತ್ತಮನಾಗಿದ್ದೀಯೇ. ಲೋಕವಿಖ್ಯಾತನಾಗಿ ಬಾಳು, ಆಳು. ಇಲ್ಲಿ ಕಲಿಯುವುದು ಇನ್ನೇನೂ ಉಳಿದಿಲ್ಲ. ಕೆರೆಕಟ್ಟೆ ತೊರೆ ಹಳ್ಳ ಬಾವಿಗಳು ನಿನ್ನ ಅಳವಿಗೆ ಸಾಲವು ಮಗು. ನದಿ ಸಮುದ್ರಗಳನ್ನು ಅಲ್ಲೋಲಕಲ್ಲೋಲಗೊಳಿಸುವ ತಿಮಿಂಗಿಲದಂತೆ, ಮಹಾಕಾವ್ಯಗಳ ಮೇರು ಮಂದರದುತ್ತುಂಗ ಶಿಖರಗಳಲ್ಲಿ ಉಡ್ಡೀನ ಮಾಡುವ ಮಹಾಕವಿಯಾಗು. ಸಣ್ಣಪುಟ್ಟ ಮುಕ್ತಕ ಸುಭಾಷಿತಗಳನ್ನಷ್ಟೇ ರಚಿಸುವುದರಲ್ಲಿ ವಿರಮಿಸದಿರು. ಅಲ್ಪದಲ್ಲೇ ಆನಂದತುಂದಿಲನಾಗಬೇಡ. ನಾಲ್ಪೇಸುಖಮಸ್ತಿ. ಯೋವೈಭೂಮಾ ತತ್‌ಸುಖಂ. ಭೂಮವೂ ಭವ್ಯವೂ ಆದುದರಲ್ಲಿ ಮಾತ್ರ ಸುಖ ಆನಂದ ಇದೆಯೆಂಬುದನ್ನು ಎಂದೂ ಮರೆಯದಿರು."

"ಧನ್ಯನಾದೆ ಗುರುದೇವ."

"ಡಂಗುರ ಹೊಡೆಯುತ್ತಾ 'ಇದು ಅಧಃಪತನಕ್ಕೆ ಹಾದಿ ಇತ್ತ ಬಾರದಿರಿ' ಎಂದು ಸಾರುತ್ತಿರುವ ಮೂರು ಮಾತುಗಳಿವೆ ಮಗು. ಅವು ನಿನ್ನ ಮುಂದಿನ ಬಾಳಿಗೆ ಕಟ್ಟಿಕೊಟ್ಟ ಬುತ್ತಿಯೆಂದು ತಿಳಿದು ನೆನಪಿನಲ್ಲಿಟ್ಟುಕೊ:

ಮೊದಲನೆಯದಾಗಿ ಹೊಗಳಿಕೆಗೆ ಹಿಗ್ಗಬೇಡ, ತಲೆತಿರುಗೀತು. ಎಷ್ಟೋ ಚೇತನಗಳು ಸ್ತುತಿಯಿಂದಲೇ ಸಂತೃಪ್ತಿಗೊಂಡು ಅಲ್ಲಿಂದ ಮುಂದೆ ಬೆಳೆದೇ ಇಲ್ಲ, ಎಳೆಯದರಲ್ಲೇ ಮುರುಟ ಹೋದ ಬಳ್ಳಿಯಂತೆ,. ಎರಡನೆಯದಾಗಿ ಎಂದೂ ಅಹಂಕಾರ ಪಡದಿರು. ಗರ್ವಗ್ರಹ ವ್ಯಗ್ರಚಿತ್ತನಾದವನು ಬಹಳ ಕಾಲ ಬಾಳಲಾರ. ಗರ್ವದಿಂದ ಬೀಗಿ ಎಷ್ಟೋ ಚೇತನಗಳು ಅದರ ಕಾವಿಗೆ ಕರಗಿ ಹೋಗಿವೆ. ಸೊಕ್ಕಿನಿಂದ ಮಣ್ಣು ಮುಕ್ಕಿ ಹೋಗಿರುವ ಲೆಕ್ಕವಿಲ್ಲದಷ್ಟು ಜನರ ಇತಿಹಾಸವನ್ನು ನಮ್ಮ ಸಾಹಿತ್ಯ ಶಾಸನಗಳು ಸಾರುತ್ತಿವೆ. ನಮಗೆ ಎಚ್ಚರ ಹೇಳುತ್ತಿವೆ. ಮೂರನೆಯದಾಗಿ ತೆಗಳಿಕೆಗೆ ಕುಗ್ಗಲೂ ಬಾರದು. ಎಷ್ಟೋ ಚೇತನಗಳು ಹಾಗೆ ಕುಗ್ಗಿ ಕಮರಿಕೊಂಡಿವೆ."

"ಈ ಗುರುವಾಣಿ ಅಮೃತವಾಣಿಯೆಂದು ಅನುಸರಿಸುತ್ತೇನೆ."

"ಮುಖ್ಯವಾಗಿ ನಮ್ಮನ್ನು ಯಾರೂ ಉದ್ಧರಿಸಲಾರರು. ಯಾರೂ ಏನು ಕೊಟ್ಟರೆ ತಾನೆ ಎಷ್ಟು ದಿನ ನಿಂತೀತು? ನಮ್ಮ ಸರಿಯಾದ ದಾರಿಯನ್ನು ನಾವೇ ಕಂಡುಕೊಳ್ಳಬೇಕು. ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಹೇಡಿಗೆ ಮೇಲ್ಮನೆ ಸಿಗದು. ಹಂದೆತನವನ್ನು ನಿನ್ನ ಬಳಿ ಸುಳಿಯಗೊಡದಿರು. ಕನ್ನಡ ನಾಡಿನ ಓಜನಾಗಿ ವಿಜೃಂಭಿಸು. ನಿನ್ನ ತಂದೆಯವರಿಗೆ, ಕಳೆದವಾರವೇ ಹೇಳಿಕಳಿಸಿದ್ದೇನೆ. ನಿನ್ನನ್ನು ಕರೆದುಕೊಂಡು ಹೋಗಲು, ಇನ್ನು ಒಂದು ವಾರದಲ್ಲಿ ಬಂದಾರು."

ಪಂಪನಿಗೆ ತುಂಬಾ ಅನಿರೀಕ್ಷಿತವಾಗಿ ಈ ಸನ್ನಿವೇಶ ನಡೆಯಿತು. ಆಚಾರ್ಯ ದೇವೇಂದ್ರರಿಗೂ ಈ ಸಂದರ್ಭ ಪೂರ್ವನಿಯೋಜಿತವಾಗಿರದೆ ತಾನಾಗೇ ಮಾತುಗಳು ಹೊಮ್ಮಿದುವು.

"ಸ್ವಾಮಿನ್, ನಾನು ಏನು ಹೇಳಬೇಕೋ ತಿಳಿಯದಾಗಿದೆ. ತಮ್ಮ ಹರಕೆ ಆಶೀರ್ವಾದಗಳ ವಜ್ರಕವಚ ನನ್ನ ಸುತ್ತ ಸದಾ ಪರಿವೇಷದಂತೆ ನಿಂತು ಕಾಪಿಡಲಿ. ತಮ್ಮ ಅನುಗ್ರಹದ ನೆರಳಲ್ಲಿ ತಾವು ಅಪ್ಪಣೆ ಕೊಟ್ಟಂತೆ ಆಗಲೆತ್ನಿಸುವೆ. ಇದಕ್ಕೆ ತಮ್ಮ ತಿರುವಡಿಗಳೇ ದಿಬ್ಯ." ಪಂಪ ಪೊಡಮಟ್ಟ. ತನ್ನ ಕಣ್ಣೀರಲ್ಲಿ ದೇವೇಂದ್ರರ ಶ್ರೀಪಾದಗಳನ್ನು ತೊಳೆದ. ಸಂಸಾರ ದೂರರಾದ ಆಚಾರ್ಯರು ಕ್ಷಣಕಾಲ ಪರಿಲುಪ್ತ ಸಂಯಮಿಗಳಾದರು. ಏನನ್ನೋ ಹೇಳಬೇಕೆಂದು ಬಾಯ್ದೆರದವರು ಸಂಭಾಳಿಸಿಕೊಂಡು ಮಾತನ್ನು ಹಾಗೇ ನುಂಗಿ ನಡೆದರು.

ಗುರುಕುಲದಲ್ಲಿ ಪಂಪನನ್ನು ಕಳಿಸುವುದು ಗೆಳೆಯರಿಗೆಲ್ಲ ಅಳಲಿನ ಸಂಗತಿ. ಕಿರಿಯರಿಗೆ ಅಣ್ಣನಾಗಿ ಹಿರಿಯರಿಗೆ ತಮ್ಮನಾಗಿ ಪಂಪ ಒಡನಾಡಿಗಳ ಒಲವನ್ನು ಗೆದ್ದಿದ್ದ. ಅವನ ನಡೆನುಡಿ ಎಲ್ಲರಿಗೂ ಮೊದಲ ಸಾಲು. ಗಾಯಗೊಂಡವರಿಗೆ, ರೋಗ ಬಂದವರಿಗೆ ಪಂಪನೇ ವೈದ್ಯನಾಗಿ ಗಿಡಮೂಲಿಕೆ ರಸಗಳಿಂದ ಗುಣಪಡಿಸುತ್ತಿದ್ದ. ಪಂಪ ಜೊತೆಯಲ್ಲಿದ್ದರೆ ಸಣ್ಣ ಶ್ರುತಭಂಡಾರವೇ ಒಡನಿದ್ದಂತೆ ಎಂದು ಗೆಳೆಯರು ತಿಳಿದಿದ್ದರು. ಪಂಪನಿಗೂ ಅದೇ ಅನುಭವ, ಗುರುಕುಲದಂತೆ ಬೋದನವೂ ಅವನಿಗೆ ಬಹುವಾಗಿ ಹಿಡಿಸಿತ್ತು. ಎಂಥ ಬೃಹದಾಕಾರದ ಕೋಟೆ! ಅಲ್ಲಿನ ನೆಲ, ಜಲ, ಕಾನು, ಬಾನು, ಜನ ಎಲ್ಲಾ ಚಿರಪರಿಚಿತ. ಆ ಊರು ಬಿಡುವುದು ಅದೆಷ್ಟು ಕಷ್ಟ! ಅಂತಃಕರಣ ಆರ್ದ್ರಗೊಂಡಿತ್ತು.

ಗುರುಕುಲದ ಅಚ್ಚುಮೆಚ್ಚಿನ ಪಂಪನನ್ನು ಊರಿಗೆ ಕರೆದುಕೊಂಡು ಹೋಗಲು ಭೀಮಪಯ್ಯ ಬಂದಿದ್ದ. ಆಳೆತ್ತರ ಬೆಳೆದು ನಿಂತ ಮಗನನ್ನು ನೋಡಿ

ಭೀಮಪನಿಗೆ ಅಚ್ಚರಿ, ಒಸಗೆ. ತಂದೆ ಮಕ್ಕಳು ಕಣ್ತುಂಬ ನೋಡಿ ನೆಮ್ಮದಿಪಟ್ಟರು. ತಂದೆಯನ್ನು ನೋಡಿದ ಕೂಡಲೇ ಪುಲಿಗೆರೆಯ ನೆನಪು ಮರುಕಳಿಸಿತು. ಬಳಿಯ ಬನವಾಸಿ ನೆಲ, ನೀರು, ಕಾನು, ಬಾನು, ಮಾವು ಮಲ್ಲಿಗೆ ಕೈ ಬೀಸಿ ಕರೆದಂತಾಯಿತು.

# ೬

ವೇಮುಲವಾಡದಲ್ಲಿ ಕೆಲವು ದಿನಗಳಿಂದ ಕಪ್ಪು ಕವಿದಿದೆ. ಯಾರ ಮೊಗದಲ್ಲೂ ಗೆಲುವಿಲ್ಲ. ಎಲ್ಲೆಲ್ಲೂ ತವಕ, ನೋವು. ಕರಾಳ ನೆರಳಲ್ಲಿ ರಾಜಧಾನಿ ಮುಚ್ಚಿಹೋಗಿದೆ. ಎಲ್ಲರ ನೀರು ತುಂಬಿದ ಕಣ್ಣುಗಳು ಅರಮನೆಯತ್ತ.

ನರಗ ದೊರೆಗಳ ಆರೋಗ್ಯ ಕುದುರುತ್ತಾ ಕುಂಟುತ್ತಾ ಕೆಲವು ವರ್ಷಗಳಿಂದ ಏಳುಬೀಳುಗಳಲ್ಲಿದ್ದುದು ಈಗ ಆರುವ ಕುಡಿಯಂತೆ ಹೊಯ್ದಾಡುತ್ತಿತ್ತು. ರಾಜವೈದ್ಯರು ಹಗಲಿರುಳೂ ಅರಮನೆಯಲ್ಲೇ ಇದ್ದು ಸರದಿಯಂತೆ ನೋಡಿಕೊಳ್ಳುತ್ತಿದ್ದರು. ಹಾಸಿಗೆ ಬಿಟ್ಟು ಕದಲುತ್ತಿರಲಿಲ್ಲ. ವೇಳೆವಡಿಚರೂ ಸಿಡಿತಲೆಗರೂ ದೊರೆಯ ಹದುಳ ಕೋರಿ ಹರಕೆ ತೀರಿಸಲು ಅಣಿಯಾಗುತ್ತಿದ್ದರು. ಬಸದಿ ದೇಗುಲಗಳಲ್ಲಿ ಆಳರಸರಿಗೆ ಲೇಸು ಕೋರಿ ಪೂಜಾಭಿಷೇಕವಾಯಿತು. ಯುವರಾಜನಿಗಂತೂ ದಿಕ್ಕು ಕತ್ತಲಿಟ್ಟಿತು. ಪಂಪನಿಗೆ ಹೇಳಿ ಕಳಿಸಿದ. ಆದರೆ ಬೋದನದಿಂದ ಬಂದ ಮನವಾರ್ತೆಗಾರರು ಪಂಪ ಪುಲಿಗೆರೆಗೆ ತಂದೆಯೊಡನೆ ಹೋದ ಸುದ್ಧಿ ಅರುಹಿದರು.

ನರಸಿಂಹ ಪ್ರಭುವನ್ನು ಉಳಿಸಿಕೊಳ್ಳಲು ಎಲ್ಲರೂ ಹೆಣಗಿದರೂ ದೊರೆ ತನ್ನ ಅವಸಾನವನ್ನು ಅರಿತುಕೊಂಡಿದ್ದ. ಕುವರ ಅರಿಕೇಸರಿಗೆ ಪಟ್ಟಾಭಿಷೇಕೋತ್ಸವಕ್ಕೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದ. ಯಾರಿಗೂ ಪ್ರಭು ಇರುವಾಗಲೇ ಅಂಥ ಸ್ಥಿತಿಯಲ್ಲಿ ಮಂಗಳೋತ್ಸವ ಆಚರಿಸಲು ಮನಸ್ಸಿಲ್ಲ. ತಲೆಯಾಡಿಸಿ ಸುಮ್ಮನಾದರು. ಕಡೆಗೆ ನರಗ ದೊರೆ ಮಂತ್ರಿಮಂಡಲವನ್ನು ರುಗ್ಣಶಯ್ಯೆಯ ಬಳಿಯಲ್ಲೇ ಕರೆಸಿದ. ಮನೆವೆರ್ಗಡೆ, ಕೋಶಾಧ್ಯಕ್ಷ, ಸೇನಾನಾಯಕ ಹಾಗೂ ಮಂತ್ರಿಮಂಡಲಕ್ಕೆ ಪ್ರಭುವಾಗಿ ಆಜ್ಞಾಪಿಸಿದ–"ಮಗನ ಪಟ್ಟಾಭಿಷೇಕ ತಿಂಗಳಲ್ಲಿ ನಡೆಯಲೇಬೇಕು."

ಅರಿಕೇಸರಿಗೆ ವಿಷಯ ತಿಳಿಯಿತು. ತಂದೆಯ ಬಳಿಗೆ ಬಂದವನೇ ಕಾಲು ಹಿಡಿದು ಬೇಡಿಕೊಂಡ. "ಅಪ್ಪಾಜಿ, ನೀವು ಗುಣಮುಖರಾಗುವ ಕಡೆ ಗಮನ ಕೊಡಬೇಕೆಂದು ಸೆರಗು ಒಡ್ಡಿ ಯಾಚಿಸುವೆ. ನನಗೇನು ಸಿಂಹಾಸನ ಹತ್ತುವ

ಉತ್ಸಾಹವೇ?"

"ಚಿರಂಜೀವಿ, ಹತ್ತಿರ ಬಾ. ಇಲ್ಲಿ ನಮ್ಮ ಪಕ್ಕದಲಿ ಕೂಡು. ನೋಡು ಯಾರೂ ಮೊಳೆ ಹೊಡೆದುಕೊಂಡು ಈ ನೆಲದಲ್ಲಿ ನೇಸರು ತಿಂಗಳಂತೆ ಬಾಳಲಾರರು. ಜಾತಸ್ಯ ಮರಣಂ ಧ್ರುವಂ..."

"ಆ ಮಾತೆಲ್ಲಾ ಈಗೇಕೆ ಅಪ್ಪಾಜಿ? ನೀವು ಶುಭವಾದುದನ್ನೇ ನುಡಿಯಬೇಕು, ಕೇಳಬೇಕು."

"ನಿಜ ಮಗು, ಒಳ್ಳೆಯದನ್ನೇ ಕೇಳಬೇಕು, ಒಳ್ಳೆಯದನ್ನು ಮಾಡಬೇಕೆಂಬುದೇ ನಮ್ಮ ಯೋಚನೆ. ಏನು ಮಾಡಿದರೆ ಸರಿ ಎಂಬುದನ್ನು ಗಟ್ಟಿ ಮಾಡಿಕೊಂಡಿದ್ದೇವೆ. ಈಗ ನೀನು ನಮಗೆ ಸಂತೋಷವಾಗುವ ಹಾಗೆ ನಡೆದುಕೊಳ್ಳುವೆಯಾ?"

"ನಿಮಗೆ ಅಸಂತೋಷವಾಗುವಂತೆ ನಾನು ಎಂದು ನಡೆದಿದ್ದೇನೆ ಅಪ್ಪಾಜಿ? ಈಗಲೂ ಹೇಳಿ ನಿಮಗೆ ಸಂತೋಷವಾಗುವುದಾದರೆ ಯಾವ ಕೆಲಸಕ್ಕೂ ಸಿದ್ಧ"—ಅರಿಗ ಒರೆಯಿಂದ ಕತ್ತಿ ಎಳೆದು ವೀರ ಯೋಧನಂತೆ ವೀರಮಂಡಿಯೂರಿ ಶಿಸ್ತಾಗಿ ನಿಂತ. ದೊರೆ ನೋವಿನಲ್ಲೂ ನಗೆ ತಡೆಯದಾದ.

"ಚಿರಂಜೀವಿ, ನಮಗಾಗಿ ನೀನು ಯುದ್ಧಕ್ಕೆ ಹೋಗಬೇಕಾಗಿಲ್ಲ. ಕರ್ತವ್ಯದ ಕರೆಗೆ ಸಿದ್ಧನಾಗಬೇಕಾಗಿದೆ, ಅಷ್ಟೇ."

"ಹೇಳಿ, ಅಪ್ಪಣೆ ಕೊಡಿ ಅಪ್ಪಾಜಿ, ನಾನು ಸಿದ್ಧನಾಗಿದ್ದೇನೆ."

"ಹಾಗಾದರೆ ಬರುವ ತಿಂಗಳು ಬೃಹಸ್ಪತಿವಾರ ನೀನು ಚಾಲುಕ್ಯ ಸಾಮ್ರಾಜ್ಯದ ಸಪಾದಲಕ್ಷ ಕ್ಷಿತಿಯ ಸಿಂಹಾಸನಾರೂಢನಾಗಲು ಕಂಕಣ ತೊಡು."

"ಅಪ್ಪಾಜಿ!"

"ಅಹುದು ಕುಮಾರ. ನೀನು ಮತ್ತೆ ಪ್ರತಿ ಹೇಳುವ ತೊಂದರೆ ತೆಗೆದುಕೊಳ್ಳಬೇಡ. ನಮಗೆ ಸಂತೋಷಪಡಿಸಲು ಈಗ ನಿನಗೆ ಉಳಿದಿರುವ ದಾರಿ ಇದೊಂದೇ."

"........."

"ತಲೆಂಯೆತ್ತಿ ನಮ್ಮತ್ತ ನೋಡು ಕುಮಾರಾ. ಕಣ್ಣುಗಳು ಜಲಸರೋವರವಾಗುತ್ತಿವೆ, ಉತ್ತರೀಯದಂಚಿನಿಂದ ಒರೆಸಿಕೊ. ಹಾಗೆಯೇ ನಾವು ಹೇಳುವ ಮಾತನ್ನು ಮೈಯೆಲ್ಲಾ ಕಿವಿಯಾಗಿ ಕೇಳು."

"ಅಪ್ಪಾಜಿ, ಉಳಿದುದನ್ನು ನಾಳೆ ಮಾತನಾಡೋಣ. ನೀವು ಇಂದಿಗೆ ಇಷ್ಟು ಮಾತನಾಡಿದುದೇ ಹೆಚ್ಚು. ಅತ್ತ ನೋಡಿ ರಾಜ್ಯವೈದ್ಯರು ಸೂಚನೆ ಕೊಡುತ್ತಿದ್ದಾರೆ."

"ರಾಜಕುಮಾರಾ, ರಾಜವೈದ್ಯರು ನನಗೆ ಸೂಚನೆ ಕೊಡಬಲ್ಲರೇ ಹೊರತು ಯಮರಾಜನಿಗೆ ಕೊಡಲಾರ್ಪರೆ?"

"ಅಪ್ಪಾಜಿ ನೀವು..."

"ನಾವು ಹೇಳಿದುದು ನಿನ್ನ ಕಿವಿಗೆ ಅಹಿತವಾಗಿ ಕೇಳಿರಬಹುದು. ಆದರೆ ಕಾಲನ ಕಿವಿಗಲ್ಲ. ಅದಿರಲಿ ನಾವು ಹೇಳುವ ಒಂದೆರಡು ಮಾತು ಕೇಳುವೆಯಾ"

"ಸರಿ ಅಪ್ಪಾಜಿ."

"ನಾವು ಸಾಯಲು ಅಳುಕುತ್ತಿಲ್ಲ ಕುಮಾರಾ. ಪರಂಪರಾಗತ ಪದವಿಯನ್ನು ಪರಾಕ್ರಮದಿಂದ ತಾಳುವ ಮಗನಿದ್ದಾನೆಂಬುದಕ್ಕಿಂತ ರಾಜನಾದ ತಂದೆಗೆ ನೆಮ್ಮದಿ ಇನ್ನೊಂದಿಲ್ಲ. ಪ್ರಭುವಾಗಲಿ ಪ್ರಜೆಯಾಗಲಿ ಇಳಿಗಾಲದಲ್ಲಿ ಮಗನೇ ಊರೆಗೋಲು. ನಾಳೆ ನೀನು ಪ್ರಭುವಾದ ಮೇಲೆ ಉಳಿದೆಲ್ಲ ವಿಚಾರ ತಿಳಿಯುತ್ತೀಯೆ. ಆ ನಂಬುಗೆ ನಮಗಿದೆ. ಆದರೆ ದೊರೆಯಾದವನು ಸದಾ ನೆನಪಿಡಬೇಕಾದುದೊಂದಿದೆ. ಯಾವುದು ಗೊತ್ತೆ?"

"ಪ್ರಜೆಗಳ ಪರಿಪಾಲನೆ ಅಲ್ಲವೆ ಅಪ್ಪಾಜಿ?"

"ಒಪ್ಪಿದೆ ಮಗು. ಪ್ರಭುವಾದವನು ಪ್ರಜೆಗಳನ್ನೇ ತನ್ನ ತಾಯಿತಂದೆ ಎಂದು ತಿಳಿದು ಪಾಲನೆ ಮಾಡಬೇಕು. ಆಡಳಿತವೆಂದರೆ ದಬ್ಬಾಳಿಕೆ ನಡೆಸುವುದಲ್ಲ. ನಾವು ಕುಳಿತುಕೊಳ್ಳುವ ಭವ್ಯ ಸಿಂಹಪೀಠ ನವರತ್ನ ಖಚಿತವಾಗಿದ್ದರೂ ವಿಲಾಸದಾಸನವಲ್ಲ. ಅದು ಧರ್ಮ ನ್ಯಾಯಗಳ ಪವಿತ್ರ ಪೀಠ. ನಮ್ಮ ಕೈಯಲ್ಲಿ ಹಿಡಿಯುವ ರಾಜದಂಡ ಧರ್ಮ ಸಂರಕ್ಷಣೆಯ ಸಲುವಾಗಿ. ಜನತೆಗೆ ಕಾಯಾ ವಾಚಾ ಮನಸಾ ಎಂದೂ ಕೇಡು ಬಗೆಯಬಾರದು. ಕೆಟ್ಟ ಆಡಳಿತದ ಹಿಂಸೆಯಿಂದ ಪ್ರಜೆಗಳು ರೋಸಿ ಹೋಗದಂತೆ ನೋಡಿಕೊಳ್ಳಬೇಕು. ರೊಚ್ಚಿಗೆದ್ದ ಜನಸಮುದಾಯ ದೈತ್ಯಾಕಾರದ ಅಲೆಗಳಂತೆ ಮೇಲೆದ್ದಾಗ ನಾವುಗಳೆಲ್ಲ ಅದರ ಹೊಡೆತದಲ್ಲಿ ಹೇಳ ಹೆಸರಿಲ್ಲದಂತೆ ಕೊಚ್ಚಿಹೋದೇವು. ಇದನ್ನು ನೆನಪಿಟ್ಟರೆ ಉಳಿದುವು ಸುಗಮ. ಇದು ಶುಷ್ಕ ವೇದಾಂತವೆಂದು ಭಾವಿಸಬೇಡ".

"ನೀವು ಆಡಿದ ನುಡಿಗಳೆಲ್ಲ ಕಲ್ಲಿನ ಮೇಲೆ ಕೊರೆದಂತೆ ನನ್ನೆದೆಯಲ್ಲಿ ಅಚ್ಚೊತ್ತಿಕೊಂಡಿವೆ ಅಪ್ಪಾಜಿ."

"ಈಗಲೀಗ ಈ ಹೃದಯದ ಭಾರವಿಳಿದು ಬದುಕೇ ಹಗುರವೆನ್ನಿಸುತ್ತಿದೆ. ಇನ್ನು ನೀವೆಲ್ಲ ಹೋಗಬಹುದು."

ಅರಮನೆಯ ರಾಯಸ ಮಹಾಜನ ಗ್ರಾಮಭೋಜಕರಿಂದ ಮಂಡಲಾಧಿಪತಿಗಳಿಗೂ, ನಗರಾಧಿಪತಿಗಳಿಗೂ,. ನಾಡೊಡೆಯರಿಗೂ, ಸಾಮಂತ

ಮನ್ನೆಯರಿಗೂ ಕವಿಗಮಕಿವಾದಿ ನರ್ತಕ ಸಂಗೀತಗಾರರಿಗೂ, ಗಡಿಮಲೆಪರಿಗೂ ಅರಿಕೇಸರಿಯ ಪಟ್ಟ ಬಂಧನೋತ್ಸವದ ಒಕ್ಕಣೆಯನ್ನು ಹೊತ್ತು ಮುಟ್ಟಿಸಿತು. ನೆರೆಹೊರೆಯ ರಾಜ ಮಹಾರಾಜರಿಗೆಲ್ಲ ಗೃಹಮತ್ತರರು ವಿಶೇಷ ಮರ್ಯಾದೆಗಳಿಂದ ಒಸಗೆ ಹೇಳಿ ಬಂದರು. ರಾಷ್ಟ್ರಕೂಟ ಚಕ್ರವರ್ತಿ ನಿತ್ಯವರ್ಷ ಮುಮ್ಮಡಿ ಇಂದ್ರನಿಗೆ ಸಚಿವರು ಶಾಸನ ಸಂಚಾರಿಯೊಡನೆ ಹೋಗಿ ಒಸಗೆಯನ್ನು ಅರಿಕೆ ಮಾಡಿ ಬಂದರು. ವೇಮುಲವಾಡ ನವ ವಧುವಾಯಿತು. ಮನೆಗಳೂ ಬೀದಿಗಳೂ ಗುಡಿಗೋಪುರಗಳೂ ಹೊಸದಾದುವು. ಸಾವಿರಾರು ಬಿಡಾರಗಳು ಅತಿಥಿ ಅಭ್ಯಾಗತರಿಗೆಂದು ಅಣಿಯಾದುವು. ಸಡಗರವೇ ಮೈವೆತ್ತು ನಿಂದಿತ್ತು.

ಪಟ್ಟಾಭಿಷೇಕದಂದು ಅರಿಗನಿಗೆ ನದಿನದಾಳಿಗಳ ಅಭಿಷೇಕ–

ಎತ್ತರವಾದ ಕುಣಿಯುತ್ತಿರುವ ಅಲೆಗಳ ಒಡೆತದಿಂದ ಹೊಳೆಯುವ ಗಂಗಾ ನದಿಯ ನೀರಿನ ಕೊಡಗಳು–

ಕೃಷ್ಣಾ ನರ್ಮದಾ ತುಂಗಾ ನದಿಗಳ ತಿಳಿಯಾದ ನೀರಿನ ಬಿಂದಿಗೆಗಳು–

ಬನವಾಸಿಯ ಬಳಿಯ ಹೆಸರಾಂತ ವರದಾನದಿಯಿಂದ ತುಂಬಿರುವ
ಪವಿತ್ರ ಜಲಕಲಶಗಳು

ಆರೋಗ್ಯಕರವಾದ ಕೊಡಗಿನ ಕಾವೇರಿಯ ಪೂರ್ಣಕುಂಭ

ದಿನೇ ದಿನೇ ಹೆಚ್ಚುತ್ತಿರುವ ಸಾರವತ್ತಾದ ನೀಲಿಯಲೆಗಳ ಯಮುನೆಯ
ಜಲಧಾರೆಗಳಿಂದ ತುಂಬಿದ ತಂಬಿಗೆಗಳು

–ಎತ್ತರವಾದ ಹೆಗಲುಳ್ಳ ಉತ್ತುಂಗ ಅರಿಗನಿಗೆ ಈ ಎಲ್ಲಾ ಜಲಗಳಲ್ಲಿ ತೋಯಿಸಿ ಮೀಯಿಸಿದರು. ಇವುಗಳಲ್ಲಿ ಮಿಂದೆದ್ದು ಪ್ರಭು ವಿಭವೋನ್ನತನಾಗುವನು; ಅವನ ಅಧಿಕಾರ ವಲಯದಲ್ಲಿ ಅವುಗಳು ಹರಿಯುವುವು ಎಂದು ನಂಬುಗೆ. "ಮಂಗಳ ಮಹಾಶ್ರೀಯೂ ಜಯಲಕ್ಷ್ಮಿಯೂ ಪ್ರಾಪ್ತವಾಗಲಿ ನಿರ್ಮಳ ಯಶಸ್ ಶ್ರೀಯುತನಾಗು" ಎಂದು ಹರಸಿದರು.

ಅನಂತರ ಶ್ರೀಗಂಧದ ಪರಿಮಳದ ನೀರಿನಲ್ಲಿ ಸ್ನಾನ. ಘಟ್ಟವಳ್ತಿಯರಿಂದ ಗಂಧದ ತೆಳುಲೇಪನ. ಸುತ್ತಧವಳ ಮಂಗಳ ಗೇಯ. ಮುತ್ತು ಪಚ್ಚೆ ಮಾಣಿಕದ ಸರಗಳು. ವಜ್ರದೋಲೆಗಳು. ನವರತ್ನ ಝಖಚಿತವಾದ ಮಹಮಕುಟ. ತುಲಾಭಾರ ದಾನ ಬಡಬಗ್ಗರಿಗೆ. ಯುವರಾಜ ಅರಿಕೇಸರಿ ಅಂದು ಮಹಾರಾಜ ಅರಿಕೇಸರಿಯಾದ. ಇಮ್ಮಡಿ ಬದ್ದೆಗನ ತಂತ್ರಪಾಲ ನಾಗಮಾರ್ಯನ ಮಗ ಪೆದ್ದಣಾರ್ಯನೇ ಇಮ್ಮಡಿ ಅರಿಕೇಸರಿಯ ತಂತ್ರಾಧಿಪನಾದ.

ಪಟ್ಟ ಬಂಧೋತ್ಸವಕ್ಕೆ ಆತ್ಮೀಯರು ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದರು.

ಆದರೆ ನರಗ ಅರಿಗರಿಗೆ ಮನದ ಮೂಲೆಯಲ್ಲಿ ಅರಕೆಯೊಂದು ಉಳಿದೇ ಬಿಟ್ಟಿತು. ಮಳಖೇಡದಿಂದ ನಿತ್ಯವರ್ಷ ಇಂದ್ರ ಚಕ್ರವರ್ತಿ ಬರಲಾಗಲಿಲ್ಲ. ಚಕ್ರವರ್ತಿಯ ಪರವಾಗಿ ಇಬ್ಬರು ಮಕ್ಕಳನ್ನೂ ಬದ್ದೆಗನ ಜೊತೆಯಲ್ಲಿ ಕಳಿಸಲು ಏರ್ಪಾಟಾಯಿತು. ಆದರೆ ತಂದೆಯ ಎದುರಿನಲ್ಲಿ ಮಾತಾಡದೆ ಸುಮ್ಮನಿದ್ದ ಕಿರಿಯ ಮಗ ಗೋವಿಂದ ಚಿಕ್ಕಪ್ಪ ಬದ್ದೆಗನೊಡನೆ "ಅರಿಗ ನಮ್ಮ ಸಾಮಂತ! ಅವನ ಪಟ್ಟಾಭಿಷೇಕಕ್ಕೆ ನಾವು ಹೋಗಬೇಕೆ? ಛೆ ಛೆ? ಏನಿದು ಅಪ್ಪಾಜಿಗಳ ಮಾತು? ಅವರು ಮೊದಲಿಂದಲೂ ಈ ಚಾಳುಕ್ಯ ಶಾಖೆಯವರನ್ನು ಸಲುಗೆ ಸಮಾನತೆಗಳಿಂದ ಕೊಬ್ಬಿಸಿ ಬಿಟ್ಟಿದ್ದಾರೆ. ಈ ನರಗದೊರೆ ಗೂರ್ಜರ ಮಹೀಪಾಲನನ್ನು ಸೋಲಿಸಿದ ಮಾತ್ರಕ್ಕೆ ಅಷ್ಟೊಂದು ಮರ್ಯಾದೆಯೆ? ತನ್ನ ಕುದುರೆಗಳ ಕಾಲುಗಳನ್ನು ಗಂಗಾ ನದಿಯಲ್ಲಿ ತೊಳೆಸಿದನೆಂದು ಹೊಗಳಿ ಶಾಸನಗಳನ್ನು ಚಕ್ರವರ್ತಿಗಳು ಹಾಕಿಸಿಕೊಟ್ಟ ಮೇಲಾದರೂ ಸುಮ್ಮನಾಗಬೇಡವೆ? ಚಕ್ರವರ್ತಿಗಳು ತಮ್ಮ ಸ್ವಂತ ತಂಗಿಯನ್ನೇ ನರಗ ದೊರೆಗೆ ಧಾರೆಯೆರೆದು ಕೊಡುವುದೆ? ಗೌರವಕ್ಕೂ ಗಡಿ ಬೇಡವೇ?..."

"ಏನು ಗೊಜ್ಜಿಗ ನೀನು ಹೇಳುವ ಮಾತಿನ ಹುರುಳು? ಎಷ್ಟು ಹಗುರವಾಗಿ ನುಡಿಯುತ್ತಿದ್ದೀಯೆ? ಚಕ್ರವರ್ತಿಗಳ ತಂಗಿ ಎಂದರೆ ನಿನ್ನ ಸೋದರತ್ತೆ ತಾನೆ? ಮಾವನ ಮಗನ ಒಸಗೆಯಲ್ಲಿ ಪಾಲುಗೊಳ್ಳುವುದು ಹಿತದ ಮಾತಲ್ಲವೆ? ರಾಷ್ಟ್ರಕೂಟ ಸಾಮ್ರಾಜ್ಯದ ಅಭ್ಯುದಯವನ್ನೇ ಹಾರೈಸುತ್ತ ಅದರ ಆಧಾರಸ್ತಂಭಗಳಾಗಿ ನಿಂತಿರುವ ದೊರೆಗಳಲ್ಲಿ ನರಗ ದೊರೆ ಮೊದಲಿಗನಲ್ಲವೆ?"

"ಸರಿ ಚಿಕ್ಕಪ್ಪಾ, ನೀವೆಲ್ಲಾ ಒಂದೇ ಎಂಬುದನ್ನು ಮರೆತೆ. ನನ್ನ ಬದಲು ನೀವೇ ಹೋಗಿ ಬನ್ನಿ."

"ಅಂತೂ ನೀನು ಎಳೆಯಂದಿನಿಂದ ಅರಿಗನ ಬಗೆಗೆ ಹಗೆಗನಾಗಿಯೇ ಬೆಳೆದುಬಿಟ್ಟೆ. ಇನ್ನಾದರೂ ಅದನ್ನು ತೊರೆದರೆ ಲೇಸು. ನಮ್ಮ ಸಾಮ್ರಾಜ್ಯದ ಉಳಿವಿಗಾಗಿ ದುಡಿದ ನಿಮ್ಮ ಮಾವ ಹದುಳವಿಲ್ಲ. ನಡೆ ಹೋಗಿ ಬರೋಣ."

"ತೊರೆ ಹಳ್ಳಿಗಳು ಕಡಲನ್ನು ಸೇರುತ್ತವೆಯೇ ಹೊರತು, ಕಡಲು ಹಳ್ಳ ಕೊಳ್ಳಗಳನ್ನು ಕೂಡಿಕೊಳ್ಳುವುದಿಲ್ಲ. ಅಲ್ಲವೆ ಚಿಕ್ಕಪ್ಪ?"

"ನಿಜ ಮಗು, ಆದರೆ ಕಡಲ ನೀರನ್ನು ಜನ ಕುಡಿಯಲಾಗುವುದಿಲ್ಲ, ಅಲ್ಲವೆ?"

"ಸರಿ, ಸರಿ, ನಿಮಗೆ ನಾಳೆ ಬೆಳಗಿನ ಜಾವ ಪ್ರಯಾಣವಿದೆ ಸಿದ್ಧ ಮಾಡಿಕೊಳ್ಳಿ. ನಾನಿನ್ನು ಬರುತ್ತೇನೆ."

ವೇಮುಲವಾಡಕ್ಕೆ ಬದ್ದೆಗ ಮತ್ತು ಹಿರಿಯ ರಾಜಕುಮಾರ ಇಮ್ಮಡಿ ಅಮೋಘವರ್ಷ ಬಂದಿದ್ದರು. ಅವರಿಬ್ಬರೂ ಇಲ್ಲಿ ಹದಿನೆಂಟು ದಿವಸವಿದ್ದರು, ಅರಿಕೇಸರಿಯನ್ನು ಕಂಡರೆ ಮೊದಲಿಂದ ಅವರಿಬ್ಬರಿಗೂ ಒಲವರ. ಮಗುತನದಿಂದ ಮಮತೆಯಲ್ಲಿ ಬೆಳೆಸಿದ ಬದ್ದೆಗನಲ್ಲಿ ಅರಿಗನಿಗೆ ಗೌರವ. ನರಗದೊರೆಯೊಡನೆ ಬದ್ದೆಗ ಬಿಡುವಾಗಿ ಹಲವು ಸಲ ಕಂಡ. ಇಬ್ಬರೂ ಮುಂದಿನ ಬಾಳನ್ನು ಕುರಿತು ಚರ್ಚಿಸಿದರು. ಆದರೆ ರುಗ್ಣಶಯ್ಯೆಯಲ್ಲಿ ಮಲಗಿದ ದೊರೆಯೊಡನೆ ಮಾತನಾಡಲು ತಪ್ಪಿಸುತ್ತಿದ್ದ ವಿಷಯ ಕಡೆಗೂ ಬಂತು. ಚಕ್ರವರ್ತಿ ಮುಮ್ಮಡಿ ಇಂದ್ರನಿಗೆ ತನ್ನ ಕಿರಿಯ ಮಗಳು ರೇವಬ್ಬೆಯನ್ನು ಸೋದರಳಿಯ ಅರಿಗನಿಗೇ ಕೊಡಬೇಕೆಂದು ಮನಸ್ಸು. ಅದನ್ನು ಯುವರಾಜ ಇಮ್ಮಡಿ ಅಮೋಘವರ್ಷನೂ ಒಪ್ಪಿದ್ದ.

ಎಲ್ಲಕ್ಕೂ ಮಿಗಿಲಾಗಿ ರಾಜಪುತ್ರಿ ರೇವಬ್ಬೆ ಕೂಡ ಅರಿಗನನ್ನು ಕಾದಲಿಸಿದ್ದಳು. ಗೊಜ್ಜಿಗ ಮಾತ್ರ ಇದಕ್ಕೆ ಎದುರಾಳಿಯಾಗಿ ನಿಂತಿದ್ದ. ಅರಿಗ ತಾಯಿಲ್ಲದ ತಬ್ಬಲಿ ಕೂಸಾಗಿ ಮಾನ್ಯಖೇಟದ ಪೆಂಡವಾಸದಲ್ಲಿ ಬೆಳೆಯುವಾಗಿನಿಂದ ಆ ಹಗೆತನ ಒಗೆದಿತ್ತು. ತನಗಿಂತ ಕೆಲವೇ ತಿಂಗಳು ಹಿರಿಯ ಅರಿಗ. ಅವನು ತನಗಿಂತ ಚೆಲುವ. ಎಲ್ಲರೂ ಅವನನ್ನೇ ಹೆಚ್ಚು ಅಕ್ಕರೆಯಿಂದ ಮುದ್ದಾಡುತ್ತಿದ್ದರು. ಕಂಡಕಂಡವರೆಲ್ಲರ ಕಣ್ಮಣಿಯಾಗಿ ಬೆಳೆದ ಅರಿಗನಲ್ಲಿ ಅಂದಿನಿಂದ ಮನದಾಳದಲ್ಲಿ ಈರ್ಷೆ ಸುಳಿದಾಡುತ್ತಿತ್ತು. ದೊಡ್ಡವರಾದಂತೆ ಅದು ಹೆಡೆಯಾಡತೊಡಗಿತು.

ಅರಿಗನ ಒಳ ಕರೆ ಹಾಗೂ ಕೊರತೆ ಬೇರೆ ಬಗೆಯದು. ತನ್ನ ಎಳೆಯಂದಿನ ಕೆಳೆಯ ಬಳಿಯಲ್ಲಿದ್ದು ಈ ಒಸಗೆಯಲ್ಲಿ ಪಾಲುಗೊಳ್ಳಲಿಲ್ಲವಲ್ಲಾ ಎಂಬುದು ಮೊದಲ ಅರಕೆ. ಪಂಪನಿಗೆ ನೇಹದ ರಾಯಸ ಅಟ್ಟಿದ್ದ. ಆದರೂ ಪಂಪ ಬರಲಿಲ್ಲವೇಕೆ? ಎಂದು ಯೋಚಿಸುತ್ತಿರುವಾಗ ರಾಯಸ ಹೊತ್ತು ಹೋಗಿದ್ದ ರಾವುತರು ಹಿಂತಿರುಗಿದ್ದರು.

* * * *

ಪುಲಿಗೆರೆಯಲ್ಲಿ ಪಂಪನ ಮದುವೆ ನಡೆದಿತ್ತು. ಎತ್ತರವಾಗಿ ಕಟ್ಟಿದ್ದ ಮುತ್ತಿನ ಮಂಟಪದಲ್ಲಿ ಮನವನ್ನು ಸೆಳೆಯುವ ಮೇಲುಕಟ್ಟುಗಳ ಸಾಲುಗಳಿದ್ದುವು. ಹಸುರು ಚಪ್ಪರದೊಳಗೆ ಹೊಸ ಹುರುಪಿನಿಂದ ಅಯ್ದೆಯರು ಓಡಾಡುತ್ತಿದ್ದರು. ಪುರೋಹಿತರ ಮಂತ್ರಘೋಷ, ಮಂಗಳವಾದ್ಯಗಳ ಮೊಳಗು ಮದುವೆಯ ಶುಭ ಕಾರ್ಯವನ್ನು ಸಾರುತ್ತಿತ್ತು.

ದಟ್ಟವಾದ ಸಂದಣಿಯ ಮದುವೆ ಮಂಟಪದ ನಟ್ಟ ನಡುವೆ ಹಸೆಮಣೆಯಲ್ಲಿ ಕದಳೀಗರ್ಭಶ್ಯಾಮನಾಗಿ ಪಂಪ ಕುಳಿತಿದ್ದ. ಕಲ್ಪತರುವಿನಂತೆ ಕುಳಿತಿದ್ದ ಪಂಪನ

ಇಕ್ಕೆಲದಲ್ಲೂ ಕುಳಿತ ಜಕ್ಕಲೆ ಬಮ್ಮಲೆಯರು ಕಲ್ಪಲತೆಗಳಂತೆ ಕಂಗೊಳಿಸಿದರು. ಜಕ್ಕಲೆಯವು ನಿಡುಗಣ್ಣುಗಳು. ದಟ್ಟವಾದ ಕೂದಲುಳ್ಳ ಕಣ್ಣು. ರೆಪ್ಪೆಯ ಮೇಲೆ ಉದ್ದವಾದ ಹುಬ್ಬು. ದುಂಡಾದ ತುಟಿ, ಗಿಣಿ ಮೂಗು, ಕೋಲು ಮೊಗ. ಬಮ್ಮಲೆಯದು ದುಂಡು ಮೊಗ, ನೀಳ ಸಂಪಿಗೆ ಮೂಗು, ನವುರಾದ ಗೆರೆಗಳಿರುವ ಕೊರಳು. ಚಾಚಿಕೊಂಡ ದಪ್ಪ ಮೊಲೆಗಳು. ತುಂಬಿದ ನಿತಂಬ. ಒಂದೇ ಹಂದರದೊಳಗೆ ಒಂದೇ ಹಸೆಮಣೆಯ ಮೇಲೆ ಮಾಚಿಕಬ್ಬೆಯ ಮಗಳು ಜಕ್ಕಲೆ ಹಾಗೂ ಪೋಚಿಕಬ್ಬೆಯ ಮಗಳು ಬಮ್ಮಲೆ ಪಂಪನ ಮಡದಿಯರಾದರು.

* * * *

ಪಂಪ ವ್ಯಾಸಾಂಗವನ್ನು ಮುಗಿಸಿ ಗುರುಕುಲದಿಂದ ಹಿಂತಿರುಗಿ ಬರುತ್ತಿದ್ದಂತೆಯೇ ಮದುವೆ ಮಾಡಬೇಕಂದು ಕೊಮರಯ್ಯನ ಇಚ್ಛೆಯಾಗಿತ್ತು. ಕೊಮರಯ್ಯ ತಾನಿನ್ನು ಬದುಕಿರುವಾಗಲೇ ಮೊಮ್ಮಗನ ಮದುವೆ ಮಾಡಿ ಮರಿ ಮಗನನ್ನು ನೋಡಿ ಮುದ್ದಾಡಿಬಿಡಬೇಕೆಂದಿದ್ದ. ಆದರೆ ಆತನ ಆರೋಗ್ಯ ದಿನದಿಂದ ದಿನ್ನಕೆ ಇಳಿಯತೊಡಗಿತು. ಹಿಂದೆ ಪಂಪ ಬೋದನದಿಂದ ಬಂದಾಗ ಕೂಡ ರುಗ್ಣಾಲಯ ಸೇರಿದ್ದ. ತನ್ನ ಹದಗೆಟ್ಟ ದೇಹಸ್ಥಿತಿಯ ವಿಚಾರವನ್ನು ಕಲಿಕೆಯಲ್ಲಿ ಮುಳುಗಿದ ಮುದ್ದು ಮೊಮ್ಮಗನಿಗೆ ತಿಳಿಸಲೇಬಾರದಂದು ಕಟ್ಟಪ್ಪಣೆ ಮಾಡಿದ್ದ. ಅದರಂತೆ ಪಂಪ ಎಷ್ಟು ಕೇಳಿದರೂ ಭೀಮಪಯ್ಯ ತಂದೆಯ ಮಾತನ್ನೇ ಪಾಲಿಸಿ ಗುಟ್ಟು ಬಿಟ್ಟು ಕೊಡಲಿಲ್ಲ. ಬೇರೆಲ್ಲೋ ಪ್ರವಾಸ ಹೋಗಿದ್ದಾರೆಂದು ಜಾರಿಕೆ ಉತ್ತರವಿತ್ತು ಮಾತು ತೇಲಿಸಿದ್ದ. ಈ ಸಲವೂ ಗುರುಕುಲದಿಂದ ಬರುವಾಗ ದಾರಿಯಲ್ಲಿ ಪಂಪ ತಾತನ ವಿಚಾರವಾಗಿ ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಲಿಲ್ಲ. ಪುಲಿಗೆರೆಗೆ ಬಂದ ಮೇಲೆಯೇ ಪಂಪನಿಗೆ ನಿಜಸಂಗತಿ ತಿಳಿದದ್ದು. ತಾತನ ನಿಧನ ವಾರ್ತೆ ಕೇಳಿದ ಕೂಡಲೇ ಪಂಪನಿಗೆ ಬವಳಿ ಬಂದಂತಾಯಿತು. ಬಸವಳಿದು ಕುಸಿದ. ಗಳಗಳನೆ ಅತ್ತ.

ಪಂಪನಿಗೆ ತಾತನೊಡನೆ ಕಳೆದ ಎಳೆಯಂದಿನ ದಿನಗಳೆಲ್ಲ ನೆನಪಾದುವು. ನೆನೆ ನೆನೆದಷ್ಟು ಕೊಮರಯ್ಯನ ಮರಣ ದೊಡ್ಡ ಪೆಟ್ಟಾಗಿ ತೋರಿತು. ತವನಿಧಿಯನ್ನು ಕಳೆದುಕೊಂಡ ಬಡವನಂತೆ ಭಾಸವಾಯಿತು. ನೀರಿನಿಂದ ಹೊರಗೆಸೆದ ಮೀನಿನಂತೆ ಒದ್ದಾಡಿದ. ತಾನು ಕಲಿತುದನ್ನೆಲ್ಲ ಯಾರ ಬಳಿ ಒಪ್ಪಿಸಬೇಕೆಂದು ಬಂದನೋ ಆ ತಾತನೇ ಇಲ್ಲವೆಂದು ತಿಳಿದಷ್ಟೂ ಖಿನ್ನನಾದ ಕಳೆದ ಸಲ ಬಂದಾಗಲೇ ಪಟ್ಟು ಹಿಡಿದು ತಾತನನ್ನು ನೋಡಿಯೇ ಹೋಗಬೇಕಿತ್ತೆಂದು ಯೋಚಿಸಿ ಮರುಗಿದ. ಅವರ ಮರಣ ಕಾಲದಲ್ಲಿ ಬಳಿಯಲ್ಲಿದ್ದು ಸೇವೆ ಮಾಡುವ ಭಾಗ್ಯವೂ

ತನಗಿಲ್ಲವಾಯಿತೇ ಎಂದು ಚಿಂತಿಸಿದ. ಅನ್ನಾಹಾರಗಳಲ್ಲಿ ಆಸಕ್ತಿ ತಪ್ಪಿತು. ಅಜ್ಜನೊಡನೆ ಓಡಿ ಆಡಿ ನೋಡಿ ಬೆಳೆದ ಬನವಾಸಿಯನ್ನು ಸುತ್ತಿ ಬಂದ. ಅಜ್ಜನ ನೆನಪೇ ಅಲ್ಲಿಯೂ ಉಕ್ಕಿ ಬರುತ್ತಿತ್ತು.

ಯಾರು ಎಷ್ಟು ಹೇಳಿದರೂ ಪಂಪನ ದುಃಖ ತಗ್ಗಲಿಲ್ಲ. ಅಬ್ಬಣಬ್ಬೆಗಂತೂ ಮಗ ಕೊರಗುವುದನ್ನು ನೋಡುವುದು ಹಿಂಸೆಯಾಯಿತು. ಭೀಮಪಯ್ಯ ತಂದೆ ಕಳೆದುಕೊಂಡ ನೋವಿನ ಜೊತೆಗೆ ಮಗ ಸೊರಗುತ್ತಿರುವ ಸಂಕಟದಿಂದ ತೇದುಹೋದ. ಜಿನವಲ್ಲಭನ ವಿದ್ಯಾಗುರುಗಳು ಪಂಪನಿಗೆ ಹಿತವಾದ ಮಾತುಗಳಿಂದ ತಿಳಿಯ ಹೇಳಿದಾಗಲೇ ಪಂಪ ಕರ್ತವ್ಯದ ಕಡೆಗೆ ಹೊರಳಿದ್ದು.

ಜಯಗೊಂಡಸಿದ್ಧಾಂತದೇವರು ಪಂಪನಿಗೆ ಹೇಳಿ ಕಳಿಸಿದರು. ಪಂಪ ಆಚಾರ್ಯರಿಗೆ ಪೊಡಮಟ್ಟು ಗೆಂಟಾಗಿ ಕುಳಿತ. ಆಚಾರ್ಯರೇ ಮಾತಿಗೆ ತೊಡಗಿದರು.

"ಪಂಪಾ, ಗುರುಕುಲದಿಂದ ಬಂದು ತುಂಬ ದಿನಗಳಾದುವೆಂದು ತಿಳಿಯಿತು. ಇತ್ತ ಬರಲೇ ಇಲ್ಲವಲ್ಲಾ?"

"ಕ್ಷಮಿಸಿರಿ ಆಚಾರ್ಯಾ..."

"ಗುರುವರ್ಯರಾದ ದೇವೇಂದ್ರರು ಸೌಖ್ಯ ತಾನೆ? ಅವರು ಮತ್ತೆ ಇತ್ತ ಬರುವ ಸಂಭವವಿದೆಯೇ?"

"ಆಚಾರ್ಯರು ಆರೋಗ್ಯ.....?

"ಅಂತೂ ಈ ಪ್ರಾಂತ್ಯದಲ್ಲಿ ತುಂಬ ಕಲಿತ ಜವ್ವನಿಗರಲ್ಲಿ ನೀನು ಮೊದಲಿಗನಾದುದು ನಮಗೆಲ್ಲ ಹಿತವಾದ ಸುದ್ದಿ."

"ಎಲ್ಲ ತಮ್ಮಂತಹವರ ಆಶೀರ್ವಾದದ ಫಲ."

"ಏನು ಪಂಪಾ, ಎಲ್ಲದಕ್ಕೂ ಮೊಟುಕದ ಉತ್ತರವೇ ಕೊಡುವಿಯಲ್ಲಾ? ನೀನು ಈಗಲೇ ಇಷ್ಟು ಮಿತಭಾಷಿ ಆದರೆ ಹೇಗೆ?"

"ನನ್ನ ಸ್ವಭಾವವೇ ಅದು ಸ್ವಾಮಿ..."

"ಹಾಗಲ್ಲ, ನಿನ್ನ ಮುಖಚರ್ಯೆ ಶೋಕತಪ್ತವಾಗಿದೆ. ಮನೆಯಲ್ಲಿ ಎಲ್ಲಾ ಹದುಳವೆ? ಮೈಗೆ ಸರಿಯಿಲ್ಲವೆ?"

"ನನ್ನ ತಾತ ಕೊಮರಯ್ಯನವರು ಸ್ವರ್ಗಸ್ಥರಾದ ವಿಚಾರ ತಾವು ಬಲ್ಲಿರಿ. ಅವರ ಸಾವು ನನ್ನಲ್ಲಿ ಅನಾಥ ಪ್ರಜ್ಞೆ ಮೂಡಿಸಿದೆ."

"ಹಾಗೆಂದರೆ ಹೇಗೆ ಮಗು?"

"ಹೌದು ಆಚಾರ್ಯರೆ, ನಾನು ನಿಜವನ್ನೇ ಹೇಳುತ್ತಿದ್ದೇನೆ.

ಕೊಮರಯ್ಯನಂತಹವರ ಸಾವು ಸಾಮಾನ್ಯ ನಷ್ಟವಲ್ಲ. ನನ್ನ ಪಾಲಿಗೆ ಎಲ್ಲವೂ ಶೂನ್ಯ. ಒಮ್ಮೊಮ್ಮೆ ಸನ್ಯಾಸಿ ಆಗೋಣವೇ ಎನಿಸುತ್ತದೆ."

"ಹು ಹು! ಇದು ನಿಜವಾದ ವೈರಾಗ್ಯ ಅಲ್ಲ ಮಗು, ಇದನ್ನು ಸ್ಮಶಾನ ವೈರಾಗ್ಯವೆನ್ನುತ್ತಾರೆ. ಸತ್ತವರನ್ನು ನೋಡಿ ಬದುಕಿದವರೆಲ್ಲ ದೀಕ್ಷೆ ತೆಗೆದುಕೊಂಡರೆ ಲೋಕ ನಡೆದೀತೆ?"

"ಲೋಕದ ಗೊಡವೆ ನನಗೆ ಬೇಡ. ನನ್ನ ವಿಚಾರ ಈಗ ಹಾಗಿದೆ..."

"ಈಗ ಹಾಗಿದೆ ಅಷ್ಟೆ, ನಾಳೆ ಹಾಗಿರುವುದಿಲ್ಲ. ಎಲ್ಲ ಸರಿ ಹೋಗುತ್ತದೆ."

"ಈ ನೋವು ಕರಗುವುದು ಅಷ್ಟು ಸುಲಭ ಸರಳವಲ್ಲ ಸ್ವಾಮಿ. ನನ್ನ ಅಳಲಿನ ಆಳ ಅಷ್ಟಿಷ್ಟಲ್ಲ."

"ಹಿರಿಯ ಮಗನಾದ ನೀನೆ ಹೀಗತ್ತರೆ ಆ ಹುಡುಗ ಜಿನವಲ್ಲಭನ ಗತಿಯೇನು? ಕಿರಿಯನಿಗೆ ನೀನು ಧೈರ್ಯ ತುಂಬಬೇಕು. ಅದು ಬಿಟ್ಟು..."

"ಸಂಕಟಕ್ಕೆ ಹಿರಿಯ ಕಿರಿಯ ಎಂಬ ತಾರತಮ್ಯ ಉಂಟೆ? ದುಃಖ ಲಿಂಗ ಹಾಗೂ ವಯಸ್ಸುಗಳಿಗೆ ಅತೀತ. ಅದನ್ನು ತಾವು ನನಗಿಂತ ಚೆನ್ನಾಗಿ ಬಲ್ಲಿರಿ."

"ಹಾಗೆಂದು ಒಂದೇ ಸಮನೆ ಎಷ್ಟು ದಿವಸ ಅಳುತ್ತ ಹೀಗೆ ಕುಳಿತುಕೊಳ್ಳುವುದು?"

"ಗಾಯ ಮಾಗುವ ತನಕ"

"ಇದಿಷ್ಟೆ ಜಾಣತನವಲ್ಲ ಪಂಪಾ, ಬದುಕು ಸಂಕೀರ್ಣವಾದುದು. ತನ್ನ ಸೂಕ್ಷ್ಮಗಳನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡದು."

"ಹಾಗಾದರೆ ಬೇರಾವುದು ಜಾಣತನ ಮುನಿವರ್ಯಾ?"

"ನೋಡು, ಸತ್ತವರಿಗೆ ಒಂದೇ ಸಮನೆ ಅಳುವುದು ಸರಿಯಲ್ಲ. ಒಂದು ವೇಳೆ ಮಾನವ ಅಳುವುದರಿಂದ ಸತ್ತವರು ಏಳುವ ಪಕ್ಷದಲ್ಲಿ ಅಳುವುದೂ ಆಗಬಹುದು. ಇಲ್ಲವೆ ಅಳುವುದರಿಂದ ಉಳಿದವರಾದರೂ ಮುಂದೆ ಎಂದೆಂದೂ ಸಾಯದೆ ಉಳಿವುದಾದರೆ ಅಳಬಹುದು. ಹುಟ್ಟು ಸಾವು ಬಾಳಿನ ಎರಡು ಮುಖಗಳು. ಸತ್ತವರು ಏಳರು. ಬದುಕಿರುವವರು ನಿಲ್ಲರು. ಇದಕ್ಕಾಗಿ ಬಾಯಳಿವುದೂ ಚಿಂತಿಸುವುದೂ ನೋವುದೂ ಗೋಳಿಡಿವುದೂ ಏಕೆ?"

"ಹಾಗಾದರೆ ಮಾನವನಿಗೆ ಬಾಳುವೆಯೇ ಇಲ್ಲವಲ್ಲಾ?"

"ಇದೆ ಮಗು. ಧರ್ಮವನ್ನು ಸಂಸಾರಕ್ಕೆ ಸೇರಿಸಿ ಬಾಳುವುದೊಂದೇ ಯಶಸ್ಸಿನ ಗುಟ್ಟು. ಆ ದಾರಿಯಲ್ಲಿ ಹೊರಟವನಿಗೆ ಉಳಿದದ್ದು ಸುಲಭ."

"ಅದೆಲ್ಲ ಜಿತೇಂದ್ರಿಯರ ಮಾತಾಯಿತು. ನಮ್ಮಂಥ ಶ್ರಾವಕರ ಮಾತು ಹೇಳಿ?"

"ಶ್ರಾವಕರಲ್ಲೂ ಸಾವು ನೋವುಗಳನ್ನು ಯಥಾರ್ಥವಾಗಿ ಅರಿತು ಆಚರಿಸುವ ಶ್ರೇಷ್ಠರಿದ್ದಾರೆ. ನಿನ್ನ ತಂದೆ ಭೀಮಪಯ್ಯನವರೇ ಈ ಮಾತಿಗೆ ಸಾಕ್ಷಿ. ಅವರು ಎಲ್ಲಾ ನೋವನ್ನೂ ನುಂಗಿ ಸಂಸಾರದ ಅಸಾರತೆಯನ್ನು ಮನಗಂಡಿದ್ದಾರೆ. ನಿನಗಿಂತ ಎರಡು ಪಟ್ಟು ಶೋಕ ಅವರಲ್ಲಿದೆ. ನೀನು ಕೂಡ ಅವಿನಾಶಿಯಾದ ಆತ್ಮನನ್ನು ಅರಿತು ಅನುಸರಿಸು. ಈ ಎದ್ದು ಬೀಳುವ ದೇಹಕ್ಕೇಕೆ ಹೆಚ್ಚುಬೆಲೆ ಕೊಡುವೆ?"

ಗುರು ಜಯಗೊಂಡಸಿದ್ಧಾಂತದೇವರ ಮಾತು ಪಂಪನ ಮನದಾಳಕ್ಕೆ ಮುಟ್ಟಿತು. ತನ್ನ ಆರಾಧ್ಯ ದೈವ ದೇವೇಂದ್ರರೂ ಹೀಗೆ ಹೇಳಿದ್ದರು. ಅದರಂತೆ ಮನೆಗೆ ಬಂದು ತಂದೆಯನ್ನೇ ಗಮನಿಸತೊಡಗಿದ. ಅವರ ಮೈಕಟ್ಟು ಈಗ ಸಡಿಲಾಗಿ ಬಡಕಲಾಗಿದ್ದರು. ಭೀಮಪಯ್ಯನ ಇಕ್ಕಟ್ಟು ಮಗನಿಗೂ ಮನದಟ್ಟಾಯಿತು. ತಂದೆಮಕ್ಕಳು ಪರಸ್ಪರ ಅರಿತುಕೊಂಡರು.

ಅಂದು ಬೆಳಗ್ಗೆ ಎಂದಿನಂತೆ ಪಂಪ ಸಂಧ್ಯಾವಂದನೆ ಮುಗಿಸಿಕೊಂಡು ಚೈತ್ಯಾಲಯಕ್ಕೆ ಹೊರಟು ನಿಂತ. ಭೀಮಪಯ್ಯನೂ ಮಗನೊಡನೆ ಹೊರಟ. ಇಬ್ಬರಿಗೂ ಮಾತನಾಡುವ ತವಕ. ಯರು ಮೊದಲು ಬಾಯಿ ಬಿಡುವುದು? ಮೌನವಾಗಿಯೇ ಬಸದಿಯಿಂದ ಬಂದರು. ಉಪಾಹಾರ ಮುಗಿದ ಮೇಲೆ ಭೀಮಪಯ್ಯನೇ ಮಾತಿಗೆ ಮೊದಲಿಟ್ಟ.

"ಪಂಪಾ, ನಿನ್ನೊಡನೆ ಒಂದು ಮುಖ್ಯವಾದ ಮಾತಿದೆ."

"ಹೇಳಿ ಅಪ್ಪಾಜಿ."

"ಮುಂದಿನ ತಿಂಗಳು ನಿನ್ನ ಮದುವೆಗೆ ಏರ್ಪಾಟು ನಡೆಯಬೇಕಾಗಿದೆ."

"ಇದೇನು ಅಪ್ಪಾಜಿ, ತಾತ ಸತ್ತು ಇನ್ನೂ ಎರಡು ತಿಂಗಳಾಗಿಲ್ಲ."

"ನಿಜ ಮಗು. ಆದರೆ ಇದು ನಿನ್ನ ತಾತನ ಅಂತಿಮ ಆಸೆ."

"ನನ್ನ ಮದುವೆ ಮಾಡಿದರೆ ಅವರಿಗೆ ಸಂತೋಷವೆ?"

"ಹೌದು ಕುಮಾರ. ನಿನ್ನ ತಾತ ಕಡೆಯುಸಿರೆಳೆವಂದು ನನ್ನನ್ನೂ ನಿನ್ನಬ್ಬೆಯನ್ನೂ ಹತ್ತಿರ ಕೂಡಿಸಿಕೊಂಡು 'ನನ್ನ ಕಡೆಗಾಲದ ಕೋರಿಕೆ ಬೇರೇನೂ ಇಲ್ಲ. ನನ್ನ ಮುದ್ದು ಪಂಪನಿಗೆ ಗುರುಕುಲವಾಸದಿಂದ ಬಂದ ಮೇಲೆ ಜೋಯಿಸ ಸಿಂಘನ ವಂಶದ ಇನ್ನೊಂದು ಬಳ್ಳಿಗೆ ಆಸರೆಯಾಗಿ ನಿಲ್ಲಿಸಿರಿ. ಆತನ ಮಗನ

ಮಗಳು ಜಕ್ಕಲೆಯನ್ನು ಪಂಪನಿಗೇ ತಂದುಕೊಳ್ಳಿ. ಕೋಪದ ಭರದಲ್ಲಿ ಜೋಯಿಸನ ಮಗ ಶಂಭುರಾಜ ಆಗ ಅವರಿಂದ ಬೇರೆಯಾಗಿ ನಿಂತಿದ್ದರೂ ನಾಳೆ ಅವನು ಮನಸ್ಸು ಬದಲಿಸಬಹುದೆಂದು ನಾವೆಲ್ಲ ಹಿಂದೆಯೇ ಅಂದುಕೊಂಡಿದ್ದೆವು. ಏಕೆಂದರೆ ಅವನ ಹೆಂಡತಿ ಮಾಚಿಕಬ್ಬೆ ನಮ್ಮೆಲ್ಲರ ಕಡೆಗೇ ಇದ್ದಾಳೆ; ಅವಳು ಜಿನಧರ್ಮದ ಪರಿಸರದಲ್ಲಿ ಬೆಳೆದಿರುವುದರಿಂದ ಇಂದಲ್ಲದಿದ್ದರೂ ನಾಳೆ ನಿಧಾನವಾಗಿ ಗಂಡನನ್ನು ಪರಿವರ್ತಿಸಿಯಾಳೆಂದು ನಂಬಿದ್ದೆವು. ಅದರಂತೆಯೇ ನಡೆದಿದೆ. ಶಂಭುರಾಜ ದಿನಗಳೆದಂತೆ ಮಾಗುತ್ತ ತಂದೆಯ ದಾರಿಯನ್ನೇ ಸರಿಯೆಂದು ಅರಿತು ಅನುಸರಿಸುತ್ತಿದ್ದಾನೆ. ನೀವೆಲ್ಲ ಹೋಗಿ ಶಂಭುರಾಜನನ್ನು ಕೇಳಿ. ಗಂಡಿನ ಕಡೆಯವರೇ ಹೋಗಿ ಕೇಳುವುದೆ ಎಂದು ಸಿಡುಕಬೇಡಿ. ಜಕ್ಕಲೆ ಪಂಪನಿಗೆ ತಕ್ಕ ಮಡದಿಯಾಗುವಳೆಂದು ತಿಳಿಯುವೆ, ಇದರ ಮೇಲೆ ದೈವ ನಡೆಸಿದಂತೆ ಆಗಲಿ' ಎಂದು ಹೇಳಿ ಮುಕ್ತಿಗೆ ಸಂದರು."

"ಎಲ್ಲ ಕನಸಿನಲ್ಲಿ ಕಂಡಂತೆ ಇದೆ ಅಪ್ಪಾಜಿ. ನನ್ನ ಲೇಸು ಕೋರಿದ್ದಾರೆ ಸಾಯುವಾಗಲೂ ತಾತ ಕೊಮರಯ್ಯ! ಅವರಿಗೆ ನನ್ನ ಅಭ್ಯುದಯವೇ ಗುರಿಯಾಗಿದ್ದಂತೆ ತೋರುತ್ತದೆ."

"ಸರಿಯಾಗಿ ಹೇಳಿದೆ ಚಿರಂಜೀವಿ. ಈಗ ಅವರ ಆತ್ಮಶಾಂತಿಗಾಗಿಯಾದರೂ ನಾವು ನಮ್ಮ ಕರ್ತವ್ಯ ಮಾಡಬೇಕಾಗಿದೆ."

ಪಂಪ ನಿರುತ್ತರನಾದ.

ಮುಂದಿನ ದಿನಗಳಲ್ಲಿ ಕೊಮರಯ್ಯನ ಮಾತು ಸತ್ಯವಾಗಿತ್ತು. ಅಬ್ಬಣಬ್ಬೆಗಂತೂ ಹಿಡಿಸಲಾದ ಹಿಗ್ಗಿನ ಸುಗ್ಗಿ. ತನ್ನ ವಂಶದ ಇನ್ನೊಂದು ಕುಡಿ ತನ್ನ ಮಗನಿಗೆ ಆತು ಕೂಡಿ ದಾಂಗುಡಿಯಿಟ್ಟಿದ್ದು ತಂದೆ ಜೋಯಿಸ ಸಿಂಘನಿಗೆ ಸಂದಗೌರವವೆಂದೇ ತಿಳಿದಳು. ಮಾವನ ದೂರದೃಷ್ಟಿ ಉದಾರತೆಗೆ ತಲೆಬಾಗಿದಳು.

ಭೀಮಪಯ್ಯನಿಗೆ ಬೇರೊಂದು ಇಕ್ಕಟ್ಟು ಒದಗಿತು. ಆದರೆ ಅದನ್ನು ಸುಲಭದಲ್ಲೇ ಪರಿಹರಿಸಿಕೊಂಡ.

ಅದು ತಾನು ಕುಂದರಾಜನಿಗೆ ಕೊಟ್ಟ ಮಾತು—

ಪುಲಿಗೆರೆಯಲ್ಲಿ ಕುಂದರಾಜ ಜೈನ ಸಮಾಜದ ಮುಖಂಡ. ಊರಿನ ಸಿರಿವಂತ. ಧಾರ್ಮಿಕ ಸಾಹಿತ್ಯಿಕ ಸಮಾರಂಭಗಳಲ್ಲಿ ಆತನದೇ ಮಾರ್ಗದರ್ಶನ. ಅವನ ಮಡದಿ ಪೋಚಿಕಬ್ಬೆ ಸಂಗೀತ ಸಾಹಿತ್ಯ ನೃತ್ಯಗಳಲ್ಲಿ ಎಳೆಯಂದಿನಲ್ಲೇ ಶಿಕ್ಷಣ ಪಡೆದಿದ್ದಳು. ಗಂಡಹೆಂಡಿರು ಯಾವ ಪುರಾಣ ಪ್ರವಚನಗಳನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸಮಾನ ಗುಣಶೀಲಗಳಿಂದ ಕುಂದರಾಜ ಭೀಮಪರು

ಆತ್ಮೀಯರಾದರು. ಅವರ ಮನೆಗೆ ಇವರೂ, ಇವರ ಮನೆಗೆ ಅವರೂ ಹೋಗಿ ಬರುವುದು ನಿತ್ಯದ ರೂಢಿಯಾಯಿತು. ಅಬ್ಬಣಬ್ಬೆಗೂ ಪೋಚಿಕಬ್ಬೆಯ ಸ್ನೇಹ ಹಿತವಾಗಿತ್ತು.

ಕುಂದರಾಜ ಪೋಚಿಕಬ್ಬೆಯರಿಗೆ ಬಮ್ಮಲೆ ಒಬ್ಬಳೇ ಮಗಳು. ಅವಳನ್ನು ಪಂಪನಿಗೆ ತಂದುಕೊಳ್ಳಬೇಕೆಂದು ಅವರ ಆಸೆ. ಭೀಮಪನಿಗೂ ಒಪ್ಪಿಗೆಯೇ. ಅಬ್ಬಣಬ್ಬೆಗೆ ವಿವಾಹ ಸುಲಭೆಯಾಗಿ ಬೆಳೆದು ನಿಂತಿದ್ದ ಬಮ್ಮಲೆಯನ್ನು ಸೊಸೆ ಮಾಡಿಕೊಳ್ಳಲು ಸಂತೋಷವೇ. ಆದರೆ ಅವಳನ್ನು ಮುಂದೆ ಜಿನವಲ್ಲಭನಿಗೆ ಮಾಡಿಕೊಂಡರೆ ಹೇಗೆ? ಎಂಬ ಭಾವನೆ ಹೊಂದಿದ್ದಳು. ಭೀಮಪ ಅಬ್ಬಣಬ್ಬೆಯರಿಬ್ಬರೂ ಸಾಕಷ್ಟು ಮಾತುಕತೆ ನಡೆಸಿಯಾದ ಮೇಲೆ ಕುಂದರಾಜನಿಗೆ ಈ ವಿಚಾರ ತಿಳಿಸಿದರು. ಪೋಚಿಕಬ್ಬೆ ಕುಂದರಾಜ ನಗುತ್ತಾ ತಿಳಿಸಿದರು: "ಗಂಡ ಹೆಂಡತಿ ಕಾವ್ಯಗಳ ಅಭ್ಯಾಸದಲ್ಲಿ ತೊಡಗಿ ನೆರೆಹೊರೆಯವನ್ನೇ ಮರೆತಂತೆ ಕಾಣುತ್ತದೆ. ಬಮ್ಮಲೆ ಜಿನವಲ್ಲಭನಿಗಿಂತ ಮೂರು ತಿಂಗಳು ದೊಡ್ಡವಳು. ಜಿನವಲ್ಲಭನ ಅತ್ತಿಗೆಯಾಗಬೇಕಾದವಳು ಬಮ್ಮಲೆ. ಬೇಗ ಮುಹೂರ್ತ ನಿರ್ಧರಿಸಿರಿ!" ಪಂಪನಿಗಿಂತ ಜಿನವಲ್ಲಭ ಎತ್ತರವಾಗಿ ಬೆಳೆದಿದ್ದ. ಇಬ್ಬರೂ ಒಟ್ಟಿಗೆ ನಿಂತರೆ ಜಿನವಲ್ಲಭನೇ ಅಣ್ಣನೆಂದು ಹೇಳಬಹುದಿತ್ತು. ಭೀಮಪಯ್ಯ ಅವರ ಮಾತಿಗೆ ಒಪ್ಪಿದ. ಪಂಪನಿಗೆ ಬಮ್ಮಲೆಯನ್ನು ತಂದುಕೊಳ್ಳಲು ಮನೆ ತುಂಬಿಸಲೂ ನಿರ್ಧರಿಸಿದ.

# ೧೦

ಎಂಟು ದಿವಸ ವಿವಾಹ ಮಹೋತ್ಸವ ಶಾಸ್ತ್ರೋಕ್ತವಾಗಿ ನಡೆಯಿತು. ಜಕ್ಕಲೆಯ ತಂದೆ ತಾಯಿಗಳೂ ಪುಲಿಗೆರೆಗೇ ಬಂದಿದ್ದರು. ಮದುವೆಯ ಸಡಗರವೆಲ್ಲ ಮುಗಿದ ಮೆಲೆ ಪಂಪ ಮಡದಿಯರೊಡನೆ ಎತ್ತಿನ ಗಾಡಿಯಲ್ಲಿ ಅಣ್ಣಿಗೆರೆಗೆ ಹೋಗಿ ಬಂದ. ಅಲ್ಲಿಂದ ಬಂದ ಮೇಲೆ ಬನವಾಸಿಗೆ ಹೊರಟರು. ತನ್ನ ತಾತನ ಅಗ್ರಹಾರಗಳನ್ನು ತೋರಿಸಿಕೊಂಡು ಬಂದ. ಮಿತವಾದ ನಂಟರಿಷ್ಟರ ಪರಿವಾರದೊಡನೆ ಕಳ್ವಪ್ಪಿಗೆ ಹೊರಟ. ಆರು ಎತ್ತಿನ ಬಂಡಿಗಳಲ್ಲಿ ಪಯಣ. ಗಾಡಿಗಳಿಗೆ ಮೇಲೆ ಹೊಂಗೆ ಸೊಪ್ಪು ಹೊದಿಸಿದ ಕಮಾನು. ಒಳಗೆ ಹುಲ್ಲು ಹರಡಿ ಕಂಬಳಿ ಹಾಸಿದ್ದರು. ಬಲವಾದ ಹೋರಿಗಳು. ಅವುಗಳ ಕೊರಳಿಗೆ ಗಂಟೆ ಸರ. ಕೊಂಬಿಗೆ ಗೆಜ್ಜೆಸರ. ಕೊಂಬಿಗೆ ಗೆಜ್ಜೆ ಕುಚ್ಚು. ಮೈ ಮೇಲೆ ಪಟ್ಟೆ ಹೊದಿಕೆ. ಬೆನ್ನು ಚಪ್ಪರಿಸಿದರೆ ಸಾಕು ಹಾದಿ ಬೀದಿಯುದ್ದಕ್ಕೂ ಕಿಣಿಕಿಣಿನಾದ ಚಿಮ್ಮುತ್ತಾ ವೇಗವಾಗಿ ಓಡುತ್ತಿದ್ದುವು.

ಪಂಪ ಆಗಾಗ ತಾನೇ ಮುಂದೆ ಕುಳಿತು ಚಾಟಿ ಹಗ್ಗ ಹಿಡಿದು ಗಾಡಿ ನಡಸುತ್ತಿದ್ದ. ಹೋರಿಗಳ ಹುರುಪಿನ ಓಟ. ಬಂಡಿಯ ಹಿಂದೆ ನೋಡಿದರೆ ಹೋರಿಗಳ ಕಾಲು ತುಳಿತಕ್ಕೆ ಮೇಲೆದ್ದ ಕೆಂಧೂಳಿ ಧೂಪ ಹಾಕಿದಂತೆ ತೋರುತ್ತಿತ್ತು. ಓಲಾಟಕ್ಕೆ ಸದ್ದು ಮಾಡುವ ಕಿಣಿಕಿಣಿನಾದ. ಸುತ್ತಲ ಬಯಲು ಅವನ ಮೈ ಮರೆಸುತ್ತಿತ್ತು. ಅಲ್ಲಲ್ಲಿ ತೊರೆ ಹಳ್ಳಗಳು ಬಂದಾಗ ಕಾಲಾಡುತ್ತಿದ್ದರು. ತೊರೆ ದಡದಲ್ಲಿ ಹೊಂಗೆಮರಗಳ ಸಾಲು. ಕೆಳಗೆ ರಂಗವಲ್ಲಿ ಹೊಂಗೆ ಹೂ. ಹೊಂಗೆ ಹೂವಿನ ತೊಂಗೆಗೆ ಮುತ್ತಿ ಸಂಗೀತ ಕೇಳುವ ಭೃಂಗಗಳು. ಮರದ ಬುಡದಲ್ಲಿ ಅಡುಗೆ ಮಾಡಿ ಊಟವಾದ ಮೇಲೆ, ತೊರೆಯಲ್ಲಿ ತಿಳಿಯಾದ ಹರಿವ ನೀರಿನಲ್ಲಿ ಪಾತ್ರೆ ತೊಳೆದು ಮತ್ತೆ ಪ್ರಯಾಣ ಮುಂದುವರಿಸುವುದು. ರಾತ್ರಿಯಾಗುತ್ತಿದ್ದಂತೆ ದಾರಿಯಲ್ಲಿ ಸಿಕ್ಕ ಹಳ್ಳಿಯಲ್ಲಿ ಮಲಗಿದ್ದು ಮುಂಜಾನೆ ಪಯಣ ಬೆಳೆಸುವುದು. ಹಗಲು ಪಯಣ, ಇರುಳು ಬಿಡಾರ.

ಇಪ್ಪತ್ತು ದಿನಗಳಲ್ಲಿ ಕಳ್ವಪ್ಪು ಮುಟ್ಟಿದರು. ಪಂಪ ಮರುದಿವಸ ತಾನು ಹಿಂದೆ ಗುರುಗಳೊಡನೆ ಬಂದಾಗ ಸುತ್ತಿದ ತಾಣಗಳನ್ನು ನೋಡಿ ಬಂದ.

ಜಕ್ಕಲೆ ಬಮ್ಮಲೆಯರಿಗೆ ಕಟವಪ್ರದ ಅಂಗುಲಂಗುಲವನ್ನೂ ಪರಿಚಯಿಸಿದ. ಬಮ್ಮಲೆ ಜಕ್ಕಲೆಯರು ಎರಡು ತಿಂಗಲ್ಲಿ ಅಕ್ಕ ತಂಗಿಯರಂತೆ ಹೊಂದಿಕೊಂಡಿದ್ದರು. ತಮ್ಮ ಮನದನ್ನ ಕಲಿಕೆಗಾಗಿ ಈ ಎಲ್ಲಾ ನಾಡು ವಿಹರಿಸಿದ ವಿವರ ಕೇಳಿ ಬೆರಗಾದರು. ತಾವು ಗುರುಗಳಲ್ಲಿ ಕಲಿತ ಕಾವ್ಯ ಶಾಸ್ತ್ರಗಳನ್ನೆಲ್ಲ ಪತಿ ಗ್ರಂಥದ ನೆರವಿಲ್ಲದೆ ಕೇವಲ ನೆನಪಿನ ಬಲದಿಂದ ಹೇಳಿದಾಗ ವಿಸ್ಮಿತರಾದರು.

ಪಂಪ ಮಡದಿಯರನ್ನು ಒಂದು ದಿನವೂ ಬಿಡದೆ ಎಲ್ಲಾ ಬಸದಿಗಳಲ್ಲೂ ಭಕ್ತಿ ಗೀತಗಳನ್ನೂ ಹಾಡಿಸಿದ. ತಾನೇ ಬರೆದ ಜಿನಸ್ತುತಿಗಳಿಗೆ ರಾಗ ಹಾಕಿ ಹೇಳಿಸಿದ. ಜಕ್ಕಲೆ ವೀಣೆ ನುಡಿಸಿದರೆ ಬಮ್ಮಲೆ ಹಾಡುವಳು. ಬಮ್ಮಲೆ ತಂಬೂರಿ ಮೀಟಿದರೆ ಜಕ್ಕಲೆ ಗಾನ ಮಾಡುವಳು. ಪಂಪ ಅವರಿಗೆ

"ನೋಡಿ, ನೀವು ನನಗೆ ದೇವರಿತ್ತ ಜೋಡಿ ಕಿನ್ನರಿ, ಈ ವಾದ್ಯಗಳನ್ನು ದಿನ ದಿನವೂ ಮಿಡಿಮಿಡಿದು ಬತ್ತೀಸರಾಗ ಹಾಡುವೆ" ಎಂದು ನುಡಿದು ಕೆಂಪಾಗಿಸುವನು. ಆಗ ಬಮ್ಮಲೆ

"ನೀವು ಹೇಳಿದುದೆಲ್ಲ ಸರಿಯೇ, ಒಂದು ಮಾತು ಬಿಟ್ಟು" ಎನ್ನುವಳು.

"ಅದೇನು ತಪ್ಪು ತೋರಿದ ಮಾತು?"

"ನಾವು ದೇವರಿತ್ತ ಕಿನ್ನರಿ ಎಂದೆರಲ್ಲಾ ಅದು."

"ಇನ್ನೇನು ಹೇಳಬೇಕಿತ್ತೋ!"

"ನಿಮ್ಮ ಮಾವನವರಿತ್ತ ಕಿನ್ನರಿಗಳೆಂದು!"

ಎಲ್ಲರೂ ಕಳ್ವಪ್ಪು ತುಂಬಿ ತುಳುಕಿದಂತೆ ನಕ್ಕರು.

"ಏನು ಹಾಗೆ ನುಂಗಿ ಹಾಕೋ ಹಾಗೆ ನೋಡ್ತೀರಿ," ಜಕ್ಕಲೆ ಚಕ್ಕಂದ ಕ್ಕೆಳಸಿದಳು.

"ನೀನು ಎಷ್ಟು ಚೆನ್ನಾಗಿ ಕಾಣ್ತಿದೀಯಾ."

"ಸರಿ ಅರಮನೆ ಬುದ್ಧಿ ಪ್ರಾರಂಭವಾಯ್ತೇನೊ"

"ನಾನು ಹೊಗಳ್ತಾ ಇಲ್ಲ ನಿಜ ಹೇಳ್ತಿದೀನಿ– ನಿನ್ನ ಅಂಗಾಂಗಗಳಲ್ಲಿ ಸೌಂದರ್ಯದ ಅಮೃತಧಾರೆ ಸುರೀತಿದೆ."

"ಸರಿ ಸರಿ ಕೊಪರಿಗೆ ತನ್ನಿ. ನಾನು ಅದರಲ್ಲಿ ನಿಂತ್ಕೋತೀನಿ ಅಮೃತಧಾರೆಯಿಂದ ತುಂಬುತ್ತೆ."

"ಅದನ್ನು ತುಂಬಿಸ್ಕೊಳ್ಳೋದು ಹಾಗಲ್ಲ ಹೀಗೆ"–ಎಂದವನೇ ಅವಳನ್ನು ಬರಸೆಳೆದು ತೋಳುಗಳಲ್ಲಿ ಉಯ್ಯಾಲೆಯಾಡಿಸಿದ. ಬಮ್ಮಲೆ ಬೆಳಗಿನ ಫಲಾಹಾರಕ್ಕೆ ಬಿಸಿಯಾದ ಇಡ್ಡಲಿ ತಂದಿಟ್ಟಳು. ಮಲ್ಲಿಗೆಯರಳಿ ನಿಂತಂತೆ ಕಾಣುವ ತಟ್ಟೆಇಡ್ಡಲಿ!

ಪಂಪ ಒಂದು ಒಬ್ಬೆ ಇಡ್ಡಲಿ ಪೂರ್ತಿತಿಂದು ಮುಗಿಸಿದ. ಕೆನೆ ಕಟ್ಟಿದ ಕಾದಿಳುಪಿದ ಹಾಲು ಬಟ್ಟಲು ತುಂಬ ಕುಡಿದ. ಪಕ್ಕದ ಪುಟ್ಟ ಬೆಳ್ಳಿ ತಟ್ಟೆಯಲ್ಲಿಟ್ಟಿದ್ದ ಚಕ್ಕುಲಿಗೂ ಕೈಹಾಕಿದ. ಬಾಯಿತುಂಬ ಮುಚ್ಚೋರೆಯಿದೆ, ಒಮ್ಮೆಲೇ ಜೋರಾಗಿ ತೇಗು ಬಂತು. ಬಮ್ಮಲೆ ತಿರುಗಿ ನೋಡಿದಳು. ಮಂದಸ್ಮಿತ ಮಿಂಚಿತು. ಅಡುಗೆ ಮನೆಯಿಂದ ಹೊರಬಂದ ಜಕ್ಕಲೆಯೂ ನಕ್ಕಳು. ಪಂಪನಿಗೆ ತಾನು ಬೆಳಗ್ಗೆ ತಡವಾಗಿ ಎದ್ದಾಗಲೂ ಅವರು ಮುಗುಳು ನಗೆ ಚೆಲ್ಲಿದ್ದು ನೆನಪಾಯಿತು.

"ಜಕ್ಕಿ, ಏಕೆ ನೀನು ಗಟ್ಟಿಯಾಗಿ ನಕ್ಕಿದ್ದು? ಏನು ಚಕ್ಕಂದವೇ?"

"ಚಕ್ಕಂದ ಆಡುತ್ತಿರುವವರು ನೀವು ಸ್ವಾಮಿಗಳೇ ನಾವಲ್ಲ"

"ಏನು ಕಟವಪ್ರಕ್ಕೆ ಬಂದೆವೆಂದು ನನ್ನನ್ನೂ ಸ್ವಾಮಿಗಳೇ ಎಂದು ಕರೆಯುತ್ತೀಯಲ್ಲಾ."

"ತಪ್ಪಾಯಿತು ಪ್ರಭೂ, ಮನ್ನಿಸಬೇಕು. ಈಗ ಸರಿಯೇ?"

"ಈಗಲೂ ಸರಿಯಲ್ಲ, ನಾನೇನು ರಾಜನೇ, ಪ್ರಭು ಎಂದು ಕರೆಸಿಕೊಂಡು ಮನ್ನಿಸುವುದಕ್ಕೆ?"

"ಓಹೋ ಏಕೋ ಕಷ್ಟಕ್ಕಿಟ್ಟುಕೊಂಡಿತು. ಮಾತಿನ ಮಲ್ಲರಾದ ನಿಮ್ಮೊಡನೆ ಬಮ್ಮಲೆಯೇ ಸರಿ."

"ಅಂದರೆ ಅವಳೂ ಮಾತಿನ ಮಲ್ಲಿ ಎಂದಾಯಿತಲ್ಲಾ!"

"ನಾನೇಕೆ ಮಾತಿನಮಲ್ಲಿ ಆಗಲೀಂದ್ರೆ?"

"ಬಮ್ಮಲೆ ಎಂದರೆ ಅರ್ಥವೇ ಅದು ಕಣೆ. ಬ್ರಹ್ಮಕೂಡ ನಿನ್ನ ಮಾತು ಕೇಳಿ ಅಲೆ! ಎಂದು ಅಚ್ಚರಿಪಟ್ಟು ಬಮ್ಮಲೆ ಎಂದು ಹೆಸರಿಟ್ಟಿದ್ದಾನೆ."

"ಈ ಬೆಣ್ಣೆ ಮಾತುಗಳಿನ್ನು ಸಾಕು ದೊರೆ."

'ನಾನು ದೊರೆಯೆ?'

"ನೀವು ದೊರೆಗಳಲ್ಲದೆ ಮತ್ತೇನು. ನಮ್ಮ ಸಂಸಾರ ಸಾಮ್ರಾಜ್ಯಕ್ಕೆ ನೀವೇ ಸಾರ್ವಭೌಮರು."

"ಭೇಷ್! ಈ ಪಂಡಿತನ ಹೆಂಡತಿಯಾದುದಕ್ಕೆ ಸಾರ್ಥಕವಾಯಿತು. ಇರಲಿ, ಬೆಳಗ್ಗೆ ನೀವು ನಾನು ತಡವಾಗಿ ಹಾಸಿಗೆ ಬಿಟ್ಟಾಗ ನಕ್ಕಿದ್ದೂ, ಈಗ ಪೊಗದಸ್ತಾಗಿ ಉಪಾಹಾರ ಮಾಡಿದಾಗ ನಕ್ಕಿದ್ದೂ ಏಕೆಂದು ತಿಳಿಸಬೇಕು."

"ತಾವು ಪಂಡಿತರೆಂದು ಈಗ ತಾನೆ ಹೇಳಿಕೊಂಡಿದ್ದೀರಲ್ಲಾ, ತಾವೇ ಅಪ್ಪಣೆ ಕೊಡಿಸಿ."

"ನಾನು ಕುಂಭಕರ್ಣನೊ ಬಕಾಸುರನೊ ಇರಬೇಕೆಂದು ತಾನೆ?"

"ಛೆ ಛೆ!"

"ಛೆ ಛೆ ಅಂದರೆ, ಇನ್ನೂ ದೊಡ್ಡ ರಕ್ಕಸನೆಂದು ಹುರುಳೆ?"

"ತಪ್ಪಾಯಿತೆನ್ನಿ. ಅಂತಹ ಮಾತನ್ನು ಮತ್ತೆ ಎಂದೂ ಅನ್ನದಿರಿ. ಬಿಡುತು ಬಿಡುತು" ಎಂದಳು ಜಕ್ಕಲೆ.

"ಹಾಗಾದರೆ ನೀನು ಮುಸಿ ಮುಸಿ ಎಂದುದೇಕೆ?"

"ಅದು ಅಪಹಾಸ್ಯಕ್ಕಲ್ಲ. ಸಂತೋಷಕ್ಕೆ."

"ಚೆನ್ನಾಯಿತು. ನಾನು ಊಟ ಮಾಡಿ ಹೊಟ್ಟೆ ಮೇಲೆ ಕೈ ಆಡಿಸುತ್ತಾ ಡರ್ರ್ ಎಂದು ತೇಗಿದರೆ ಸಂತೋಷವಾಗುವುದೆಂಬುದು ಇಂದೇ ಕೇಳಿದ ಹೊಸ ಮಾತು."

"ಸರಿಹೋಯಿತು ಬಿಡಿ. ಏನೂ ತಿಳಿಯದವರಿಗಾದರೆ ಹೇಳಬಹುದು. ಎಲ್ಲ ಬಲ್ಲ ಈ ನಲ್ಲರಿಗೆ ಹೇಳುವುದು ಕಷ್ಟ."

"ಅಂತೂ ಸರಿಯಾದ ಉತ್ತರ ಕೊಡದೆ ನಲ್ಲಗಿಲ್ಲ ಎಂದು ಗಲ್ಲ ಹಿಡಿದೇ ಮಾತು ಜಾರಿಸುತ್ತಿದ್ದೀಯೆ."

ಬಮ್ಮಲೆ ಬಾಯಿ ಹಾಕಿ ಒಮ್ಮೆಲೆ ನುಡಿದಳು:

"ಅಲ್ಲಾರೀ, ಯಾವ ಹೆಂಡತಿ ತಾನೆ ಗಂಡ ಹೊಟ್ಟೆ ತುಂಬ ಉಂಡಾಗ ಆಡಿಕೊಳ್ಳುವಳು?"

"ಇನ್ನೇನು ಮಾಡುವಳು? ದೃಷ್ಟಿ ತಾಗುವಂತೆ ದುರುಗುಟ್ಟಿಕೊಂಡು ಮೈಯೆಲ್ಲಾ ಕಣ್ಣಾಗಿ ನಿನ್ನಂತೆ ನೀಡುವಳೇ?"

"ಇಲ್ಲ. ತಾನು ಅಕ್ಕರೆಯಿಂದ ಮಾಡಿದ ಅಡಿಗೆ ತನ್ನ ದೇವರಿಗೆ ಸಂದಿತಲ್ಲಾ ಎಂದು ಸುಖಿಸುವಳು."

"ಅಂದರೆ ನಾನು ತಿಂಡಿಪೋತನೆಂದು ತಾನೆ ನಿಮ್ಮ ಮಾತಿನ ಅರ್ಥ."

"ಎಂದೆಂದಿಗೂ ಅಲ್ಲ. ನಿಮ್ಮ ಈ ಉಕ್ಕಿನ ದೇಹ ನೂರು ಕಾಲ ಸುಕ್ಕಾಗದೆ ಬಲವಾಗಿ ನಿಲ್ಲಲೆಂಬುದು ಈ ಅಕ್ಕತಂಗಿಯರ ಮೊರೆ."

"ಓಹೋ ಹಾಗೋ! ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭವಂತೆ. ನಾನು ಪುಷ್ಟಿಗೊಂಡಷ್ಟೂ ನಿಮಗೇ ಪ್ರಯೋಜನವೆಂದು ತಾನೆ ಈ ಪತಿ ಪೂಜೆ?"

"ನೀವು ಚತುರರು, ಮಾತನ್ನು ಎಲ್ಲಿಗೆ ಬೇಕಾದರೂ ಮುಟ್ಟಿಸಬಲ್ಲಿರಿ."

"ನೀವೂ ಜಾಣೆಯರೆ, ರಾಣಿಯಾಗಬೇಕಾದವರು. ಪಾಪ ಈ ಪಂಡಿತನ ಹೆಂಡತಿಯರಾದಿರಿ."

"ನಾವು ನಾಡಾಡಿ ಹೆಣ್ಣುಗಳು. ನಮಗೇಕೆ ಆ ಮಹಾರಾಣಿ ಪಟ್ಟ. ಈಗ

ನೀವೇ ನಮ್ಮ ಪಾಲಿನ ರಾಜರು. ನಾವಿಬ್ಬರೂ ನಿಮಗೆ ಶ್ರೀದೇವಿ ಭೂದೇವಿ ಇದ್ದಂತೆ."

"ಇನ್ನೊಬ್ಬಳಿದ್ದರೆ ಮೂದೇವಿ ಆಗುತ್ತಿದ್ದಳಲ್ಲ!"

"ನೀವು ಬಲ್ಲಿದರು. ಹಾಗೆಲ್ಲ ಕೀಳು ನುಡಿಗಳನ್ನು ನಗೆಗೆಂದೂ ಹೇಳಬಾರದು." 'ನಾನು ಹೇಳಿದ ಶಬ್ದದ ಅರ್ಥವೇ ನಿಮಗೆ ಹೊಳೆಯಲಿಲ್ಲ. ಮೂದೇವಿ ಎಂದರೆ ಬೈಗುಳದ ಮಾತಾಗಿ ಅರ್ಥೈಸಬೇಡಿ. ಮೂರನೆಯ ದೇವಿಯೇ ಮೂದೇವಿ!"

"ಅಬ್ಬಾ, ನಿಮ್ಮ ಶಬ್ದ ಚಮತ್ಕಾರ ಜೋರಾಗಿದೆ. ಇರಲಿ. ನಾವು ಹೆಂಗಸರು ನಿಮ್ಮಿಂದ ಬಯಸುವುದು ಏನು ಗೊತ್ತೆ?"

"ಸರಿ ಸರಿ ಲೋಕಕ್ಕೆಲ್ಲಾ ತಿಳಿದುದನ್ನು ಕಿವಿಯಲ್ಲಿ ಹೇಳಿದರಂತೆ. ನನ್ನ ಚಿನ್ನಾ ಎಂದು ಮುದ್ದಾಗಿ ನಿಮ್ಮನ್ನು ಕರೆಯುವುದೇಕೆ ಗೊತ್ತೆ?"

"ಪ್ರೀತಿಯ ಕುರುಹಾಗಿ."

"ಅಷ್ಟೇ ಅಲ್ಲ, ಚಿನ್ನದ ಒಡವೆಗಳನ್ನು ಪ್ರೀತಿಸುವ ಮೆಚ್ಚುವ ಬಯಸುವ ಜನ ನೀವೆಂದು."

"ಇಷ್ಟೇ ನೀವು ಹೆಣ್ಣನ್ನು ಅರಿತಿರುವುದು. ಹೆಣ್ಣು ಬಯಸುವುದು ಆಭರಣಗಳನ್ನಲ್ಲ, ಪರಾಕ್ರಮಶಾಲಿಯಾದ ಗಂಡಸನ್ನು. ನೀವು ಚೆನ್ನಾಗಿ ಉಂಡು ವಜ್ರದ ಮೈಕಟ್ಟು ಪಡೆದಿರುವುದೇ ನಮಗಿಬ್ಬರಿಗೂ ಹಬ್ಬ. ಅದಕ್ಕೇ ನೀವು ಹೊಟ್ಟೆ ತುಂಬಾ ತೆಗೆದುಕೊಂಡಾಗ ನಾವುಗಳು ಒಸಗೆಗೊಂಡು ನಲಿಯುವುದು."

"ಭಲೆ ಭಲೆ, ಬಮ್ಮಲೆ ಇಷ್ಟು ದಿನ ನೀನು ಮೂಗ್ಧೇವಿಯಂತಿದ್ದೆ. ಈಗ ಒಮ್ಮೆಲೇ ವಾಗ್ಧೇವಿಯಂತೆ ನುಡಿಯತೊಡಗಿದ್ದೀಯಲ್ಲಾ!"

"ಅದೆಲ್ಲಾ ನಮ್ಮಲ್ಲಿರುವ ಶಕ್ತಿಯಲ್ಲಾ. ನಿಂತ ನೆಲದ ಗುಣ."

"ಹಾಗಾದರೆ ಬೇಗ ಈ ಕಳ್ವಪ್ಪು ಬಿಡಬೇಕಪ್ಪ! ಇಲ್ಲವಾದರೆ ನಿಮ್ಮ ಮುಂದೆ ನನ್ನ ಪಂಡಿತ ಪಟ್ಟುಗಳೊಂದೂ ಗಿಟ್ಟುವುದಿಲ್ಲ."

"ನಮ್ಮನ್ನು ಹೊಗಳುವುದರಲ್ಲೇ ಇರಬೇಡಿ. ನೇಸರು ನಡುಹಗಲಿಗೆ ಬರುತ್ತಿದ್ದಾನೆ. ನೀವು ತಲಕಾಡಿಗೆ ಹೋಗುವ ಸಂಗತಿಯೇ ಮರೆತಂತಿದೆ."

"ಹ್ಞಾ, ನಿಜ. ಅದಕ್ಕೇ ನೋಡು ಹೆಣ್ಣು ಹೆಂಡತಿ ತಾಯಿ ಮಂತ್ರಿ ಎಲ್ಲಾ ಆಗುತ್ತಾಳೆಂದು ಹಿರಿಯರು ಹೇಳುವುದು. ನೀವೆಲ್ಲ ಪ್ರಯಾಣಕ್ಕೆ ಸಿದ್ಧವಾಗಿ, ನಾನು ಹೊರಗೆ ವ್ಯವಸ್ಥೆ ಹೇಗೆ ಸಾಗಿದೆ ನೋಡಿ ಬರುವೆ."

ಪಂಪ, ಜಕ್ಕಲೆ, ಬಮ್ಮಲೆ, ಇಬ್ಬರು ಸೇವಕರು–ಇಷ್ಟು ಜನ ಕಳ್ವಪ್ಪಿನಿಂದ

ತಲಕಾಡಿಗೆ ಹೊರಟರು. ಎತ್ತಿನ ಗಾಡಿ ಪಯಣ. ಬಂಡಿಯ ಹಿಂದೆ ಇನ್ನೊಂದು ಜೊತೆ ಎತ್ತುಗಳು ಬರುತ್ತಿದ್ದವು. ಗಾಡಿಯೆಳೆವ ಜೊತೆ ಸೋತಾಗ, ಈ ಜೊತೆಯನ್ನು ಮುಂದೆ ಕಟ್ಟಿ ಅವಕ್ಕೆ ಬಿಡುವು ಕೊಡುತ್ತಿದ್ದರು. ಮೊದಲ ದಿನದ ಪ್ರಯಾಣ ಅಡ್ಡಿಗಳಿಲ್ಲದೆ ನಡೆಯಿತು. ಎರಡನೆಯ ದಿನದ ಪ್ರಯಾಣದಲ್ಲಿ ಮಾತ್ರ ಎಲ್ಲರ ಎದೆ ಬಿರಿಯುವಂಥ ಘಟನೆ ನಡೆಯಿತು._

ಎರಡನೇಯ ದಿವಸ ರಾತ್ರಿಯನ್ನು ಕಾಡಿನ ನಡುವೆ ಕಳೆಯಬೇಕಾದ ಅನಿವಾರ್ಯ ಒದಗಿಬಂತು. ಸಂಜೆ ಸಮೀಪಿಸುತ್ತಿದ್ದಂತೆ ಹಳ್ಳದ ದಂಡೆಯಲ್ಲಿ ಅಹೋಸ ಮುಗಿಸಿಕೊಂಡು ಹೊರಟರು. ರಾತ್ರಿ ಎಷ್ಟು ಹೊತ್ತು ಆದರೂ ಹತ್ತಿರದಲ್ಲಿ ಒಂದು ಹಳ್ಳಿಯೂ ಕಾಣಲಿಲ್ಲ. ದಾರಿಯ ಬದಿಯಲ್ಲೇ ಒಂದು ಮರದ ಕೆಳಗೆ ಗಾಡಿ ಬಿಟ್ಟರು. ಒಣಗಿದ ಕಡ್ಡಿ ಪುಳ್ಳೆಗಳನ್ನು ಕಲೆಹಾಕಿ ಬೆಂಕಿ ಹಚ್ಚಿದರು. ಎತ್ತುಗಳನ್ನು ಹತ್ತಿರದ ಇನ್ನೊಂದು ಮರಕ್ಕೆ ಕಟ್ಟಿದರು. ಅವುಗಳ ಮುಂದೆ ಹುಲ್ಲು ಹಾಕಿ ಆಳುಗಳು ಗಾಡಿಯ ಕೆಳಗೆ ಕಂಬಳಿ ಹಾಸಿಕೊಂಡು ಮಲಗಿದರು. ಗಾಡಿಯೊಳಗೆ ಬಮ್ಮಲೆ ಜಕ್ಕಲೆಯರು ನಿದ್ದೆ ಹೋದರು. ವನ್ಯಶ್ರೀಯ ಮಡಿಲಲ್ಲಿ ಒಂದಿರುಳು ಕಳೆಯುವ ಅನುಭವ ಅನಾಯಾಸವಾಗಿ ದೊರೆತಿದೆಯೆಂದು ಪಂಪ ಭಾವಿಸಿದ. ಎಲ್ಲರೂ ಮಲಗಿದರು. ಬೆಂಕಿ ಆರಿ ಹೋಗಿದ್ದುದು ಯಾರ ತಿಳಿವಿಗೂ ಬರಲಿಲ್ಲ.

ನಟ್ಟಿರುಳು ಬೆಳದಿಂಗಳ ಹೊದಿಕೆ. ಆದರೆ ಎತ್ತುಗಳು ಮಾತ್ರ ಗಾಬರಿಗೊಂಡಿದ್ದವು. ನೆಲಕ್ಕೆ ಕಾಲುಗಳಿಂದ ಕೆರೆಯುತ್ತ ಕಟ್ಟಿದ ಹಗ್ಗದಿಂದ ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದುವು. ಅವುಗಳ ಸಿಡಿಮಿಡಿಯ ಕುಪ್ಪಳಿಕೆಯಿಂದ ಕೊರಳಿಗೆ ಕಟ್ಟಿದ ಗಂಟೆ ಮೊಳಗು ಯಾವ ತಾಳಕ್ಕೂ ಸಿಗದೆ ಸದ್ದು ಮಾಡುವಂತಿತ್ತು. ಪಂಪನಿಗೆ ಇದ್ದಕ್ಕಿದ್ದ ಹಾಗೆ ಕೇಳಿ ಬಂದ ಈ ಸದ್ದಿನಿಂದ ಎಚ್ಚರವಾಯಿತು. ಬೆಳದಿಂಗಳೇ ಹೊದಿಕೆಯಾಗಿ ಮಡದಿಯರು ಪವಡಿಸಿದ್ದರು. ಗಾಡಿಯಿಂದ ಇಣುಕಿ ಹಾಕಿದಂತೆ ಸುತ್ತ ಕಣ್ಣಾಡಿಸಿದ. ಏನೂ ಕಾಣಲಿಲ್ಲ. ಎತ್ತುಗಳು ಒಂದೇ ಸಮನೆ ನೆಗೆಯುತ್ತಿದ್ದುವು.

ಹೇಗಾದರೂ ಆಗಲೆಂದು ಪಂಪ ಕೈಯಲ್ಲಿ ಹಿರಿದ ಕತ್ತಿಯೊಂದನ್ನು ಹಿಡಿದು ಕೆಳಗಿಳಿದ. ಆಳುಗಳಿಬ್ಬರೂ ನಿದ್ರಾದೇವಿಯ ತೆಕ್ಕೆಯಲಿದ್ದರು. ಹತ್ತು ಹೆಜ್ಜೆ ಎತ್ತುಗಳತ್ತ ಇಟ್ಟವನೇ ಪಂಪ ನಿಂತುಬಿಟ್ಟ. ಮೂಗಿಗೆ ಕಾಡು ಪ್ರಾಣಿಯ ವಾಸನೆ ಬಂದಂತಾಯಿತು. ಮೆಲ್ಲಗೆ ಬೀಸುವ ಗಾಳಿ, ಹೊಳ್ಳೆಯರಳಿಸಿ ಮೂಸಿದ. ಎಡದ ಕಡೆಯಿಂದ ವಾಸನೆ ಬರುತ್ತಿತ್ತು. ಅತ್ತ ತಿರುಗಿ ನೋಡಿದ. ಹತ್ತಿರದ

ಆಳೆತ್ತರದ ಪೊದೆ, ಸುತ್ತ ಬಿದಿರು ಮೆಳೆ, ಬಳ್ಳಿ ತೋರವಾಗಿ ಬೆಳೆದ ಮರಗಳು. ಅಷ್ಟು ಹೊರತಾಗಿ ಮತ್ತೇನೂ ಕಾಣಲಿಲ್ಲ. ಹುರಿ ಕಿತ್ತು ಬರುವಂತೆ ಎತ್ತುಗಳೇಕೆ ಜಗ್ಗುತ್ತಿವೆ? ತಿಳಿಯಲಿಲ್ಲ. ಮತ್ತೆ ಪ್ರಾಣಿ ವಾಸನೆ ಬಂದ ಕಡೆಯೇ ತೀಕ್ಷ್ಣವಾಗಿ ನಿಟ್ಟಿ ನೋಡಿದ. ಪೊದೆಯ ಬಳಿಯಲ್ಲಿ ವಜ್ರದ ಹರಳುಗಳೆರಡು ಹೊಳೆದಂತೆ ಕಂಡಿತು. ಇನ್ನೆರಡು ಹೆಜ್ಜೆ ಮುಂದಿಟ್ಟು ನೋಡಿದ. ನೋಡಿದವನೇ ಕ್ಷಣಕಾಲ ಮರವಟ್ಟು ವಡೆದಂತೆ ನಿಂತುಬಿಟ್ಟ. ದಿಕ್ಕೇ ತೋಚಲಿಲ್ಲ.

ತಾನು ಕಂಡದ್ದು ಹರಳುಗಳಲ್ಲ, ಹೆಬ್ಬುಲಿಯ ಕಣ್ಣುಗಳು ಎಂದು ಪಂಪನಿಗೆ ತಿಳಿಯಿತು. ಕೈಯಲ್ಲಿ ಖಡ್ಗದ ಹೊರತು ಬೇರೆ ಆಯುಧ ಇರಲಿಲ್ಲ. ಆಳುಗಳನ್ನು ಕೂಗಲೆಂದೇ ಬಾಯ್ದೆರೆದ. ಮೊದಲು ದನಿಯೇ ಹೊರಡಲಿಲ್ಲ. ಮರುಕ್ಷಣ ಒಳ್ಳೆಯದೇ ಆಯಿತೆಂದು ಮುಂದಿನ ಕಾರ್ಯಕ್ಕೆ ಅಣಿಯಾದ. ತನ್ನ ತುತ್ತಿಗೆ ಅಡ್ಡ ಬಂದವನನ್ನು ಹುಲಿ ಸುಮ್ಮನೆ ಬಿಡಲಾರದೆಂದು ಅರಿವಾಯಿತು. ಪಂಪ ಹಾಗೇ ಬಲಕ್ಕೆ ಹೆಜ್ಜೆ ಹಾಕುತ್ತಾ ಅಲ್ಲಿನ ತೇಗದ ಮರದ ಆಸರೆಗೆ ಬಂದ. ಅದರ ಹಿಂದೆ ನಿಂತು ಹೊಂಚು ಹಾಕಿ ಮುಂದಿನ ಸೆಣತಕ್ಕೆ ಅಣಿಯಾಗೋಣವೆಂಬುದು ಅವನ ಹಂಚಿಕೆ.

ಆದರೆ ಅದುವೆಗೂ ಇಲಿ ಹಿಡಿಯುವ ಬೆಕ್ಕಿನಂತೆ ತೆಪ್ಪಗೆ ಕುಳಿತಿದ್ದ ಹೆಬ್ಬುಲಿ ಒಂದೇ ಸಲಕ್ಕೆ ಕಾಡು ಬಿರಿವಂತೆ ಆರ್ಭಟಿಸಿ ಪಂಪನ ಮೇಲೆ ಹಾರಿತು. ಅದರ ಘರ್ಜನೆ ಕೇಳಿ ಗಾಡಿಯಲ್ಲಿ ಮಲಗಿದ್ದ ಮಡದಿಯರು ಗಾಬರಿಯಾಗಿ ಎದ್ದು ಕುಳಿತರು. ಪಕ್ಕದಲ್ಲಿ ಗಂಡನಿಲ್ಲದುದನ್ನು ಕಂಡು ಕಳವಳಿಸಿದರು. ಘರ್ಜನೆ ಬಂದ ಕಡೆ ನೋಡುತ್ತಾರೆ. ತಮ್ಮ ನಲ್ಲ ಕೈಯಲ್ಲಿ ಬಿಚ್ಚುಗತ್ತಿ ಹಿಡಿದು ನಿಂತಿದ್ದಾನೆ. ಅವನ ಬದಿಯಲ್ಲೇ ಹೆಬ್ಬುಲಿ ಆರ್ಭಟಿಸುತ್ತಿದೆ. ಜಕ್ಕಲೆಗಂತೂ ಮೈಬೆವತು ಪ್ರಜ್ಞೆ ತಪ್ಪಿತು. ಬಮ್ಮಲೆ ಮೊದಲಿಂದ ಧೀರಳಾಗಿ ಬೆಳೆದವಳು. ಅವಳಿಗೂ ಈಗ ಏನು ಮಾಡಬೇಕೆಂಬುದು ತೋರಲಿಲ್ಲ. ಗಾಡಿಯ ಕೆಳಗೆ ಆಸರೆ ಪಡೆದು ಮಲಗಿದ್ದ ಆಳುಗಳಿಬ್ಬರೂ ಎದ್ದು ಕುಳಿತು ನೋಡಿದರು. ನಂಬಿಕೆ ಉಂಟಾಗದೆ ಕಣ್ಣುಜ್ಜಿಕೊಂಡರು. ಹುಲಿಯನ್ನು ಕಂಡವನೇ ಒಬ್ಬ ಕಂಪಿಸತೊಡಗಿದ. ಇನ್ನೊಬ್ಬ ಎದ್ದವನೇ ದಣಿಯ ನೆರವಿಗೆ ಸಿದ್ಧನಾದ. ಗಾಡಿಯ ಗುಜ್ಜಕ್ಕೆ ತಗುಲಿಹಾಕಿದ್ದ ಈಟಿ ಹಿಡಿದು ಹೊರಟ.

ಆ ವೇಳೆಗೆ ಹೆಬ್ಬುಲಿ ತನ್ನ ಕೊನೆಯುಸಿರೆಳೆಯುತ್ತಿತ್ತು. ಹುಲಿ ಹಾರಿದ ರಭಸಕ್ಕೆ ಪಂಪ ಪಾದರಸದಂತೆ ಪಕ್ಕಕ್ಕೆ ಸರಿಯದಿದ್ದರೆ ಕಷ್ಟವಾಗುತ್ತಿತ್ತು. ಪಂಪ ಸರಕ್ಕನೆ ಜಾರಿದ. ಆದರೂ ಹುಲಿಯುಗುರು ತರಚಿತು. ಪಂಪ ಅತ್ತ ಗಮನಿಸದೇ

ಹಾರಿ ಬಿದ್ದ ಹುಲಿಯ ಮೇಲೆ ಕತ್ತಿಯಿಂದ ಎತ್ತಿ ಹೊಡೆದ. ಅದರ ಏಟಿಗೆ ಹುಲಿಯ ಹಿಂಗಾಲುಗಳು ಕತ್ತರಿಸಿ ಬಿದ್ದುವು. ನೋವಿನಿಂದ ರೋಷಗೊಂಡ ಹೆಬ್ಬುಲಿ ಮೇಲೆದ್ದು ನೆಗೆಯಲೆತ್ನಿಸಿ ಆಗದೆ ಗರ್ಜಿಸುತ್ತಿತ್ತು. ಪಂಪನಿಗೆ ಇದರ ಸುಳಿವು ಸಿಕ್ಕಿತು. ಹತ್ತಿರ ಹೊರಟ. ಅವನು ಹತ್ತಿರ ಹತ್ತಿರ ಬಂದಂತೆಲ್ಲಾ ಹುಲಿಯ ಆರ್ಭಟ ಹೆಚ್ಚಾಯಿತು. ಅಗಲವಾಗಿ ತೆರೆದ ಬಾಯಿ, ಕೋರೆ ಹಲ್ಲುಗಳು, ಕಂಪಿಸುವ ತುಟಿಗಳು, ಚಾಚಿದ ನಾಲಗೆ, ಪಂಪನನ್ನು ಸಿಗಿಯುವಂತೆ ತವಕದಿಂದ ಚಾಚಿದ ಮುಂಗಾಲುಗಳ ಪಂಜ. ಪಂಪ ಮಾರುದೂರದವರೆಗೆ ಬಂದು ನಿಂತ. ಹುಲಿ ಮುಂದೆ ಹೋಗಗೊಡಲಿಲ್ಲ. ತನ್ನ ಕೈಯಲ್ಲಿದ್ದ ಕತ್ತಿಯನ್ನೇ ನೇರ ಗುರಿಯಿಟ್ಟು ಪಂಪ ಹೆಬ್ಬುಲಿಯ ಬಾಯಿಗೆ ಎಸೆದ. ಖಡ್ಗ ತನ್ನ ಬಲಿ ತೆಗೆದುಕೊಂಡಿತ್ತು.

ಈಟಿ ಹಿಡಿದು ಬಂದ ಆಳುಮಗನನ್ನು ಪಂಪ ಸನ್ನೆಮಾಡಿ ಕರೆದ. ಬಳಿಗೆ ಬಂದ ಮೇಲೆ ಬಂಡಿಯ ಸಮೀಪಕ್ಕೆ ಹೋಗಿ ದೊಡ್ಡ ಪಂಜು ಹತ್ತಿಸಿಕೊಂಡು ಬರುವಂತೆ ಹೇಳಿದ. ಆಳು ಹುಲಿಯ ಗತಿಯನ್ನೂ ದಣಿಯ ಸ್ಥಿತಿಯನ್ನೂ ಅರಿತು ಒಂದೇ ಸಮನೆ ಗಾಡಿಯ ಕಡೆ ಓಡಿದ. ಇನ್ನೊಬ್ಬ ಆಳಿಗೆ ಒಡೆಯನ ಸಾಹಸ ಹೇಳಿದ. ಗಾಡಿಯಲ್ಲಿ ಬಗ್ಗಿ 'ದಣಿಗಳು ದೊಡ್ಡ ಬೇಟೇನೆ ಆಡವ್ರೆ ಕಾಣ್ರವ್ವಾ. ಗಕ್ಕನೆ ಬರ್ರಿ' ಎಂದು ಸಾರಿದ.

ಚಂಬಿನಲ್ಲಿದ್ದ ತಣ್ಣೀರು ತಟ್ಟಿ ಬಮ್ಮಲೆ ಜಕ್ಕಲೆಗೆ ಮೈ ತಿಳಿವಂತೆ ಮಾಡಿದ್ದಳು. ಇಬ್ಬರೂ ಮೆಲ್ಲಗೆ ಗಾಡಿಯಿಂದಿಳಿದರು. ಕಿರಿಯ ಆಳು ಮುಂದಾಗಿ ಪಂಜು ತೆಗೆದುಕೊಂಡು ಹೊರಟ. ಪತಿಯಿದ್ದ ಸ್ಥಳಕ್ಕೆ ಬಂದರು. ಅಬ್ಬ, ಎರಡೂವರೆ ಮಾರುದ್ದ ಬಿದ್ದ ಹೆಬ್ಬುಲಿ! ಬಮ್ಮಲೆ ಹೆಮ್ಮೆಯಿಂದ ನಲ್ಲನತ್ತ ನೋಡಿದಳು. ಆ ನೋಟದಲ್ಲಿ ಒಲುಮೆಯೊಡನೆ ಮೆಚ್ಚುಗೆಯೂ ಅಚ್ಚರಿಯೂ ಕೋಡಿವರಿದಿತ್ತು. ಜಕ್ಕಲೆಗಂತೂ ಇದು ಕನಸೋ ನನಸೋ ಎಂದು ತಿಳಿಯದಾಯಿತು. ಒಂದೇ ಸಮನೆ ಮನದನ್ನನ ಬಳಿಗೆ ಓಡಿ ತೆಕ್ಕೆ ಬಿದ್ದು ಬಿಕ್ಕಳಿಸತೊಡಗಿದಳು. ಪಂಪ ಅವಳ ಮೈದಡವಿದನು.

ಮರುದಿವಸ ಅರುಣೋದಯಕ್ಕೆ ಎದ್ದು ಬಳಿಯಲ್ಲೇ ಹರಿಯುತ್ತಿದ್ದ ಹೊಳೆಯಲ್ಲಿ ಮಿಂದರು. ಪಂಪನ ಎಡತೋಳಿಗೆ ಹುಲಿಯ ಪಂಜ ಸೋಂಕಿದ ಜಾಗದಲ್ಲಿ ರಕ್ತ ಹೆಪ್ಪುಗಟ್ಟಿ ಬಾವು ಬಂದಿತ್ತು. ಇರುಳಲ್ಲಿ ಅದು ಕಂಡಿರಲಿಲ್ಲ. ಒಡನೆ ಪಂಪ ಕಾಡಿನೊಳಗೆ ಹೊರಟ. ಅಲ್ಲಿನ ಗಿಡಗಳಲ್ಲಿ ಹುಡುಕಿ ಕಡೆಗೆ ಕೆಲವು ಎಲೆಗಳನ್ನು ಕುಟ್ಟಿ ರುಬ್ಬಿದ. ರಸ ಒಸರುವಂತಾದ ಮೇಲೆ ಸೊಪ್ಪು ಸೊಪ್ಪಾಗಿರುವುದನ್ನೇ ತೆಗೆದು ಗಾಯವಾಗಿದ್ದ ಜಾಗಕ್ಕೆ ಇಟ್ಟು ಮುತ್ತುಗದ ಎಲೆ

ಹೊದಿಸಿ ಬಟ್ಟೆ ಚೂರಿಂದ ಕಟ್ಟಿದ. ಮಡದಿಯರಿಗೆ ಇದೆಲ್ಲ ಹೊಸದು. ಬೊಗಸೆಕಣ್ಣು ಬೆರಗುಗಣ್ಣಾಗಿದ್ದುವು. ಹುಬ್ಬೆತ್ತಿ ಅದೇನೆಂದು ಬಮ್ಮಲೆ ನೋಡಿದಳು.

ಪಂಪ"ಇದು ತೋಳಬಂದಿ" ಎಂದ.

"ಹೆಂಗಸರಿಗೆ ತೋಳಬಂದಿಯೇ ಹೊರತು ಗಂಡಸರಿಗೆ ಉಂಟೆ?"

"ಹಾಗೆಂದರೆ ಹೆಂಗಸರು ಗಂಡಸರ ತೋಳಿನಲ್ಲಿ ಬಂಧಿಗಳೆಂದೆ ಅರ್ಥ ತಾನೆ?"

"ಇರಬಹುದೇನೋ! ಆದರೆ ತೋಳದಂತಹ ಗಂಡಸರಿಗಲ್ಲ!!"

"ಮತ್ತೇನು ಹುಲಿಯಂಥ ಗಂಡಸರಿಗೊ?"

"ಹ್ಹೂಹು, ಹುಲಿಯನ್ನು ಕೊಲ್ಲುವಂತಹ ಕಲಿಗೆ!! ಅದಿರಲಿ ತೋಳಿಗೆ ಕಟ್ಟಿರುವುದೇನು ಮೊದಲು ಹೇಳಿ."

"ಅದು ಭುಜಕೀರ್ತಿ."

"ನಿಮ್ಮೊಡನೆ ವಾದ ಮಾಡುವುದಕ್ಕೆ ನಮಗೆ ಸಾಧ್ಯವಿಲ್ಲ ಬಿಡಿ."

"ನನಗೆ ಸಾಧ್ಯವಿದೆಯಲ್ಲಾ!"

"ಸರಿ, ನೀವೇ ವಾದ ಮಾಡಿ ಈಗ ಬೇಡ ಎಂದವರಾರು?"

ಎಂದವಳೇ ಬಮ್ಮಲೆ ಜಕ್ಕಲೆಯ ಬಳಿಗೆ ಹೊರಟಳು. ಆ ವೇಳೆಗೆ ಜಕ್ಕಲೆಯೂ ಮಿಂದು ಮಡಿ ತೊಟ್ಟಿದ್ದಳು. ಇಬ್ಬರೂ ಬಂದು ಪಂಪನ ಅಕ್ಕಪಕ್ಕದಲ್ಲಿ ನಿಂತು, ಅವನ ತೋಳುಗಳನ್ನು ಹಿಡಿದು ಹೊರಟರು. ಹೂವಿನ ತೇರನ್ನು ಭಕ್ತರು ಎಳೆದೊಯ್ಯುವ ಭಾವವಿತ್ತು. ಅವನಿಗೆ ಬಳ್ಳಿಗಳು ಬಳಸಿದ ಭಾವನೆಯಿತ್ತು.

ಆಳುಗಳಿಬ್ಬರೂ ಆ ವೇಳೆಗೆ ಹುಲಿಯನ್ನು ಎಳೆದುತಂದು ಗಾಡಿಯ ಹಿಂದುಗಡೆ ಜೋತುಬೀಳಿಸಿ ಹಗ್ಗಗಳಿಂದ ಗಟ್ಟಿಯಾಗಿ ಕಟ್ಟಿಬಿಟ್ಟಿದ್ದರು. ಪಂಪ ಮಡದಿಯರೊಡನೆ ಬಂಡಿಯ ಹತ್ತಿರ ಬರುತ್ತಿದ್ದಂತೆ ಅದನ್ನು ಗುರುತಿಸಿದ. ಅತ್ತ ಕೈ ಚಾಚಿ ಬೆರಳು ಮಾಡಿದವನೇ "ನೋಡಿ ಹುಲಿ ಹುಲಿ" ಎಂದು ಕೂಗಿದ. ಮಡದಿಯರಿಬ್ಬರೂ ಹೌಹಾರಿ ಪಂಪನನ್ನು ಚಾಚಿ ತಬ್ಬಿದರು. ಶ್ರೀಗಂಧ ಸೀಮೆಯ ತಂಗಾಳಿ ಹಿತವಾಗಿ ಬೀಸಿತು. ಶೃಂಗಾರ ಕಾವ್ಯಗಳ ರಸಲೀಲೆಯಂತೆ ಕಾದಲೆಯರೊಡನೆ ವನಶ್ರೀಯಲ್ಲಿ ವಿಹರಿಸಿದ. ನಿಸರ್ಗದ ಸನ್ನಿಧಿಯಲ್ಲಿ ಹೆಂಡಿರ ಸಹವಾಸದಲ್ಲಿ ಪಂಪ ಬಹುವಾಗಿ ಸುಖಿಸಿದ. ಮಡದಿಯವರಿಗೆ ಪತಿಯ ಸನ್ನಿಧಿ ಬಾಳನಿಧಿಯಾಗಿ ತವನಿಧಿಯಾಗಿ ತೋರಿತು. ಅನುರಾಗದ ರಾಗಮಾಲೆ ಹಾಡುತ್ತಾ ರಾಗಲೀಲೆಯಿಂದ ಪಯಣ ಬೆಳೆಸಿದರು. ಮಡಿದಿಯರೂ ದಾರಿಯುದ್ದಕ್ಕೂ ಮರಗಿಡಗಳ ಪರಿಚಯ ಮಡಿಕೊಂಡರು. ಬಮ್ಮಲೆ ಜಕ್ಕಲೆಯರು ಪ್ರತಿಯೊಂದು

ಮರಕ್ಕೂ ಮೊದಲು ಮೊದಲಲ್ಲಿ "ಇದೇ ತಾನೆ ಶ್ರೀಗಂಧದ ಮರ?" ಎಂದು ಕೇಳುತ್ತಿದ್ದರು. ಪಂಪ ಹೇಳಿದ "ಕಾಡಿನ ಮರಗಳೆಲ್ಲ ಶ್ರೀಗಂಧವಲ್ಲ. ನೆಲದ ಮಣ್ಣೆಲ್ಲ ಬಂಗಾರವಲ್ಲ. ಬೆಳ್ಳಗಿರುವುದೆಲ್ಲ ಹಾಲಲ್ಲ. ಅದೊ ಆ ಹೆಮ್ಮರಗಳ ಪಕ್ಕದಲ್ಲಿ ಕಪ್ಪಗೆ ಜಾಲಿಮರದಂತೆ ತೋರುತ್ತಿದ್ದೆಯಲ್ಲಾ ಅದೇ ಗಂಧದ ಮರ. ಬಣ್ಣ ಕಪ್ಪಾದರೂ ವಾಸನೆ ನರುಗಂಪು. ಆರೋಗ್ಯದ ಗುಣವೂ ತಂಪಾದುದು. ಎಲ್ಲಾ ಕೋಗಿಲೆಯಂತೆ."

"ಅಲ್ಲ, ಎಲ್ಲ ನಿಮ್ಮಂತೆ!" ಎಂದಳು ಬಮ್ಮಲೆ.

"ಎಲೇ ಮಾತಿನ ಮಲ್ಲಿ! ನಾನು ಹಾಗೆಂದೆನೆ? ನೀವು ಕವಿಕೋಗಿಲೆ ಎಂಬರ್ಥದಲ್ಲಿ ತಿಳಿಸಿದೆ."

"ಕಂಠ ನೀಲಕಂಠದಂತಿದೆ. ಬಣ್ಣ ಕದಳೀಗರ್ಭದಂತೆ ತಾನೆ?"

"ಅಂದರೂ ಎಣ್ಣೆಗೆಂಪಲ್ಲವೆ?"

—ಪಂಪ ಅವಳ ನೀಲವೇಣಿ ಹಿಡಿದೆಳೆದು ಕೇಳಿದ.

ಒಲಿದ ಹೃದಯದ ಜೋಡಿಗಳು ಪ್ರವಾಸ ಹೊರಟರೆ ಪ್ರಪಂಚದ ಪರಿವೆಯೇ ಇರುವುದಿಲ್ಲ. ದಾರಿ ಎಷ್ಟುದೂರ ಸರಿದರೂ ಅರಿವಾಗುವುದಿಲ್ಲ. ರತಿ ರಾತ್ರಿಯ ಮಾತುಗಳು ರೋಮಾಂಚ ವೇಳಿಸಿತು. ಪಂಪ ಹಾಗೇ ಮೆಲ್ಲಗೆ ಆಲಾಪಿಸಿದ—

"ಈಗ ಹೊಸ ರಾಗ ಬರುತ್ತಿದೆ."

"ಯಾವುದೋ ಅದು?"

"ಅನುರಾಗ!"

"ಸಂತೋಷದ ಅಲೆಯಮೇಲೆ ತೇಲಿ ಹೋಗುತ್ತಿದ್ದೀರಲ್ಲಾ, ಏನು ವಿಶೇಷ?"

"ವಯಸ್ಸು ಹಾಗೆ ಮಾಡುತ್ತಿದೆ."

"ವಯಸ್ಸೊ? ಮನಸ್ಸೊ?"

"ಇದು ಸುಖ ಸಂತೋಷಗಳ ಸ್ವರ್ಗ ಸೃಷ್ಟಿಸುವ ವಯಸ್ಸು. ಅದನ್ನು ಕಾಣುವ ಮನಸ್ಸು."

ಪಂಪ ಬಮ್ಮಲೆಯ ಸ್ತನಗಳನ್ನು ನೇವರಿಸುತ್ತಾ ಹೇಳಿದ;

"ನಾನೀಗ ಕ್ಷೀರಸಾಗರ ಶಯನನಾಗಿ ಭೋಗ ನಿದ್ರೆಯಲ್ಲಿ ಮುಳುಗಿದ್ದೇನೆ. ಯಾರೂ ನಿದ್ರಾಭಂಗ ಮಾಡಕೂಡದೆಂದು ಊಳಿಗದವರಿಗೆ ಎಚ್ಚರಿಕೆ ಕೊಡಿ." ದಂಪತಿಗಳು ಗಂಧರ್ವ ಲೋಕಕ್ಕೆ ಜಾರಿದರು.

# ೧೨

ತಲಕಾಡಿಗೆ ತಲುಪಿದವರೇ ನೇರವಾಗಿ ಮಹಾಬಲಯ್ಯನವರ ಮನೆಗೆ ಬಂದಿಳಿದರು. ಕಾಳಲಾದೇವಿ ಪಂಪನನ್ನು ಗುರುತಿಸಿ ಹಿಗ್ಗಿದಳು. ಬಮ್ಮಲೆ ಜಕ್ಕಲೆಯರನ್ನು ತನ್ನ ಸೊಸೆಯರೆಂದೇ ತಿಳಿದು ಆದರಾತಿಥ್ಯಕ್ಕೆ ಅಣಿಮಾಡಿದಳು. ಅಯ್ದು ವರ್ಷದ ಮಗು ಚಾವುಂಡರಾಯ ಪಂಪನೊಡನೆ ಸಲಿಗೆಯಿಂದ ಹೊಂದಿಕೊಂಡಿದ್ದ.

ಮಧ್ಯಾಹ್ನ ಊಟಕ್ಕೆಂದು ಅರಮನೆಯಿಂದ ಮನೆಗೆ ಹಿಂತಿರುಗಿದ ಮಹಾಬಲರಾಯ ಮನೆಯಲ್ಲಿ ಸಡಗರದಿಂದ ಓಡಾಡುವ ಇಬ್ಬರು ಹೊಸ ಹೆಣ್ಣುಮಕ್ಕಳನ್ನು ಕಂಡು ಚಕಿತನಾದ. ಇಷ್ಟು ಆತ್ಮೀಯತೆಯಿಂದ ತನ್ನ ಮನೆಯಲ್ಲಿ ಕಾರ್ಯನಿರತರಾದವರು ಯಾರೊ ಹತ್ತಿರದ ನಂಟರೇ ಬಂದಿರಬೇಕೆಂದುಕೊಂಡ. ಕೈಕಾಲು ತೊಳೆದು ಒಳಗೆ ಹೋಗಿ ಬಟ್ಟೆ ಬದಲಾಯಿಸತೊಡಗಿದ. ಕಾಳಲಾದೇವಿ ಅಲ್ಲಿಗೇ ಬಂದು ಪ್ರಶ್ನಿಸಿದಳು:

"ನಿಮಗೆ ನೂರು ವರ್ಷ ಆಯುಸ್ಸೂಂದ್ರೆ!"

"ನಿನಗೆಷ್ಟೋ?"

"ನನಗೆ ತೊಂಬತ್ತು ವರ್ಷ, ಅದಿರಲಿ ಈಗ ನಿಮಗೆ ಹೇಳಿಕಳಿಸಬೇಕೆಂದಿದ್ದೆ."

"ಅದೇನು ಅಷ್ಟು ಅವಸರದ ಅಗತ್ಯ?"

"ಮನೆಗೆ ಸೊಸೆಯರು ಬಂದಿದ್ದಾರೆ. ಅದಕ್ಕೆ..."

"ಸೊಸೆಯರು!"

"ಹೌದೂಂದ್ರೆ, ನಮ್ಮ ಹಿರಿಯ ಮಗ ಇದ್ದಕ್ಕಿದ್ದ ಹಾಗೆ ಮಡದಿಯರೊಡನೆ ಇಳಿದುಬಿಟ್ಟಿದ್ದಾನೆ."

"ಹಿರಿಯ ಮಗ!"

"ಇದೇಕೆ ಹೀಗೆ ಬೆರಗುವಟ್ಟು ನಿಂತಿರಿ?"

"ನಿನ್ನ ಮಾತುಗಳು ಇಂದು ನನಗೆ ಒಂದೂ ಅರ್ಥವಾಗುತ್ತಿಲ್ಲ."

"ಹಾಗಾದರೆ ನಿತ್ಯ ಅರ್ಥವಾಗುತ್ತಿತ್ತು ತಾನೆ?"

"ನಿತ್ಯದ ಮಾತು ಹಾಗಿರಲಿ, ಮೊದಲು ಮಗ_ಸೊಸೆ ಪ್ರಶ್ನೆ ಬಿಡಿಸು."

"ಬೆಳಗ್ಗೆ ನಮ್ಮ ಮನೆಗೆ ಬಂದವರು ಯಾರು ಇರಬಹುದು ಹೇಳಿ ಮತ್ತೆ?"

"ನಾನೇನು ಭವಿಷ್ಯ ಹೇಳುವ ಅರಮನೆ ಶಾಸ್ತ್ರಿಯೆ?"

"ಊಹಿಸಿ ಹೇಳಿ ಮತ್ತೆ."

"ನಿನ್ನ ತಂಗಿಯ ಮಕ್ಕಳೊ ಅಣ್ಣನ ಮಕ್ಕಳೊ ಬಂದಿರಬೇಕು."

"ನೋಡಿದಿರಾ, ಯಾವಾಗಲೂ ನನ್ನ ಕಡೆಯವರೇ ಈ ಮನೆಗೆ ಬರುವವರು ಎಂದು ಭಾವಿಸಿಕೊಂಡಿದ್ದೀರಿ"

"ನಿನ್ನ ಕಡೆಯವರೋ ನನ್ನ ಕಡೆಯವರೋ ಎಲ್ಲಾ ಒಂದೇ! ಅವರೇ ತಾನೆ ಈಗ ಬಂದಿರುವವರು?"

"ನೀವು ತಪ್ಪಿದಿರಿ, ಪುಲಿಗೆರೆಯ ಪಂಪ ಕುಟುಂಬದೊಡನೆ ಬಂದಿದ್ದಾನೆ."

"ಹೌದೇ! ಮತ್ತೆ ಎಲ್ಲಿ ಪಂಪ?"

"ಬಸದಿಗೆ ಹೋಗಿದ್ದಾನೆ ಇನ್ನೇನು ಬರಬಹುದು."

"ಚಾವುಂಡ ಎಲ್ಲಿ?"

"ಪಂಪನೊಡನೆ...."

ಎನ್ನುತ್ತಿದ್ದಂತೆ ಚಾವುಂಡ ಪಂಪನ ಕೈ ಕೊಸರಿಕೊಂಡು ಹೊರಬಾಗಿಲಿಂದ 'ಅಪ್ಪಾಜಿ' ಎಂದು ಓಡಿಬಂದ. ಮಹಾಬಲರಾಯ ತಿರುಗಿ ನೋಡಿದ. ಬಾಗಿಲ ಬಳಿ ಪಂಪ ಕಚ್ಚೆಯುಟ್ಟು ಉತ್ತರೀಯ ಹಾಕಿಕೊಂಡು ಹಣೆಯಲ್ಲಿ ಗಂಧವಿಟ್ಟುಕೊಂಡು ನಿಂತಿದ್ದ. ಅವನ ಕಣ್ಣಿಗೆ ಪಂಪ ವೀರಯೋಧನಂತೆ ಕಂಡ.

"ಯಾವಾಗ ಬಂದಿರಿ?"

"ಇಂದೇ ಬೆಳಗ್ಗೆ ಬಂದೆ."

"ಪುಲಿಗೆರೆಯಲ್ಲಿ ಎಲ್ಲ ಹದುಳವೆ?"

"ತಮ್ಮ ಆಶೀರ್ವಾದ ಬಲದಿಂದ."

"ಪುಲಿಗೆರೆಯಿಂದ ನೇರವಾಗಿ ಇಲ್ಲಿಗೆ ಬಂದಿರಾ?"

"ಇಲ್ಲ ಕಳ್ವಪ್ಪಿನಿಂದ ಮೂರುದಿನದ ಹಿಂದೆ ಹೊರಟು ಇಂದು ಬೆಳಗ್ಗೆ ಇಲ್ಲಿಗೆ ತಲುಪಿದೆವು."

"ತುಂಬಾ ಸಂತೋಷ ನಡೆಯಿರಿ ಊಟ ಮಾಡೋಣ."

ಊಟಕ್ಕೆ ಕುಳಿತರು. ಚಿಣ್ಣ ಚಾವುಂಡ ಮಹಾಬಲಯ್ಯ ಪಂಪನ ನಡುವೆ ಕುಳಿತ. ಹಿರಿಯರಿಗೆ ಬಡಿಸಿದ ಭಕ್ಷ್ಯ ಭೋಜ್ಯಗಳೆಲ್ಲ ಅದೇ ಪ್ರಮಾಣದಲ್ಲಿ ಅವನಿಗೂ ಬಡಿಸಬೇಕು. ಅವನು ತಿಂದ ತುತ್ತುಗಳಿಗಿಂತ ಹೆಚ್ಚು ಹೊನ್ನ

ಹರಿವಾಣಗಳೂ ಬಟ್ಟಲುಗಳೂ ಸುತ್ತ ಸೇರಿದ್ದುವು.

ಸಂಜೆ ಗಂಗರಸರ ಒಡ್ಡೋಲಗಕ್ಕೆ ತನ್ನೊಡನೆ ಬರುವಂತೆ ಮಹಾಬಲರಾಯ ಪಂಪನನ್ನು ಕರೆದ. ಪಂಪನಿಗೂ ಹೊರಡುವ ಆತುರವಿತ್ತು. ತನ್ನ ಹಳೆಯ ಗೆಳೆಯ ನರಸಿಂಹನನ್ನು ನೋಡುವ ತವಕ.

"ಯುವರಾಜ ನರಸಿಂಹರು ಹೇಗಿದ್ದಾರೆ?"

"ಅರೆ, ನಿಮಗೆ ಆ ವಿಷಯ ತಿಳಿಯದೆ?"

"ಅಂದರೆ?"

"ಕುಮಾರ ನರಸಿಂಹರು ಕುದುರೆ ಸವಾರಿ ಮಾಡುತ್ತಿರುವಾಗ ಜಾರಿಬಿದ್ದ ಏಟಿಗೆ ಮರ್ಮಸ್ಥಾನಕ್ಕೆ ಪೆಟ್ಟಾಯಿತು. ಯಾವ ಆರೈಕೆ ಹಾರೈಕೆಯೂ ಅವರನ್ನು ಉಳಿಸಲಾಗಲಿಲ್ಲ. ನೋವಿನಿಂದ ನರಳಿದ ಜೀವ ಮೂರು ದಿನಗಳಲ್ಲಿ ಮುಕ್ತಿಗೆ ಕೃಶರಾದರು.ಸಂಸಾರದಲ್ಲಿ ಅರಸುತನದಲ್ಲಿ ಆಸಕ್ತಿ ಕಳೆದುಕೊಂಡು ನಿರ್ಲಿಪ್ತರಂತಾದರು. ಕಳೆದ ತಿಂಗಳಷ್ಟೇ ಸ್ವರ್ಗಸ್ಥರಾದರು. ಇದೀಗ ಇನ್ನೂ ಚಿಕ್ಕಪ್ರಾಯದ ರಾಜಮಲ್ಲರು ಸಿಂಹಾಸನಾರೋಹಣ ಮಾಡಿದ್ದಾರೆ."

ಪಂಪ ಹಾವು ಮೆಟ್ಟಿದವನಂತೆ ದಿಙ್ಮೂಢನಾದ. ನಿಧಿ ಕಳೆದುಕೊಂಡ ಬಡವನಂತಾದ. ತನ್ನೊಡನೆ ನರಸಿಂಹ ಕುವರ ಕಳೆದ ಕೆಲವು ದಿನಗಳ ನೆನಪು ಕಣ್ಣಿಗೆ ಕಟ್ಟಿದಂತಾಯಿತು. ಬೆಳೆದು ಹೆಮ್ಮರವಾಗಬೇಕಿದ್ದ ಜೀವ ಹೀಗೆ ಜವ್ವನದಲ್ಲೇ ಮುರುಟಿ ಹೋದದ್ದು ಹೆಚ್ಚಿನ ಸಂಕಟ ಉಂಟು ಮಾಡಿತು. ತಾನು ಕಂಡು ಮಾತಾಡಬೇಕೆಂದು ಹಂಬಲಿಸಿಬಂದ ಹಳೆಯ ನೇಹಿಗ ಈಗ ಈ ಲೋಕ ಬಿಟ್ಟು ಹೊರಟಿದ್ದಾನೆಂಬ ವಾರ್ತೆ ನಂಬುವುದೇ ಕಷ್ಟವಾಯಿತು. ಖಿನ್ನವದನನಾಗಿ ಮಹಾಬಲಯ್ಯನವರಿಗೆ ಹೇಳಿದ:

"ನೀವು ರಾಜಸಭೆಗೆ ಈಗ ಹೋಗಿ ಬನ್ನಿ."

"ನೀವು?"

"ನಾನು ನಾಳೆ ಬೆಳಗಿನ ಸಭೆಗೆ ಬರುತ್ತೇನೆ."

"ಏಕೆ ಧ್ವನಿ ಗದ್ಗದಿತವಾಯಿತು? ನಿಮ್ಮ ಗೆಳೆಯನ ಸಾವು ತುಂಬಾ ನೋವನ್ನುಂಟುಮಾಡಿರಬೇಕು."

ಪಂಪ ಮೌನವಾಗಿ ಉತ್ತರೀಯದಂಚಿನಿಂದ ಕಣ್ಣೊರಿಸಿಕೊಂಡ. ಮೌನ ಮಾತಾಡಿತ್ತು. ಮಹಾಬಲಯ್ಯ "ಸರಿ ಹಾಗೇ ಮಾಡಿ' ಎಂದವನೇ ಅರಮನೆಯಿಂದ ಬಂದ ರಥದ ಮೇಲೆ ಹತ್ತಿ ಹೊರಟ.

ಮರುದಿವಸ ಮುಂಜಾನೆ ಪಂಪ ಚೈತ್ಯಾಲಯಕ್ಕೆ ಮಡದಿಯರೊಡನೆ

ಹೋಗಿ ಬಂದ. ಉಪಾಹಾರವಾದ ಮೇಲೆ ಪಂಪ ಮಹಾಬಲಯ್ಯ ಅರಮನೆಗೆ ಹೊರಟುನಿಂತರು. ಚಾವುಂಡ ತಾನೂ ಬರುವುದಾಗಿ ಸಿದ್ಧವಾಗಿ ಅವರಿಗಿಂತಲೂ ಮೊದಲು ಹೊರಗೆ ಹೋಗಿ ನಿಂತ.

ರಾಜಬೀದಿಯುದ್ಧಕ್ಕೂ ಹಾಕಿದ ಚಪ್ಪರಗಳು ಇಕ್ಕೆಲಗಳಲ್ಲೂ ಮಾಡಿದ ಅಲಂಕಾರ ತಿಂಗಳಾದರೂ ಪೂರ್ತಿ ಹೋಗಿರಲಿಲ್ಲ. ರಾಜಮಲ್ಲನ ಪಟ್ಟಾಭಿಷೇಕಕ್ಕೆ ಮಾಡಿದ ಸಿದ್ಧತೆಯ ಸ್ವರೂಪವನ್ನು ಸಾರುವ ಪಳಯುಳಿಕೆಗಳಾಗಿ ನಿಂತಿದ್ದುವು. ಅರಮನೆಯ ಹೆಬ್ಬಾಗಿಲಿಂದಲೇ ಸಂಭ್ರಮದ ಸಂಕೇತಗಳು ಕಂಗೊಳಿಸತೊಡಗಿದವು. ಪಂಪನಿಗೆ ಗೆಳೆಯ ಅರಿಗನ ನೆನಪಾಯಿತು.

ಒಡ್ಡೋಲಗದಲ್ಲಿ ಸಾಂಪ್ರದಾಯಿಕ ಪರಿಚಯದ ಉಭಯಕುಶಲೋಪರಿ ಸಾಂಪ್ರತ ವಿಚಾರವಾಗಿ ಮಾತುಕತೆಯಾಯಿತು. ಸಭೆ ವಿಸರ್ಜನೆಯಾದ ಮೇಲೆ ಮಧ್ಯಾಹ್ನದ ಭೋಜನಕ್ಕೆ ಅರಸರ ಕರೆ ಬಂತು. ಅದರಂತೆ ಮಹಾಬಲರಾಯ ಪಂಪ ಅತಿಥಿ ಗೃಹಕ್ಕೆ ಹೊರಟರು. ಚಾವುಂಡನನ್ನು ಮನೆಗೆ ಕಳಿಸಿದರು. ಅನತಿ ಕಾಲದಲ್ಲೇ ದೊರೆಗಳು ಹೇಳಿಕಳಿಸಿದ್ದಾರೆಂದು ಹೆಗ್ಗಡೆಗಳು ತಿಳಿಸಿದರು.ಪ್ರಭು ಸಮ್ಮುಖದಲ್ಲಿ ಪಂಪನಿಗೆ ವಿಶೇಷ ಆದರೋಪಚಾರಗಳೇ ಸಂದುವು. ಮುಮ್ಮಡಿ ರಾಜಮಲ್ಲ ದೊರೆಯ ವಿಶ್ವಾಸಕ್ಕೆ ಪಂಪ ಕರಗಿ ಹೋದ.

"ನೀವು ನಮ್ಮ ರಾಜಧಾನಿಗೆ ಬಂದದ್ದು ನಮಗೆ ಸಂದ ಹಿರಿಯ ಗೌರವವೆಂದೇ ತಿಳಿಯುತ್ತೇವೆ."

"ದೊಡ್ಡ ಮಾತು ಹೇಳಿದಿರಿ. ಇಲ್ಲಿಗೆ ಬರಲು ನನಗೆ ಯಾವಾಗಲೂ ಸಂತೋಷವೇ."

"ನಮ್ಮ ಅಣ್ಣಂದಿರ ಒಲವಿನ ಗೆಳೆಯರಾದ ನೀವು ನಮಗೂ ಅಣ್ಣನ ಸಮಾನವೆಂದೇ ತಿಳಿಯುತ್ತೇನೆ."

"ತಮ್ಮ ಔದಾರ್ಯಕ್ಕೆ ನಾನು ಚಿರಋಣಿ."

"ನಿನ್ನೆ ನಿಮ್ಮ ವಿಚಾರವಾಗಿ ರಕ್ಷಾಮಣಿ ಮಹಾಬಲಯ್ಯನವರು ಬಹುವಾಗಿ ತಿಳಿಸಿದ್ದಾರೆ. ನೀವು ನಮ್ಮ ಇಚ್ಛೆಯೊಂದನ್ನು ಪೂರೈಸಿಕೊಡಬೇಕೆಂಬ ಅಪೇಕ್ಷೆಯಿದೆ."

"ಪ್ರಭುಗಳು ನಿಸ್ಸಂಕೋಚವಾಗಿ ತಿಳಿಸಬಹುದು."

"ನೀವು ಗಂಗ ರಾಜಾಸ್ಥಾನದಲ್ಲಿ ಆಸ್ಥಾನ ಪಂಢಿತರಾಗಿಯೊ, ಸಚಿವರಾಗಿಯೋ, ಆಪ್ತಸಲಹೆಗಾರರಾಗಿಯೋ ಅಂತೂ ಇರಬೇಕು."

"ತಮ್ಮ ಕೃಪಾಶ್ರಯದ ಅಶ್ವಾಸನೆಗೆ ಕೃತಜ್ಞನಾಗಿದ್ದೇನೆ."

"ಅಂದರೆ ನೀವು ಒಪ್ಪಿಗೆ ಕೊಟ್ಟಿದ್ದೀರೆಂದು ತಿಳಿಯೋಣವೇ?"

"ಒಪ್ಪಿಗೆ ಕೊಡಲು ನನಗೂ ಸಂತೋಷವೆ. ಸೋದರ ವಾತ್ಸಲ್ಯತೋರುವ ಪ್ರಭುವೂ ಪಿತೃ ವಾತ್ಸಲ್ಯ ತೋರುವ ಮಹಾಬಲಯ್ಯನವರೂ ಎಲ್ಲರ ಪಾಲಿಗೂ ಸಿಗುವ ಭಾಗ್ಯವಲ್ಲ."

"ಹಾಗಾದರೆ ಇಂದಿನ ಸಂಜೆಯ ರಾಜಸಭೆಯಲ್ಲೇ ನೀವು ಇಂದಿನಿಂದ ನಮ್ಮ ಆಸ್ಥಾನದ ವಿದ್ವಾಂಸರೆಂದು ಘೋಷಿಸುತ್ತೇವೆ."

"ತಾವು ನನ್ನನ್ನು ಉದ್ಧಟನೆಂದು ತಿಳಿಯದಿದ್ದರೆ ಒಂದು ಅರಿಕೆ ಮಾಡಿಕೊಳ್ಳುವೆ."

"ಓಹೋ ಅಗತ್ಯವಾಗಿ ಹೇಳಿ."

"ಈ ವಿಚಾರದಲ್ಲಿ ನನ್ನ ತಂದೆಯವರೊಡನೆ ನಾನು ಮಾತನಾಡಿ ನಿರ್ಧಾರಕ್ಕೆ ಬರಬೇಕಾದ ಅಗತ್ಯವಿದೆ..."

"ಅದಕ್ಕೆ ತಕ್ಕ ಏರ್ಪಾಡು ಮಾಡೋಣ, ನಾವು ಇಂದೇ ನಮ್ಮ ಕಾಪಿನಾಳುಗಳಿಗೆ ತಿಳಿಸಿ ಓಲೆಕಾರರನ್ನು ಪುಲಿಗೆರೆಗೆ ಕಳಿಸುವ ವ್ಯವಸ್ಥೆ ಮಾಡುತ್ತೇವೆ. ನೀವು ನಿಮ್ಮ ತೀರ್ಥರೂಪರ ಆದೇಶ ಬರುವತನಕ ನಮ್ಮ ಅತಿಥಿಗಳಾಗಿ ಇಲ್ಲೇ ಇರಿ."

"ಹೆಜ್ಜೆ ಹೆಜ್ಜೆಗೂ ತಮ್ಮ ಅಪಾರ ಮಮತೆ ಎದ್ದು ಕಾಣುತ್ತಿದೆ. ಆದರೆ ತಾವು ಮನ್ನಿಸಬೇಕು. ನಾನು ನಾಳೆ ಬೆಳಗ್ಗೆ ಇಲ್ಲಿಂದ ಹೊರಡುವುದು ನಿಶ್ಚಯವಾಗಿದೆ."

"ಏಕೆ ನಮ್ಮ ರಾಜಧಾನಿ ನಿಮಗೆ ಎರಡು ಮೂರುದಿನಗಳಿಗೇ ಬೇಸರಾಯಿತೇ?"

"ಛೆ, ಛೆ, ಅಂಥ ಅಪಚಾರದ ಮಾತು ನನ್ನ ಬಾಯಲ್ಲಿ ಬಾರದು. ಈ ನಗರದ ಸೌಂದರ್ಯ, ಆರೋಗ್ಯಕರ ಹವೆ ನೀರು ನನಗೆ ತುಂಬಾ ಹಿಡಿಸಿದೆ."

"ಆದರೂ ನೀವು ನಾಳೆ ಹೋಗಬೇಕು!"

"ಅದಕ್ಕೆ ಬೇರೆ ಕಾರಣವಿದೆ ಪ್ರಭು. ನಾನು ನನ್ನ ಇತರ ಬಂಧುಗಳನ್ನು ಕಳ್ವಪ್ಪಿನಲ್ಲಿ ಬಿಟ್ಟು ಬಂದಿದ್ದೇನೆ. ಅವರನ್ನು ಕರೆದುಕೊಂಡು ಪುಲಿಗೆರೆಗೆ ಹೋಗಬೇಕು. ಅಲ್ಲದೆ ಈಗಾಗಲೇ ಸಾಕಷ್ಟು ವಿಳಂಬ ಆಗಿದೆ. ವಾಸ್ತವಾಗಿ ಇಲ್ಲಿಗೆ ಬರುವ ಯೋಚನೆ ನಮ್ಮ ಒಟ್ಟು ಪ್ರಯಾಣದ ಚೌಕಟ್ಟಿಗೆ ಮೊದಲು ಅಳವಟ್ಟಿರಲಿಲ್ಲ. ನಾನೇ ಒತ್ತಾಸೆಯಿಂದ ಇಲ್ಲಿಗೆ ಬಂದದ್ದು. ಹೀಗಾಗಿ......"

"ಸರಿಯೇ, ನಿಮ್ಮ ಮನಸ್ಸಿನ ಭಾವನೆ ತಿಳಿಯಿತು. ನೀವು ಊರಿಗೆ

ಹೋದ ಕೂಡಲೇ ನಾವು ಹೇಳಿದ ವಿಚಾರವನ್ನು ತಂದೆಯವರೊಡನೆ ಪ್ರಸ್ತಾಪಿಸಿರಿ. ಅವರು ಒಪ್ಪುವರೆಂಬ ನಂಬುಗೆ ನಮಗಿದೆ."

"ತಾವು ಹೇಳಿದಂತೆಯೇ ಮಾಡುವೆ."

ಸಂಜೆಯ ರಾಜಸಭೆಯಲ್ಲಿ ಪಂಪನನ್ನು ಪಂಡಿತ ಮಂಡಳಿಗೆ ಪರಿಚಯಿಸಿಕೊಟ್ಟರು. ಅಂದಿನ ವಿದ್ವದ್ ಗೋಷ್ಠಿಯಲ್ಲಿ ರಾಜ್ಯಶಾಸ್ತ್ರ, ಚರ್ಚೆ ನಡೆದಿತ್ತು. ಪಂಪನನ್ನೂ ರಾಜ ನೀತಿ ಕುರಿತು ನಾಕು ಮಾತು ಆಡಬೇಕೆಂದು ಜಾಣ ಸ್ನಾತಕನೆಂಬ ಅಭಿಮಾನದಿಂದ, ಮಹಾಬಲಯ್ಯನವರು ಸೂಚಿಸಿದರು. ಪಂಪ ಸಮಕೋಚಪಟ್ಟ. ಒಡ್ಡೋಲಗದ ಸೂರಿಗಳು ಬಿಡದೆ ಒತ್ತಾಯಿಸಿದರು. ಪಂಪ ತಾನು ಕಲಿತ ಕೆಲವು ಮಾತು ಆಡಿದ.

"ನಾನೇನು ಬುದ್ಧಿವೃದ್ಧನಲ್ಲ, ಮಹಾಬಲಯ್ಯನವರಂತೆ. ಇಲ್ಲಿರುವ ಬಲ್ಲಿದರಿಗಿಂತ ಹೆಚ್ಚಿನ ರಾಜನೀತಿ ನಾನೇನು ಬಲ್ಲೆ? ಲೋಕಾನುಭವವೂ ಇಲ್ಲ. ನಾನು ಹೇಳಲಿರುವ ಕೆಲವು ಮಾತುಗಳೇನಿದ್ದರೂ ಪೂಜ್ಯ ಆಚಾರ್ಯ ದೇವೇಂದ್ರರು ಬೋದನದ ಗುರುಕುಲದಲ್ಲಿ ಬೋಧಿಸಿದ ವಿಚಾರಗಳೇ ಹೊರತು ನನ್ನ ಸ್ವಂತದ ನುಡಿಗಳಲ್ಲ. ಮುಖ್ಯವಾಗಿ ಉರ್ವೀಶ್ವರನಾದವನು ಕಾಮ, ಕ್ರೋಧ, ಲೋಭ, ಮದ, ಮಾನ ಹರ್ಷಗಳನ್ನು ಗೆದ್ದು ಜೀರ್ಣಸಿಕೊಂಡು ನಿಲ್ಲಬೇಕು. ಧೂರ್ತರ ಬೇರನ್ನು ನೆರೆಕಿತ್ತು ಧರೆಯನ್ನು ರಕ್ಷಿಸಬೇಕು. ಅಂದರೆ ದುಷ್ಟರನ್ನು ಬಲಿಹಾಕುವುದು ಅಗತ್ಯ. ದೋಷಿಗೆ ತಕ್ಕ ದಂಡನೆ ಆಗಬೇಕು. ಉಪೇಕ್ಷಿಸಿದರೆ ದೋಷಿ ಕ್ರಮೇಣ ಅಂಕುಶವಿಲ್ಲದ ಆನೆಯಂತೆ ಆದಾನು.

"ಅದೇ ರೀತಿ ಅರಾತಿ ತರುವನ್ನು ಬೆಳೆಯಗೊಡಬಾರದು. ಶತ್ರುವನ್ನು ಮೊಳಕೆಯಲ್ಲೇ ತೋಡಿ ಸೀಂಟಿ ಕಳೆಯಬೇಕು. ಉಗುರಿನಲ್ಲಿ ಚಿವುಟಿಹಾಕದೆ ಬಿಟ್ಟರೆ ಮುಂದೆ ಕೊಡಲಿ ಹಿಡಿದು ನಿಲ್ಲಬೇಕಾಗುತ್ತದೆ. ಸದಮಳ ರಾಜ್ಯಭಾರ ಭರನಾಗ ಬಯಸುವಾತ ಮಂಗಳಕಾರ್ಯ ಯುಕ್ತನೂ ಆಗಬೇಕು. ಜಯಲೋಲನಾಗಲಿಚ್ಛಿಸುವವನು ಸುಚರಿತ್ರನೂ ಶುದ್ಧಚಿತ್ತನೂ ಇರಬೇಕು. ಕಳ್ಳರನ್ನು ಬಂಧಿಸಿ ಸದ್ಧರ್ಮವನ್ನು ಕಾಯಬೇಕು. ಯಾರನ್ನಾದರೂ ಮನ್ನಣೆಯುಳ್ಳಾತನನ್ನು ಗಧರಿಸುವುದಾದರೆ ಅದನ್ನು ಸಭೆಯಲ್ಲಿ ಮಾಡಬಾರದು. ಗುಪ್ತವಾಗಿ ಗದರಿಸಲಿ, ಬಹಿರಂಗವಾಗಿ ಗೌರವಿಸಲಿ. ಶಿಷ್ಟರ ಇಷ್ಟಪದಗಳನ್ನು ಸಂತೋಷದಿಂದ ಕೊಟ್ಟು ಪರಿವಾರವನ್ನು ಪೊರೆಯಬೇಕು. ಬಡವರ ಹುಯ್ಯಲನ್ನೂ ಪ್ರಜೆಗಳ ಬಿನ್ನಹಗಳನ್ನೂ ಪರರ ಮಾತುಗಳನ್ನೂ ಆಲಿಸುವುದು ಅಗತ್ಯ. ಅರ್ಹರಾದ ಸಚಿವರ ಮಂಡಲವನ್ನೂ ಹೊಂದಿರಬೇಕು. ಚತುರಂಗ ಬಲದಂತೆ ಚತುರೋಪಾಯಗಳೂ ಮುಖ್ಯ.

ಸಪ್ತಾಂಗ ಸರ್ವಾಂಗವಾಗಿ ಸುಭದ್ರವಾಗಿರಬೇಕಾದರೆ ಇವೆಲ್ಲ ನೆನಪಿನಲ್ಲಿಡಬೇಕಾದ ಅಂಶಗಳು."

ಪಂಪ ಪ್ರತಿಪಾದಿಸಿದ ರಾಜನೀತಿ ವಿಚಾರದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ಪಂಡಿತ ಮಂಡಳಿಯ ಅನುಭವದತ್ತ ವಿವೇಕದ ಮಾತುಗಳಿಂದ ಪಂಪ ಅನೇಕ ಅಂಶಗಳನ್ನು ಮನನ ಮಾಡಿಕೊಂಡ. ಸಂಜೆಯೇ ಪಂಪನಿಗೆ ಮುಮ್ಮಡಿ ರಾಜಮಲ್ಲ ಉಡುಗೊರೆಗಳಿತ್ತು "ಗಂಗ ಸಾಮ್ರಾಜ್ಯದಲ್ಲಿ ನಿಮಗೆ ಸದಾ ಒಂದು ಹಿರಿಯ ಸ್ಥಾನ ಮೀಸಲಿರುತ್ತದೆ" ಎಂದು ಪ್ರೀತಿಯಿಂದ ಬೀಳ್ಕೊಟ್ಟ..

ಕಾಳಲೆ ಬಮ್ಮಲೆ ಜಕ್ಕಲೆಯರನ್ನು ಮಕ್ಕಳಂತೆ ಮಮತೆಯಿಂದ ಹರಿಸಿ ಮಡಲಕ್ಕಿ ತುಂಬಿ ಹೊಸ ಸೀರೆಯುಡಿಸಿದಳು. "ಇನ್ನೊಮ್ಮೆ ಬರಬೇಕು" ಎಂದಳು. ಪಂಪ ಆಗ "ನಮಗೆ ಒಂದು ಗಾಡಿ ಸಾಲುವುದಿಲ್ಲ. ಎರಡು ಗಾಡಿ ನಮ್ಮ ಸಂಸಾರಕ್ಕೆ ಬೇಕಾಗುತ್ತದೆ' ಎಂದ. ಮರುದಿವಸ ತಲಕಾಡಿನಿಂದ ಹೊರಟ ಪಂಪನ ಚಕ್ಕಡಿಯ ಜೊತೆಗೆ ಮಹಾಬಲಯ್ಯ ಇಬ್ಬರು ಕಾಪಿನ ಅಶ್ವಾರೋಹಿಗಳನ್ನು ಕಳಿಸಿಕೊಟ್ಟ. ಚಾವುಂಡನಂತೂ ತಾನು ಪಂಪನ ಊರಿಗೆ ಬರುವುದಾಗಿ ಪಟ್ಟು ಹಿಡಿದ. ಕಡೆಗೆ ಉಪಾಯದಿಂದ ತಪ್ಪಿಸಿದ್ದಾಯಿತು. ಪಂಪ ಕಳ್ವಪ್ಪು ತಲಪಿದ ಮೇಲೆ ಕಾಪಿನ ಭಟರು ತಲಕಾಡಿಗೆ ಹಿಂತಿರುಗಿದರು. ಮರುದಿವಸ ಆರು ಗಾಡಿಗಳೂ ಪುಲಿಗೆರೆಗೆ ಹೊರಟವು.

ಪುಲಿಗೆರೆಗೆ ಪಂಪ ಬಂದ ಕೂಡಲೇ ಬೋದನಕ್ಕೆ ಪಯಣಿಸಬೇಕಾಯಿತು. ದೇವೇಂದ್ರ ಮುನೀಂದ್ರರು ಪಂಪನಿಗೆ ಒಡನೆ ಹೊರಟು ಬರುವಂತೆ ಆದೇಶ ಕಳಿಸಿದ್ದರು. ಆಚಾರ್ಯರ ಮಾತು ಪಂಪನಿಗೆ ಅಪ್ಪಣೆ ಇದ್ದಂತೆ. ಒಂದು ದಿವಸ ಬಿಡುವು ಪಡೆದು ಮುಂದಿನ ಮುಂಜಾನೆಯ ನಸುಕಿನಲ್ಲೇ ಕುದುರೆ ಹತ್ತಿ ಹೊರಟ. ಬೋದನದ ಗುರುಕುಲ ತಲುಪಿದವನೇ ಪಂಪ ದೇವೇಂದ್ರರಿಗೆ ಪೊಡಮಟ್ಟ. ತೌರಿಗೆ ಬಂದಷ್ಟೇ ಹರುಷವಾಯಿತು. ಗುರುಕುಲದಲ್ಲಿ ಮತ್ತೆ ಪಂಪನೇ ಕೇಂದ್ರ ಬಿಂದುವಾದ. ದೇವೇಂದ್ರರು ಪಂಪನಿಗೆ ಹೇಳಿಕಳಿಸಿದ ಕಾರಣವನ್ನು ಎರಡು ಮೂರು ದಿನಗಳಾದರೂ ತಿಳಿಸಲಿಲ್ಲ. ಪಂಪನಿಗೂ ಕೇಳುವುದು ಹೇಗೆಂದು ಸಂಕೋಚ.

ಹಳೆಯ ಗೆಳೆಯರೊಡನೆ ಬೋದನ ನೆರೆಹೊರೆ ಕಾಡುಮಲೆಗಳನ್ನು ಸುತ್ತಿಕೊಂಡು ಬಂದ. ಪಂಪನ ಗೆಲುವನ್ನು ಒಮ್ಮೆಲೆ ಇಲ್ಲಗೈದ ದುರ್ವಾರ್ತೆ ಗೆಳೆಯರಿಂದ ಗೊತ್ತಾಯಿತು. ಮಾನ್ಯಖೇಟದಲ್ಲಿ ನರಸಿಂಹ ದೊರೆ ಸ್ವರ್ಗಸ್ಥನಾಗಿದ್ದ. ಪಂಪ ತಲಕಾಡು ಬಿಟ್ಟು ಕಳ್ವಪ್ಪಿನತ್ತ ಪಯಣಿಸುತ್ತಿರುವ ಅವಧಿಯಲ್ಲೇ ಈ ಸಾವು

ಸಮನಿಸಿತ್ತು. ಒಂದೂವರೆ ತಿಂಗಳ ಕಾಲ ತಂದೆ ಕಳೆದುಕೊಂಡ ಕೆಳೆಯ ಅರಿಗ ಹೇಗೆ ಪರಿತಪಿಸಿರಬಹುದೆಂದು ನೆನೆನೆನೆದು ಪಂಪನಿಗೆ ಅರಿಗನ ಕರೆಯಂತೆ ರಾಜಧಾನಿಗೆ ನೇರವಾಗಿ ಹೊರಟಿದ್ದರೆ ಎನ್ನಿಸಿತು. "ನಾಳೆಯೇ ಮಳಖೇಡಕ್ಕೆ ಹೊರಡಬಾರದೇಕೆ?" ಎಂದುಕೊಂಡ. ಅದರಂತೆ ದೇವೇಂದ್ರರ ಬಳಿ ಸಾರಿದ.

"ಪೂಜ್ಯರೆ, ನಾನು ನಾಳೆ ಮಾನ್ಯಖೇಟಕ್ಕೆ ಹೊರಡಬಯಸಿದ್ದೇನೆ."

"ಅದೇನು ಮಗು ಇಷ್ಟು ಅವರಸರದ ಪ್ರಯಾಣ?"

"ನರಸಿಂಹ ಪ್ರಭುಗಳ ನಿಧನ ವಾರ್ತೆ ತಿಳಿಯಿತು. ಅದಕ್ಕಾಗಿ....

ಗೆಳೆಯ ಅರಿಗನ ಸ್ಥಿತಿ ನೆನಸಿಕೊಂಡರೆ ದುಃಖವಾಗುತ್ತದೆ."

"ಈಗ ನಿನ್ನನ್ನು ಇದ್ದಕ್ಕಿದ್ದಂತೆ ಕರೆಸಿಕೊಂಡ ಉದ್ದೇಶ ತಿಳಿಸಬಹುದು. ಇಮ್ಮಡಿ ಅರಿಕೇಸರಿ ದೊರೆ ನಿನಗೆ ಎರಡು ಸಲ ಹೇಳಿ ಕಳಿಸಿದ್ದರು. ಒಮ್ಮೆ ಅವರು ಪಟ್ಟಾಭಿಷಿಕ್ತರಾಗುವ ಸಮಯದಲ್ಲಿ. ಆಗ ನೀನು ಪುಲಿಗೆರೆಯಲ್ಲಿದ್ದೆ. ದೊರೆಗಳು ಅಲ್ಲಿಗೂ ಚಾರರನ್ನು ಅಟ್ಟಿದ್ದರೆಂದು ತಿಳಿಯಿತು. ನೀನು ಅದೇ ತಾನೆ ಗೃಹಸ್ಥಾಶ್ರಮಕ್ಕೆ ಪಾದಾರ್ಪಣವಿಡುತ್ತಿದ್ದೆ."

"ಹೌದು, ಗುರುಗಳೇ, ನನ್ನ ಗೆಳೆಯ ತನ್ನ ವೈಭವದ ಸಮಯದಲ್ಲಿ ನನ್ನನ್ನು ಮರೆಯಲಿಲ್ಲ. ನಾನಾದರೂ ತಂದೆ ತಾಯಿಗಳ ಹರಕೆಯನ್ನು ಪೂರೈಸಲು ಕಳ್ವಪ್ಪಿನತ್ತ ಹೊರಡದೆ ಮಳಖೇಡದತ್ತ ಹೊರಟಿದ್ದರೆ ನರಸಿಂಹ ಪ್ರಭುಗಳನ್ನು ನೋಡಬಹುದಿತ್ತೇನೋ ಎಂದೆನಿಸುತ್ತದೆ."

"ಹುಟ್ಟು, ಸಾವುಗಳು ನಮ್ಮೆಣಿಕೆಯಂತೆ ಅಷ್ಟು ಸರಳವಾಗಿ ನಡಿಯಲಾರವು. ಆದದ್ದು ಆಯಿತು. ಜಾತಸ್ಯ ಮರಣಂ ಧ್ರುವಂ. ಉಳಿದ ಬದುಕಿನತ್ತ ನೋಟವಿರಲಿ. ಇಪ್ಪತ್ತು ದಿನಗಳ ಹಿಂದೆ ತರುಣ ದೊರೆಗಳು ಗುರುಕುಲಕ್ಕೆ ದಯಮಾಡಿಸಿದ್ದರು. ಅದು ಗೌಪ್ಯವಾಗಿ ಬಂದು ಹೋದ ಭೇಟಿ."

"ರಹಸ್ಯ ಭೇಟಿಗೆ ರಾಜಕಾರಣ ಕಾರಣವೆ ಪೂಜ್ಯರೆ?"

"ಪ್ರಭುತ್ವೆಂಬುದರಷ್ಟು ದೊಡ್ಡ ಹೊರೆ ಬೇರೆ ಇರಲಾರದು. ಆದರೆ ಆಗುಹೋಗುಗಳ ವಿಚಾರವಾಗಿ ಕೆಲವು ಸಲಹೆಗಳನ್ನು ಪ್ರಭು ಬಯಸಿದ್ದರು. ಮುಖ್ಯವಾಗಿ ಅವರು ಬಂದ ಉದ್ದೇಶ ನಿನಗೆ ಸಂಬಂಧಿಸಿದ್ದು."

"ನನಗೇ? ನಾನು ಪಟ್ಟಾಭಿಷೇಕಕ್ಕೆ ಬರಲಿಲ್ಲವೆಂಬ ನಿರಾಶೆಯ ಮಾತಿರಬೇಕು.?"

"ಅದೂ ನಿಜವೇ. ಆದರೆ ಅರಿಕೇಸರಿ ದೊರೆ ತಮ್ಮ ಹೃದಯದ ಅಪೇಕ್ಷೆಯನ್ನು ನೀನು ನೆರವೇರಿಸುವಂತೆ ಕೋರಲು ಬಂದಿದ್ದರು."

"ಅಷ್ಟುದೊಡ್ಡ ಅಪೇಕ್ಷೆ ಈ ಸಾಮಾನ್ಯನಿಂದ ಪ್ರಭುವಿಗೆ ಏನಿರಬಹುದು? ಅಲ್ಲದೆ ತನ್ನ ಗೆಳೆಯನನ್ನು ಕೋರಬೇಕಾದಂತಹ ಅಗತ್ಯವಿದೆಯೆ?"

"ಹಾಗಲ್ಲ ಪಂಪಾ. ಸ್ನೇಹದ ಸಲಿಗೆ ಸಂಗತಿ ಬೇರೆ. ಈಗ ಅವರು ದೊರೆ. ನಾವು ಪ್ರಜೆಗಳು."

"ತಾವೂ ಆಳ್ವಿಕೆಗೆ ಒಳಪಟ್ಟ ಪ್ರಜೆಗಳೇ ಸ್ವಾಮಿನ್?"

"ನಮ್ಮ ವಿಚಾರ ಈಗ ಮರೆಯೋಣ. ವಿಷಯಕ್ಕೆ ಬರೋಣ. ನೋಡು, ನೀನು ಅರಿಕೇಸರಿಯ ಆಸ್ಥಾನದಲ್ಲಿ ಒಬ್ಬ ಅಧಿಕಾರಿಯಾಗಿ ಸೇರಬೇಕೆಂಬ ವಿಶ್ವಾಸದ ಕರೆ ಮುಂದಿದೆ. ನೀನು ಏನು ಉತ್ತರ ಹೇಳುವೆ?"

"ನಾನೇನು ಉತ್ತರ ಹೇಳುವುದು? ಆ ಪ್ರಭು ಈ ಪ್ರಜೆ ಇಬ್ಬರೂ ತಮ್ಮ ಶಿಷ್ಯರೇ. ತಾವು ಹೇಗೆ ಬೇಕಾದರೂ ಹೇಳಿಕಳಿಸಬಹುದಿತ್ತಲ್ಲಾ ಆಚಾರ್ಯಾ? ಇದರಲ್ಲಿ ನನ್ನನ್ನು ಕೇಳುವುದೇನಿದೆ?"

" ಅದು ಇನ್ನೂ ಗುರುಕುಲದ ವಟುವಾಗಿದ್ದಾಗ ಆಗಬಹುದಿತ್ತು. ನೀನೀಗ ಸಂಸಾರಿ, ತಂದೆ ತಾಯಿಗಳ ಜೊತೆಗೆ ಮಡದಿಯರು ಬೇರೆ ನಿನ್ನನ್ನು ಆಶ್ರಯಿಸಿದ್ದಾರೆ. ಅವರೆಲ್ಲರ ದೃಷ್ಟಿಯಿಂದ ಈ ಆಹ್ವಾನವನ್ನು ಪರಿಶೀಲಿಸಿ ಉತ್ತರಿಸಬೇಕಾಗುತ್ತದೆ."

"ಇದರ ವಿಚಾರದಲ್ಲಿ ತಾವೇ ತೀರ್ಮಾನಿಸಿದರೆ ಒಳಿತು."

"ಆಗಲೇ ಹೇಳಿದೆವಲ್ಲ. ಇದು ಇನ್ನೊಬ್ಬರು ನಿನ್ನ ಪರವಾಗಿ ಒಪ್ಪಿಗೆ ನಿರಾಕರಣೆ ತಿಳಿಸುವಂತಹುದಲ್ಲ. ಅಲ್ಲದೆ ನಮಗೆ ನೀನು ಹೇಗೆ ನಡೆದುಕೊಂಡರೂ ಒಂದೇ! ಹೀಗಿರುವಾಗ ನೀನು ನಿನ್ನ ಮನಸ್ಸಿಗೆ ಸರಿ ಕಾಣಿಸಿದಂತೆ ನಡೆಯಲು ಬಿಡುವುದು ಒಳ್ಳೆಯದೆಂದು ತೋರುತ್ತದೆ."

"ಆಚಾರ್ಯಾ, ಈ ಸಂಗತಿಯಲ್ಲಿ ತೀರ್ಪು ನನಗೆ ಬಿಟ್ಟಿರುವುದು ಕಷ್ಟಕ್ಕಿಟ್ಟುಕೊಂಡಿದೆ."

"ನಿನ್ನ ಭವಿಷ್ಯದ ಪಥವನ್ನು ನಿರ್ಧರಿಸುವ ಶಕ್ತಿ ನಿನಗೀಗ ಸಾಕಷ್ಟಿದೆ!"

"ಅದರಿಂದಲೇ ತಾವೇ ತೀರ್ಪು ಕೊಡಬೇಕೆಂದು ಬೇಡಿಕೊಂಡದ್ದು, ನನಗೀಗ ತುಂಬಾ ಇಕ್ಕಟ್ಟಿನ ಪರಿಸ್ಥಿತಿಯೊದಗಿದೆ ಆಚಾರ್ಯರೆ."

"ಏನಪ್ಪಾ ಅಂತಹ ಬಿಡಿಸಲಾಗದ ಇಕ್ಕಟ್ಟು?"

"ಕಳೆದ ತಿಂಗಳು ಕಳ್ವಪ್ಪಿನಿಂದ ತಲಕಾಡಿಗೆ ಹೋಗಿದ್ದಾಗ ಗಂಗರ ದೊರೆ ಮುಮ್ಮಡಿ ರಾಜಮಲ್ಲರು ನನ್ನನ್ನು ಅವರ ಆಸ್ಥಾನ ಪಂಡಿತನಾಗಿ ಬರುವಂತೆ ಕೇಳಿಕೊಂಡಿದ್ದಾರೆ."

"ನೀನು ಒಪ್ಪಿಗೆ ಕೊಟ್ಟಿರುವೆಯಾ?"

"ಇಲ್ಲ, ಯಾವುದಕ್ಕೂ ಮತ್ತೆ ಉತ್ತರಿಸುವುದಾಗಿ ಹೇಳಿ ಬಂದಿದ್ದೇನೆ. ಈಗ ಇಲ್ಲಿ ಅರಿಗ ಅರಸರ ಆಹ್ವಾನವನ್ನು ತಾವು ಅಪ್ಪಣೆ ಕೊಡಿಸಿದ್ದೀರಿ."

"ನಾವು ಅಪ್ಪಣೆ ಕೊಟ್ಟಿಲ್ಲ ಮಗು. ಇರುವ ಸಂಗತಿಯನ್ನು ಅರಮನೆಯವರು ಅರಿಕೆ ಮಾಡಿಕೊಂಡಂತೆ ತಿಳಿಸಿದ್ದೇವೆ. ಇದರಲ್ಲಿ ಒತ್ತಾಯವಾಗಲಿ ಗುರು ಸೂಚನೆಯಾಗಲಿ ಇಲ್ಲ. ನಾವೇನೂ ನಿನ್ನ ಪರವಾಗಿ ಮಾತುಕೊಟ್ಟಿಲ್ಲ. ನಿನಗೆ ಸೂಕ್ತ ಕಂಡಂತೆ ನಡೆದುಕೊ, ಹಾಗೂ ಅಲ್ಲಿ ನೋಡು" ಗುರುಗಳು ಬೆರಳು ಮಾಡಿ ತೋರಿಸಿದತ್ತ ನೋಡಿದ. ಹೊನ್ನ ಹರಿವಾಣಗಳೆರಡು. ಅವುಗಳಲ್ಲಿ ಸುರುಳಿಸುತ್ತಿ ಮುದ್ರಿಸಿದ ಎರಡು ಕೊಳವೆಗಳು. "ಅದರಲ್ಲಿ ಒಂದು ರಾಷ್ಟ್ರಕೂಟ ಚಕ್ರವರ್ತಿಯ ಆಸ್ಥಾನಕ್ಕೆ ಒಬ್ಬ ಹೊಸ ಕವಿಯಾಗಿ ಆಹ್ವಾನ. ಇನ್ನೊಂದು ಅರಿಕೇಸರಿಯ ಕರೆ! ಅರಿಕೇಸರಿ ದೊರೆಯ ಪರಿಸ್ಥಿತಿ ಅರ್ಥಮಾಡಿಕೊ. ಅವರಿಗೆ ನಿನ್ನನ್ನು ಆಸ್ಥಾನ ವಿದ್ವಾಂಸರನ್ನಾಗಿ ಆಹ್ವಾನಿಸಬೇಕೆಂದು ಆಶೆ. ಆದರೆ ಆಸ್ಥಾನದಲ್ಲಿ ವಿದ್ವಾಂಸರ ತಂಡವೇ ತುಂಬಿ ಹೋಗಿದೆ. ಅದರಿಂದ ನಿನ್ನನ್ನು ಈಗ ಕರೆಯುತ್ತಿರುವುದು ಸೇನಾಧಿಪತಿಯಾಗಿ."

"ಸೇನಾಧಿಪತಿ!"

"ಚಕಿತಗೊಳ್ಳದಿರು. ಹಾಗೆ ಆಹ್ವಾನಿಸಲು ಕೆಲವು ಕಾರಣಗಳೂ ಇವೆ. ಮೊದಲನೆಯದಾಗಿ ಈಗ ಹೊಸದಾಗಿ ಒಬ್ಬ ಪ್ರಧಾನ ಸೇನಾನಾಯಕನನ್ನು ನೇಮಕ ಮಾಡಬೇಕಾಗಿದೆ. ಎರಡನೆಯದಾಗಿ ಆ ಸ್ಥಾನಕ್ಕೆ ನಂಬಿಕೆಯುಳ್ಳವನನ್ನೇ ನೇಮಿಸಬೇಕು. ಹೊಸಬನೂ ತರುಣನೂ ಆದ ದೊರೆಯ ಆಸ್ಥಾನ. ಸುಭದ್ರತೆಯ ದೃಷ್ಟಿಯಿಂದ ಕೂಡ ಅದು ಮೇಲಾದ ಹುದ್ದೆ. ಮೂರನೆಯದಾಗಿ ಚಾಲುಕ್ಯರ ಕೈಲಿ ಸೋತು ಅಪಮಾನಿತರಾದ ಹಗೆಗಳೆಲ್ಲ ನರಗ ದೊರೆಯ ಅವಸಾನವನ್ನೇ ಕಾದಿದ್ದರು. ಈಗ ಅವರೆಲ್ಲ ಮೇಲೆ ಬೀಳಲು ಹವಣಿಸುತ್ತಿದ್ದಾರೆ. ಇಂಥ ಬಿಕ್ಕಟ್ಟಿನಲ್ಲಿ ರಾಜನಿಗೆ ಧೈರ್ಯ ತುಂಬುವ ಸೇನಾನಿ ಅಗತ್ಯವಿದೆ. ನಾಲ್ಕನೆಯದಾಗಿ ಅಂತರಂಗವರಿತ ಸಮವಯಸ್ಕ ಸೇನಾನಿ ಇರುವುದರಿಂದ ರಾಜನಿಗೆ ಅನುಕೂಲವಾಗಲೂ ಇದೆ."

"ಇದು ಒಳ್ಳೆಯ ಉಭಯ ಸಂಕಟಕ್ಕೆ ಇಟ್ಟುಕೊಂಡಿತಲ್ಲಾ."

"ಯೋಚಿಸಿ ನೋಡು. ಗಂಗ ದೊರೆ, ಚಾಲುಕ್ಯ ದೊರೆ ಇಬ್ಬರೂ ತರುಣರು. ಸಮರ್ಥರು. ರಾಷ್ಟ್ರಕೂಟ ಸಾಮಂತರ ಶ್ರೇಷ್ಠರು. ರಾಷ್ಟ್ರಕೂಟರಂತೂ ಚಕ್ರವರ್ತಿಗಳೇ ಸೈ. ನೀನು ಯಾರಲ್ಲಿ ಸೇರಿದರೂ ಸರಿಯೇ ಮುಖ್ಯವಾಗಿ ಇಲ್ಲಿರುವುದು ವಿದ್ವಾಂಸನಾಗಿ ಹೋಗಬೇಕೆ ಇಲ್ಲವೇ ವೀರನಾಯಕನಾಗಿ ಸೇರಬೇಕೆ ಎಂಬುದು."

"ಪೂಜ್ಯರೇ, ನಾನು ಒಮ್ಮೆ ನನ್ನ ತಂದೆಯವರ ಬಳಿ ಕೂಡ ಇದನ್ನು ಪ್ರಸ್ತಾಪಿಸಿ ಅನಂತರ ನನ್ನ ಒಪ್ಪಿಗೆ ತಿಳಿಸುವೆ."

"ಉತ್ತಮ ಆಲೋಚನೆ. ತಥಾಸ್ತು."

ಗುರುಗಳು ಸಂಧ್ಯಾವಂದನೆಗೆ ತೆರಳಿದರು.

# ೧೨

ಪಂಪ ಪರಿಭಾವಿಸಿದ. 'ಇಬ್ಬರೂ ಬೇಕಾದವರೆ. ಅಕ್ಕಿಯ ಮೇಲಾಸೆ, ನಂಟರ ಮೇಲಿಷ್ಟ. ಅಥವಾ ಈ ಗೆಳೆಯರಿಬ್ಬರ ವಿಶ್ವಾಸವನ್ನೂ ಉಳಿಸಿಕೊಂಡು ತೆಪ್ಪಗೆ ಊರಿನಲ್ಲೇ ನಿಂತರೆ? ಯಾವುದಕ್ಕೂ ನಾಳೆ ಊರಿಗೆ ಹೊರಟು ತಂದೆಯವರನ್ನು ಒಂದು ಮಾತು ಕೇಳೋಣ, ಮನಸ್ಸು ಮೆಲುಕು ಹಾಕತೊಡಗಿತು:

'ಚಕ್ರವರ್ತಿಯ ಕರೆಗೆ ಬದ್ದೆಗನ ಕೈವಾಡವೇ ಇರಬೇಕು. ಇಲ್ಲವಾದರೆ ನನ್ನ ಹೆಸರು ಅಲ್ಲಿಗೆ ಮುಟ್ಟುವುದೆಂದರೇನು. ಅವರ ಸ್ನೇಹಕ್ಕೆ ನಾನು ಕೃತಜ್ಞನಾಗಿದ್ದು ಅಲ್ಲಿಗೇ ಹೋಗಿ ಸೇರಬೇಕು. ಅರಿಗನ ಕರೆ! ಅದು ಸಾಮಂತನ ಆಹ್ವಾನ. ಅವನ ಓಲೆಯೂ ಹರಿವಾಣದ ಮೇಲೆ ಉಂಡಿಗೆಯೊಡನೆ ಕುಳಿತಿದೆ. ಓಲೆಯ ಒಕ್ಕಣೆ ತಿಳಿದಿದೆ. ಗುರುಗಳಂತೂ ನನ್ನದೇ ಆಯ್ಕೆಯೆಂದು ಮುಗುಳುನಗೆವೆರಸಿ ನುಡಿದರು. ಯಾವ ಸೂಚನೆಯನ್ನೂ ಕೊಡಲಿಲ್ಲ. ಚಕ್ರವರ್ತಿಯ ಆಸ್ಥಾನ ಕವಿಯಾಗಿ ಹೋದರೆ ಇಂದಲ್ಲ ನಳೆ ಕವಿಚಕ್ರವರ್ತಿ ಬಿರುದು ಬಾವಲಿಗಳ ಪುರಸ್ಕಾರ ಸಾಧ್ಯ. ಸಾಮಂತನ ಆಸ್ಥಾನದಲ್ಲಿ ಅದು ಸಾಧ್ಯವಿಲ್ಲ. ಬಾಳೆಲ್ಲ ಬರಿಯ ಆಸ್ಥಾನ ಕವಿಯೆಂಬ ಹೆಸರಿನಲ್ಲೇ ಪರ್ಯವಸಾನ. ಛೆ! ಎಂಥ ಸ್ವಾರ್ಥ. ನಂಬಿದ ನೇಹಿಗನನ್ನು ಬಿಡುವುದೇ? ಇಂದು ಕವಿಚಕ್ರವರ್ತಿ ಎನ್ನಿಸಿಕೊಂಡರೇನು? ಎಂದೆಂದೂ ಮುಂದಿನ ಜನ ಹಾಗೆನ್ನಬೇಕಲ್ಲವೆ? ಅದೇ ಸರಿ. ಆದರೆ ಅಲ್ಲಿ ಗಂಗವಾಡಿಯ ದೊರೆ!" ಆಲೋಚನೆಯ ಅಲೆಗಳು ಆವರಿಸಿದುವು.

ಆದರೆ ಅಂದು ಸಂಜೆಗೇ ಮಾನ್ಯಖೇಟದಿಂದ ಅರಿಕೇಸರಿ ಮಾರುವೇಷದಲ್ಲಿ ಬಂದಿಳಿದ. ಪಂಪನಿಗೆ ಮೊದಲು ಪರಿಚಯವೇ ಸಿಗಲಿಲ್ಲ. ವೇಷ ಬಿಚ್ಚಿದ ಮೇಲೆಯೇ ತಿಳಿದದ್ದು. ಆಶ್ರಮದಲ್ಲಿ ದೊರೆಯ ಆಗಮನ ಸುದ್ದಿ ಹಬ್ಬಿತು. ಹಿರಿಯರಾದಿಯಾಗಿ ಎಲ್ಲರೂ ದೊರೆಗೆ ಗೌರವ ತೋರಿದರು. ಆತ ಎದ್ದರೆ ಎಲ್ಲಾ ಏಳುವರು. ಆತ ಕುಳಿತರೆ ಕುಳಿತುಕೊಳ್ಳುವರು. ಅರಿಗ ದೇವೇಂದ್ರಮುನೀಂದ್ರರಿಗೆ ಪೊಡಮಟ್ಟ. ಆಶೀರ್ವಾದ ಪಡೆದ. ಅನಂತರ ಪಂಪ ಅರಿಗ ಇಬ್ಬರೂ ಗುರುಕುಲದ ತುದಿಯ ಗುಡ್ಡ ಹತ್ತಿ ಎಂದಿನ ಮರದ ಬುಡದಲ್ಲಿ ಕುಳಿತರು. ದೂರದಲ್ಲಿ ಬೋದನದ ಮನೆಗಳಿಂದ ಹೊಗೆಯೆದ್ದು ಬಾನಿಗೆ

ನಿಚ್ಚಣಿಗೆಯಾಗಿ ಸಾಗಿತ್ತು.

ಅರಿಗನೇ ಮಾತಿಗೆ ತೊಡಗಿದ.

"ಹೇಳಿ ಕಳಿಸಿದರೂ ಬರಲಿಲ್ಲವಲ್ಲಾ ಪಂಪಾ, ನೀನು ಅಷ್ಟು ದೊಡ್ಡವನಾಗಿ ಬಿಟ್ಟೆಯಲ್ಲಾ."

"ನಾನೆಲ್ಲಿ ದೊಡ್ಡವನು ದೊರೆ? ಈಗ ನೀವೇ ದೊಡ್ಡವರು. ನೀವು ಆಳುವವರು, ನಾವು ಆಳಿಸಿಕೊಳ್ಳುವವರು."

"ಸಾಕು ಸಾಕು ಈ ಹುಚ್ಚು ಮಾತು."

"ಹೌದು ಅರಸರೇ, ನೀವು ಪ್ರಭು ನಾನು ಪ್ರಜೆ."

"ಈ ಮುಚ್ಚು ಮಾತುಗಳಿಂದ ಮನಸ್ಸಿಗೆ ಹಿಂಸೆ ಉಂಟುಮಾಡಿ ಅಹಿಂಸಾ ಪಾಲನೆಗೆ ವಿದಾಯ ಹೇಳಬೇಡ. ಮನಬಿಚ್ಚಿ ಈ ಗೆಳೆಯನೊಡನೆ ಮಾತನಾಡಬಾರದೆ?"

"ಮನ್ನಿಸು ಅರಿಗ, ನಿನ್ನನ್ನು ನೋಯಿಸಲೆಂದು ನುಡಿದುದಲ್ಲ. ದೊರೆಯಾಗಿ ಬಂದಿರುವೆಯೋ ಇಲ್ಲವೇ ನೇಹಿಗನಾಗಿ ಬಂದಿರುವೆಯೋ ನೋಡೋಣವೆಂದು ಹಾಗೆಂದೆ."

"ಈಗ ನನ್ನೆದೆಗೆ ನೆಮ್ಮದಿ ಆಯಿತು."

ಅರಿಗ ಪಂಪನನ್ನು ಬರಸೆಳೆದು ಅಪ್ಪಿಕೊಂಡ. ಪಂಪನೆ ಒಂದು ಕ್ಷಣ ತಬ್ಬಿಬ್ಬಾದ. ಆಮೇಲೆ ಚೇತರಿಸಿಕೊಂಡವನೇ ನಾಡೊಡೆಯನತ್ತ ನಿಟ್ಟಿಸಿ ನೋಡಿದ. ಅರಿಗ ಅರಿಕೇಸರಿಯಾಗಿ ಬೆಳೆದಿದ್ದ. ಆ ದೇಹದ ಮಾಟ ಕ್ಷಾತ್ರ ತೇಜಸ್ಸಿನಿಂದ ಮಿನುಗುತ್ತಿತ್ತು. ನಿಜಕ್ಕೂ ಅರಿಗ ತನ್ನ ಹೆಸರನ್ನು ಅನ್ವರ್ಥಗೊಳಿಸಿಕೊಂಡು ಶತ್ರುಗಳಿಗೆ ಸಿಂಹಸ್ವರೂಪನಾಗುವನೆಂದು ತೋರುತ್ತಿತ್ತು. ತನ್ನನ್ನೇ ಬೆರಗಾಗಿ ನೋಡುತ್ತ ನಿಂತ ಪಂಪನನ್ನು ಕಂಡು ಅರಿಗನಿಗೂ ಅಚ್ಚರಿ. ಆನಂದ ತನಗಿಂತ ಎತ್ತರದಲ್ಲಿ ಕೊಂಚ ಕಡಿಮೆ ಇದ್ದರೂ ಪಂಪನ ಮೈಕಟ್ಟು ಗಟ್ಟಿಮುಟ್ಟಾಗಿತ್ತು.

"ಅಯ್ಯಾ ಪಂಪ, ನಾನೇನು ಅಪರೂಪದ ವಸ್ತುವೆ, ಹಾಗೆ ಬಿಡುಗಣ್ಣಾಗಿ ನೋಡುತ್ತಿರುವೆ?"

"ಏನಿಲ್ಲಾ, ಪ್ರಭುಗಳು ಅಲಂಕೃತಗೊಂಡಾಗ ಹೇಗೆ ಕಂಗೊಳಿಸಬಹುದೆಂದು ಕಲ್ಪಿಸಿಕೊಳ್ಳುತ್ತಿದ್ದೆ."

"ಹೀಗೆ ಕೇವಲ ಕಲ್ಪಿಸಿಕೊಳ್ಳುವುದು ಇನ್ನು ಸಾಕು."

"ಹಾಗೆಂದರೆ?"

"ಪ್ರಯಾಣಕ್ಕೆ ಸಿದ್ಧನಾಗು. ಅಲ್ಲಿ ಅರಮನೆ ಕರೆಯುತ್ತಿದೆ. ಇಲ್ಲಿ ಗುರು

ಮನೆಯಲ್ಲಿ ನಿನ್ನ ವಾಸದ ಅವಧಿ ಮುಗಿಯಿತು ಎನ್ನುತ್ತಿದೆ."

"ನಾನೊಮ್ಮೆ ನನ್ನ ತಂದೆಯುವರಿಗೆ ಈ ವಿಷಯು ಅರಿಕೆ ಮಾಡಿಕೊಳ್ಳಬೇಕಾಗಿದೆ. ಆದುದರಿಂದ....."

"ಅದೆಲ್ಲ ಆಮೇಲಿನ ಕೆಲಸ. ಈಗ ನೀನು ನನ್ನೊಡನೆ ಬರಲೇಬೇಕು. ಪಂಪ, ನೀನೀಗ ಪ್ರಾಪ್ತವಯೋವಿದ್ಯನಾಗಿದ್ದೀಯೇ. ನಿನ್ನಂಥ ಸುಸಂಸ್ಕೃತ ಆಪ್ತವೀರನ ಪ್ರತೀಕ್ಷೆಯಲ್ಲಿ ನಾನಿದ್ದೇನೆ. ನನ್ನ ತೀರ್ಥರೂಪರು ಕೂಡ ಹಿಂದೆ ನೀನು ಬಂದಾಗ ಆಸ್ಥಾನದಲ್ಲಿ ಒಬ್ಬನಾಗಿ ಬರುವಂತೆ ಕರೆಕೊಟ್ಟಿದ್ದರೆಂಬುದನ್ನು ಮರೆಯದಿರು. ಅವರು ಸಾಯುವ ದಿವಸ ಕೂಡ ನನಗೆ ಹೇಳಿದ ಕಡೆಯ ಮಾತುಗಳಿವು – "ಮಗು ಎಂದೂ ಸ್ನೇಹ ಮರೆಯದಿರು ಎಂದೂ ದ್ರೋಹ ಬಗೆಯದಿರು!"

"ನಿಜ ನಿಜ, ನರಸಿಂಹ ಪ್ರಭುಗಳು ಈ ಪ್ರಜೆಯನ್ನು ಪುತ್ರವಾತ್ಸಲ್ಯದಲ್ಲೇ ಅದ್ದಿದ್ದರು. ಅಂದು ಅವರಿಗೆ ನಾನು ಒಂದು ರೀತಿಯಲ್ಲಿ ಮುಂದಾಗುವುದನ್ನು ಅರಿಯದಲೇ ಬಂದೇನೆಂದು ಮಾತುಕೊಟಿದ್ದು ನೆನಪಾಗುತ್ತಿದೆ. ಪಿತೃ ಋಣವೂ ತೀರಿಸಬೇಕಾದುದು ಕರ್ತವ್ಯ. ಆದರೆ....."

"ಆದರೆ ಏನು?"

"ಅರಸರ ಆಶ್ರಯ_"

"ಆಶ್ರಯವಲ್ಲ, ಆಪ್ತತೆ."

"ನಾನು ನಾಲ್ಕೈದು ವಾರಗಳಲ್ಲಿ ಲೆಂಬುಳಪಾಟಕಕ್ಕೆ ತಪ್ಪದೇ ಬರುತ್ತೇನೆ. ಹಿರಿಯ ಅರಸರಾಣೆ."

"ಅಬ್ಬಾ, ಯುದ್ಧವೊಂದರಲ್ಲಿ ಗೆದ್ದಷ್ಟು ಹರ್ಷವಾಯಿತು."

"ಅಂತೂ ದೊರೆಗಳಿಗೆ ತಕ್ಷಣ ಹೊಳೆಯುವ ಹೋಲಿಕೆಗಳು ಯುದ್ಧಕ್ಕೇ ಸಂಬಂಧಪಟ್ಟಿರುತ್ತವೆ!"

"ಇಲ್ಲವಲ್ಲಾ! ನಿನ್ನಂಥ ಬಲ್ಲಿದರ ಒಡನಾಟ ದೊರೆತಷ್ಟೂ ಬೇರೆ ಮಾತುಗಳು ಹೆಚ್ಚುತ್ತವೆ. ಅಂತೂ ನನ್ನ ಬಾಳಿನ ದೊಡ್ಡ ಆಸೆ ನೆರವೇರಿತು."

"ಕೆಳೆಯಾ, ಆಸೆ ಇಲ್ಲದಿರುವುದೇ ಲೇಸು."

"ಆಸೆ ಇದ್ದರೆ ನಷ್ಟವೇನು?"

"ನಷ್ಟದ ಪ್ರಶ್ನೆಯಲ್ಲ. ಅದು ಕೈಸೇರಿದರೆ ಎಲ್ಲಾ ಸೊಗಸು, ಆಸೆ ಕೈ ಜಾರಿದರೆ ಎಲ್ಲ ಒಡೆದ ಕನಸು!"

"ಅದಿರಲಿ. ಈಗ ನನಗೆಷ್ಟು ಸಂತಸವಾಗಿದೆಯೆಂದರೆ ನೀನು ಕೇಳಿದ್ದನ್ನು

ಕೊಡುವಷ್ಟು."

"ಆಗಲೇ ಪ್ರಭು ಪ್ರಜ್ಞೆ ಜಾಗೃತವಾಯಿತಲ್ಲಾ!"

"ಛೆ ಛೆ, ಇದಕ್ಕೆ ಅನ್ಯಥಾ ಭಾವಿಸಿ ಅಪಾರ್ಥ ಕಲ್ಪಿಸಬಾರದು. ಈ ಮಾತು ಬಂದಿದ್ದರಿಂದ ಇಂದೇ ಹೇಳಿಬಿಡುತ್ತೇನೆ. ಎರಡು ಮುಖ್ಯ ವಿಚಾರಗಳನ್ನು ನೆನಪಿಡು. ಮೊದಲನೆಯದಾಗಿ ನಾವಿಬ್ಬರೇ ಇರುವಾಗ ಗೆಳೆಯರಾಗಿ ಏಕವಚನದಲ್ಲಿ ಕೂಡ ಮಾತಾಡಬಹುದು. ಬಹುವಚನಾದಿ ಗೌರವವೇನಿದ್ದರೂ ಆಸ್ಥಾನದಲ್ಲಿ ಮತ್ತು ಹೊರಗೆ ಇತರರು ಇರುವಾಗ. ಎರಡನೆಯದಾಗಿ ನೀನು ನನ್ನಲ್ಲಿ ಎಲ್ಲಾ ಸಮಾನ ಸ್ಥಾನಮಾನಗಳಿಗೆ ಅರ್ಹ. ಉಳಿದವರಂತೆ ಯಾವುದಕ್ಕೂ ನನ್ನ ಅಪ್ಪಣೆಗಾಗಿ ಕಾಯಬೇಕಾದುದಿಲ್ಲ. ಒಪ್ಪಿಗೆ ತಾನೆ?"

"ಆಗಲಪ್ಪಾ ನೋಡೋಣ, ಎಷ್ಟು ದಿವಸ ಈ ಔದಾರ್ಯ ನಡೆಯುತ್ತದೆಯೊ!"

"ನೋಡಿದಿಯೋ ಮತ್ತೆ ಕಟಕಿಯ ಕಟುತ್ವ?"

"ಆಯಿತು ಬಿಡು. ನಾವಿನ್ನು ಹೊರಡೋಣವೇ?"

"ಹೊರಡುವುದಕ್ಕೆ ಮೊದಲು ಮಿತ್ರನಾಗಿ ಕೇಳುತ್ತಿದ್ದೇನೆ. ನಡೆಸಿಕೊಡು. ನಿನಗೆ ನನ್ನ ಸಂತೋಷದ ನೆನಪಿಗಾಗಿ ಕೇಳಿದ್ದನ್ನು ಕೊಡುವೆನೆಂದು ಹೇಳಿದ್ದೇನೆ. ನಾನು ಒಮ್ಮೆ ಕೊಟ್ಟ ಮಾತನ್ನು ಹಿಂತೆಗೆದುಕೊಳ್ಳುವ ಅಭ್ಯಾಸದವನಲ್ಲ. ದಯವಿಟ್ಟು ಬೇಕಾದ್ದು ಕೇಳಬೇಕು."

"ಇಷ್ಟು ಒತ್ತಾಯಿಸಿದರೆ ನಾನೇನು ಹೇಳಲಿ? ನಿನ್ನಂಥ ಪ್ರಭುವೇ ಸ್ನೇಹಿತನಾಗಿರುವಾಗ ನನಗಿನ್ನೇನು ಬೇಕು?"

"ಅದೆಲ್ಲ ಬೇರೆ ಸಂದರ್ಭಕ್ಕಿರಲಿ. ಈಗ ನಿನಗೆ ಇಷ್ಟವಾದುದನ್ನು ಏನು ನೆರವೇರಿಸಿ ಕೊಡಬೇಕು ಹೇಳು."

"ಹಾಗಾದರೆ....."

"ಏಕೆ ತಡ? ಒಡನೆ ಹೇಳಬಾರದೆ?"

"ಹಾಗಾದರೆ ರಾಜಧಾನಿಯನ್ನು ಬದಲಾಯಿಸಬೇಕು."

"ಏನೇನು!"

"ವೇಮುಲವಾಡದಿಂದ ಈ ಬೋದನಕ್ಕೆ ರಾಜಧಾನಿಯುನ್ನು ವರ್ಗಾಯಿಸಬೇಕು. ಇದು ಕೇವಲ ನನ್ನ ಕೋರಿಕೆಯಷ್ಟೇ ಅಲ್ಲ. ನಿನ್ನ ಮುಂದಿನ ರಾಜ್ಯ ವಿಸ್ತಾರ, ರಾಜಧಾನಿಯ ರಕ್ಷೆ, ಆಡಳಿತ ಸೌಕರ್ಯ ಮೊದಲಾದ ಹಲವು ದೃಷ್ಟಿಗಳಿಂದ ಇದು ಅವಶ್ಯವೆಂದು ನನಗೆ ತೋರುತ್ತದೆ."

ತುಸು ಹೊತ್ತು ಅರಿಗ ಮೌನಿಯಾದ. ಆ ವೇಳೆಗಾಗಲೇ ಹೊತ್ತು ಪೂರ್ತಿ ಕಂತಿತ್ತು. ಸುತ್ತ ನೀರವತೆ. ಆಲೋಚನಾಮಗ್ನ ಅರಿಗ ತಲೆದೂಗಿದ, ಮೆಚ್ಚಿದವನಂತೆ. ತನ್ನ ಆಡಳಿತಕ್ಕೆ ಒಳಪಟ್ಟ ನಾಡಿಗೆ ಬೋದನ ಕೇಂದ್ರ ಬಿಂದುವಾಗಿತ್ತು. ಸುಭದ್ರ ಕೋಟೆಯೂ ಇತ್ತು. ಹಿಂದೆ ರಾಜಧಾನಿಯೂ ಆಗಿತ್ತು.

"ಭಲೆ ಪಂಪ, ನಿನ್ನ ಸೂಚನೆಯನ್ನು ಅನುಮೋದಿಸುತ್ತೇನೆ. ನನಗೂ ನಿನ್ನಂತೆ ಬೋದನ ಪ್ರಿಯವಾದ ನಗರ. ನಾವಿಬ್ಬರೂ ಸಮಾನ ಚಿಂತನಶೀಲರೆಂದು ಇದರಿಂದಲೇ ತಿಳಿಯಿತು. ಸಂತೋಷ, ನಾಳೆಯೇ ಇದಕ್ಕೆ ತಕ್ಕ ವ್ಯವಸ್ಥೆ ಮಾಡುವಂತೆ ಆಜ್ಞಾಪಿಸುವೆ."

"ಅನಂತ ಕೃತಜ್ಞತೆಗಳು."

"ಆದರೆ ನಿನ್ನ ಬೇಡಿಕೆಯೇನೆಂದು ತಿಳಿಸಲಿಲ್ಲವಲ್ಲಾ. ನನಗೆ ಅದರಿಂದ ಬಹುಮಾನ ನೆಮ್ಮದಿ ದೊರೆಯುತ್ತದೆ, ಹೇಳಬಾರದೆ?"

"ಈಗಲೀಗ ಚೆನ್ನಾಯಿತು. ನನ್ನ ಕೋರಿಕೆ ಈಡೇರಿದೆ. ಬಡ್ಡಿಗಾಗಿ ಇನ್ನೇನು ಕೇಳಬೇಕು?"

"ರಾಜಧಾನಿ ಬದಲಾವಣೆಗೊಳಿಸುವ ಸಂಗತಿ ನಿನ್ನ ಬೇಡಿಕೆ ಎಂದು ನಾನು ಪರಿಗಣಿಸೆ. ಅದು ನಿನ್ನ ಸೂಕ್ತ ಸಲಹೆಯೆಂದು ಸ್ವೀಕರಿಸಿ ಕಾರ್ಯಗತಗೊಳಿಸುವೆ."

"ಅಷ್ಟೇ ಸಾಕು ಗೆಳೆಯಾ. ಅದೊಂದೇ ನನ್ನ ಈಗಿನ ಹಂಬಲ! ಇನ್ನು ಒತ್ತಾಯ ಬೇಡ. ಆಚಾರ್ಯರ ಬಳಿಗೆ ಹೋಗಿ ಈ ವಿಚಾರ ಅರಿಕೆ ಮಾಡೋಣ ಬಾ."

ದೇವೇಂದ್ರರ ಬಳಿ ಶಿಷ್ಯೋತ್ತಮರಿಬ್ಬರೂ ಸ್ವಲ್ಪ ಕಾಲ ಕುಳಿತು ಮಾತನಾಡಿದರು. ಪಂಪ ಒಪ್ಪಿಕೊಂಡುದು, ಬೋದನ ಮತ್ತೆ ರಾಜಧಾನಿಯಾಗಲಿರುವುದು ತಿಳಿಸಿದರು. ಅಲ್ಲಿಂದ ಇಬ್ಬರೂ ಬೋದನದ ಅರಮನೆಗೆ ತೆರಳಿದರು. ಬೆಳಗ್ಗೆ ಅರಿಕೇಸರಿ ವೇಮುಲವಾಡದತ್ತ ಹೊರಟ. ಪಂಪ ಪುಲಿಗೆರೆಗೆ ಅಭಿಮುಖನಾದ. ದೇಹಗಳು ಹೊರಟ ದಿಕ್ಕುದಾರಿಗಳು ಬೇರೆಯಾದರೂ ಮನಸ್ಸುಗಳು ಹತ್ತಿರವಾಗಿದ್ದುವು.

ಪುಲಿಗೆರೆಯಲ್ಲಿ ಪಂಪನಿಗೆ ವಿಶೇಷ ಗೌರವಾದರಗಳ ಬೀಳ್ಕೊಡಿಗೆ ಆಯಿತು. ಮಹಾಜನರೂ, ನಗರಾಧ್ಯಕ್ಷರೂ ಸಂತೋಷಕೂಟಗಳನ್ನು ಏರ್ಪಡಿಸಿದರು. ಪಂಪನಿಗೆ ದೊರೆತ ರಾಜಮನ್ನಣೆ ಪುಲಿಗೆರೆಗೇ ಸಂದ ಪುರಸ್ಕಾರವೆಂದು ತಿಳಿಸಿದರು. ಊರಿನವರ ಆತಿಥ್ಯದ ಭಾರದಿಂದ ಪಂಪ ಬಾಗಿ ಹೋದ. ಕೆಲವರಿಗೆ

ಪಂಪ ಅಷ್ಟು ದೊಡ್ಡ ಬಲ್ಲಿದರೊಡನೆಯನಾಗಿದ್ದು ಸೇನಾನಾಯಕನಾಗಿ ಹೋಗುವುದು ಇಷ್ಟವಾಗಲಿಲ್ಲ. ಆಪ್ತವರ್ಗದವರಲ್ಲಿಯೂ ಪಂಪ ದೂರದ ನಾಡಿಗೆ ಅಧಿಕಾರಿಯಾಗಿ ಹೋಗುವುದಕ್ಕಿಂತ ರಾಷ್ಟ್ರಕೂಟರ ಆಸ್ಥಾನ ಕವಿಯಾಗಿ ಒಪ್ಪಿದ್ದರೆ ಚೆನ್ನಿತ್ತೆಂಬ ಭಾವನೆಯಿತ್ತು. ಜೈನ ಸಮಾಜದವರು ಪಂಪ ಗಂಗವಾಡಿಯ ಪಂಡಿತ ಮಂಡಳಿಗೆ ಸೇರುವುದು ಲೇಸೆಂದು ತಿಳಿದಿದ್ದರು.

ಭೀಮಪಯ್ಯನಿಗೆ ಹಿರಿಯ ಮಗ ಚಾಲುಕ್ಯರ ಸೇನಾನಿಯಾಗಿ ಹೊರಡಲು ಒಪ್ಪಿಗೆ ಕೊಟ್ಟಿದ್ದರೂ ಎದೆಯಾಳದಲ್ಲಿ ಇಬ್ಬಗೆಯ ಯೋಚನೆ ಮೂಡಿತ್ತು. ತನ್ನ ತಾತಂದಿರ ಕಾಲದ ತನಕ ವಂಶ ಪಾರಂಪರ್ಯವಾಗಿ ಸೇವೆ ಸಲ್ಲಿಸಿಕೊಂಡು ಬಂದಿರುವುದು ಆ ರಾಜವಂಶಕ್ಕೇನೆ. ಅಂದ ಮೇಲೆ ನಡುವೆ ನಿಂತು ಹೋದ ಸೇವೆ ಈ ಮಗನಲ್ಲಿ ಮುಂದುವರೆಯುತ್ತಿರುವುದು ಉಚಿತವೇ. ಆದರೂ ಜೈನ ಧರ್ಮೀಯರಾಗಿದ್ದು ರಕ್ತಪಾತದಲ್ಲಿ ನಡೆದು ಹೋಗಬೇಕಾದ ಸೇನಾನಾಯಕನಾಗಿ ಮಗ ಹೋಗುವುದು ಸರಿಕಾಣಲಿಲ್ಲ. ಆದರೆ ಪಂಪನಿಗೆ ಗೆಳೆಯ ರಾಜನಾಗಿರುವ ರಾಜ್ಯದ ಹಿರಿಯ ಅಧಿಕಾರಿಯಾಗಿ ಹೋಗಲು ಅಪೇಕ್ಷೆಯಿದ್ದಂತೆ ಕಂಡು ಬಂದುದರಿಂದ ಸಮ್ಮತಿ ಸೂಚಿಸಿದ್ದ.

ಅಬ್ಬಣಬ್ಬೆಗಂತೂ ಮಗ ಅಷ್ಟು ದೂರ ಹೋಗುವುದು ಸುತರಾಂ ಇಷ್ಟವಿರಲಿಲ್ಲ. ಪುಲಿಗೆರೆಯಿಂದ ನೂರಾರು ಗಾವುದ ಯೋಜನ ದಾಟಿ ಲೆಂಬುಳವಾಟದಲ್ಲಿ ನೆಲಸುವುದು ಮನಸಿಗೆ ಬರಲಿಲ್ಲ. ಮಗನಿಗೂ ಪತಿಗೂ ಸೊಸೆಯಂದಿರಿಗೂ ಹೇಳಿ ನೋಡಿದಳು. ಕಡೆಗೆ ಜಿನವಲ್ಲಭ ತಾಯಿಗೆ ಸಮಾಧಾನ ಹೇಳಿದ.

"ಅಬ್ಬೆ ನೀವು ಅಣ್ಣಾಜಿಯವರು ಇಲ್ಲೇ ಇರಬೇಕೆಂದರೆ ಹೇಗಾದೀತು?"

"ಇನ್ನೆಷ್ಟು ದಿನ ನಮ್ಮ ಬದುಕು ಮಗು? ಇದುವರೆಗೂ ವಿದ್ಯಾಭ್ಯಾಸಕ್ಕೆಂದು ಚಿಕ್ಕಂದಿನಿಂದ ಮನೆಬಿಟ್ಟು ಹೊರಗೆ ಗುರುಕುಲದಲ್ಲಿ ಇದ್ದುದಾಯಿತು. ಈಗ ಸೇನಾನಾಯಕನೆಂದು ಉಳಿದ ಬಾಳನ್ನು ಈ ಮನೆ ಬಿಟ್ಟು ಹೊರಗೇ ಕಳೆದರೆ ತಂದೆ ತಾಯಿಗಳೊಡನೆ ಈ ಮನೆಯಲ್ಲಿ ಬಾಳು ಕಳೆಯುವುದೆಂದು?"

"ಚೆನ್ನಾಯಿತು ಅಬ್ಬೆ! ಅಣ್ಣಾಜಿಯವರಿಗೆ ಇಂದು ಕನ್ನಡ ನಾಡೇ ಮನೆ. ಅಷ್ಟು ಹಿರಿಯ ಮನ್ನಣೆಗಾರರನ್ನು ಈ ಮನೆಯಲ್ಲೇ ಬಚ್ಚಿಡುವುದು ಸರಿಯೇ? ಹಾಗೆ ಮಾಡಿದರೆ ಮನೆ ಸೆರೆಮನೆ ಅನ್ನಿಸದೆ?"

"ಏನೊ ನೀನು ಹೇಳುವ ಮಾತು? ಹೆತ್ತ ತಂದೆ ತಾಯಿಗಳಿರುವ, ತಾನು ಹುಟ್ಟಿ ಬೆಳೆದ ಸ್ವರ್ಗದಂತಿರುವ ಈ ಮನೆ ಪಂಪನಿಗೆ ಸೆರೆಮನೆಯೆ? ನಾವು

ಅವನ ಪಾಲಿಗೆ ಏನೂ ಅಲ್ಲವೆ?"

"ಹೆತ್ತಬ್ಬೆ, ನಿಮಗೆ ನೋಯಿಸಲೆಂದು ಹಾಗೆ ಅಂದುದಲ್ಲ. ನೀವು ತಪ್ಪಾಗಿ ತಿಳಿಯದಿರಿ. ಅಣ್ಣಾಜಿಯನ್ನು ಕಂಡರೆ ನಮಗೆಲ್ಲ ಎಷ್ಟು ಪ್ರೀತ್ಯಾದರಗಳಿವೆಯೋ ಅಷ್ಟೇ ಅಣ್ಣಾಜಿಯವರಿಗೂ ನಮ್ಮೆಲ್ಲರ ಬಗೆಗೆ ಪ್ರೀತ್ಯಾದರ ಇದೆ. ನಮ್ಮೆಲ್ಲರನ್ನೂ ಬಿಟ್ಟು ಅಗಲುವುದು ಅವರಿಗೇನು ಹಿತದ ಮಾತೆ? ಲೋಕದ ಬೆಳಕಾಗಿ ಬೆಳೆಯುವ ಚೇತನ ಈ ಎಲ್ಲಾ ಇತಿಮಿತಿಗಳ ಬಂಧನ ತೊರೆದು ನಿಲ್ಲುವುದು ಅನಿವಾರ್ಯವೆಂದಷ್ಟೇ ನನ್ನ ಭಾವನೆ ಅಬ್ಬೆ."

"ನಿನ್ನ ಅಣ್ಣ ಲೋಕದ ಕಣ್ಣಿನಲ್ಲಿ ಎಷ್ಟೇ ಹಿರಿಯನಿರಬಹುದು. ಈ ತಾಯಿಯ ಕಣ್ಣಿಗೆ ಅವನು ಎಂದೂ ಕರುಳ ಕುಡಿ. ಮಡಿಲಲ್ಲಿ ಆಡಿ ಬೆಳೆದ ಮಗುವನ್ನು ಬಿಟ್ಟಿರಲು ತಾಯ್ಗರುಳು ಕೇಳೀತೆ ಕಂದಾ?"

"ಅದೆಲ್ಲ ಸರಿಯೆ ಅಬ್ಬೆ. ಅಣ್ಣಾಜಿಯವರು ಆಗಾಗ್ಗೆ ಇಲ್ಲಿಗೆ ಬರುತ್ತಾ ಇರುತ್ತಾರೆ. ನಾವು ಕೂಡ ಕೊಪಣಾಚಲದತ್ತ ಹೊರಟಾಗ ಹಾಗೆ ಮತ್ತೆ ಹತ್ತು ದಿನಗಳಲ್ಲಿ ಚಾಲುಕ್ಯನಗರಿಗೂ ಹೋಗಿ ಬಂದರಾಯಿತು."

"ಅಂತೂ ನಿನಗೆ ಅವನನ್ನು ಕಳಿಸಿಕೊಡುವ ಆತುರ!"

"ಅರಹಂತನಾಣೆಗೂ ಅಣ್ಣಾಜಿಯವರು ಇಲ್ಲಿಯೇ ಸನಿಯದ ನಗರಗಳಲ್ಲೇ ಇರಲೆಂಬುದು ನನ್ನ ಅಂತರಂಗದ ಅನಿಸಿಕೆ. ಅವರನ್ನು ಕಳಿಸಿ ನಾನೇ ಈ ಮನೆಗೆ ಯಜಮಾನನಾಗಿ ಆಳಬೇಕೆಂಬ ಸ್ವಾರ್ಥವಿಲ್ಲ. ಆದರೆ ನನ್ನ ಅಣ್ಣಾಜಿ ಈ ನಾಡಿನ ಮಹಾಪುರುಷನಾಗಿ ಮೆರಯಲೆಂಬ ಹೆಬ್ಬಯಕೆ ಮಿಡಿಯುತ್ತಿದೆ."

"ನೀನು ಎಂಥ ಹುಡುಗ ಎಂಬುದನ್ನು ಈ ತಾಯಿಗೆ ಹೇಳಿಕೊಳ್ಳಬೇಕೆ ಮಗು? ನಿನ್ನ ಅಣ್ಣನ ಮೇಲೆ ನೀನಿಟ್ಟಿರುವ ಅಭಿಮಾನ ಪುಲಿಗೆರೆಗೆ ತಿಳಿದಿದೆ."

"ಹಾಗಾದರೆ ಅಣ್ಣಾಜಿಯವರನ್ನು ಸಂತೋಷದಿಂದ ಬೀಳ್ಕೊಡೋಣ ಅಬ್ಬೆ. ನಿಮ್ಮ ಮಾತೃ ಹೃದಯದ ಹರಕೆ ಅನುಗ್ರಹ ಅಣ್ಣಾಜಿಯವರ ಅಭ್ಯುದಯಕ್ಕೆ ವರಗಾಗಲಿ."

"ಸಾಕೊ ನಿನ್ನ ನಾಟಕದ ಭಾಷೆ. ತಾಯಿ ಮಗನನ್ನು ಹರಸುವುದಕ್ಕೆ ಯಾರ ಶಿಫಾರಸ್ಸೂ ಬೇಕಿಲ್ಲ. ಲೋಕದ ಎಲ್ಲಾ ತಾಯಂದಿರೂ ಮಕ್ಕಳ ಮೇಲ್ಮೆಗಾಗಿ ಎಂಥ ತ್ಯಾಗಕ್ಕೂ ಸಿದ್ಧರು."

"ಪಂಪ ಪುಲಿಗೆರೆಯ ನಂಟರಿಷ್ಟರ ಮನೆಗೆಲ್ಲ ಮಡದಿಯರೊಡನೆ ಹೋಗಿ ಬಂದ. ಊರಿನ ಹಿರಿಯ ಮನ್ನೆಯರನ್ನು ಕಂಡು ಬಂದ. ತಮ್ಮನೊಡನೆ ಜಯಗೊಂಡ ಸಿದ್ಧಾಂತ ಆಚಾರ್ಯರಲ್ಲಿಗೆ ಹೋಗಿ ಪೊಡಮಟ್ಟು ಆಶೀರ್ವಾದ

ಪಡೆದು ಬಂದ. ಅತ್ತೆ ಮಾವಂದಿರ ಮನೆಗಳಲ್ಲಿ ಇದ್ದು ಬಂದ. ಕುಟುಂಬದವರೊಡನೆ ಬಂಕಾಪುರದ ಬಸದಿಗಳನ್ನೂ ಬನವಾಸಿಯನ್ನೂ ದರ್ಶನ ಪಡೆದು ಬಂದ. ಪುಲಿಗೆರೆಯ ಹತ್ತಾರು ಚೈತ್ಯಾಲಯಗಳಲ್ಲಿ ಭೀಮಪಯ್ಯ ಮಗನ ಲೇಸು ಕೋರಿ ಪೂಜೆ ಅಭಿಷೇಕಗಳನ್ನು ನಡೆಸಿದ. ಅಬ್ಬಣಬ್ಬೆಯ ಹರಕೆಗಳ ಒಂದು ದೊಡ್ಡ ಪಟ್ಟಿಯೇ ಸಿದ್ಧವಾಯಿತು. ಭೀಮಪಯ್ಯ ಪಂಪನಿಗೆ ಅನೇಕ ಬುದ್ಧಿವಾದದ ಬುತ್ತಿಯನ್ನೇ ಕಟ್ಟಿಕೊಟ್ಟ.

"ಪದ್ಮಪಾ ನೀನು ಎಲ್ಲಾ ಬಲ್ಲವನೇ ಆದರೂ ಅನುಭವದಿಂದ ತಿಳಿದ ಕೆಲವು ಮಾತುಗಳನ್ನು ಹೇಳುತ್ತೇನೆ."

"ಅವಶ್ಯ ಹೇಳಿ ಅಪ್ಪಾಜಿ."

"ನಿನ್ನ ಗೆಳೆಯನಾಗಿದ್ದ ಅರಿಕೇಸರಿಯೇ ಪ್ರಭುವಾಗಿರುವ ಆಸ್ಥಾನದಲ್ಲಿ ಪ್ರಧಾನ ಸೇನಾನಿಯಾಗಿ ನೇಮಕಗೊಂಡಿದ್ದರೂ ಹಳೆಯ ಸ್ನೇಹದ ಸಲುಗೆಯನ್ನು ದುರುಪಯೋಗಿಸಿಕೊಳ್ಳಬೇಡ."

"ಪ್ರಭುವಿಗೆ ದ್ರೋಹ ಮಡುವುದು, ಜೋಳದ ಪಾಳಿಗೆ ತಪ್ಪುವುದು ಉಂಟೆ?"

"ಉಪ್ಪು ಉಂಡ ಮನೆಗೆ ಎರಡು ಬಗೆಯಬಾರದೆಂಬುದಷ್ಟೇ ನನ್ನ ಮಾತಿನ ಅರ್ಥವಲ್ಲ. ನಿನ್ನ ಪದವಿ ಬಹು ಜವಾಬ್ದಾರಿಯುತವಾದುದು. ಮೈಯೆಲ್ಲ ಕಣ್ಣಾಗಿ ರಾಜನನ್ನೂ ರಾಜ್ಯವನ್ನು ಕಾಯಬೇಕು. ಸಂಸ್ಕೃತ ಶ್ಲೋಕ ಗೊತ್ತಷ್ಟೆ?"

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ."

"ನಿನ್ನ ಹೆತ್ತಬ್ಬೆ ಇಲ್ಲಿದ್ದರೂ ಆಕೆ ಹೊತ್ತಬ್ಬೆಯಾದ ತಾಯ್ನಾಡಿನ ರೂಪದಲ್ಲಿ ಸದಾ ನಿನ್ನೆದುರು ನಿಂತು ಹರಸುತ್ತಿದ್ದಾಳೆಂದೇ ತಿಳಿಯಬೇಕು."

"ನಿಮ್ಮ ಮಾತನ್ನು ಶಿರಸಾವಹಿಸಿದ್ದೇನೆ ಆರ್ಯಾ."

"ಪ್ರಭುಚಿತ್ತ ಗಾಳಿಗೊಡ್ಡಿದ ಸೊಡರು. ಅದರ ಅನುಗ್ರಹದಿಂದ ಪ್ರಸನ್ನವಾಗುವ ಮನಸು ಆಗ್ರಹದಿಂದ ಮುದುಡಿಹೋಗುವುದು ಸಹಜ. ಆದರೆ ನೀನು ಮೊದಲೇ ಇದನ್ನು ಅರಿತು ಸಮಚಿತ್ತನಾಗಿದ್ದು ದೇಶದ ಭವಿಷ್ಯದತ್ತ ಗಮನವಿಡಬೇಕೇ ಹೊರತು ಸ್ವಂತ ಸುಖದತ್ತ ಅಲ್ಲ."

"ವಿನಾ ಕಾರಣ ಆಗ್ರಹಗೊಂಡರೆ ದೊರೆ ಆದರೇನು ಬೇರೆ...."

"ಹಾ, ಅದೇ ಬೇಡ ಎಂದದ್ದು. ನಿಜ ನುಡಿಯುವುದಾದರೆ ಸಾಮಾನ್ಯವಾಗಿ ಭೂಪರೆಂಬುವರು ಅವಿವೇಕಿಗಳು. ಬಿದ್ದಲ್ಲಿ ಪೊಡಮಡುವರು. ಎದ್ದಲ್ಲಿ ಹೂಂಕರಿಸುವರು. ಹಾಗೆಂದು ಎಲ್ಲಾ ರಾಜರನ್ನೂ ಒಂದೇ ಅಳತೆಗೆ ತೂಗಬಾರದು.

ಆಗ್ರಹದ ಪ್ರಸಂಗಗಳು ಎದುರಾದಾಗ ತಲೆ ತಂಪಾಗಿಟ್ಟು ತದನಂತರ ಮಾತು ತೆಗೆಯಬೇಕು. ಒಮ್ಮೆಲೆ ದುಡುಕಿ ಸಿಡಿದೇಳಬಾರದು. ಸರಿ ತಪ್ಪುಗಳ ತಕ್ಕಡಿಯಲ್ಲಿ ತೂಗಿ ನೋಡಿ ತೀರ್ಮಾನ ತಳೆಯಬೇಕು."

"ಸರಿ ಅಪ್ಪಾಜಿ, ನೀವು ಹೇಳಿದ ತಿಳುವಳಿಕೆಯ ನುಡಿಯನ್ನು ಅಂಥ ಸಂದರ್ಭ ಬಂದಾಗ ಸ್ಮರಿಸಿಕೊಳ್ಳುವೆ."

"ಅದರಂತೆ ಅರಮನೆಯ ಉಳಿದ ಅಧಿಕಾರಿಗಳ ಬಗೆಗೂ ಎಚ್ಚರದಿಂದ ವರ್ತಿಸು. ಅರಮನೆಯಲ್ಲಿ ಕೈಗೊಬ್ಬರು ಕಾಲಿಗೊಬ್ಬರು ಅಧಿಕಾರಿಗಳು. ಅರಮನೆಯಲ್ಲಿ ಮಾತು ನಡೆಯುವ ಹದಿನಾರು ಜನ ಸೋದರರಿಗಿಂತ ಹಳ್ಳಿಯಲ್ಲಿ ಮಾತು ನಡೆವ ಒಬ್ಬ ಸ್ನೇಹಿತ ಲೇಸು ಎಂದು ಗಾದೆ ಇದೆ. ಇನ್ನೊಂದು ಮಾತು. ಇನ್ನು ಮುಂದೆ ಧಾನ್ಯ ದುಡ್ಡು ದುಗ್ಗಾಣಿ, ದೊರೆಯ ಸಖ್ಯದಿಂದಾಗಿ ಹೇರಳವಾಗಿ ದೊರೆಕೊಳ್ಳುತ್ತದೆ."

"ನಾನೇನೂ ದುಡ್ಡಿಗೆ ದಾಸನಾಗುವುದಿಲ್ಲ ಬಿಡಿ ಅಪ್ಪಾಜಿ."

"ಅದಲ್ಲ ಪದ್ಮಪಾ ನಾನು ಹೇಳಬೇಕೆಂದಿದ್ದುದು. ಕಷ್ಟ ಕಾರ್ಪಣ್ಯಗಳ ಝುಂಝುವಾತಕ್ಕೆ ಸಿಲುಕಿ ನರಳುವ ಬಚ್ಚ ಬಡವರ ಅವಸ್ಥೆಗಾಗಿ ನಿನ್ನ ಅಂತರಂಗ ದ್ರವೀಕರಿಸಲಿ."

"ದಾನ ಧರ್ಮಗಳು ನಮ್ಮ ವಂಶದವರಿಗೆ ಉಸಿರಾಟವಲ್ಲವೆ. ತಾತ ಕೊಮರಯ್ಯನವರೂ ನೀವೂ ನಿಮ್ಮ ಇತರ ಮುತ್ತಜ್ಜರೂ ವೆಂಗಿಪಳುವಿನ ವಂಸತ ನಿಡುಗುಂದಿ ವಿಕ್ರಮಪುರ ಅಗ್ರಹಾರದ ಚರಾಚರ ಆಸ್ತಿಯನ್ನೆಲ್ಲ ಕವಡೆಯಂತೆ ದಾನವೆಸಗಲಿಲ್ಲವೆ?"

"ವಂಶದ ಈ ಅಭಿಮಾನ ಬಾಳಿನುದ್ದಕ್ಕೂ ಇರಲಿ. ನಮ್ಮ ಮನೆತನದ ಹೆಸರನ್ನೂ ಅನಂತಕಾಲ ಹಸಿರಾಗಿಸುವುದು ನಿನ್ನ ಶಕ್ತಿಗೆ ಸಾಧ್ಯವೆಂದು ಇಲ್ಲಿ ನಾವೆಲ್ಲ ನಂಬಿದ್ದೇವೆ."

ಪಂಪ ಪ್ರಯಾಣಕ್ಕೆ ಸಿದ್ಧನಾದ. ತಾನು ಹೇಳಿ ಕಳಿಸಿದ ಮೇಲೆ ಮಡದಿಯರನ್ನೂ ತಂದೆತಾಯಿಯರನ್ನೂ ಕರೆದುಕೊಂಡು ಬರುವಂತೆ ತಮ್ಮನಿಗೆ ತಿಳಿಸಿದ. ಜಕ್ಕಲೆ ಬಮ್ಮಲೆಯರಿಗೂ ದಾಂಪತ್ಯದತ್ತ ಒಲವಿನುಡುಗೊರೆಯಿತ್ತು ಬೇಗ ಬಳಿಗೆ ಕರೆಸಿಕೊಳ್ಳುವುದಾಗಿ ಧೈರ್ಯವಿತ್ತ.

ಪಂಪ ಕೂತ ಜಾತ್ಯಶ್ವ ಚಾಲುಕ್ಯ ರಾಜ್ಯದತ್ತ ನಾಗಾಲೋಟದಿಂದ ಹೊರಟಿತು. ಬಂಧುಬಾಂಧವರ ನೋಟವೆಲ್ಲ ಅವನನ್ನು ಕಾಣುವವರೆಗೂ ಹರಕೆ ಹೇಳುತ್ತಾ ಹಿಂಬಾಲಿಸಿತ್ತು.

## ೧೩

ಪಂಪನಿಗೆ ಅಚ್ಚರಿಗಳು ಕಾದಿದ್ದುವು ಲೆಂಬುಳಪಾಟದಲ್ಲಿ. ಬೇಹುಗಾರರಿಂದ ಅವನ ಆಗಮನವನ್ನು ಮೊದಲೇ ಅರಿತ ದೊರೆ ಅರಿಕೇಸರಿ ರಾಜಧಾನಿಯ ಹೊರವಲಯದಲ್ಲೇ ಭಾರಿ ಚಪ್ಪರ ಹಾಕಿಸಿದ್ದ. ಅಲ್ಲಿ ಕಾದಿದ್ದ ಮಂತ್ರಿಮಾನ್ಯರೂ ಗೃಹ ಮಹತ್ತರರೂ ಪಂಪನಿಗೆ ದುಂಡುಮಲ್ಲಿಗೆ ತೋರಹಾರ ಹಾಕಿ ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ರಾಜವೀಧಿಯಲ್ಲಿ ಮೆರವಣಿಗೆಯಲ್ಲಿ ಬರಮಾಡಿದರು. ಮದುವಣಿಗನಾದಂದೂ ಲಜ್ಜಿತನಾಗದಷ್ಟು ಪಂಪ ಸಂಕೋಚಗೊಂಡು ಕುಳಿತ. ಅರಮನೆಯ ಮಹಾದ್ವಾರದಲ್ಲಿ ಅರಿಕೇಸರಿ ತನ್ನ ಪಟ್ಟದಾನೆ ತ್ರಿಭುವನಾಭರಣ ಹತ್ತಿಬಂದವನು ಕೈ ನೀಡಿ ಪಂಪನನ್ನೂ ಮೇಲೆತ್ತಿಸಿಕೊಂಡ. ದೊರೆಯ ಹಿಂದಿನ ಪೀಠದಲ್ಲಿ ಪಂಪ ಕುಳಿತ. ಒಡ್ಡೋಲಗದವರೆಗೂ ಹೊರಟರು. ಅಲ್ಲಿ ಪಟ್ಟದಾನೆಯಿಂದಿಳಿದು ಅರಮನೆಗೆ ಹೊಕ್ಕರು.

ಅಂದು ಸಂಜೆ ವಿಶೇಷ ರಾಜಸಭೆ. ಪಂಪನಿಗೆ ತುಂಬಿದ ಒಡ್ಡೋಲಗದಲ್ಲಿ ಸೇನಾನಾಯಕ ಸೂಚಕ ಸುವರ್ಣ ಖಡ್ಗವನ್ನು ಚಿನ್ನದ ಹರಿವಾಣದಲ್ಲಿರಿಸಿ ಕೊಡಲಾಯಿತು. ಸೇನಾನಿಯ ಹೊಸ ಉಡುಪಿನಲ್ಲಿ ಪಂಪ ಮಲ್ಲರ ಮಲ್ಲನಾಗಿ ಶೋಭಿಸಿದ. ಮಹಾರಾಜರ ಸಮೀಪದ ಉನ್ನತ ಪೀಠದಲ್ಲಿ ಹೋಗಿ ಕುಳಿತುಕೊಳ್ಳುವ ತನಕ ಒಂದೇ ಸಮನೆ ಹರ್ಷದ ಜಯಕಾರ ಮೊಳಗಿತು. ಅಲ್ಲಿಂದ ಪಂಪನಿಗೆ ಅರಮನೆಯ ಅಧಿಕಾರಿಗಳ ಹಿತೈಷಿಗಳ ಪರಿಚಯವಾಯಿತು. ಮನೆವರ್ಗಡೆಗಳೂ ದರ್ಬಾರು ಬಕ್ಷಿಗಳೂ ಮೊದಲು ಪರಿಚಯಿಸಿಕೊಂಡು ಹತ್ತಿರ ನಿಂತು ಉಳಿದವರ ಪರಿಚಯ ಮಾಡಿಕೊಟ್ಟರು. ಪ್ರಧಾನಮಂತ್ರಿ ಸಚಿವ ಮಂಡಲದ ಉಳಿದವರು, ಕೋಶಾಧ್ಯಕ್ಷರು, ಶಾಸನ ಸಂಚಾರಿ, ರಹಸ್ಯಾಧಿಕಾರಿ, ಭಾಣಸೆವೆರ್ಗಡೆ ಮತ್ತು ಇತರ ಉಗ್ರಾಣಿಕರು, ಪಾರುಪತ್ಯಗಾರರು, ಶ್ರೇಷ್ಠಿಗಳು, ಕವಿಗಮಕಿ ಪಂಡಿತರು, ಸಂಗೀತಗಾರರು, ನೃತ್ಯಪಟುಗಳು ಒಬ್ಬೊಬ್ಬರಾಗಿ ಬಂದು ನಮಸ್ಕರಿಸಿ ಹೋದರು. ಅವರಲ್ಲಿ ಕೆಲವರೆಲ್ಲ ಪರಿಚಯದ ಮುಖಗಳೇ. ಹಿಂದೆ ಬಂದಾಗ ಕಂಡು ಮಾತಾಡಿ ಆತ್ಮೀಯರಾಗಿದ್ದವರೂ ಇದ್ದರು.

ಪಂಪನಿಗೆ ಪ್ರತ್ಯೇಕ ಬಿಡಾರ ಗೊತ್ತುಮಾಡಲಾಗಿತ್ತು. ಅಲ್ಲಿ ಪಂಪನಿಗೆಂದೇ

ಉಡುಗೊರೆಯಾಗಿ ಕೊಟ್ಟ ಬೆಳ್ಳುದುರೆ ವಾಯುರಥ ಇತ್ತು. ಪಂಪ ಅದರ ಮೈ ನೇವರಿಸಿದ. ಒಡ್ಡೋಲಗದಿಂದ ಬರುತ್ತಿದ್ದಂತೆ ಸೈನ್ಯದ ಆನೆ, ಕುದುರೆ, ರಥ ಪದಾತಿಗಳ ವಿಭಾಗದ ನಾಯಕರೆಲ್ಲ ಭೆಟ್ಟಿಯಾದರು. ಅನಂತರ ಕಾರಬಾರಿಗಳು ಬಂದು ಅರಸರ ಸಂದೇಶವನ್ನು ಗೃಹ ಮಹತ್ತರರು ತಂದಿರುವುದಾಗಿ ತಿಳಿಸಿದರು. ಒಳಗೆ ಬರಮಾಡಿಕೊಂಡ. ಅವರಿಂದ ಉಳಿದ ಅಚ್ಚರಿಯ ಸಂಗತಿಗಳೆಲ್ಲ ತಿಳಿದುವು.

ಬೋದನದ ಗುರುಕುಲದಿಂದ ಪಂಪ ಪುಲಿಗೆರೆಯತ್ತ ಹೊರಟ ಮೇಲೆ ಚಾಲುಕ್ಯ ರಾಜ್ಯದಲ್ಲಿ ಎರಡು ಪ್ರಮುಖ ಘಟನೆಗಳು ನಡೆದಿದ್ದುವು. ಮೊದಲನೆಯದಾಗಿ ಸಾಮ್ರಾಜ್ಯದ ಸುಕ್ಷೇಮಕ್ಕಾಗಿ ರಾಜಧಾನಿಯನ್ನು ಮೇಮುಲವಾಡದಿಂದ ಬೋದನಕ್ಕೆ ಬದಲಾಯಿಸಲಿರುವುದು. ಎರಡನೆಯದು ಮಳಖೇಡದಿಂದ ಮುಮ್ಮಡಿ ಇಂದ್ರನ ಮಗಳು ರೇವಿಯಕ್ಕಳನ್ನು ಸ್ವಯಂವರ ಶಾಲೆಯಿಂದ ಅರಿಕೇಸರಿ ಅಪಹರಿಸಿಕೊಂಡು ಬಂದುದು. ಇದರಿಂದಾಗಿ ದೊರೆಗೆ ಪ್ರಿಯಗಳ್ಳನೆಂಬ ಬಿರುದು ಬಂದಿತ್ತು.

ಬೋದನ ಮತ್ತೆ ಚಾಲುಕ್ಯರ ಮುಖ್ಯ ನಗರವಾಗಲು ಮೂರು ತಿಂಗಳಲ್ಲಿ ಎಲ್ಲಾ ಸಿದ್ಧತೆ ನಡೆಯಿತು. ಸಾವಿರಾರು ಜನ ಕೆಲಸಗಾರರು ಹಗಲಿರುಳೂ ಬೋದನದ ವಿಶೇಷ ರಚನೆಯಲ್ಲಿ ನಿರತರಾದರು. ಚಾಲುಕ್ಯರ ವಶದಲ್ಲಿದ್ದ ನೂರಾರು ಯುದ್ಧ ಕೈದಿಗಳನ್ನೂ ಈ ಕಾರ್ಯದಲ್ಲಿ ತೊಡಗಿಸಿದ್ದರು. ವಾಸ್ತುಶಿಲ್ಪಿಗಳೂ ಬಡಗಿ ಕಮ್ಮಾರರೂ ಗಾರೆ ಕೆಲಸಗಾರರೂ ನೇಕಾರರೂ ನೆರವಾಗಿ ನಿಂತಿದ್ದರು. ಒಮ್ಮೆ ರಾಜಧಾನಿಯಾಗಿ ಚಾಲುಕ್ಯರ ಪ್ರಬಲ ಕೋಟೆ ಏರ್ಪಟ್ಟಿದುದರಿಂದ ಬೋದನ ಹೊಸ ನೋಟ ಪಡೆಯಲು ಹೆಚ್ಚುಕಾಲ ಬೇಕಾಗಲಿಲ್ಲ. ಕೋಟೆ ಎಲ್ಲಿಯೂ ಬಿರುಕು ಬಿಟ್ಟಿರಲಿಲ್ಲ. ಹೆಬ್ಬಾಗಿಲುಗಳು ಗಟ್ಟಿಯಾಗಿ ನಿಂತಿದ್ದುವು. ಸುತ್ತಲ ಅಗತೆ ಪಾಚಿಗಟ್ಟಿರಲಿಲ್ಲ. ಕೋಟೆ ಕೊತ್ತಳ ಬುರುಜುಗಳು ಪುನರ್ಜನ್ಮ ಪಡೆದವು. ಹೊಸಬಾಳಿಗೆ ವೇದಿಕೆ ಅಣಿಯಾಯಿತು.

ಶುಭವಾರ ಶುಭ ನಕ್ಷತ್ರ ತಿಥಿ ಮುಹೂರ್ತದಲ್ಲಿ ಅರಿಕೇಸರಿಯ ರಾಜಪರಿವಾರ ಬೋದನವನ್ನು ಪ್ರವೇಶಿಸಿತು. ಊರೆಲ್ಲ ಸಿಂಗರಗೊಂಡು ಕರೆಕೊಟ್ಟು ಬರಮಾಡಿಕೊಂಡಿತು. ಅಯ್ದೆಯರು ತಂಡೋಪತಂಡವಾಗಿ ನಿಂತು ಆರತಿಯೆತ್ತಿ ಹಾಡಿ ಕುಣಿದರು. ಪಟ್ಟದಾನೆ ತ್ರಿಭುವನಾಭರಣ ಹತ್ತಿ ಇಮ್ಮಡಿ ಅರಿಕೇಸರಿ ಅರಮನೆ ತ್ರಿಲೋಕ ಚೂಡಾಮಣಿಯ ಬಳಿ ಬಂದ. ಎಡದಲ್ಲಿ ಪಟ್ಟದ ಕುದುರೆ ತ್ರಿಭುವನ ತಿಲಕ ಇತ್ತು. ಬಲಬದಿಯಲ್ಲಿ ಪಟ್ಟದ ರಾಣಿ ರೇವಬ್ಬೆ ಇದ್ದಳು. ಪಟ್ಟದಾನೆಯ ಹಿಂದೆ ರಾಜಪರಿವಾರ, ಪರಿವಾರಕ್ಕೆ ಮೊದಲು ಮಲ್ಲಿಗೆಯ

ಮೈವೆತ್ತ ವಾಯುರಥ ಕುದುರೆ ಹತ್ತಿ ಪಂಪ ಕುಳಿತಿದ್ದ. ಆತನ ಹಿಂದೆ ಮಂತ್ರಿಮಂಡಲ ಇನ್ನೊಂದು ಬದಿಯಲ್ಲಿ ಸೂಳೆಯರು. ಅವರ ಹಿಂದೆ ಇತರ ದಾಸಿಯರು ನಟ್ಟನಡುವೆ ಪೆಂಡವಾಸದವರು.

ಅರಮನೆಯ ಮೂಡಲಿಗೆ ಸೇನಾಪತಿ ಪಂಪನ ಸೌಧ ಧವಳಗಿರಿ. ಅದರ ಕೂಗಳತೆಯಲ್ಲಿ ಪ್ರಧಾನಿಯ ಉಪ್ಪರಿಗೆ. ಪಂಪನಿಗೆ ವಸತಿ ಹಿಡಿಸಿತು. ಪುಲಿಗೆರೆಗೆ ಹೇಳಿಕಳಿಸಿದ. ಕುಟುಂಬದವರೆಲ್ಲ ಬಂದು ಸೇರುವುದಕ್ಕೆ ನಲವತ್ತು ದಿನಗಳು ಹಿಡಿದುವು. ಅವರೆಲ್ಲ ಹೊರಟು ಬರುವಾಗ ಜಿನಮಂದಿರಗಳಲ್ಲಿ ದರ್ಶನವನ್ನು ದಾರಿಯುದ್ದಕ್ಕೂ ಪಡೆದು ಬಂದರು. ಕೊಪಣಾಚಲ ಮಾನ್ಯಖೇಟಗಳಲ್ಲಿ ಎರಡೆರಡು ದಿವಸ ಇದ್ದು ಬಂದರು. ತಂದೆ, ತಾಯಿ ತಮ್ಮ, ಅತ್ತೆ, ಮಾವ, ಮಡದಿಯರಿಂದ ಧವಳಗಿರಿ ಸಡಗರಿಸಿತು. ಬಮ್ಮಲೆ ಜಕ್ಕಲೆಯರಿಗಂತೂ ಸೌಧ ಪ್ರಿಯವಾಯಿತು. ಬಮ್ಮಲೆಗೆ ಸೌಧದ ಹಿಂದೆ ಹೊಸದಾಗಿ ನಿರ್ಮಿಸಿದ್ದ ಈಜುವ ಕೊಳ ಮೆಚ್ಚುಗೆಯಾಯಿತು. ಜಕ್ಕಲೆಗೆ ಅದರ ಪಕ್ಕದ ಹೂದೋಟ ಇಷ್ಟವಾಯಿತು. ಹೂದೋಟದ ನಡುವೆ ಎರಡು ಮಾವಿನ ಮರಗಳು. ಪಂಪ ಮಾವಿನ ಮರಗಳನ್ನು ತೋರಿಸಿ ಹೇಳಿದ:

"ನಿಮಗಿಬ್ಬರಿಗೂ ಒಂದೊಂದು ಇಮ್ಮಾವು."

"ನಿಮಗೆ?"

"ನಾನು ಬೇರೆಯೇ ನೀವು ಬೇರೆಯೇ?"

"ಹೌದು."

"ಹೇಗೋ?"

"ನೀವು ಕವಿ, ನಾವು ಕಿವಿ ಎಂದು" ಬಮ್ಮಲೆ ಕಿಲಕಿಲನಾಡಿದಳು.

ತನ್ನ ಕಡೆಯವರೆಲ್ಲ ಬಂದು ಎರಡು ತಿಂಗಳಾಯಿತೆಂಬುದು ಪಂಪನಿಗೆ ತಿಳಿದದ್ದು ಮಡದಿಯರು ಹೇಳಿದಾಗಲೇ. ಕಾಲ ಪರಿವೆಯೇ ಇಲ್ಲದಂತೆ ಉರುಳತೊಡಗಿತ್ತು. ತಾನು ಬಾಲ್ಯದಲ್ಲಿ ವಟುವಾಗಿ ಕಲಿತ ಗುರುಕುಲ, ಅಡ್ಡಾಡಿದ ಅಕ್ಕರೆಯ ಸೊಗಸುದಾಣ, ಊರಿನ ಬಸದಿಗಳು ಎಲ್ಲಾ ತೋರಿಸಿಕೊಂಡು ಬಂದ. ಆಚಾರ್ಯ ದೇವೇಂದ್ರರ ಬಳಿಗೆ ಹಲವಾರು ಸಲ ಅವರುಗಳು ಹೋಗಿ ಬಂದರು. ಪಂಪ ತನ್ನ ತಂದೆ, ತಾಯಿ ಮತ್ತು ಅತ್ತೆ ಮಾವಂದಿರ ಪ್ರಯಾಣವನ್ನು ಬೇಡಿ ಬೇಡಿ ಹಲವು ಸಲ ಮುಂದೆ ಹಾಕಿದ. ಜಿನವಲ್ಲಭ ಮಾತ್ರ ಎಂಟು ಹತ್ತು ದಿವಸ ಇದ್ದವನೇ ಮತ್ತೆ ಬರುವುದಾಗಿ ಹೇಳಿ ಹೊರಟ.

ಕಡೆಗೆ ಅವರೆಲ್ಲ "ಊರುಕೇರಿ ಮನೆ ಮಠ ಬಿಟ್ಟು ಹತ್ತಿರ ಹತ್ತಿರ ಅಯ್ದು

ತಿಂಗಳಾಯಿತು. ಮಕ್ಕಳ ಹಾಗೂ ನೆರೆಹೊರೆಯವರ ಕಾಪನ್ನೇ ನಂಬಿ ಇನ್ನು ಉಳಿಯುವುದು ಸಾಧ್ಯವಿಲ್ಲ. ಪುನಃ ಪುನಃ ಬುರುವುದು ಇದ್ದೇ ಇದೆಯಲ್ಲ, ಇಲ್ಲಿಗೆ ಮುಗಿಯಿತೆ? ಇದು ಈಗಷ್ಟೇ ಮೊದಲಿಟ್ಟಿದೆ. ಇನ್ನು ಬದುಕಿನುದ್ದಕ್ಕೂ ಬರುವದು ಹೋಗುವುದು ನಿರಂತರ ನಡೆಯುತ್ತಿರುತ್ತದೆ. ಅಲ್ಲದೆ ಮನೆಯಲ್ಲಿ ಒಳ್ಳೆಯ ಕಾರ್ಯಗಳು ಇನ್ನು ಮುಂದೆ ಕುಡಿಯಿಡುತ್ತವೆ. ಅಂಥ ಮಂಗಳ ಕಾರ್ಯಗಳಲ್ಲಿ ಒಬ್ಬರಲ್ಲ ಒಬ್ಬರು ಬರಲೇಬೇಕಾಗುತ್ತದೆ"–ಎಂದು ಹೇಳಿ ಪ್ರಯಾಣ ಬೆಳೆಸಿದರು.

ರಾಜ್ಯದ ಆಗು ಹೋಗುಗಳಲ್ಲಿ ಹೆಚ್ಚಿನ ಬಿಕ್ಕಟ್ಟುಗಳು ತಲೆದೋರಿರದ ಕಾರಣ ಪಂಪನಿಗೆ ಸಾಕಷ್ಟು ವಿರಾಮ ದೊರೆಯುತ್ತಿತ್ತು. ದೊರೆಯೊಡನೆ ಕಾವ್ಯ ಬೇಟೆ ಕ್ರೀಡೆ ವಿನೋದಗಳಲ್ಲಿ ಪಾಲುಗೊಳ್ಳುತ್ತಿದ್ದ. ಉಳಿದ ಸಮಯದ ಹೆಚ್ಚಿನ ಪಾಲು ಮನೆಯಲ್ಲಿ ಕಳೆಯುತ್ತಿದ್ದ. ಮಡದಿಯರಿಬ್ಬರೂ ಗಂಡನ ರಸಿಕತೆಯಲ್ಲಿ ತೇಲಿಹೋದರು. ಬದುಕು ಹೂ ಎತ್ತಿದಂತೆನಿಸಿತು. ತಮ್ಮ ತವರೂರನ್ನೇ ಮರೆಯಿಸಿದ ಪತಿಯ ಒಲವಿನಲ್ಲಿ ಮಿಂಥರು.

ಒಬ್ಬರ ಉಸಿರಿನಲಿ ಮತ್ತೊಬ್ಬರು ಬೆರೆತ ದಂಪತಿಗಳಿಗೆ. ದಿನವೂ ಅನುರಾಗದ ಹೊಳೆಯಲ್ಲಿ ಜಲಕೇಳಿ, ನಿತ್ಯೋತ್ಸವ, ರತ್ಯೋತ್ಸವ, ಬಮ್ಮಲೆ ಜಕ್ಕಲೆಯರು ಜೋಳದ ತೆನೆಯಾಗಿ ತೂಗಿ, ಬಳ್ಳಿಯಾಗಿ ಬಳುಕಿ, ಪರಿಮಳವಾಗಿ ಸುಳಿದು ಬಾಳು ನಂದನವಾಗಿತ್ತು. ಒಬ್ಬರನ್ನೊಬ್ಬರು ವಿನೋದಕ್ಕೀಡು ಮಾಡುವರು, ಕೀಟಲೆ ಮಾಡುವರು. ಪಂಪನನ್ನು–

ಹುಲಿಮೀಸೆ ತೀಡುವ ಸರದಾರ
ಅಣ್ಣಿಗೆರೆಯ ರಸಿಕ
ಬೋದನದ ಹಮ್ಮೀರ
ಧವಳ ಗೃಹದ ಮದನಾವತಾರ

ಎಂದೆಲ್ಲ ಕರೆದು ಕಚಗುಳಿಯಿಡುತ್ತಿದ್ದರು. ಪಂಪ ಮಡದಿಯ ಕಣ್ ಬಾಣಗಳ ಏಟಿಗೆ ಸಿಕ್ಕು ರತಿಗೃಹದಲ್ಲಿ ಸೆರೆಯಾಗುತ್ತಿದ್ದ–

"ಇದು ಮನೆಯೆ?"

"ಮತ್ತೇನು ದೊರೆಯೆ?"

"ಆನಂದದ ಗುಡಿ, ದಾಂಪತ್ಯದ ದೇಗುಲ, ಮನ್ಮಥ ಜಿನಾಲಯ...."

"ನಿಜ ನಿಜ. ಈ ಗುಡಿಯಲ್ಲಿ ನಿತ್ಯ ಒಲವಿನ ಮಳೆ ಸುರಿಯಲಿ, ಅನುರಾಗದ ಆರತಿ ಬೆಳಗಲಿ."

"ಅಷ್ಟೇ ಸಾಲದು, ಹರ್ಷದ ಹೊನಲು ಹರಿಯಲಿ. ಅದರಲ್ಲಿ ನಾವೆಲ್ಲ ಕುಳಿತು ಈ ಸಂಸಾರ ನೌಕೆಯನ್ನು ಸುಗಮವಾಗಿ ತೇಲಿಸೋಣ."

"ಹೀಗೆ ಮಾತಿನಲ್ಲೇ ಕಾಲ ಕಳೆದರೆ ಊಟ ತಿಂಡಿಗೆ ಏನು ಗತಿ?"

"ದೇವರೇ ಗತಿ!"

"ಅಂದರೆ ನೀವೇ ನಮ್ಮ ಪಾಲಿನ ದೇವರು, ಈ ದೇವರೇ ನಮಗೆ ಗತಿ ಅಂತ ತಾನೆ!"

"ಬಮ್ಮಲೆ ನೀನು ಬಾಳ ಗೆಳತಿಯಾದರೆ ಜಕ್ಕಲೆ ಒಲವಿನೊಡತಿ. ನೀವಿಬ್ಬರೂ ಅಕ್ಕತಂಗಿಯರಾಗಿ ಹೀಗೆಯೇ ನಗೆಯ ನೆಲದಲ್ಲಿ ನಡೆದು ಬನ್ನಿ. ನಿಮ್ಮ ಜೀವನ ಸಂಗಾತಿಯಾದ ನನ್ನ ಹೃದಯದ ಎರಡು ಶ್ವಾಸಕೋಶದಂತಿರಿ....."

"ಇದನ್ನು ನೀವು ಹೊಸದಾಗಿ ನುಡಿಯಬೇಕೇನು? ನಮ್ಮ ಬಾಳಿಗೆ ನೀವೇ ಬಂಗಾರ, ನಮ್ಮ ಹಣೆಗೆ ನೀವೇ ಶೃಂಗಾರ. ಈ ಮನೆ ತುಂಬ ನೀವು ನಿಮ್ಮ ಪ್ರೀತಿಯ ಬೆಳದಿಂಗಳು ಚೆಲ್ಲಿದ್ದೀರಿ..."

ಪಂಪ ಬೆಳ್ಳಿ ತಟ್ಟೆ ತುಂಬಾ ಇದ್ದ ಮಾವಿನ ಹಣ್ಣನ್ನೂ, ಪಕ್ಕದಲ್ಲಿ ಬಾಳೆಲೆಯ ಮೇಲೆ ಇರಿಸಿದ ಮಲ್ಲಿಗೆ ದಂಡೆಯನ್ನೂ ಹತ್ತಿರ ಎಳದುಕೊಂಡು ಇಬ್ಬರಿಗೂ ಹಣ್ಣುಕೊಟ್ಟು, ಮುಡಿಗೆ ಮಲ್ಲಿಗೆ ಮುಡಿಸಿ ನುಡಿದ—

"ನೀವಿಬ್ಬರೂ ನನಗೆ ಈ ಮಾವು ಮಲ್ಲಿಗೆ ಇದ್ದಂತೆ."

"ಸರಿ ಇನ್ನು ಮಲಗುವ ಸಮಯ ತಾನೆ?" ಹಾಲು ಕುಡಿಯುತ್ತಾ ಜಕ್ಕಲೆ ಕೇಳಿದಳು. ಅದಕ್ಕೆ ಬಮ್ಮಲೆ ನಗುತ್ತಾ—

"ಅಲ್ಲಲ್ಲ, ಇದು ಕವಿಗಳು ಅಂತಃಪುರದೊಳಗೆ ಐಕ್ಯವಾಗುವ ಸಮಯ, ಕವಿಸಮಯ ಎನ್ನುವುದು ಇದನ್ನೇ!"

ಮೂವರ ಮುಖಗಳೂ ಮಂದಸ್ಮಿತದ ಶೂಚಿಯಿಂದ ಆಕರ್ಷಕವಾದವು. ಇರುಳು ಮುಗಿದು ಬೆಳಕು ತುಳುಕಿತು. ಬೆಳಗ್ಗೆ ಮನೆ ಚಟುವಟಿಕೆಯಿಂದ ಮಾತಾಡುತ್ತಿದೆ. ಪಂಪ ಇನ್ನೂ ಎದ್ದಿರಲಿಲ್ಲ. ಹೊಗೆಯಾಡುವ ಬಾದಾಮಿ ಹಾಲು ಹಿಡಿದು ಬಂದ ಬಮ್ಮಲೆ ಗಂಡನನ್ನು ಏಳಿಸಿದಳು—

"ರವಿ ಉದಯಿಸಿದ್ದಾಯಿತು, ಕವಿ ಇನ್ನೂ ಉದಯಿಸಿಲ್ಲವಲ್ಲಾ."

"ತೃಣಮಪಿ ವಿನ ಚಲತಿ ತೇನ ಏನಾ" ಎಂದು ಹೆಂಡತಿಗೆ ಒಲವಿನುಡುಗೊರೆ ಕೊಟ್ಟ. ಅಷ್ಟು ಹೊತ್ತಿಗೆ ಜಕ್ಕಲೆಯೂ ಬಂದಳು.

"ಜಕ್ಕಲೆ ನೀವು ಬಂದು ಸೇರಿದ ಮೇಲೆ ಧವಳಗಿರಿ ಜೀವ ತಳೆದಿದೆ."

"ಅದೇಕೋ? ನಾವು ಬರುವ ಮೊದಲು ಇದೇನು ಮನೆಯಾಗಿರಲಿಲ್ಲವೆ?"

"ನೀವು ಬಂದ ಮೇಲೆಯೇ ಈ ಧವಳಗಿರಿ ಮನೆ ಎನ್ನಿಸಿಕೊಂಡಿರುವುದು."

"ಅದಕ್ಕೂ ಮೊದಲು ಈ ಮನೆ ಏನಾಗಿತ್ತು?"

"ಸುಮ್ಮನೆ ಇತ್ತು, ಗೃಹಲಕ್ಷ್ಮೀ ಇರದ ಮನೆ ಗ್ರಹ ಹಿಡಿದಂತೆ."

"ಅಂತೂ ನಮ್ಮನ್ನು ಹೊಗಳಿ ಹೊಗಳಿ..."

"ಹೊನ್ನ ಶೂಲಕ್ಕೇರಿಸುತ್ತೇನೇನು?"

"ಜಿನಜಿನಾ, ಎಂದಿಗೂ ಇಲ್ಲ. ಕಾವರೆ ಕಣೆ ಕೊಳ್ವರೆ?"

"ಒಮ್ಮೊಮ್ಮೆ ನೀನು ಆಡುವುದು ಮಾತೆ?"

"ಮತ್ತೇನು?"

"ಎದೆ ಮಿಡಿವ ಗೀತೆ"

"ಸಾಕು. ಮತ್ತೆ ಹೊಗಳಿಕೆ!"

"ಮತ್ತೆ ಹೊಗಳಿ ಏನು ಮಾಡಿದೆನಪ್ಪಾ?"

"ಅಟ್ಟಕ್ಕೆ ಹತ್ತಿಸುತ್ತೀರಿ."

"ಅಷ್ಟೆ ತಾನೆ. ಹಾಗಾದರೆ ಚಿಂತೆಯಿಲ್ಲ."

"ಅದೇಕೊ?" ಬಮ್ಮಲೆ ಕೇಳಿದಳು.

"ನಾನು ನಿಮ್ಮೊಡನೆ ಅಟ್ಟ ಹತ್ತುತ್ತೇನೆ. ಅಲ್ಲೇ ಬೆಚ್ಚಗೆ ಸಂಸಾರ ನಡೆಸಿದರಾಯಿತು."

"ಆದರೆ ನಿಮ್ಮ ಮನೆಯಲ್ಲಿ..."

"ಏನೆಂದೆ?"

"ಅಲ್ಲಲ್ಲ. ನಮ್ಮ ಮನೆಯಲ್ಲಿ, ಅಟ್ಟವೇ ಇಲ್ಲವಲ್ಲಾ!"

"ಇಲ್ಲವಾದರೇನು? ಅದಕ್ಕೂ ಗಟ್ಟಿಮುಟ್ಟಾದ ಮಹಡಿಯಿಲ್ಲವೆ?"

"ಶಿಖರವೂ ಇದೆಯಲ್ಲಾ."

"ಶಿಖರ ಕೋಡು ಇರುವುದಕ್ಕೇ ಇದೇನು ಬೆಟ್ಟವೆ?"

"ಕಟಕಿಸುವೆಯಾ."

"ಇಲ್ಲ ಒಡೆಯಾ, ಇರುವುದನ್ನೇ ಹೇಳಿದೆ. ಇಲ್ಲೆಲ್ಲ ಧವಳಮಯ ಜಗತ್ತು ತಾನೇ."

"ಹಾಗೆಂದರೆ?"

"ಮನೆ ಧವಳಗಿರಿ. ಮಯೊಳಗಿನ ಕೊಳ ಧವಳ ಸರಸ್ಸು. ನಿಮ್ಮ ಆ ನೆಚ್ಚಿನ ಆನೆ ಧವಳ ಗಜೇಂದ್ರ. ನೀವು ನಿಮ್ಮ ದೊರೆಯೊಡನೆ ಹೋಗುವಾಗ ಬರುವಾಗ ಧವಳ ಮಂಗಳ ಗೇಯ."

"ಅದು ಸರಿ ತಾನೇ? ನನ್ನ ಆರಾಧ್ಯ ದೇವತೆ ಶ್ವೇತಪದ್ಮಾಸನೆ. ಶಬ್ದದ್ರವ್ಯದ ವರ್ಣ ಕೂಡ ಶ್ವೇತ. ಅಲ್ಲದೆ ನನ್ನ ಪ್ರೀತಿಯ ಅವಳಿ ಅಚ್ಚರಸಿಯರೂ."

"ಹೋ ಹೋ ನಿಲ್ಲಿಸಿ. ಅವರು ಯಾರೋ ಆ ಧವಳೆಯರು?"

"ಧವಳೆಯರಲ್ಲ ಧವಳಕನ್ನೆಯರು."

"ಧವಳಕನ್ನೆಯರೆ ಆಗಲಿ, ಯಾರವರು."

"ಯಾರೇನು ನೀವೆ." ನಗೆ ಕೂಡ ಧವಳವಾಗಿ ಮನೆ ತುಂಬಿತು. ನಿತ್ಯ ಹೀಗೆ ಹರ್ಷದ ಹೊನಲು ಪಂಪನ ಕುಟುಂಬವನ್ನು ತೋಯಿಸುತ್ತಿತ್ತು ಮೀಯಿಸುತ್ತಿತ್ತು.

ತನ್ನ ರುಚಿ ಅಭಿರುಚಿಗಳನ್ನು ಇಷ್ಟಾನಿಷ್ಟಗಳನ್ನು ಅರಿತು ಓಲೈಸುವ ಇಂಗಿತಜ್ಞ ಮನದನ್ನೆಯರು ದೊರೆತುದಕ್ಕೆ ಪಂಪ ತಾನು ಅದೃಷ್ಟಶಾಲಿ ಎಂದುಕೊಂಡ. ತನ್ನಂತೆ ಅವರು ಕಾವ್ಯಾಭ್ಯಾಸ ನಿರತರಾಗುತ್ತಿದ್ದುದನ್ನೂ ಗಮನಿಸಿದ. ಬಿಡುವಿನ ವೇಳೆಯಲ್ಲಿ ತಾನೇ ಅವರಿಗೆ ಹಳೆಯ ಕಾವ್ಯಶಾಸ್ತ್ರ ಪುರಾಣಗಳನ್ನು ಓದಿ ಹಾಡಿ ಅರ್ಥೈಸುತ್ತಿದ್ದ. ತನ್ನ ಕೆಲವು ರಚನೆಗಳನ್ನು ಹಾಡಿಸಿ ನಲಿಯುತ್ತಿದ್ದ. ಒಬ್ಬರಿಗಿಂತ ಒಬ್ಬರು ಇಂಪಾಗಿ ಹಾಡುತ್ತಿದ್ದರು.

"ಏನು ಪ್ರಭು ನಿಮ್ಮ ಹಾಡುಗಳೆಲ್ಲ ಪ್ರಣಯ ಗೀತೆಗಳೇ ಆಗಿವೆ"

"ಹೌದು ಅವೆಲ್ಲ ನೀವಿಬ್ಬರೂ ಮಿಡಿದ ಒಲವಿನ ಹಾಡುಗಳು."

ಹೃದಯ ತುಂಬಿ ಬರುವಂತೆ ವೀಣೆ ನುಡಿಸುತ್ತಿದ್ದರು. ಮನಸ್ಸು ಕುಣಿದಂತೆ ನರ್ತಿಸುತ್ತಿದ್ದರು. ಇನಿದಾಗಿ ಹಾಡಿ ರಮಿಸುತ್ತಿದ್ದರು.

ಪಂಪನಿಗೆ ಸಂಸಾರ ಎಂದೂ ಸಾಕೆನಿಸಲಿಲ್ಲ. ಸವಿದಷ್ಟೂ ಮುಗಿಯದ ಸಮಯದ ಸಕ್ಕರೆಗಡ್ಡಿಯಾಗಿತ್ತು. ಸಂಸ್ಕಾರಗೊಂಡ ಚೇತನಗಳೆರಡು ಜೋಡಿ ರೆಕ್ಕೆಗಳಾಗಿ ತನ್ನ ಹೃದಯ ಪಕ್ಷಿಗೆ ಆತುಗೊಂಡಂತೆ ಅನ್ನಿಸಿತು. ದಾಂಪತ್ಯಕ್ಕೆ ಹೊಸ ಹೊಸ ಅರ್ಥ ಆಕರ್ಷಣೆ ಅನುಭವಕ್ಕೆ ಬಂತು. 'ಹೆಣ್ಣು ಮೈ ನೆರೆದುಬಂದರೆ ಸಾಲದು. ಅವಳು ಮನ ನೆರೆದೂ ಬರಬೇಕು. ಆಗಲೇ ಆಕೆ ಮನೆ ತುಂಬುವುದರ ಜೊತೆಗೆ ಮನವನ್ನೂ ತುಂಬುತ್ತಾಳೆ. ಅದರಂತೆ ಬದುಕು ಇನಿದಾದ ಹಾಲುಗಡಲಾಗುತ್ತದೆ' ಎಂದು ಮನವರಿಕೆಯಾಯಿತು.

ಅರಮನೆಯೂ ಪಂಪನಿಗೆ ಅನುಭವಕೋಶ ವಿಸ್ತರಿಸಿತು. ಎಲ್ಲಾ ಕಡೆ ಅವನಿಗೆ ಸಹಕಾರ ದೊರೆಯಿತು. ವಿದ್ವನ್ಮಂಡಲಿಯಲ್ಲಿ ಬಹುವಾಗಿ ಬೆರೆತು ಅವರ ಚರ್ಚೆಯಲ್ಲಿ ಪಾಲುಗೊಳ್ಳುತ್ತಿದ್ದ. ಪಂಪನ ಪಾಂಡಿತ್ಯವನ್ನು ಕೇಳಿದ್ದ ವಿದ್ವಾಂಸರು ಅದರ ನಿಕಟ ಪರಿಚಯವಾದಷ್ಟೂ ಬೆರಗುಗಣ್ಣರಾದರು. ಪಂಪನ

ಸಾಹಿತ್ಯಜ್ಞಾನದ ಆಳ ಹರಹು ತಿಳಿದು ತುಂಬಾ ಗೌರವ ತಳೆದರು. ಪಂಪ ಸೇನಾನಿ ಆದುದರ ಕಾರಣ ಅವರಿಗೆ ತಿಳಿಯಲಿಲ್ಲ. ಸೂರಿಗಳ ಸಾಲಿನಲ್ಲಿ ಮೊದಲಿಗನಾಗಿ ಒಡ್ಡೋಲಗದಲ್ಲಿ ಕುಳ್ಳಿರಬೇಕಾದವನು ಸೇನಾನಿಯಾಗಿ ಕುಳಿತುದು ಏನು ವಿಡಂಬನೆಯೆ? – ಎಂದು ಚಕಿತಗೊಂಡರು.

ಸೈನ್ಯದಲ್ಲೂ ಪಂಪನಿಗೆ ಭಯಮಿಶ್ರಿತ ಗೌರವದ ಜೊತೆಗೆ ಆತ್ಮೀಯ ಪುರಸ್ಕಾರ ದೊರೆಯಿತು. ತಮ್ಮ ನಾಯಕ ಮಹಾಜ್ಞಾನಿಯೆಂಬುದು ಅವರಿಗೆಲ್ಲ ಹೆಮ್ಮೆಯಾಗಿತ್ತು. ಮೈ ಬೆಳೆಸಿಕೊಂಡು ತಲೆ ಖಾಲಿಯಾದ ಕೊಬ್ಬಿದೊಡಲಿನ ಸೇನಾನಿಗಳಿಗಿಂತ ಪಂಪನದು ಭಿನ್ನವೂ ವಿಶಿಷ್ಟವೂ ಆದ ವ್ಯಕ್ತಿತ್ವ ಪಡೆದಿತ್ತು. ನಿತ್ಯ ಬೆಳಗಿನ ಜಾವವೇ ಎದ್ದು ಭಟರ ಅಭ್ಯಾಸಕಣವನ್ನು ನೋಡಿ ಬರುತ್ತಿದ್ದ. ಮುಂಚೂಣಿಯವರ ಕವಾಯಿತನ್ನು ವೀಕ್ಷಿಸುವುದಲ್ಲದೇ ಸಾಕ್ಷಾತ್ತಾಗಿ ಮಲ್ಲರಿಗೆ ವರಿಸೆಗಳನ್ನೂ ತೋರಿಸಿ ಬರುತ್ತಿದ್ದ. ಆಯುಧ ಹಿಡಿಯುವಲ್ಲಿ ಎಲ್ಲಿ ಯಾರು ಎಡವಿದರೂ ಒಡನೆ ತೋಡಿಸಿ ತಿದ್ದುತ್ತಿದ್ದ.

ಗುರಾಣಿ ಕತ್ತಿ ಬಿಲ್ಲು ಬಾಣ ಕೊಂತ ಕಕ್ಕಡೆಗಳನ್ನು ಬಳಸುವ, ಎದುರಾಳಿಯ ಹೊಡೆತಗಳಿಂದ ತಪ್ಪಿಸಿಕೊಳ್ಳುವ ವಿಧಾನಗಳ ಸೂಕ್ಷ್ಮಗಳನ್ನು ಪಂಪ ತಾನೇ ವಿವರಿಸುತ್ತಿದ್ದ. ತನಗೆ ತಿಳಿಯದ ಎಷ್ಟೋ ಬಗೆಗಳನ್ನು ಮೈಯೆಲ್ಲಾ ಕಣ್ಣಾಗಿ ನೋಡಿ ಕಲಿಯುತ್ತಿದ್ದ. ಆನೆಲಾಯ ಕುದುರೆಲಾಯ ರಥಗಳ ಕಣಗಳನ್ನೂ ಪರಿಶೀಲಿಸುತ್ತಿದ್ದ. ಮದದಂತಿಗಳನ್ನು ಪಳಗಿಸುವ, ಒರಟು ಕುದುರೆಗಳನ್ನು ಹತೋಟಿಗೊಳಿಸುವ, ಏಟು ತಿಂದ ಪ್ರಾಣಿಗಳನ್ನು ಔಷಧೋಪಚಾರ ಮಾಡುವ ಕ್ರಮಗಳನ್ನೆಲ್ಲ ಗಮನಿಸುತ್ತಿದ್ದ. ರಥದ ಗಾಲಿಗಳು ಹೇಗಿರಬೇಕು, ಪ್ರಯಾಣದ ರಥಗಳ ಹಾಗೂ ಯುದ್ಧಕಾಲದಲ್ಲಿ ಬಳಸುವ ರಥಗಳ ರಚನೆ ಹೇಗಿರಬೇಕೆಂಬುದನ್ನು ತಿಳಿದು ಪರೀಕ್ಷಿಸುತ್ತಿದ್ದ.

ಅರಮನೆಯಲ್ಲಿ ಅರಿಗ ದೊರೆ ತನಗಿರುವ ಎಲ್ಲಾ ಸೌಲಭ್ಯ ಮರ್ಯಾದೆಗಳನ್ನು ಬಹುಮಟ್ಟಿಗೆ ಪಂಪನಿಗೂ ಸಲ್ಲುವಂತೆ ವ್ಯವಸ್ಥೆ ಮಾಡಿದ್ದ. ಎಲ್ಲಾ ಕಾಲದಲ್ಲೂ ಎಲ್ಲೆಡೆಗೂ ಪಂಪನಿಗೆ ಪ್ರವೇಶವಿತ್ತು. ಬೋದನದ ಮತ್ತು ರಾಜ್ಯದ ಜನತೆಯ ನೋವು ನಲಿವುಗಳನ್ನೂ, ದೇಶದ ಪರಿಸ್ಥಿತಿಯನ್ನೂ ಬೇಹುಗಾರರಿಂದ ಅರಿಯುತ್ತಿದ್ದರು. ಅದನ್ನು ಪರೀಕ್ಷಿಸುವ ಸಲುವಾಗಿ ಪಂಪ ಅರಿಕೇಸರಿ ಆಗಾಗ್ಗೆ ರಾಜ್ಯದ ಗಡಿನಾಡಿನ ನಗರಗಳಿಗೆ ಹೋಗಿಬರುತ್ತಿದ್ದರು. ಒಮ್ಮೊಮ್ಮೆ ಇಬ್ಬರೂ ಸನ್ಯಾಸಿಗಳಂತೆ, ತಿರುಪೆಯವರಂತೆ, ಹಾವಾಡಿಗರಂತೆ, ಜ್ಯೋತಿಷಿಗಳಂತೆ ಮಾರುವೇಷದಲ್ಲಿ ಸುತ್ತಿ ಸುದ್ದಿ ಸಂಗ್ರಹಿಸುತ್ತಿದ್ದರು.

ಎಲ್ಲಕ್ಕೂ ಮಿಗಿಲಾಗಿ ಪಂಪನಿಗೆ ಸಂದ ಗೌರವವೆಂದರೆ ಪೆಂಡವಾಸದಲ್ಲಿರುವಾಗ ಕೂಡ ಪಂಪನನ್ನು ಅರಿಗದೊರೆ ಬರಮಾಡಿಕೊಳ್ಳುತ್ತಿದ್ದುದು . ಪಂಪ ಅರಿಗರ ಕೆಳೆತನ ನಾಡಿನ ಪಡೆಮಾತಾಗಿತ್ತು. ಆದರ್ಶ ಗೆಳೆತನಕ್ಕೆ ಅವರದು ಇನ್ನೊಂದು ಹೆಸರಾಗಿತ್ತು. ರಾಜನಿಗೆ ಸಲ್ಲುವ ಎಲ್ಲಾ ಗೌರವ ಸನ್ಮಾನ ಸಂತೋಷ ಸಮಾರಂಭಗಳಲ್ಲೂ ಪಂಪ ಇದ್ದೇ ತೀರಬೇಕಿತ್ತು. ಪಂಪ ಪ್ರಭುವಿನ ಅವಿಭಾಜ್ಯ ಅಂಗವಾಗಿದ್ದ. ಅಂತಃಪುರದಲ್ಲೇ ದೊರೆಯೊಡನೆ ಕುಳಿತು ನೆತ್ತವಾಟ ಆಡುತ್ತಿದ್ದುದೂ ಸಾಮಾನ್ಯವಾಗತೊಡಗಿತು. ಎಷ್ಟೋ ಸಲ ಪಟ್ಟಿ ಮಹಿಷಿ ರೇವಬ್ಬೆ ಕೂಡ ಅವರೊಡನೆ ಆಟದಲ್ಲಿ ತೊಡಗುತ್ತಿದ್ದಳು.

ಪಂಪನಲ್ಲಿ ರೇವಬ್ಬೆಗೆ ತುಂಬಾ ಸಲುಗೆ ತಳೆಯಲು ಹಲವು ಕಾರಣಗಳಿದ್ದುವು. ಪ್ರಭುಗಳ ಅಚ್ಚುಮೆಚ್ಚಿನ ನೇಹಿಗ ಪಂಪನೆಂಬುದಲ್ಲದೆ ಆತನಿಗೆ ಅಂತಃಪುರದಲ್ಲಿ ಪ್ರವೇಶ ಕೊಟ್ಟುದೇ ವಿಶ್ವಾಸದ ಪರಮಾವಧಿಗೆ ಸಾಕ್ಷಿಯಾಗಿತ್ತು. ಅರಿಗ ತನ್ನೊಡನೆ ರಾಣಿಯೆದುರೇ ಕುಳಿತು ಪಂಪನ ಜೊತೆಯಲ್ಲಿ ನೆತ್ತವಾಡುತ್ತಿದ್ದ. ಅನೇಕ ಸಲ ಸೋಲು ಗೆಲುವುಗಳ ಸಾಕ್ಷಿಯಗಿ ಮಹಾರಾಣಿಯನ್ನೇ ಪಕ್ಕದಲ್ಲಿ ದೊರೆ ಕುಡಿಸುತ್ತಿದ್ದ. ಅರಸನಿಗೆ ಕಾರ್ಯಗೌರವ ನಿಮಿತ್ತ ಆಟದ ನಡುವೆ ಎದ್ದು ಹೋಗಬೇಕಾದರೆ ತನ್ನ ಆಟವನ್ನು ಮುಂದುವರಿಸಿ ಆಡುವಂತೆ ಮಹಾರಾಣಿಗೇ ವಹಿಸಿ ಹೋಗುತ್ತಿದ್ದ. ಮೊದಲಲ್ಲಿ ಇದು ಸಂಕೋಚಕ್ಕೆ ಕಾರಣವಾದರೂ ಕ್ರಮೇಣ ಪಂಪನ ಘನತೆಯನ್ನು ದೊರೆಯಂತೆ ರಾಣಿಯೂ ಮನಗಂಡಳು.

ರೇವಬ್ಬೆಗೆ ರಾಜ್ಯದ ಜನತೆಯೆಲ್ಲ ಮಮತೆಯಿಂದ ಕರೆಯುವ ಹೆಸರು ಲೋಕಾಂಬಿಕೆ. ಈ ಹೊಸ ಹೆಸರು ಕೊಟ್ಟವನು ಪಂಪ. ಪಟ್ಟ ಮಹಿಷಿಯಾದ ಮೇಲೆ ಆಕೆಗೆ ಬೇರೆ ಹೆಸರಿಡಬೇಕೆಂದು ಅರಿಕೇಸರಿ ಆಲೋಚಿಸಿದ. ಅದಕ್ಕೆ ಮುಖ್ಯ ಕಾರಣ ರೇವಿಕಾ ಎಂಬ ತೌರ ಹೆಸರಿಂದ ಕರೆಯುವಾಗಲೆಲ್ಲಾ ಆಕೆಯ ತವರಿನ ಕಡೆಯಿಂದ ತನಗೆ ಆದ ಅನ್ಯಾಯ ನೆನಪಾಗಿತ್ತು. ಅದನ್ನು ಮರೆಯುವ ಸಲುವಾಗಿಯೂ ಸಂಪ್ರದಾಯಕ್ಕೆ ಅನುಗುಣವಾಗಿಯೂ ಮಹಾರಾಣಿಗೆ ಬೇರೆ ಹೆಸರೊಂದನ್ನು ಸೂಚಿಸುವಂತೆ ಪಂಪನನ್ನು ಅರಿಗ ಕೇಳಿಕೊಂಡಿದ್ದ. ಅದರಂತೆ ಪಂಪ ತುಂಬಾ ಯೋಚಿಸಿ ಲೋಕಾಂಬಿಕೆ ಎಂಬ ಹೆಸರನ್ನು ಸೂಚಿಸಿದ್ದ. "ಮಹಾರಾಣಿಯಾದವಳು ಪ್ರಜೆಗಳಿಗೆಲ್ಲಾ ತಾಯಿ. ತಾಯಿ ಎಂಬುದಕ್ಕೆ ಕನ್ನಡದ ಮಾತಾದ ಅಬ್ಬೆ ಎಂಬುದು ರೇವಬ್ಬೆ ಎಂಬುದರಲ್ಲಿ ಈಗಾಗಲೇ ಇರುವುದರಿಂದ ಅದು ಬೇಡ. ಸಂಸ್ಕೃತದಲ್ಲಿ ಈ ಅರ್ಥದಲ್ಲಿ ಅಂಬಿಕೆಗೆ ಲೋಕಮಾತೆಯೆಂದು

ಪರಿಗಣಿತಳಾದ ಪಾವರ್ತಿ ಎಂಬರ್ಥವೂ ಇದೆ. ರಾಜಾ ಪ್ರತ್ಯಕ್ಷಾ ದೇವತಾ. ಆದುದರಿಂದ ನೀವು ಈ ನಾಡಿನ ದೇವರಾದರೆ, ರಾಣಿ ದೇವತೆ. ಕನ್ನಡ ಲೋಕಕ್ಕೆ ಇನ್ನು ಮುಂದೆ ಆಕೆ ಲೋಕಾಂಬಿಕೆ."

ರೇವಬ್ಬೆ ಲೋಕಾಂಬಿಕೆಯಾದಳು. ಜನಜನಿತವಾದ ಈ ಹೆಸರೂ ರಾಣಿಗೂ ಪ್ರಿಯವಾಯಿತು. ಪಂಪ ರಾಣಿಯನ್ನು ತಾಯಾಗಿ ತಂಗಿಯಾಗಿ ಗೌರವಿಸುತ್ತಿದ್ದ. ಅಂಬಿಕೆ ಎಂದೇ ಆತ ಕರೆಯುತ್ತಿದ್ದುದು. ಅಂಬಿಕೆಗೆ ಪಂಪನನ್ನು ಆತ್ಮೀಯತೆಯಿಂದ ಕಾಣಲು ಮತ್ತೊಂದು ಕಾರಣವಿತ್ತು. ಆಕೆಗೆ ಒಡ ಹುಟ್ಟಿದ ಇಮ್ಮಡಿ ಅಮೋಘ ವರ್ಷನನ್ನೇ ಹೋತಿದ್ದ ಪಂಪ ಅಣ್ಣನ ನೆನಪನ್ನೇ ತರುತ್ತಿದ್ದ. ಈ ಸಂಗತಿ ಅರಿಕೇಸರಿಗೂ ಪಂಪನಿಗೂ ಗೊತ್ತಿತ್ತು. ಪಂಪನನ್ನು ಪೆಂಡವಾಸಕ್ಕೆ ಬರವಮಾಡಿಕೊಂಡಾಗಲೆಲ್ಲ ಅರಿಗ ಮೊದಲು ಹೇಳುತ್ತಿದ್ದುದು "ಮಹಾರಾಣಿಯವರೇ, ನೋಡಿ ನಿಮ್ಮ ಅಣ್ಣನವರು ಬಂದಿದ್ದಾರೆ" ಎಂದು. ಒಂದೇ ಬಳ್ಳಿಯ ಮೂರು ಹೂಗಳಂತೆ ಪಂಪ ಅರಿಗ ಲೋಕಾಂಬಿಕೆ ಕಾಣಿಸಿದರು.

ಈ ನಡುವೆ ಒಮ್ಮೆ ನಡೆದ ಪ್ರಸಂಗ ಇವರೆಲ್ಲರ ಆತ್ಮೀಯತೆಯನ್ನು ಹೆಚ್ಚು ಬೆಸೆಯಿತು. ಮೂವರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಳ್ಳುವ ಆ ಸಂದರ್ಭ ಸಹಕಾರಿಯಾಯಿತು. ಆದರೂ ಪಂಪನಿಗೆ ಆ ಸನ್ನಿವೇಶ ನೆನಪಿಸಿಕೊಂಡಾಗಲೆಲ್ಲಾ ಮೈ ಝುಮ್ಮೆನ್ನುತ್ತಿತ್ತು.

# ೧೪

ಅಂದು ಮಧ್ಯಾಹ್ನ ಅರಿಗ ಪಂಪ ಪಗಡೆಗೆ ಕುಳಿತಿದ್ದಾರೆ. ಆಟ ಅರ್ಧ ನಡೆದಿದ್ದಾಗ ಅರಿಗ ದೊರೆಯನ್ನ ಅತ್ಯವಸರದಲ್ಲಿ ಕಾಣಲು ಪ್ರಧಾನಿ ಬಂದಾಗ ನೆತ್ತರಾಟವನ್ನು ಮುಂದುವರಿಸಲು ಮಹಾರಾಣಿಗೆ ತಿಳಿಸಿ ಅಂತಃಪುರದಿಂದ ಮಂತ್ರಶಾಲೆಗೆ ನಡೆದ.

ಇತ್ತ ಒಮ್ಮೆ ಪಂಪ, ಒಮ್ಮೆ ಲೋಕಾಂಬಿಕೆ ಗೆಲ್ಲುತ್ತ ನಡೆದು ಆಟ ರಂಗೇರಿತು. ಪಂಪ ಪಣವಿಟ್ಟು ಆಡುವುದು ಬೇಡವೆಂದರೂ ಕೇಳದೆ ರಾಣಿ ತನ್ನ ಮುತ್ತಿನ ಸರವನ್ನು ಪಣವಾಗೊಡ್ಡಿದ್ದಳು. ಪಂಪ ತನ್ನ ಕುತ್ತಿಗೆಯ ಹೊಸ ಮಣಿ ಸರವನ್ನೇ ಪ್ರತಿಯಾಗಿ ಪಣವೆಂದ. ದಾಳಗಳನ್ನು ಉರುಳಿಸಿ ಕಾಯಿಗಳನ್ನು ಮನೆಯಿಂದ ಮನೆಗೆ ನಡೆಸುತ್ತಿದ್ದಂತೆ ಆಟ ಕಾವೇರಿತು. ಒಮ್ಮೆ ಲೋಕಾಂಬಿಕೆ ಗೆಲ್ಲುವಂತೆ ತೋರಿದರೆ ಇನ್ನೊಮ್ಮೆ ಪಂಪ ವಿಜಯಿಯಾಗುವಂತೆ ಕಾಣುತ್ತಿತ್ತು. ಕಡೆಕಡೆಗೆ ಆಟದ ಉರುಬಿನಲ್ಲಿ ಅವರಿಬ್ಬರು ಎಲ್ಲಿರುವರೆಂಬುದನ್ನೇ ಮರೆತರು. ದಾಳಗನ್ನು ಅಂಗೈಗಳಲ್ಲಿ ಮಸೆದವನೇ ಪಂಪ ಬೀಸಿ ಉರುಳಿಸಿದ. ಅವನು ಗೆಲ್ಲಲು ಬೇಕಾದ ಒಂಭತ್ತರ ಬೆಸ ಸಂಖ್ಯೆ ಬಿತ್ತು. ಕಾಯಿ ಹಣ್ಣಾಯಿತು. ಪಂಪ ಗೆದ್ದ. ವಿಜಯೋನ್ಮಾದದಲ್ಲಿ ಪಂಪ "ಅಂಬಿಕೆ ಕೊಡು ನನ್ನ ಪಣದ ಮುತ್ತಿರ ಹಾರ" ಎಂದವನೇ ಲೋಕಾಂಬಿಕೆಯ ಕುತ್ತಿಗೆಗೆ ಕೈಹಾಕಿ ಹಾರ ಎಳೆದ. ಎಳೆದ ಬಿರುಸಿಗೆ ಹಾರ ಕಿತ್ತು ಬಂದು ಅಯ್ದು ಎಳೆಗಳಿಗೂ ಏರಿಸಿದ್ದ ಮುತ್ತುಗಳು ಅಂತಃಪುರದ ನೆಲಗಟ್ಟಿನ ಮೇಲೆ ಚೆಲ್ಲಾಡಿದವು.

ಪಂಪನಿಗೆ ಮರುಕ್ಷಣವೇ ತಾನೆಸಗಿದ ಅಚಾತುರ್ಯದ ಅರಿವಾಯಿತು. ಅಂಬಿಕೆ ನಾಡಿನ ಒಡತಿ, ಮಹಾರಾಣಿ ಎಂಬುದನ್ನು ಮರೆತು ಬಿಟ್ಟಿದ್ದ. ಆದರೆ ಈಗ? ನೆನಸಿಕೊಂಡ ಕೂಡಲೇ ಮೈ ಬೆವತು ಹೋಯಿತು. ಗರಬಡಿದವರಂತೆ ಗಾಬರಿಯಾದ. ಎದೆ ಬಿರಿವ ಮೌನ ಆವರಿಸಿತು. ಆದರೆ ಅವನಿಗೆ ಮುಂದೆ ನಡೆದುದನ್ನು ನೆನಸಿಕೊಂಡಾಗ ಆನಂದ ಭಾಷ್ಪ ಹೊಮ್ಮಿತು. ಪಂಪ ಗಾಬರಿಯಾಗಿ ಕಂಪಿಸುತ್ತಿರುವಾಗ ಬಾಗಿಲ ಕಡೆಯಿಂದ ಜೋರಾದ ನಗುವಿನ ಅಲೆ ಅಪ್ಪಳಿಸಿತು. ತಿರುಗಿ ನೋಡುತ್ತಾನೆ ಅರಿಕೇಸರಿ ಪ್ರಭು! ಅಪರಾಧವೆಸಗಿದವನಂತೆ ಪಂಪ

ತಲೆ ತಗ್ಗಿಸಿದ. ಅರಿಗ ಅದೇ ನಗುವಿನಿಂದ "ಅಯ್ಯಾ ಪಂಪಾ, ಎಂಥ ಕೆಲಸ ಮಾಡುತ್ತಿದ್ದೀಯೆ?" ಎಂದ. ಪಂಪ ಇನ್ನೂ ಭೂಮಿಗಿಳಿದು ಹೋದ. ಅದನ್ನು ಗಮನಿಸಿದ ಅರಿಕೇಸರಿ "ರಾಣಿಯವರೇ, ಪಂಪನವರಂತೂ ಗಾಬರಿಯಾಗಿದ್ದಾರೆ. ನೀವಾದರೂ ಎದ್ದು ಈ ಸೋತ ಪಣವನ್ನು ಒಪ್ಪಿಸಬಾರದೇ ಬನ್ನಿ ತಪ್ಪದೆ ಇವನ್ನು ಆಯ್ದು ಗೆದ್ದವರಿಗೆ ಒಪ್ಪಿಸೋಣ' ಎಂಬುದಾಗಿ ನುಡಿದಾಗ ಪಂಪನಿಗೆ ಧೈರ್ಯ ಕಾಣಿಸಿತು. ಅದುವರೆಗೂ ಎದ್ದು ನಿಲ್ಲುವುದನ್ನೂ ಮರೆತು ಕುಳಿತಿದ್ದವನು ಧಿಗ್ಗನೆ ನಿಂತು ನುಡಿದ. "ಮನ್ನಿಸಿ ಪ್ರಭು, ಅಕ್ಷಮ್ಯ ಅಪರಾಧವಾಯಿತು.'

"ಏನು ಆತ್ಮೀಯರೆ ನೀವು ಹೇಳುವುದು? ಇದರಲ್ಲಿ ಅಪರಾಧದ ಮಾತು ಎಲ್ಲಿ ಬಂತು? ಒಡ್ಡಿದ ಪಣವನ್ನು ಗೆದ್ದವರು ಕಿತ್ತುಕೊಂಡುದರಲ್ಲಿ ತಪ್ಪೇನು? ಸೋತವರು ಕೂಡ ಕೂಡಲೇ ಅದನ್ನು ನಿಮಗೆ ಒಪ್ಪಿಸಬೇಕಿತ್ತು. ಸರಿ ಸರಿ ಆದದ್ದು ಆಯಿತು. ನಾವು ಬಂದು ಸ್ವಲ್ಪ ಹೊತ್ತೇ ಆಯಿತು. ನೀವಿಬ್ಬರೂ ಆಟದಲ್ಲಿ ಮಗ್ನರಾಗಿದ್ದು ನಮ್ಮ ಆಗಮನವನ್ನು ಗಮನಿಸಲೇ ಇಲ್ಲ. ನಾವೇ ಅದನ್ನು ಗ್ರಹಿಸಿ ಇಬ್ಬರೂ ಗೆಲ್ಲಲು ಪೈಪೋಟಿಯಿಂದ ಆಡಿದ್ದುದನ್ನು ನೋಡಿ ಆನಂದಿಸಿದ್ದೇವೆ. ಇದಕ್ಕಾಗಿ ಪಶ್ಚಾತ್ತಾಪಿಸಬೇಕಾದ ಅಗತ್ಯವಿಲ್ಲ. ಆಟದ ಕಾವೇ ಅಂತಹುದು. ನಡೆಯಿರಿ ನಿಮ್ಮೊಡನೆ ಗೋಪ್ಯವಾಗಿ ಮಾತನಾಡಬೇಕಾದ ಬೇರೆ ವಿಷಯವಿದೆ. ನರರು ನರರನ್ನು ನಂಬದೆ ಹೋದರೆ ಬದುಕು ನರಕವಾದೀತು."

ಅಲ್ಲಿಗೆ ಬಂದ ಗಂಡಾಂತರ ಕರಗಿ ಹೋಗಿತ್ತು. ಬೆಟ್ಟದಂತೆ ಬಂದ ಆಪತ್ತು ಮಂಜಿನಂತೆ ಮರೆಯಾಯಿತು. ಕೆಳೆಯನ ಉನ್ನತ ವ್ಯಕ್ತಿತ್ವ, ತನ್ನ ಬಗೆಗೆ ಪ್ರಭು ಇಟ್ಟ ನೆಚ್ಚು ಚೆನ್ನಾಗಿ ಹೊಳೆಯಿತು. ಸೈನಿಕನನ್ನು ಕಾಳಗದಲ್ಲೂ, ವಂಶವನ್ನು ವಿನಯ ಸ್ವಭಾವದಲ್ಲೂ, ಹೆಂಡತಿಯನ್ನು ಗಂಡ ಮರಣವಾದಾಗಲೂ, ಗೆಳೆಯನನ್ನು ಆಪತ್ಕಾಲದಲ್ಲೂ ಪರೀಕ್ಷಿಸಿ ನೋಡಬೇಕಂತೆ. ನಿಜ ನನ್ನ ಗೆಳೆಯ ಈ ಆಪತ್ತಿನ ನಿಕಷದಲ್ಲಿ ಬೆಳಗಿದ್ದಾನೆ.

ಪಂಪನ ಕೆನ್ನೆಗಳಿಂದ ಹನಿವ ನೀರನ್ನು ನೋಡಿ ಅರಿಕೇಸರಿ ಉಲಿದ–

"ಏನಿದು ಸೇನಾನಿಗಳೇ, ನೀವೇ ಅತ್ತರೆ ಇನ್ನು ನಮ್ಮಗತಿ?"

"ಇದು ಕಣ್ಣೀರಲ್ಲ ಪ್ರಭು, ಪನ್ನೀರು."

"ಪನ್ನೀರೋ ಪೊನ್ನೀರೊ, ನಮಗೆ ಅದು ಈಗ ಬೇಕಿಲ್ಲ. ಕುಡಿಯಲು ಒಂದು ಲೋಟ ಸಿಹಿನೀರು ಸಿಕ್ಕಿದರೂ ಸಾಕು."

ಮಾತು ಅಲ್ಲಿಗೆ ಮುಗಿಯಿತೆಂದು ತಿಳಿದು ಪಂಪ ಹೊರಟು ನಿಂತ. ಅರಿಗ ದೊರೆ____

"ನಿಲ್ಲಿ ಸೇನಾನಿಗಳೆ, ನಿಮ್ಮೊಡನೆ ರಹಸ್ಯವಾಗಿ ಮಾತಾಡುವುದಿದೆ."

"ಅಪ್ಪಣೆ ಪ್ರಭು, ನನಗೇನೂ ಆತುರವಿಲ್ಲ."

"ಇಲ್ಲಿ ಬನ್ನಿ ಈ ಲೋಹಾಸನದಲ್ಲಿ ಕುಳಿತುಕೊಳ್ಳಿ."

ಪಂಪ ಕುಳಿತ. ಮಹಾರಾಣಿಯ ಇಂಗಿತದಂತೆ ದಾಸಿಯರು ಹಣ್ಣು ಹಾಲು ತಂದಿರಿಸಿ ನಿರ್ಗಮಿಸಿದರು. ಅನಂತರ ದೊರೆ ರಾಣಿಗೂ ಕಣ್‌ಸೂಚನೆಕೊಟ್ಟ. ಅದರಂತೆ ಲೋಕಾಂಬಿಕೆಯೂ ಎದ್ದು ಮರೆಯಾದಳು. ಪಡಿಯರತಿಯರೂ ದಾಸಿಯರು ಸುತ್ತ ತೆರೆಬಿಟ್ಟು ತೆರಳಿದರು. ತಾವಿಬ್ಬರೇ ಉಳಿದ ಮೇಲೆ ಪಂಪನಿಗೆ ಮೆಲುದನಿಯಲ್ಲಿ ಅರಿಗ ತಿಳಿಸಿದ.

"ಪಂಪಾ, ನಾವು ನಾಳೆಯಿಂದ ಯುದ್ಧಕ್ಕೆ ಸೈನ್ಯವನ್ನು ಅಣಿಗೊಳಿಸಬೇಕಾದ ಪರಿಸ್ಥಿತಿ ಒದಗಿ ಬಂದಿದೆ."

"ಅವಶ್ಯ ಆಗಲಿ ದೊರೆ, ಈ ತೋಳುಗಳ ಬಹುದಿನದ ತೀಟೆ ತೊಲಗಲಿ, ನಮ್ಮ ಸೈನ್ಯ ತುದಿಗಾಲಲ್ಲಿ ನಿಂತು ಸದಾ ಸಿದ್ಧವಾಗಿದೆ."

"ಈಗಿರುವಷ್ಟೇ ಪ್ರಮಾಣದ ಸೈನ್ಯ ನಾವು ಎದುರಿಸಬೇಕಾದ ಶತ್ರುವಿಗೆ ಸಾಲದು ಪಂಪಾ."

"ಅಷ್ಟು ದೊಡ್ಡ ಹಗೆ ಯಾರು ದೊರೆ?"

"ರಾಷ್ಟ್ರಕೂಟ ಯುವರಾಜ ಗೋವಿಂದ."

"ನಿಮ್ಮ ಭಾವನಲ್ಲವೆ!" "ಪಂಪ, ಒಂದು ಬಗೆಯ ಮಹಾನುಭಾವ! ನಮ್ಮ ಮೇಲೆ ಕಿರಿಯಂದಿನಿಂದ ಕತ್ತಿ ಮಸೆಯುತ್ತಿದ್ದಾನೆ."

"ಅದನ್ನು ಬಲ್ಲೆ ಪ್ರಭು. ಚಿಕ್ಕಂದಿನಿಂದ ನಿಮ್ಮ ಮೇಲೆ ಕೌರವನಂತೆ ಮಾತ್ಸರ್ಯ ತಳೆದು ಬೆಳೆದಿದ್ದಾರೆ. ಇಂದ್ರೇಂದ್ರ ನರೇಂದ್ರರ ತೋಳು ತೊಟ್ಟಿಲಾಗಿ ಕೈಕೂಸಾಗಿ ಕೀರ್ತಿಶಾಲಿಯಾಗಿ ವರ್ಧಿಸಿದ ನಿಮ್ಮನ್ನು ಕಂಡರೆ ಅವರಿಗೆ ಅಸೂಯೆಯೆಂಬುದು ಯಾರಿಗೆ ತಿಳಿಯದು?"

"ಇಂದ್ರರ ಸಾವಿಗೂ ಈ ಗೊಜ್ಜಿಗನೇ ಕಾರಣ. ಚಿಕ್ಕಮಗನ ಹೇಯ ನಡತೆಗೆ ರೋಸಿಹೋದ ಇಂದ್ರ ಪ್ರಭು ವ್ಯಥೆಯಲ್ಲೇ ಗತಿಸಿದರು. ಇವನ ಅಣ್ಣ ಇಮ್ಮಡಿ ಅಮೋಘವರ್ಷ ತಂದೆಯ ಗುಣವನ್ನೇ ಹೊತ್ತಿದ್ದಾನೆ. ಅಣ್ಣ ತಮ್ಮಂದಿರಲ್ಲೇ ಎಷ್ಟು ವ್ಯತ್ಯಾಸ?"

"ಲೋಕದಲ್ಲಿ ಒಮ್ಮೊಮ್ಮೆ ಹಾಗಾಗುವುದುಂಟು, ಭಗವತೀ ಆರಾಧನದಿಂದ ಮೊನ್ನೆ ಸುಕುಮಾರ ಸ್ವಾಮಿಯ ಕಥೆ ಹೇಳಲಿಲ್ಲವೇ? ಅಗ್ನಿಭೂತಿ ವಾಯುಭೂತಿಯರು, ಒಂದೇ ರೆಂಬೆಯಲ್ಲಿ ಬಿಟ್ಟ ಕಾಯಿಗಳಲ್ಲಿ ಒಂದು ಹುಳಿ,

ಇನ್ನೊಂದು ಸಿಹಿ ಆಗುವಂತೆ, ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿ ಮಕ್ಕಳಾದರೂ ನಡೆಯಲ್ಲಿ ಒಬ್ಬ ಉತ್ತರ ಧ್ರುವ, ಇನ್ನೊಬ್ಬ ದಕ್ಷಿಣ ಧ್ರುವ."

"ನಿಜ. ಇಂದ್ರ ಪ್ರಭುವಿನಿಂತಹ ತಂದೆ ಲೋಕದಲ್ಲಿ ಅಪರೂಪವೆನ್ನಬೇಕು. ಅವರು ಬಾಲ್ಯದಲ್ಲಿ ತೊಡೆಯ ಮೇಲೆ ಕೂಡಿಸಿಕೊಂಡು ಕೈತುತ್ತು ಕೊಡುತ್ತಾ ಹೇಳಿದ ಮಾತುಗಳು ಇದೀಗ ಕೇಳಿದ ಮಾತುಗಳಂತೆ ಹೃದಯದಲ್ಲಿ ಹೊಳಲುಗೊಡುತ್ತಿವೆ."

"ಅವರು ಜನಕನಂತೆ ರಾಜ ಋಷಿಗಳೆಂದು ಕೇಳಿದ್ದೇನೆ."

"ಅದು ಉತ್ಪ್ರೇಕ್ಷೆಯಲ್ಲ. ಅವರು ಅಯ್ದು ಆರು ವರ್ಷ ಮಗುವಾದ ನನಗೆ ಹೇಳಿದ ಮಾತುಗಳು : ಮಗು, ರಾಜಕರ್ತವ್ಯವನ್ನು ನೀನು ರಾಜನಾದಾಗ ನೆನೆ. ಕೆರೆ ಕಟ್ಟಿಸು. ಬಾವಿ ತೋಡಿಸು. ದೇವಾಲಯಗಳನ್ನು ನಿರ್ಮಿಸು. ಕಷ್ಟದಲ್ಲಿ ಸಿಲುಕಿ ನಲುಗುವವರನ್ನು ಬಿಡಿಸು. ಅನಾಥರನ್ನು ರಕ್ಷಿಸು. ಶರಣಾಗತನನ್ನು ಕೈಬಿಡದೆ ಕಾಪಾಡು, ಧರ್ಮ ನ್ಯಾಯ ಮೀರಬೇಡ."

"ಎಲ್ಲರೂ ನೆನಪಿಡಬೇಕಾದ ಆಣಿಮುತ್ತಿನಂತಹ ನುಡಿಗಳಿವು."

"ಆದರೆ ಪಂಪಾ, ಅವರ ಕಿರಿಯ ಮಗ ತಂದೆಯನ್ನು ಉರಿದು ತಿಂದ. ಇಂದ್ರ ರಾಜರಿಗೆ ತಮ್ಮ ಕಿರಿಯ ಮಗಳು ರೇವಿಕೆಯನ್ನು ನನಗೆ ಕೊಡಬೇಕೆಂದು ಮೊದಲಿನಿಂದ ಹೆಸರಿಟಿದ್ದರು."

"ಅದು ಸರಿಯಾದ ಆಯ್ಕೆ ತಾನೆ!?"

"ಅವರ ಭಾವನೆಗೆ ಅಡ್ಡಿಯಾಗಿ ನಿಂತವನು ಈ ಗೊಜ್ಜಿಗ. ಇಂದ್ರ ಮಹಾರಾಜರು ನಿಧನರಾದ ಮೇಲೆ ಪಟ್ಟಕ್ಕೆ ಬಂದ ಇಮ್ಮಡಿ ಅಮೋಘವರ್ಷನಿಗೆ ಗೊಜ್ಜಿಗ ಸಾಮಾನ್ಯ ಹಿಂಸೆ ಕೊಟ್ಟನೆ?"

"ಅಮೋಘವರ್ಷ ಒಡಹುಟ್ಟಿದ ಅಣ್ಣನಲ್ಲವೆ ಗೋವಿಂದನಿಗೆ?"

"ಸ್ವಾರ್ಥ ಹೆಡೆ ಎತ್ತಿನಿಂತಾಗ ನೆತ್ತರ ನಂಟನ್ನೂ ನೋಡುವುದಿಲ್ಲ. ಇಮ್ಮಡಿ ಅಮೋಘವರ್ಷ ಪಟ್ಟ ಹತ್ತುವುದಕ್ಕೇ ಕುತ್ತವಾಗಿದ್ದ ಗೊಜ್ಜಿಗ ಮೂರು ವರ್ಷ ಚಿತ್ರಹಿಂಸೆ ಕೊಟ್ಟು ಅಣ್ಣನನ್ನು ಬಲಿ ತೆಗೆದುಕೊಂಡ."

"ಈ ವಿವರವನ್ನು ನಾನು ಬಲ್ಲೆ. ಅಲ್ಲದೆ ಅಣ್ಣನ ನೆರವಿನಿಂದಲೇ ನೀವು ಲೋಕಾಂಬಿಕೆಯವರನ್ನು ಅಪಹರಿಸಿಕೊಂಡು ಬಂದ ಪ್ರಿಯಗಳ್ಳನೆಂಬ ದ್ವೇಷ ಬೇರೆ."

"ಅದರಿಂದ ಅಣ್ಣನನ್ನು ಒಳಗೊಳಗೇ ನುಣ್ಣಗೆ ಮಾಡಿ ಪರಲೋಕಕ್ಕೆ ಅಟ್ಟಿ ಪಟ್ಟ ಕಟ್ಟಿಸಿಕೊಂಡವನೇ ನೇಋುವಾಗಿ ನಮ್ಮತ್ತ ದಾಳಿಯಿಟ್ಟಿದ್ದಾನೆ."

"ಕಡಲ ಕರೆಯಲ್ಲಿ ತೆರೆಯೆಸೆದ ಕಪ್ಪೆ ಚಿಪ್ಪುಗಳೆಲ್ಲ ಮುತ್ತುಗಳಲ್ಲ. ರತ್ನ ಸಿಂಹಾಸನ ಹತ್ತಿದವರೆಲ್ಲ ಜನತೆಯ ಹೃದಯ ಗೆದಿಯುವ ದೊರೆಗಳಲ್ಲ. ಗೊಜ್ಜಿಗನಿಗೆ ಈ ಸಲ ಸರಿಯಾದ ಪಾಠ ಕಲಿಸೋಣ."

ರಹಸ್ಯ ಸಂಭಾಷಣೆ ನಿಂತಿತು.

ಪಂಪ ಅಂದಿನಿಂದ ಒಂದೇ ಸಮನೆ ಮುಂಜಾವಿನಿಂದ ಸಂಜೆಯ ತನಕ ಸೈನ್ಯದ ಬೀಡಿನ ವಲಯದಲ್ಲೇ ಪರಿಶೀಲನೆಯಲ್ಲಿ ನಿರತನಾಗಿರುತ್ತಿದ್ದ. ಅರಿಗನೂ ತನ್ನ ಸಾಮಂತರಿಗೂ ಪಾಳೆಯಗಾರರಿಗೂ ಮಲೆಪರಿಗೂ ಗ್ರಾಮಭೋಜಕರಿಗೂ ಬೇಹುಗಾರರ ಮೂಲಕ ವರ್ತಮಾನ ಕಳಿಸಿದ. ಕಪ್ಪಕಾಣಿಕೆಗಳ ಜೊತೆಗೆ ಭಟರ ತಂಡಗಳನ್ನೂ ಒಪ್ಪಿಸುವಂತೆ ರಾಯಸವನ್ನಟ್ಟಿದ. ಕಾಪಿನಾಳುಗಳು ಗಡಿಯಲ್ಲಿ ಚುರುಕಾದರು. ಚಾರರು ಮಾರುವೇಷದಲ್ಲಿದ್ದು ಎಲ್ಲೆಡೆಗಳಲ್ಲೂ ಅಡ್ಡಾಡುತ್ತ ಹಗೆಗಳ ಚಲನವಲನಗಳನ್ನು ತಿಳಿದು ಅರಮನೆಗೆ ವರದಿ ಕಳಿಸುತ್ತಿದ್ದರು.

ಈ ಮಧ್ಯೆ ಮಾನ್ಯಖೇಟದಿಂದ ಗುಪ್ತಚಾರರು ಇನ್ನೊಂದು ಸಂತೋಷದ ಸುದ್ಧಿ ತಂದಿದ್ದರು. ಬೋದನದ ಮೇಲೆ ದಂಡೆತ್ತಿ ಬರಬೇಕೆಂದ್ದ ಹೊರಟಿದ್ದ ಗೋವಿಂದನಿಗೆ ಸೇನಾನಿಗಳ, ಮಂತ್ರಿಪ್ರಧಾನ, ಪೆರ್ಗಡೆಗಳ ವಿರೋಧ ವ್ಯಕ್ತವಾಗಿತ್ತು. ಯಾವ ಪ್ರಧಾನವಾದ ಆಪಾದನೆ, ವಿರೋಧ ಹಗೆತನಗಳ ಕಾರಣವೂ ಇಲ್ಲದೆ ಸದಾ ನೆರವಾಗಿ ನಿಂತಿರುವ ನೆರೆ ನಾಡಾದ ಚಾಲುಕ್ಯರ ಮೇಲೆ ದಾಳಿ ಮಾಡುವುದು ರಾಜನೀತಿಗೆ ವಿರುದ್ಧವೆಂದು ವೃದ್ಧ ಪ್ರಧಾನಿಗಳು ಪಟ್ಟು ಹಿಡಿದರು. ಇದರಿಂದ ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಜೆಗಳೂ ತಿರುಗಿ ಬೀಳಬಹುದೆಂದರು. ಆಗ ಬೇರೆ ದಾರಿಯಿಲ್ಲದೆ ಗೋವಿಂದ ತೆಪ್ಪಗಾದ. ಆದರೂ ಮನದೊಳಗೆ ತನ್ನ ಹಗೆಯನ್ನು ಹಿಂಡಿ ಹಲ್ಲು ಮಸೆದ. ಗೋವಿಂದ ಪ್ರಬಲ ಕಾರಣಕ್ಕಾಗಿ ಕಾಯುತ್ತಿದ್ದ. ಅದಕ್ಕಾಗಿ ತುಂಬ ದಿನಗಳು ಬೇಕಾಗಲಿಲ್ಲ.

ಬೋದನದ ಪ್ರಭು ಸೇನಾನಿ ಪ್ರಧಾನಿಗಳು ಬಂದ ಮಾರಿ ಹಾಗೇ ಹೋಯಿತಲ್ಲಾ ಎಂದು ನಿಡುಸುಯ್ದುರು. ಬದುಕು ಎಂದಿನಂತೆ ನಿರಾತಂಕವಾಗಿ ನಡೆಯಿತು.

ಈ ಸಲ ಪಂಪ ಅರಿಗರು ನಾಡಿನ ಆಗು ಹೋಗುಗಳ ನಿಕಟ ಪರಿಚಯ ಮಡಿಕೊಳ್ಳುವ ಸಲುವಾಗಿ ಚೈತ್ರಯಾತ್ರೆಯಂತೆ ನಾಡಿನ ಯಾತ್ರೆಗೆ ಹೊರಟರು. ಚಾಲುಕ್ಯ ಸಾಮ್ರಾಜ್ಯದ ಜೊತೆಗೆ ಕನ್ನಡಿಗರಿರುವ ಎಲ್ಲಾ ಪ್ರದೇಶಗಳನ್ನೂ ನೋಡಿ ಬಂದರು. ಪಂಪನಿಗೆ ಮತ್ತೆ ಸುಪ್ತಚೇತನ ಜಾಗೃತವಾಯಿತು. ಕುಳಿತರೆ ನಿಂತರೆ ತನ್ನ ನಾಡಿನ ಚೆಲುವಿನ ನಿಲುದಾಣಗಳೇ ಕಣ್ಣಿಗೆ ಕಟ್ಟಿದಂತೆ ಮೂಡಿಬರುತ್ತಿತ್ತು—

ಜಳ ಜಳ ಎಂದು ಹರಿಯುವ ನೀರ ಕಾಲುವೆಗಳು. ಅಲ್ಲಲ್ಲಿ ಹಳ್ಳ ಕೊಳ್ಳ ಕುಂಟೆಗಳಲ್ಲೂ, ಆಕಾಶವೇ ಕತ್ತರಿಸಿ ಬಿತ್ತೆಸನಿಸುವ ಕೆರೆಗಳಲ್ಲೂ ತುಂಬಿರುವ ತಾವರೆ ನೆಯ್ದಿಲೆಗಳ ಹೊಸ ಹೂಗಳು. ನಾಡೆಲ್ಲ ಹರಡಿಕೊಂಡ ಹೊಸ ಹೂಗಳಿಂದ ಸೂಸಾಡುವ ನರುಗಂಪು. ಕೆಂಪುಗೊಂಚಿಲಿನಲ್ಲಿ ಜೋತುಬಿದ್ದಿರುವ ಬತ್ತದ ತೆನೆಗಳು. ತನಿಯಾಗಿ ನಿಂತ ನೆಲ್ಲಿಗೆ ನುಗ್ಗಿ ಬರುವ ಗಿಳಿಗಳ ಸಾಲು ಕಾಮನ ಬಿಲ್ಲಿನಂತೆ ಕಾಣುತ್ತಿತ್ತು. ಬಗೆಬಗೆಯ ತೋಟಗಳ ಸಾಲು ಅವುಗಳನ್ನೆಲ್ಲ ಬಳಸಿದ ಸೊಕ್ಕಿದ ದುಂಬಿಗಳು. ಬೆಳೆದು ತೆನೆಯ ತೂಕದಿಂದ ಬಾಗಿರುವ ಗದ್ದೆಗಳಿಂದ ಸಿರಿಯ ನೆಲೆವೀಡಾಗಿದೆ ಈ ನಾಡು.

ನಿಜ, ನನ್ನ ಕನ್ನಡ ನಾಡಿನ ಹರವನ್ನು ತೆಂಗು ಕೌಂಗುಗಳ ಗರಿಗಳಿಂದ ಸಿರಿದೇವಿ ನೋಡಿ ನಲಿಯುತ್ತಿದ್ದಾಳೆ. ಕನ್ನಡಿಗರೂ ದಾನ ಮಾಡುವ ನಿದಾನಿಗಳು. ಈ ಚೆಲುವ ನಾಡು ಎಲೆ ಹೂ ಹಣ್ಣು ಬತ್ತ ಗಿಳಿ ತುಂಬಿ ಕಂಪು ತೋಟ ಕೊಳ ಕಬ್ಬುಗಳಿಂದ ತುಂಬಿದೆ. ಇಲ್ಲಿನ ಬೆಳೆಸೆಲ್ಲ ಇನಿದು. ಕಾಡುಗಳೆಲ್ಲ ಬಾವನ್ನದೊಡನೆ ಮದದಾನೆಗಳನ್ನು ಬೆಳೆಸುತ್ತದೆ.

ಮಳೆಯಿಂದಲೆ ಬೆಳೆಯುವ ಹೊಲ ಹೊಸ ಕಂಪಿನ ಬತ್ತ ಬೆಳೆಯುತ್ತದೆ. ದೇವಮಾತೃಕಗಳಿಂದಲೂ ನದೀಮಾತೃಕಗಳಿಂದಲೂ ಈ ನಾಡು ಮಧುರವಾದ ಬೆಳಸನ್ನು ಪಡೆಯುತ್ತಿದೆ. ಚೆಲುವಿನ ತೋಟಗಳ ಸಾಲು ಅಗಲಿರುವ ನಲ್ಲ-ನಲ್ಲೆಯರೆದೆಗೆ ಬೇಟ ಬೆಳೆಸುತ್ತದೆ. ಯಾವ ಹೂವೂ ಹಣ್ಣೂ ಮುಗಿಯದೆ ಇರದು. ಇಲ್ಲಿ ಮಾತ್ರ ಮಲ್ಲಿಗೆ ಮಾವು ಮುಗಿಯವು. ಬೇರೆ ಸಂಸಾರಸಾರ ಸರ್ವಸ್ವ ಫಲ ಯಾವುದು? ಎಲ್ಲಿದೆ? ಹೊಸದಾದ ಕಬ್ಬು ಬೆರಳಿಂದ ಹೊಡೆದರೂ ರಸ ಒರಸುತ್ತದೆ. ಅರಳಿದ ಒಂದು ಮೊಗ್ಗಿನ ಸುಗಂಧದಲ್ಲಿಯೇ ದುಂಬಿಗಳು ಸಾಕು ಸಾಕು ಎಂದು ಮುಖ ಕೆಡಿಸಿಕೊಳ್ಳುತ್ತವೆ. ಗಿಳಿಗಳು ಕೂಡ ಕುಡಿದ ಒಂದು ಹಣ್ಣಿನ ರಸದಿಂದಲೇ ಅಜೀರ್ಣ ಪಡೆಯುತ್ತವೆ.! ಇನ್ನು ನನ್ನ ಚಿನ್ನದ ಕನ್ನಡ ನಾಡಿನ ಜನ.

ಅವರದು ಇರಿಯದ ಬೀರವಲ್ಲ, ಇಲ್ಲದ ಕುಲವಲ್ಲ. ತಮಗಲ್ಲದ ಜಾಗವನ್ನು ತಿಳಿಸುವುದಿಲ್ಲ. ಓದದ ಓದನ್ನು ಹೇಳಿಕೊಳ್ಳರು, ಅರಿಯದ ನಿದ್ದೆಗೆ ಕೈ ಚಾಚರು. ಸಲ್ಲದ ಚದುರನ್ನು ತೋರರು. ನೆರೆ ಕಲ್ಲದ ಕಲ್ಪಿಯನ್ನು ತಿಳಿಸರು. ಪಂಪ ಕನ್ನಡ ನಾಡಿನ ಚೆಲುವನ್ನು ಬಣ್ಣಿಸಿ ನಾಲ್ಕು ವೃತ್ತವನ್ನು ಬರೆದ__

ಪಂಪ ಅರಿಗರು ರಾಜಧಾನಿ ಬೋದನಕ್ಕೆ ಬರುತ್ತಿದ್ದಂತೆ ಚಾಲುಕ್ಯ ವಂಶದ ವಿಜಯಾದಿತ್ಯ ದೊರೆ ಬಂದಿರುವುದು ತಿಳಿಯಿತು. ಅನಿರೀಕ್ಷಿತವಾಗಿ ಆಗಮಿಸಲಿರುವ

ವಿಜಯಾದಿತ್ಯನನ್ನು ತನ್ನ ಮಂತ್ರಶಾಲೆಗೆ ಅರಿಗ ಬರಮಾಡಿಕೊಂಡ. ಉಭಯ ಕುಶಲೋಪರಿ ಸಾಂಪ್ರತ ವಿಚಾರಗಳ ಸಾಂಪ್ರದಾಯಿಕ ಮಾತುಕತೆ ಮುಗಿಯಿತು. ವಿಜಯಾದಿತ್ಯ ತನ್ನ ಹೆಗ್ಗಡೆಗಳನ್ನೊ, ಮಂತ್ರಿ ಪ್ರಧಾನಿಗಳನ್ನೊ ಕಳಿಸದೆ, ಆಗಮನದ ಮುನ್ಸೂಚನೆಯೂ ಇಲ್ಲದೆ ಬಂದಿರುವುದರಿಂದ ವಿಶೇಷ ಕಾರಣವಿರಬೇಕೆಂದು ಅರಿಗ ಊಹಿಸಿದ. ಅಲ್ಲದೆ ವಿಜಯಾದಿತ್ಯ ಪೂರ್ವ ಚಾಲುಕ್ಯ ಶಾಖೆಯ ಹಿರಿಯ ದೊರೆ, ಅವನು ಕೂಡ ಪ್ರಜಾಪರಿಪಾಲನ ಚತುರ. ಬಿಜ್ಜದೊರೆಯೆಂದೇ ವಿಖ್ಯಾತ. ಆದುದರಿಂದ ಅರಿಗ ನೇರವಾಗಿ ವಿಷಯ ಪ್ರಸ್ತಾಪಿಸತೊಡಗಿದ.

"ತಾವು ನಮ್ಮ ರಾಜಧಾನಿಗೆ ಆಗಮಿಸಿದುದು ತುಂಬಾ ಆನಂದವಾಗಿದೆ. ತಮ್ಮ ಬರುವು ಮೊದಲೇ ತಿಳಿದಿದ್ದರೆ ನಾವು ಕೇಂದ್ರ ಬಿಟ್ಟು ಹೊರಗೆ ಹೋಗುತ್ತಿರಲಿಲ್ಲ."

"ಈಗ ಅದಕ್ಕಾಗಿ ಪಶ್ಚಾತ್ತಾಪಿಸುವ ಅಗತ್ಯವಿಲ್ಲ ಅರಿಗರೇ."

"ತಾವು ಇನ್ನೂ ಕೆಲವು ದಿವಸ ಇದ್ದು—"

"ಹೆಚ್ಚು ದಿವಸ ಇರಲು ಅವಕಾಶವಿಲ್ಲವಾಗಿದೆ. ತಪ್ಪಾಗಿ ತಿಳಿಯಬಾರದು. ತಮ್ಮೊಡನೆ ಆತ್ಮೀಯತೆಯಿಂದ ಕೆಲವು ಮಾತುಗಳನ್ನಾಡಬೇಕಾಗಿದೆ."

"ತಾವು ನಿಸ್ಸಂಕೋಚವಾಗಿ ತಿಳಿಸಿರಿ. ಅಲ್ಲದೆ ಇಲ್ಲಿ ನಾವಿಬ್ಬರಲ್ಲದೆ ಬೇರೆ ಯಾರೂ ಇಲ್ಲ. ತಮ್ಮ ಸ್ನೇಹವನ್ನು ಮೊದಲಿಂದ ಗೌರವವೆಂದೇ ಭಾವಿಸಿದ್ದೇವೆ."

"ಆ ಸಲುಗೆಯಿಂದ ಬಂದಿದ್ದೇವೆ. ಮುಖ್ಯವಾಗಿ ನಾವು ತಮ್ಮ ಸಹಾಯವನ್ನು ಕೇಳಲು ಬಂದಿದ್ದೇವೆ..."

"ಸಹಾಯ ಎಂಬುದು ತುಂಬ ದೊಡ್ಡ ಮಾತು. ನಮ್ಮಿಂದ ತಮಗೆ ಏನಾದರೂ ಅನುಕೂಲವಾಗುವುದಾದರೆ ನಾವು ಪುಣ್ಯಶಾಲಿಗಳೆಂದೇ ತಿಳಿಯುತ್ತೇವೆ."

"ನಾವು ಕೇಳುವ ನೆರವನ್ನು ತಾವು ನಡೆಸಿಕೊಡುವಿರೆಂಬ ವಿಶ್ವಾಸ ತಳೆಯಬಹುದೆ.?"

"ನಿಶ್ಚಯವಾಗಿಯೂ. ನಮ್ಮ ಕೈಲಾದುದನ್ನು ನಿರ್ವಂಚನೆಯಿಂದ ಮಾಡಿಕೊಡುತ್ತೇವೆಂದು ಮಾತು ಕೊಟ್ಟಿದ್ದೇವೆ. ಆಗಬಹುದಲ್ಲವೆ?"

"ಪುತ್ರೋತ್ಸವ ಆದಂತೆ ಹರ್ಷವಾಯಿತು. ಶರಣಾಗತ ಜಳನಿಧಿ ಎಂಬ ಬಿರುದೂ ಪರಾಕ್ರಮಧವಳ, ಪ್ರಚಂಡ ಕೋದಂಡಧರ ಮುಂತಾದ ಪ್ರಶಸ್ತಿಗಳ ಜೊತೆಗೆ ತಮಗಿದೆ."

"ಅದೆಲ್ಲ ಈಗೇಕೆ ಮಹಾರಾಜರೆ? ತಾವು ತಿಳಿಸಬೇಕೆಂದು ಇದ್ದುದನ್ನು

ದಯವಿಟ್ಟು ತಿಳಿಸಿರೆಂದು ಅರಿಕೆ ಮಾಡಿದ್ದೇವೆ!?
"

"ಮರೆಹೊಕ್ಕ ಆರ್ತರನ್ನು ಕಾಪಾಡಿ ಶರಣಾಗತ ಜಳನಿಧಿ ಆಗಿದ್ದೀರೆಂಬುದನ್ನು ಈಗ ನೆನಪಿಗೆ ತಂದುದಕ್ಕೆ ಕಾರಣವಿದೆ. ನಾವು ಈಗ ತಮ್ಮ ಮರೆಹೊಕ್ಕಿದ್ದೇವೆ..."

"ಏನು ಏನು! ತಾವು ನಮ್ಮ ಮರೆಹೋಗುವುದೆ? ಎಲ್ಲಾದರೂ ಉಂಟೆ? ಅಖಂಡ ಸಾಮ್ರಾಜ್ಯವನ್ನು ಆಳುತ್ತಿರುವ ತಾವು ಹೀಗೆ ಹೇಳಬಹುದೆ?"

"ನಾವು ಆಳುತ್ತಿರುವ ಸಾಮ್ರಾಜ್ಯದ ಅಸ್ತಿತ್ವವನ್ನೇ ಅಲುಗಾಡಿಸುವ ಕಠಿಣ ಪ್ರಸಂಗವೀಗ ಒದಗಿ ಬಂದಿದೆ. ಅದಕ್ಕಾಗಿಯೇ ಪೂರ್ವಭಾವಿ ಮಾತು ಕತೆಗೆ ನಾವೇ ಅವಸವಸರವಾಗಿ ಧಾವಿಸಿ ಬಂದಿರುವುದು."

"ತಮ್ಮನ್ನು ಎದುರು ಹಾಕಿಕೊಂಡು ಬರಲಿರುವ ಹಗೆ ಯಾರೆಂದು ಕೇಳಬಹುದೆ?"

"ರಾಷ್ಟ್ರಕೂಟರ ಚಕ್ರವರ್ತಿ ಗೋವಿಂದರು!"

"ರಟ್ಟರ ಗೊಜ್ಜಿಗನೆ? ಅವನಿಗೆ ಅಷ್ಟು ಅಟ್ಟಹಾಸ ಇಷ್ಟು ಬೇಗನೆ ಉಂಟಾಯಿತೆ? ತಮ್ಮೊಡನೆ ಈ ವಿರಸಕ್ಕೆ ಕಾರಣ"?

"ತೋಳಕುರಿಮರಿಯ ಕತೆ! ಆ ಕ್ಷುಲ್ಲಕ ಕಾರಣ ಕೇಳಿದರೆ ತಾವು ನಗಬಹುದು. ನಾವು ನಿಮ್ಮ ಮೇಲೆ ಆಕ್ರಮಣ ಮಾಡಿ ಕೆಣಕಿ ಸೆಣಸಬೇಕಂತೆ, ಆಗ ಅವರೂ ಬಂದು ನಮ್ಮೊಡನೆ ಕೂಡಿ ತಮ್ಮ ರಾಜ್ಯವನ್ನು ಒಸಗಿ ಹಾಕುವ...."

"ಸಾಕು ಸಾಕು. ಮುಂದೆ ಆದುದನ್ನು ತಿಳಿಸಿರಿ."

"ನಾವು ಮೊದಲಿನಿಂದ ನಮ್ಮ ನೇಹಿಗರಾಗಿರುವ ತಮ್ಮ ರಾಜ್ಯದ ಮೇಲೆ ಅದೂ ವಿನಾಕಾರಣ ಎಂದೂ ಹೋರಾಡುವುದಿಲ್ಲವೆಂದು ಪರಿಚ್ಛೇದಿಸಿ ನುಡಿದೆವು."

"ಸರಿ, ಮುಂದಿನದನ್ನು ನಾವು ತಿಳಿಯಬಲ್ಲೆವು."

"ಚಕ್ರವರ್ತಿಯನ್ನು ಎದುರು ಹಾಕಿಕೊಂಡಿದ್ದಾಗಿದೆ. ಅದಕ್ಕಾಗಿ ನಮಗೆ ತಮ್ಮಂಥ ಪರಾಕ್ರಮ ಧವಳರ ಆಲಂಬನ ಬೇಕೆಂದು...."

"ತಾವು ಇನ್ನು ಯಾವ ಸಂದೇಹವೂ ಇಟ್ಟುಕೊಳ್ಳಬೇಡಿ. ಗೊಜ್ಜಿಗನೊಡನೆ ಮೂರು ಲೋಕಗಳೇ ಒಟ್ಟಾಗಿ ಬರಲಿ. ನಾವು ತಮ್ಮನ್ನು ಬಿಟ್ಟುಕೊಡುವುದು ಪುಸಿಮಾತು.."

"ಇನ್ನು ನಾವು ತಾಯ ಬಸಿರೊಳಗಿನ ಮಗುವಿನಂತೆ. ನಾಳೆಯೇ ಇಲ್ಲಿಂದ ಹೊರಡುತ್ತೇನೆ."

ಗೋವಿಂದ ಚಕ್ರವರ್ತಿಗೆ ಈ ಸುದ್ದಿ ತಿಳಿದು ಕಿಡಿಕಿಡಿಯಾಗಿ ಸಿಡಿದು ನಿಂತ.

“ಈ ಗೊಜ್ಜಿಗನ ಮುಂದೆ ಆ ಬಿಜ್ಜ ಅಂಬೆಗಾಲಿನ ಕೂಸು. ಆ ಕೂಸು ಮರೆಹೊಕ್ಕ ಅರಿಗನೊಬ್ಬ ಕುನ್ನಿ. ಇಬ್ಬರನ್ನು ಪಟ್ಟದಿಂದ ಕಿತ್ತೆಸೆದು ದಿಗ್ಬಲಿ ಕೊಡುವೆ” ಎಂದು ಹಲ್ಲು ಕಡಿಯುತ್ತ ಉಗ್ಗಡಿಸಿದ. ಒಡಲಲ್ಲಿ ಹೆಡೆ ಮುದುಡಿ ಮಲಗಿದ್ದ ಹಿಂದಿನ ಹಗೆ ಹೆಡೆಯೆತ್ತಿತ್ತು. ಕಸಿವಿಸಿಗೊಂಡ ಗೋವಿಂದ ಒಂದೇ ಏಟಿಗೆ ಹಕ್ಕಿಯನ್ನೂ ಹಣ್ಣನ್ನೂ ಬುಟ್ಟಿಗೆ ಹಾಕಿಕೊಳ್ಳಬೇಕೆಂದು ತೀರ್ಮಾನಿಸಿದ. ಅರಿಗನ ಮೇಲೂ ದಾಳಿ ಮಾಡಲು ಇದನ್ನೇ ಸಂದರ್ಭ ಮಾಡಿಕೊಂಡು ಸಚಿವ ಮಂಡಲದವರ ತೃಪ್ತಿಗಾಗಿ ಚಾರರನ್ನು ಬೋದನಕ್ಕೆ ಅಟ್ಟಿದ. ಅರಿಗ ಬಿಜ್ಜನನ್ನೂ ಸಾಮದಾನಾದಿ ಚತುರೋಪಾಯಗಳನ್ನೂ ಬಿಟ್ಟುಕೊಡದೆ ಪಂಪನನ್ನೇ ತನ್ನ ರಾಯಭಾರಿಯಾಗಿ ಮಾನ್ಯಖೇಟಕ್ಕೆ ಕಳಿಸಿದ.

# ೧೫

ತನ್ನ ಒಡ್ಡೋಲಗಕ್ಕೆ ಹಗೆಯ ರಾಯಭಾರಿಯಾಗಿ ಬಂದ ಪಂಪನನ್ನು ಗೊಜ್ಜಿಗ ವಿಶ್ವಾಸದಿಂದ ಕಂಡ. ಅವನಿಗೂ ಮೊದಲಿಂದ ಪಂಪನಲ್ಲಿ ಒಲವು. ಈಗ ಏನಾದರೂ ಮಾಡಿ ಪಂಪನನ್ನು ತನ್ನ ಆಸ್ಥಾನಕ್ಕೇ ತಂದುಕೊಂಡರೆ ಅದೊಂದು ಮಹತ್ಸಾಧನೆಯೆಂಬ ಹವಣಿಕೆ. ಅರಿಗನಿಗೆ ಬಲಗೈಯನ್ನೇ ಮುರಿಯಲು ಅದೇ ಹಾದಿಯೆಂದು ಯೋಚಿಸಿ ಪಂಪನೊಡನೆ ಪ್ರಸ್ತಾಪಿಸಿದ. ಪಂಪ ತನ್ನ ಹೊಣೆಗಾರಿಕೆಯ ಆಳ ನಿರಾಳವನ್ನು ಚೆನ್ನಾಗಿ ಬಲ್ಲವನಾಗಿದ್ದ. ಎಲ್ಲಾ ಪ್ರಲೋಭನೆಗಳನ್ನೂ ದಾಟಿ ನಿಂತ.

"ಪ್ರಭುಗಳೇ, ತಾವೂ ನಮ್ಮ ಅರಸರೂ ದಾಯದಿಗಳು. ಮಹಾ ಭಾರತದ ಕಥೆಯಂತೆ ಮತ್ತೆ ದಾಯಾದಿ ದ್ವೇಷ ಬೇಡವೆಂದು ಬೇಡಿಕೊಳ್ಳುವ ಸಲುವಾಗಿ ನಾನು ಬಂದಿದ್ದೇನೆ."

"ನೀವು ಹೇಳುವುದಾದರೂ ಏನು? ಸೇವಕನಂತೆ ದೂರ ಇರಬೇಕಾದ ಅರಿಗ ಸಾಮಂತನ ಮಗನೆಂಬುದನ್ನು ಮರೆತು ನಮ್ಮೊಡನೆ ಸಮಾನಸ್ಕಂಧನಂತೆ ಒಟ್ಟಿಗೆ ಬಾಳ ಬಯಸುವುದೇ?"

"ತಾವೂ ಅರಿಕೇಸರಿಯವರೂ ಒಂದೇ ನೆತ್ತರ ಕವಲು ಬಳ್ಳಿಗಳು. ಒಟ್ಟಿಗೆ ಬೆಳೆದವರು ಗೆಳೆಯರಾಗಿ ಬಾಳುವುದು ಒಳಿತಲ್ಲವೆ?"

"ಎಂದೆಂದಿಗೂ ಸಾಧ್ಯವಿಲ್ಲ. ಹಗಲು ಇರುಳು ಒಟ್ಟಿಗೆ ಇರಲಾರವು."

"ತಮ್ಮ ಅಭಿಪ್ರಾಯ......"

"ಯುದ್ಧ."

"ತಮ್ಮ ನಿಲುವು ಜನತೆಗೆ ಹಿತ ತರುವುದಿಲ್ಲವೆಂದು ನಮ್ರವಾಗಿ ಸೂಚಿಸಬಯಸುತ್ತೇನೆ ಚಕ್ರವರ್ತಿಗಳೇ."

"ಆ ವಿದುರೋಕ್ತಿಗಳ ಅಗತ್ಯ ನಮಗಿಲ್ಲ. ಅರಿಗನನ್ನು ಗಾಳಿಪಟ ಮಾಡಿ ಆಡಿಸುತ್ತೇವೆ. ಇದು ಕಡೆಯ ಮಾತು."

"ಹಾವಿಗೆ ಮುತ್ತಿಡುವ ಸರಸ ಸರಿಯಲ್ಲ ಮಹಾರಾಜರೆ?"

"ಹಾವಾಡಿಗರಾಗಿ ವಿಷದ ಹಲ್ಲು ಮುರಿದು ಪಳಗಿಸುವುದು ನಮಗೆ

ತಿಳಿದಿದೆ."

"ಆದರೂ ಮಹಾಪ್ರಭುಗಳು ಅರಿಕೇಸರಿಯವರ ದ್ವೇಷ ಕಟ್ಟಿಕೊಳ್ಳುವುದು ಸೆರಗಿನಲ್ಲಿ ಕೆಂಡ ಕಟ್ಟಿಕೊಂಡಂತೆ. ತಲೆ ತುರಿಸಿತೆಂದು ಕೊಳ್ಳಿಯಲ್ಲಿ ಕೆರೆದುಕೊಳ್ಳುವುದು ಒಳ್ಳೆಯದಲ್ಲ."

"ನೀವು ಕೇವಲ ರಾಯಭಾರಿಯಾಗಿ ಈ ಮಾತುಗಳಾಡಿದ್ದರೆ ನಿಮ್ಮ ಒಡಲು ನಮ್ಮ ಹೆಬ್ಬಾಗಿಲಲ್ಲಿ ತೂಗಿರಬೇಕಿತ್ತು. ನಾಡಿನ ಮನ್ನಣೆ ಪಡೆದ ಹಿರಿಯ ವಿದ್ವಾಂಸರೆಂದು ಸಹಿಸಿಕೊಂಡು ಬಿಟ್ಟಿದ್ದೇವೆ. ಇನ್ನು ನೀವು ಪಯಣಿಸಿರಿ. ನಾಳೆ ರಣರಂಗದಲ್ಲಿ ಸಂಧಿಸೋಣ."

ಗೋವಿಂದ ಸಿಂಹಾಸನ ಬಿಟ್ಟು ಎದ್ದು ನಿಂತು ಕಸಿವಿಸಿಯಿಂದ ಸಭೆ ವಿಸರ್ಜಿಸಿದ. ಪಂಪನಿಗೂ ತುಂಬಾ ಮುಜುಗರವಾಯಿತು. ಈ ರಾಜರ ಗೊಡವೆಯೇ ಬೇಡವೆನಿಸಿತು.

ಪಂಪ ತನ್ನ ರಾಯಭಾರ ವಿಫಲವಾಯಿತೆಂದು ಚಿಂತಿಸಬೇಕಾಗಿ ಬರಲಿಲ್ಲ. ಅವರ ಸಾಫಲ್ಯ ಬೇರೆ ಕಡೆ ನಡೆದಿತ್ತು. ಗೋವಿಂದ ಸಾಮ್ರಾಟನ ಚಿಕ್ಕಪ್ಪ ಬದ್ದೆಗ ಪಂಪನ ಅಭಿಪ್ರಾಯಗಳನ್ನು ಅನುಮೋದಿಸಿದ. ತಾನು ಹುಡುಗನಾಗಿದ್ದಂದಿನಿಂದ ತನ್ನನ್ನು ಅಕ್ಕರೆಯಿಂದ ಕಂಡು ಹಾರೈಸಿದ ಬದ್ದೆಗನಲ್ಲಿ ಪಂಪನಿಗೂ ಗೌರವ. ಬದ್ದೆಗ ಪಂಪ ಗುಟ್ಟಾಗಿ ಕಲೆತು ಗಂಟೆಗಟ್ಟಲೆ ಭವಿಷ್ಯದತ್ತ ಗುರಿಯಿಟ್ಟು ಚರ್ಚಿಸಿದರು. ಬದ್ದೆಗನ ಮಗ ಮುಮ್ಮಡಿ ಕೃಷ್ಣ ಕೂಡ ಪಂಪನನ್ನು ಅಣ್ಣನೆಂದು ಕರೆದು ಪ್ರೀತಿ ತೋರಿದ. ಆ ಎಳೆಯನಲ್ಲಿ ಪಂಪನಿಗೆ ಆಶಾಕಿರಣ ಕಂಡಿತು. ಅಲ್ಲದೆ ಅರಿಗ ಮಾನ್ಯಖೇಟದಲ್ಲಿದ್ದಾಗ ಮೆಚ್ಚಿಕೊಂಡಿದ್ದ ಅಧಿಕಾರಿಗಳೂ ಹಳಬರೂ ಅರಮನೆ ಗುರುಮನೆಗಳ ಊಳಿಗ ಮಾನ್ಯರೂ ಅರಿಕೇಸರಿಗೇ ಒಳಗೊಳಗೆ ಕುಮ್ಮಕ್ಕು ತೋರಿದರು. ಅಂತೂ ರಟ್ಟರ ರಾಜಧಾನಿಯಲ್ಲೇ ಇಬ್ಬಣಗಳು ಏರ್ಪಟ್ಟದ್ದು ನೈತಿಕ ವಿಜಯದ ಸಂಕೇತವೆಂದು ಪಂಪ ಪರಿಭಾವಿಸಿದ.

ಪಂಪ ಹೊರಡುವಾಗ ಚೇರಲಕ್ಷ್ಮಿಯನ್ನು ಕಂಡು ಲೇಸು ನುಡಿದ ಬಂದ. ಚೇರಲಕ್ಷ್ಮಿ ರಟ್ಟರ ರಾಜನರ್ತಕಿ. ರಾಷ್ಟ್ರಕೂಟರಿಗೆ ಚೇರಲಕ್ಷ್ಮಿ ಕೇರಳದ ಕೊಡುಗೆಯಾಗಿ ಬಂದಿದ್ದಳು. ಅವಳ ನರ್ತನವೆಂದರೆ ನವರಸಭರಿತ ಕಾವ್ಯ ಆಸ್ವಾದಿಸಿದಂತೆ. ಚೇರಲಕ್ಷ್ಮಿಯ ಮೈಮಾಟದಿಂದಾಗಿ ದಂತದಲ್ಲಿ ಕಡೆದ ಪುತ್ಥಳಿಯೆಂದು ಆಸ್ಥಾನದವರು ಕರೆಯುತ್ತಿದ್ದರು. ಅವಳ ಹೆಜ್ಜೆಗೆ ಸಾವಿರ ಗದ್ಯಾಣ ಸುರಿಯಲು ಅರಬೋಜಗರು ಸಿದ್ಧರಿದ್ದರು. ಅಂಥವಳ ಸಖ್ಯ ಪಂಪನಿಗೆ ಒದಗಿ ಬಂದದ್ದು ಒಂದು ಆಕಸ್ಮಿಕ ಘಟನೆಯ ಫಲ. ಅದು ಪಂಪ ತನ್ನ ಕೆಲವು ಕಾಪಿನ

ಭಟರೊಡನೆ ಬೋದನದಿಂದ ಆಶ್ವಾರೋಹಿಗಳಾಗಿ ಬರುವಾಗ ಮಾನ್ಯಖೇಟಕ್ಕೆ ಎರಡು ಯೋಜನದಾಚೆ ನಡೆಯಿತು.

* * * *

ದಟ್ಟವಾದ ಕಾಡಿನ ನಡುವೆ ಶಿವಾಲಯ. ಸೋಮವಾರ ಶುಕ್ರವಾರ ಅಲ್ಲಿ ವಿಶೇಷ ಪೂಜೆ. ನೂರಾರು ಜನ ಬರುವರು. ಅರಣ್ಯ ಸಂಪತ್ತು ಸವಿಯಲೂ ವನಭೋಜನದ ಸುಖಕ್ಕೂ ಅನೇಕರು ಬರುವುದುಂಟು. ಚೇರಲಕ್ಷ್ಮಿ ತನ್ನ ಮಿತಪರಿವಾರದೊಡನೆ ಪೂಜಾದಿನಗಳನ್ನು ಬಿಟ್ಟು ನಿತ್ಯದ ದಿನಗಳಲ್ಲಿ ಬರುವುದು ವಾಡಿಕೆ. ಜನ ಸಮ್ಮರ್ದವಿಲ್ಲದೆ ಆ ಅರಣ್ಯದಲ್ಲಿ ಬಿಡುವಿನಲ್ಲಿ ನಿಧಾನವಾಗಿ ನೋಡಿಬರುವ ಸ್ವೇಚ್ಛೆಯಾಗಿ ಅಡ್ಡಾಡಿ ಬರುವ ರೂಢಿ.

ಅಂದು ಎಂದಿನಂತೆ ಬಂದು ಹಿಂತಿರುಗುವಾಗ ಹಗಲುಗಳ್ಳರ ಹತ್ತು ಜನರ ತಂಡ ಹೊಂಚು ಹಾಕಿ ಆಭರಣ ದೋಚಲು ಮೇಲೆ ಬೀಳಗೊಡಗಿದರು. ಚೇರಲಕ್ಷ್ಮಿಯ ಮೇನಾ ಹೊತ್ತವರು ಕಳ್ಳರ ವಿಷಲೇಪಿತ ಬಾಣಗಳಿಗೆ ಬಲಿಯಾದರು. ಚೇರಲಕ್ಷ್ಮಿಯ ದಾಸಿಯರು ಗಟ್ಟಿಯಾಗಿ ರೋದಿಸಿ ಬೊಬ್ಬೆ ಮಾಡಿದರು. ಇನ್ನೂ ಬೊಬ್ಬಿರಿದು ಕೂಗಿದರೆ ಕತ್ತರಿಸುವುದಾಗಿ ಬೆದರಿಸಿ ಆಭರಣ ಕಳಚಿ ಕೊಡಲು ದರೋಡೆಗೋರರು ಬೆದರಿಸಿದರು.

ಸಮೀಪದಲ್ಲೇ ಹೋಗುತ್ತಿದ್ದ ಪಂಪ ಭೀತಸ್ವರದತ್ತ ಧಾವಿಸಿದ. ಶಬ್ಧ ಭೇದಿ ವಿದ್ಯೆಯ ಸೂಕ್ಷ್ಮವರಿತಿದ್ದು ಬಳಿಯ ಹುಣಸೆ ತೋಪಿನತ್ತ ಬಂದವನೇ ದೊಡ್ಡ ಮರ ಹತ್ತಿ ದೃಷ್ಟಿ ದುರ್ಬೀನು ಹಾಯಿಸಿದ. ಅಲ್ಲಿಯೇ ಹಗಲುಗಳ್ಳರ ತಂಡದ ಲೂಟಿ ಕಾಣಿಸಿತು. ಮೈಯೆಲ್ಲಾ ಕಣ್ಣಾಗಿ ಕಿವಿಯಾಗಿ ಹೊಂಚು ಹಾಕುತ್ತಿದ್ದ ಕಳ್ಳರು ಸುತ್ತ ನೋಡುತ್ತಿದ್ದರು. ಪಂಪ ಉಳಿದ ಒಂದೇ ದಾರಿಯೆಂದು ಮರದಿಂದ ಮರಕ್ಕೆ ಜಿಗಿದು ಸರಿಯಾದ ಇಕ್ಕೆದಾಣದಲ್ಲಿ ನೆಮ್ಮಿನಿಂತ. ಬೆನ್ನ ಹಿಂದೆ ಕಟ್ಟಿದ ಮೂಡಿಗೆಯಿಂದ ಒಂದೊಂದಾಗಿ ಮೊನಚು ಬಾಣಗಳನ್ನೆಳೆದು ಹೆದೆಯೇರಿಸಿ ಗುರಿ ಹಿಡಿದು ಬಿಟ್ಟ. ಅಂಬುಗಳು ಬರುವ ಮೂಲ ಹುಡುಕುವುದರಲ್ಲಿ ಅಯ್ವರು ಕಳ್ಳರು ಮಣ್ಣು ಮುಕ್ಕಿದರು. ಉಳಿದವರು ಪಂಪ ಹತ್ತಿ ನಿಂತಿದ್ದ ಮರದತ್ತ ಧಾವಿಸುತ್ತಿದ್ದಂತೆ ಪಂಪನ ಸೂಚನೆ ಅನುಸರಿಸಿ ಬಂದ ಅವನ ಕಾಪಿನವರ ಕೈಗೆ ಸೆರೆ ಸಿಕ್ಕರು.

ತನ್ನ ಕಥೆ ಮುಗಿಯಿತೇನೋ ಎಂದು ಭೀತಳಾಗಿ ಬಿರುಗಾಳಿಗೆ ಸಿಕ್ಕ ತರಗೆಲೆಯಗಿದ್ದ ಚೇರಲಕ್ಷ್ಮಿ ಪಂಪನಿಗೆ ಕೈ ಜೋಡಿಸಿದಳು. ತನ್ನ ಪರಿಚಯ ತಿಳಿಸಿದಳು. ಮನೆಗೊಮ್ಮೆ ಅತಿಥಿಯಾಗಿ ಬರಬೇಕೆಂದು ವಿಜ್ಞಾಪಿಸಿದಳು. ಕಣ್ಣಲ್ಲಿ

ಕೃತಜ್ಞತೆ ಹನಿಯಿತು.

ಪಂಪ ಚೇರಲಕ್ಷ್ಮಿಯ ಮನೆಗೆ ಹೋದಾಗ ಅದೊಮದು ಪುಟ್ಟ ಅರಮನೆಯೆಂದು ತಿಳಿಯಿತು. ಪಂಪನಿಗೆ ಆತ್ಮೀಯ ಸ್ವಾಗತ ದೊರೆಯಿತು. ತಮ್ಮ ಪಾಲಿನ ದೈವವೇ ದಯಮಾಡಿಸಿತೆಂದು ದಾಸಿಯರು ಕೊಂಡಾಡಿದರು. ಅವರೆಲ್ಲ ಸೇರಿ ಎಷ್ಟು ಅಂಗಲಾಚಿದರೂ ಪಂಪ ಅಂದೇ ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ತಿಳಿಸಿದ.

"ನಾನು ದಾಕ್ಷಿಣ್ಯಪರನಲ್ಲ. ಹಾಗೆಂದು ನಿರ್ದಯಿಯೂ ಅಲ್ಲ. ರಾಜಕಾರ್ಯ ಗೌರವ ನಿಮಿತ್ತ ಬಂದಿದ್ದೇನೆ. ತತ್ಫಲವಾಗಿ ನಾನು ಶೀಘ್ರಗತಿಯಿಂದ ತೆರಳಬೇಕಾಗಿದೆ."

"ನೀವು ಇಷ್ಟು ಹೇಳಿದ ಮೇಲೆ ಒತ್ತಾಯಿಸಲು ನಮಗೆಲ್ಲಿಯ ಅಧಿಕಾರ? ಆದರೆ ನನ್ನ ಒಂದು ಬೇಡಿಕೆಯನ್ನಾದರೂ ನಡೆಸಿಕೊಡುವಿರಾ?"

"ಅದೇನೆಂದು ತಿಳಿಸಿದರಿ. ತಕ್ಕುದಾದ ಕೋರಿಕೆಗಳನ್ನು ಸ್ವೀಕರಿಸಬೇಕಾದುದು ನ್ಯಾಯ."

"ನಾವು ತಕ್ಕುದಲ್ಲದುದನ್ನು ಬೇಡುವ ತಕ್ಕಿನವರಲ್ಲ."

"ಛೆ ಛೆ, ನನ್ನ ಮಾತನ್ನು ಅಪಾರ್ಥಮಾಡಿಕೊಂಡಿರಿ."

"ಹಾಗಲ್ಲ, ಹೊಸ ಪರಿಚಯವಾದುದರಿಂದ ನಮ್ಮ ಬಗೆಗೆ ನಾವೇ ಒಂದು ಮಾತು ಹೇಳಿಕೊಂಡೆವಷ್ಟೆ. ಇನ್ನು ನನ್ನ ಪ್ರಾರ್ಥನೆಯಾದರೂ ಇಷ್ಟೇ, ನೀವು ನನ್ನ ನರ್ತನವನ್ನು ಕೃಪೆಯಿಟ್ಟು ಸ್ವಲ್ಪ ಕಾಲ ನೋಡಬೇಕು."

ಪಂಪ ಕ್ಷಣಕಾಲ ಯೋಚನೆಗೀಡಾದ. ಕಡೆಗೆ ಒಪ್ಪಿಗೆಯೆಂಬಂತೆ ತಲೆಯಾಡಿಸಿದ. ಕೆಲವೇ ನಿಮಿಷಗಳಲ್ಲಿ ವಾದ್ಯಗಾರರು ಅಣಿಯಾದರು. ಚೇರಲಕ್ಷ್ಮಿ ಹೊಸ ಪೋಷಾಕಿನೊಡನೆ ಸಜ್ಜಾಗಿ ಗೆಜ್ಜೆ ಕಟ್ಟಿಕೊಂಡು ಹೆಜ್ಜೆ ಹಾಕತೊಡಗಿದಳು.

ಒಂದು ಗಂಟೆ ಒಂದು ನಿಮಿಷವಾಯಿತು. ಪಂಪ ಮೈಯೆಲ್ಲಾ ಕಣ್ಣಾಗಿ ನೋಡಿದ. ಆ ಅಂಗಾಂಗ ವಿನ್ಯಾಸ, ಪದಗತಿ, ಮುಖಭಂಗಿ, ಕಣ್ನೋಟ ಎಲ್ಲಾ ಸಿದ್ಧ ಕಲೆಯ ಪ್ರತಿಬಿಂಬವಾಗಿ ರಂಜಿಸಿತು. ತಿಂಗಳಿಗೊಮ್ಮೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಅರಮನೆಯಲ್ಲಿ ನರ್ತಿಸುವ ರಾಜನರ್ತಕಿ ಮತ್ತೆ ಯಾರು ಬೇಡಿದರೂ ಎಷ್ಟು ಕೊಟ್ಟರೂ ನೃತ್ಯ ಮಾಡುತ್ತಿರಲಿಲ್ಲ. ಅಂಥವಳು ಇಂದು ಪಂಪನೆದುರು ತಾನಾಗಿ ಬೇಡಿ ಕುಣಿದಿದ್ದಳು. ಆ ಕುಣಿತದಲ್ಲಿ ಆತ್ಮಾನಂದದ ಸಮರ್ಪಣೆಯ ಸಂತೃಪ್ತಿ ಲೇಪಿಸಿತ್ತು. ಪಂಪನಿಗೆ "ಇವಳೇನು ನೀಳಾಂಜನೆಯ ಪಟ್ಟ ಶಿಷ್ಯೆಯೆ?" ಎನ್ನಿಸಿತು. ಒಳಗುಣ್ಮಿದ ಆನಂದವನ್ನು ಹೊರಗೆಡಹಿದ ಹೊರತು

ಸಮಾಧಾನವಾಗಲಿಲ್ಲ.

"ಚೇರಲಕ್ಷ್ಮೀಯವರೇ, ನಿಮ್ಮ ಈ ಅದ್ಭುತ ನರ್ತನ ನೋಡದೆ ಹೋಗಿದ್ದರೆ ನಾನೊಂದು ಸುವರ್ಣಾವಕಾಶವನ್ನು ಕಳೆದುಕೊಳ್ಳುತ್ತಿದ್ದೆ. ಈ ರಸ ನಿಮಿಷಗಳು ಬಹುಕಾಲ ನನ್ನ ಚಿತ್ತಭಿತ್ತಿಯಲ್ಲಿ ಅಚ್ಚೊತ್ತಿ ನಿಲ್ಲುತ್ತವೆ. ನೀವು ರಾಜನರ್ತಕಿಯಲ್ಲ ದೇವನರ್ತಕಿ."

"ಇದೇನಿದು ನೀವು ಹೀಗೆ ಹೊಗಳ ತೊಡಗಿದಿರಿ. ನನಗೆ ನಿಮ್ಮ ಸಂತೋಷವೇ ಸೌಭಾಗ್ಯ. ಬೇರೆ ಹೊಗಳಿಕೆ ಬೇಡ."

"ನಾನು ಹೊಗಳಿದ್ದಲ್ಲ. ವಸ್ತುಸ್ಥಿತಿಯನ್ನು ಮರೆಮಾಡದೆ ಹೇಳಿದ್ದೇನೆ."

"ಆಯಿತು. ಬಿಡಿ, ನನ್ನ ದೇವರಿಗೆ ಇದು ಮೆಚ್ಚುಗೆಯಾಯಿತಲ್ಲ, ನಾನು ಧನ್ಯೆ."

"ನಾನೇನೂ ದೇವನಲ್ಲ. ನಿಮ್ಮಂತೆ ಮಾನವ."

"ನನ್ನ ಪಾಲಿಗೆ, ಬಾಳಿಗೆ ನೀವು ದೇವರಾಗಿಯೇ ಪ್ರತ್ಯಕ್ಷರಾದಿರಿ."

* * * *

ಪಂಪ ಚೇರಲಕ್ಷ್ಮಿಯ ಮನೆಯಲ್ಲಿ ಔತಣಮಾಡಿಕೊಂಡು ಬೋದನಕ್ಕೆ ಹೊರಟ. ಅರಿಗ ಪಂಪನ ಬರವನ್ನೇ ಎದುರು ನೋಡುತ್ತಿದ್ದ. ಸಂಧಾನ ಸೋತದ್ದು ನಿರೀಕ್ಷಿತವೇ. ಆದ್ದರಿಂದ ನಿರಾಶೆ ಆಗಲಿಲ್ಲ. ಅರಿಕೇಸರಿ ಗೊಜ್ಜಿಗನ ಒಲವಿಗಾಗಿ ಹಾತೊರೆದದ್ದು ಹೆದರಿಕೆಯಿಂದ ಅಲ್ಲ. ಅದು ರಕ್ತಭಾಂಧವ್ಯದ ಕರೆ. ಅರಿಗನಿಗೆ ದೊರೆತದ್ದು ಒಗೆತನವಲ್ಲ ಹಗೆತನ. ಪಂಪ ಮುಂದಿನದಕ್ಕೆ ಏರ್ಪಾಟು ಮಾಡಲು ಕೇಳಿಕೊಂಡ.

"ಪ್ರಭೂ, ನೀವಿಬ್ಬರೂ ಸಮಾನ ವಯಸ್ಕರಿರಬಹುದು. ಆದರೆ ಸಮಾನ ಶೀಲರಲ್ಲ. ಮೊದಲಿನಿಂದ ಮನಃಕಷಾಯವೇರ್ಪಟ್ಟು ನೇಹ ಕೂಡಿಬರಲಿಲ್ಲ. ಪಟ್ಟವೇರಿದ ಪ್ರಭು ಅಂದಣವೇರಿದ ಸೊಣಗನಾಗಬಾರದು. ಅರಸುತನ ಗದ್ದುಗೆ ಹತ್ತಿ ಕುಳಿತು ಆಳುವುದಷ್ಟೇ ಅಲ್ಲ. ಪ್ರಜೆಗಳ ನೆರೆ ರಾಜ್ಯದ ಬಂಧುಗಳ ಹಿತಗಳನ್ನು ಅರಳಿಸಬೇಕು. ನಾನು ಎಷ್ಟೇ ಹೇಳಿದರೂ ಗೋವಿಂದರಸರು ಹಾಲನ್ನು ನೋಡಿದರೇ ಹೊರತು ಬಡಿಗೆಯನ್ನು ಕಾಣಲಿಲ್ಲ. ಯುದ್ಧ ಅನಿವಾರ್ಯ."

ಸಾಮಂತ ಅರಿಗ ಮತ್ತು ಚಕ್ರವರ್ತಿ ಗೊಜ್ಜಿಗರ ನಡುವೆ ಕಾಳಗ ಏರ್ಪಟ್ಟಿತು. ಪೂರ್ವದ ಚಾಲುಕ್ಯರ ವಿಜಯಾದಿತ್ಯನ ಪಡೆಯೂ ಬರತೊಡಗಿತು. ಮೊನೆ ಮುಟ್ಟೆ ಗಂಡರೂ, ವೀರ ಲೆಂಕರೂ ಕೈದುಗಳನ್ನು ಮಸೆದು ಸಜ್ಜಾದರು. ಪಥ ಶಿಲ್ಪಿಗಳು ಶೋಧನಕರ್ಮ, ವಹನಕರ್ಮ, ಅಪನಯನ ಕರ್ಮ, ಈ ಮೂವಿಟ್ಟಿ

ಕೆಲಸಕ್ಕೆ ಕರೆಕೊಟ್ಟರು. ಗೊಜ್ಜಿಗನ ಕಡೆಯ ಪಡೆಯೂ ಕಡಲ ಅಲೆಗಳಂತೆ ಬೋರ್ಗರೆದು ಬಂದು ಬೀಡುಬಿಟ್ಟಿತು. ಮೊದಲ ದಿನ ಅರಿಕೇಸರಿಯ ಕಡೆ ವಿಜಯಾದಿತ್ಯನೇ ವೀರಪಟ್ಟ ಪಡೆದು ನಿಂತ. ಗೋವಿಂದನ ಪಡೆಗೆ ವೀರ ಬಪ್ಪುವನೆಂಬ ಸಾಮಂತ ದೊರೆ ತಂತ್ರಾಧ್ಯಕ್ಷನಾಗಿ ಎದುರಾದ. ಬಪ್ಪುವಿನದು ಹಳೆಯ ಹಗೆ. "ಅರಿಕೇಸರಿಯೆಂಬ ಒಳ್ಳೆ, ಪಂಪನೆಂಬ ಮೊಲ, ವಿಜಯಾದಿತ್ಯನೆಂಬ ಒಂಟೆ ನಮಗೆ ಈಡೆ?" ಎಂಬುದು ಒಂಟೆಪ್ಪುವನ ದರ್ಪದ ಬಣ್ಣನೆ. ಮೊದಲೆರಡು ದಿನಗಳಲ್ಲಿ ಎರಡೂ ಕಡೆ ಸಮ ಸಮನಾಗಿ ಸೆಣಸಾಡಿದರು. ಮೂರನೆಯ ದಿವಸ ಅರಿಕೇಸರಿಯ ಪಡೆಯಲ್ಲಿ ನಾಯಕ ವಿಜಯಾದಿತ್ಯ ಏಟು ತಿಂದು ಮೂರ್ಛೆ ಬಿದ್ದ. ರಥ ಪದಾತಿಗಳವರು ಅಧೀರರಾದಂತೆ ಕಂಡಿತು. ನಾಲ್ಕನೆಯ ದಿವಸಕ್ಕೆ ಮತ್ತೆ ಸಜ್ಜಾದರು.

ಅಂದಿನ ಯುದ್ದಕ್ಕೆ ಪಂಪನನ್ನೇ ಸೇನಾನಾಯಕನನ್ನು ಮಾಡಿ ಅಗ್ಗಳ ವೀರಪಟ್ಟ ಕಟ್ಟಿದರು.

ಭಯದ ಅಚ್ಚರಿಯಿಂದ ಹಗೆ ಹೆದರುತ್ತಿರಲು ಶೂರ ಯೋಧರ ಮಸೆಯುತ್ತಿರುವ ರೌದ್ರನಾದ ಆಯುಧಗಳಿಂದ ಉಬ್ಬಿದ ಕೆಂಪಾದ ಕಿಡಿಗಳು. ತಾಗಿ ಬೇಗನೆ ಹಿಡಿಯಲು ನುಗ್ಗಿದಂತೆ ಹೊಳೆಯುತ್ತಿರುವ, ಆ ಸಂಜೆಯ ಕೆಂಬಣ್ಣ ಸಾಣೆಗೆ ಚಾಚಿದ ಇಟ್ಟಿಗೆಯ ಕೆಂದೂಳಿಯಂತೆ ಕಾಣುವ ನೇಸರು ಪಡುವಣದಲ್ಲಿ ಇಳಿದನು.

ನಾಲ್ಕು ಜಾವಗಳ ಕಡೆಯಲ್ಲಿ ಎರಡೂ ಕಡೆಯ ಬಲಗಳಲ್ಲಿ ಉಂಟಾದ ಗಂಟೆಯ ಧ್ವನಿಯೂ ಸಂಜೆ ಸಮಯದಲ್ಲಿ ಹುಟ್ಟಿದ ಶಂಖಧ್ವನಿಯೂ ಪಂಚಮಹಾ ಶಬ್ಧ ಧ್ವನಿಯೂ ಒಡನೊಡನೆ ಉಂಟಾದುವು. ಆಗ ಎರಡೂ ಬೀಡುಗಳಲ್ಲಿ ಭೋರೆಂದು ಕೂಗಿ ಸಾಮೂಹಿಕ ಶಬ್ದಗೈದು ಇರುಳಾಯಿತೆಂಬ ಸೂಚನೆ ಕೊಡಲು ಕೊಳ್ಳಿ ಬೀಸಿದರು. ಕೊಳ್ಳಿಗಳನ್ನು ಅಪಾರ ಸಂಖ್ಯೆಯುಲ್ಲಿ ಬೀಸಿದರ ಪರಿಣಾಮವಾಗಿ ಉರಿಸೋಕಿದ ಹತ್ತಿಯಂತೆ ಅಂಬರ ಉರಿಯಿತು.

# ೧೬

ಪಂಪ ತನ್ನ ಪಾಳೆಯದ ಒಂದು ಪಕ್ಷಿನೋಟ ಪಡೆದುಬರಲು ಹೊರಟ. ಯುದ್ಧ ನಡೆಯುವ ದಿನಗಳಲ್ಲಿ, ತಂತ್ರಹಾಳಿಕೆಯನ್ನು ಒಪ್ಪಿಕೊಂಡಮೇಲೆ ನಿದ್ರೆಗೆ ಇತಿಶ್ರೀ ಹಾಡಿದಂತೆ. ತನ್ನ ಭಟರ ಅಳವು ಸರಿಯಾಗಿ ತಿಳಿಯಬೇಕಾದರೆ ಇರುಳು ಬಿಡುವಿನಲ್ಲೇ ತಕ್ಕ ಸಮಯವೆಂದು ಪಂಪ ಸರಿಯಾಗೇ ಭಾವಿಸಿದ್ದ. ಒಂದುಕಡೆ ಯುದ್ಧಕವಚ ಬಿಚ್ಚುತ್ತಿದ್ದು ಅನಂತರ ಭಟರು ಅನೇಕರು ಬಿಳಿ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು. ಅವರವರ ಆರಾಧ್ಯ ದೇವನನ್ನು ಪೂಜಿಸುತ್ತಿದ್ದರು. ಕೆಲವರು ಅವರು ಬಳಸುವ ಕೈದುಗಳನ್ನು ಅರ್ಚಿಸುತ್ತಿದ್ದರು. ಇನ್ನೊಂದು ಕಡೆ ತಾವು ಹತ್ತಿ ಹೋಗುವ ಕಾಳಗದ ಕುದುರೆಗಳಿಗೆ ಆರತಿ ಎತ್ತುತ್ತಿದ್ದರು. ಮಗದೊಂದು ಕಡೆ ರಥಗಳಿಗೆ ಹೂ ಹಣ್ಣು ಕರ್ಪೂರ ಆರತಿಗಳನ್ನರ್ಪಿಸಿ ಇಡುಗಾಯಿ ನೀವಳಿಸಿ ಹೊಡೆಯುತ್ತಿದ್ದರು. ಈ ರೀತಿಯಲ್ಲಿ ಅತಿರಥ ಸಮರಥ ಮಹಾರಥ ಅರ್ಧ ರಥಿಕರು ಒಪ್ಪುತ್ತಿದ್ದರು.

ಪಂಪ ಹಾಗೇ ಮುಂದೆ ಹೊರಟ. ಅವನ ಪಡೆಯ ವೀರಾಳುಗಳು ಅವರವರ ಗುಂಪಿನೊಡೆಯನೆದುರು ವೀರಾಲಾಪಗಳನ್ನೂ ವೀರ ಪ್ರತಿಜ್ಞೆಗಳನ್ನೂ ಮಾಡುತ್ತಿದ್ದರು. ಕೆಲವು ಕಟ್ಟಾಳುಗಳು ತಮ್ಮ ಸೇನಾನಾಯಕನ, ದೊರೆಯ ಹೆಸರು ಹೇಳಿ ನಾಳಿನ ಕಾಳಗದಲ್ಲಿ ಸೆಣಸುವ ಪರಿಯನ್ನು ತಿಳಿಸುತ್ತಿದ್ದರು. ಒಬ್ಬ ಸಾಮಾನ್ಯ ಕಾಲಾಳು ಎಳ್ಳಷ್ಟೂ ಅಳ್ಳೆವಾರು ಇಲ್ಲದೆ ಹೇಳಿದ ಮಾತುಕೇಳಿ ಪಂಪನಿಗೆ ನವಿರೆದ್ದಿತು. 'ಗೆಳೆಯನೇ ನೀನೇನೋ ದೊಡ್ಡ ಪ್ರತಿಜ್ಞೆಗಳನ್ನೆಸಗಿದೆ. ನಾಳೆ ನಾನು ಕೂಡ ಹಗೆಯ ಪಡೆಯ ಆನೆಗಳಿಂದಾಗುವ ಕಾಳಗದಲ್ಲಿ ಎದುರಾಗುತ್ತೇನೆ. ನೀನೂ ನಿನ್ನ ಕಲಿಗಳೂ ಎಲ್ಲರಿಗಿಂತ ಮುಂಚೆ ಹೋಗಿ ತಾಗಬಹುದು. ನಾನು ನಿಮ್ಮ ಅನಂತರದ ತುಕಡಿಯ ಕಡೆಯುವನು. ನಿಮ್ಮಷ್ಟು ಮೊದಲು ಮೇಲೆ ಬೀಳುವ ಪುಣ್ಯವಿಲ್ಲ. ಆದರೂ ತಡವಾಗಿ ನುಗ್ಗಿದರೂ ಅಳ್ಕುರೆ ತಾಗಿ ಹಗೆಯ ಕಡೆಯ ಮೇಲಾಳುಗಳನ್ನು ಹೋಗಿ ನುಗ್ಗಿ ಹೊಡೆಯುವೆ. ಕಟ್ಟಾಳುಗಳನ್ನೇ ಅಟ್ಟಿಟ್ಟಿ ಹೊಡೆಯುವೆ. ನನ್ನ ಈ ತಲೆ ಹೋದರೂ ನನ್ನ ಕಾದಾಟ ನಿಲ್ಲದು. ಹೇಗೆನ್ನುವೆಯೋ? ನನ್ನ ಈ ಅಟ್ಟೆಯೇ ಕಟ್ಟಾಳುಗಳನ್ನು

ಬೆನ್ನಟ್ಟಿ ಮುಟ್ಟಿ ಕಾದುವುದು" ಅವನ ಮನಸ್ಸಿನ ಚೈತನ್ಯ ತೀಕ್ಷ್ಣತೆಗಳನ್ನು ಅವರ ಪಡೆನಾಯಕ ಮೆಚ್ಚಿದ. ಮತ್ತೊಬ್ಬ ತನ್ನನ್ನು ಆಳ್ದ ಸ್ವಾಮಿ ಅಷ್ಟು ದಿನ ಸಾಕಿದುದನ್ನು ನೆನೆದು ಕರಂ ಮೆಯ್ಯುಬ್ಬಿ ನುಡಿಯತೊಡಗಿದನು—

'ಒದವಿದ ನಿನ್ನ ಒಂದು ದಯೆಯು ದೊಡ್ಡದೊ ಇಲ್ಲವೇ ಹೆಸರಾದ ನನ್ನ ಅದಟು, ಗಂಡುಗಲಿತನ ಹಿರಿದೊ ಎಂದು ಸಂದೇಯವಾಗುತ್ತದೆ. ಇವೆರಡನ್ನು ಇಲ್ಲೇ ಈಗ ತೂಗಿ ನೋಡಿದರೆ ಅದು ತಿಳಿಯುವುದಕ್ಕೆ ಆಗುತ್ತಿಲ್ಲ. ಅದು ಕಾರಣ ವಾಗಿ ನಾನು ಬೇರೆ ತೆರದಲ್ಲಿ ತೂಗಿ ನೋಡುತ್ತೇನೆ. ನಾಳೆ ಕಾಳಗ ಕಣಕ್ಕಿಳಿದಾಗ ಹಗೆಗಳೊಡೆಯನ ಮದಿಸಿದ ಆನೆಯ ದಂತವೆಂಬ ತೊಲೆಯನ್ನೇ ತಕ್ಕಡಿ ಮಾಡಿ ಕಲಿತನದಿಂದ ನನ್ನನ್ನೇ ತೂಗಿ ತೋರಿಸುತ್ತೇನೆ" ಎಂದು ಹೆದರಿಕೆ ಅಪಾಯಗಳನ್ನು ಲೆಕ್ಕಿಸದೆ ಶೌರ್ಯವನ್ನು ನುಡಿದಾಡಿದನು.

ಮೇಳದಾಳುಗಳ ರಣದಾಳುಗಳ ತುಳಿಲಾಳ್ತನಕ್ಕೆ ಹೆಜ್ಜೆ ಹೆಜ್ಜೆಗೂ ಸಾಕ್ಷಿ ಸಿಗುತ್ತಿತ್ತು. ಮತ್ತೆ ಒಂದೆಡೆಯಲ್ಲಿ ಒಬ್ಬ ವೀರಭಟ ಉದಾರವೀರರಸ ರಸಿಕನಾಗಿ 'ಕುದುರೆಯನ್ನು ಹತ್ತಿದ ಸವಾರನ ಸಮೇತ ಸಿಳ್ ಎಂದು ಕತ್ತರಿಸಿ ಹೋಗುವ ಹಾಗೆ ಹೊಡೆದೂ, ಕಟ್ಟಿದಿರಿನಲ್ಲೇ ಚೆನ್ನಾಗಿ ನುಗ್ಗಿ ಬಂದ ಆನೆಗಳ ಕೋಡುಗಳ ಬಳೆಗಳಂತಿರುವ ಅಣಸುಗಳು ಬಿದ್ದುಹೋಗುವಂತೆ ಹೊಡೆದೂ, ಅಂತು ಅದಟರನ್ನು ಒಟ್ಟೊಟ್ಟಿಗೆ ಹೊಡೆದೂ, ಎರಡು ಕಡೆಯ ಪಡೆಗಳೂ ನನ್ನನ್ನೇ ನೀಡಲು ತಕ್ಕ ಶೌರ್ಯವನ್ನೂ ಪ್ರತಾಪವನ್ನೂ ಆಜಿರಂಗದಲ್ಲಿ ನನ್ನ ಅರಸನಿಗೆ ತೋರಿಸುತ್ತೇನೆ, ಜೋಳದ ಪಾಳಿ ತೀರಿಸುತ್ತೇನೆ'– ಎಂದು ಅತಿವೇಗದಿಂದ ಕೂಡಿದ ಕಾಳಗದೊಸಗೆಯನ್ನೂ ತನ್ನ ಅಧೀನನವನ್ನಾಗಿ ಮಾಡಿ ನುಡಿದನು.

ಪಂಪ ಮೆಚ್ಚಿ ತಲೆದೂಗಿ ಮುಂದೆ ಹತ್ತಾರು ಹೆಜ್ಜೆಯಿಟ್ಟ. ಅಲ್ಲಿ ಮತ್ತೋರ್ವ ಕಲಿ ಅತ್ಯುಗ್ರವಾದ ಕತ್ತಿ ತುದಿಯನ್ನು ಸಿದ್ಧಮಾಡಿಕೊಂಡು ಶೌರ್ಯಗ್ರಹಕ್ಕೆ ಒಳಗಾದವನಂತೆ; ಡಿಳ್ಳವಾರು ಇಲ್ಲದೆ ನುಡಿಯುತ್ತಿದ್ದ;

'ಸಿಡಿಲಿನಲ್ಲಿಯೇ ಸೇರಿ ಹೋರಾಡುವ ಸಿಡಿಲಿನಂತೆ ಕತ್ತಿ ಕತ್ತಿಯಲ್ಲಿ ತಾಗಿ ಎದುರು ಕಿಡಿಗಳನ್ನು ಬಿಡುತ್ತಿರಲು ಅದನ್ನು ನೋಡಲು ಅಂಜಿ ದೆಸೆ ದೇವತೆಗಳು ಹಿಂಜರಿಯುತ್ತಿರಲು ತೋಳಿನ ತೀಟೆ ತೀರಲು ನಲಿದು ಒಂದೆರಡು ಕುದುರೆಗಳ ಅಟ್ಟೆಯೂ ಒಂದೆರಡಾನೆಗಳ ಮುಂಡಗಳೂ ಕತ್ತಿಗೆ ಸಿಕ್ಕಿಕೊಂಡು ಕತ್ತಿಯ ಜೊತೆಯಲ್ಲೇ ಕುಣಿಯುವಂತೆ ಹಗೆಗಿದಿರಾಗಿ ಕಾಳಗದಲ್ಲಿ ಇರಿಯದಿದ್ದರೆ ಅನ್ನದ ಹಂಗನ್ನು ಬೇರೆ ಹೇಗೆ ನೀಗಲಿ? ಇದೇ ಸರಿಯಾದ ಸಮಯ'–ಎಂದು ನಿಜಭುಜ ವಿಜಯವನ್ನು ಅಪ್ಪಿಕೊಂಡು ನಲಿದು ನುಡಿದ. ಅಲ್ಲಿಯೇ ಪಕ್ಕದ

ಇನ್ನೊಬ್ಬನು_

'ದೇವಲೋಕ ಸಿಕ್ಕುವುದೊಂದು, ಉತ್ಕೃಷ್ಟವಾದ ಐಶ್ವರ್ಯ ಬರುವುದೊಂದು, ಆದರದಿಂದ ದೇವತೆಗಳ ಸಮೂಹದಲ್ಲಿ ಕೂಡುವುದೊಂದು, ಉತ್ಸಾಹವೂ ತನ್ನ ಮೆಯ್ಯ ಸಿರಿಯೂ ಭಾಗ್ಯವೂ ಸಹಾಯವಾಗುವುದು. ಒಂದೇ ರಣದಲ್ಲಿ ಯುದ್ಧ ಗೆದ್ದು ಕಾಳಗದಲ್ಲಿ ಸೇರಿ ಅನ್ನದ ಧರ್ಮವನ್ನು ಕೂಡಿಸಿದವನು ಗಂಡನೇ ಹೊರತು ಬೇರೆಯವನಲ್ಲ'_ಎಂದು ನುಡಿದ.

ಅದೇ ಸ್ಥಾನದಲ್ಲಿ ಮತ್ತೊಬ್ಬ ಉಬ್ಬಿ—

'ಎದುರಾಗಿ ನಿಂತ ಬಲ ನಾಶವಾಗುವಂತೆ ಕೋಪಿಸಿ ಹೊಡೆದು ತನ್ನ ಪ್ರಭು ಹೆಚ್ಚಾಗಿ ಮೆಚ್ಚಲು ಗೆದ್ದವನನ್ನು ಶ್ರೀವನಿತೆ ಸೇರುತ್ತಾಳೆ. ಸತ್ತವನನ್ನು ದೇವ ಸ್ತ್ರೀಯರ ಸಮೂಹ ಒಸಗೆಯಿಂದ ಅಪವರ್ಗಕ್ಕೆ ಉಯ್ಯುತ್ತದೆ. ಹೇಗೂ ಒಳ್ಳೆಯ ಕಲಿಗೆ ಇಂತು ಇಂಬು ದೊರೆಯುತ್ತದೆ. ಹೀಗಾಗುವುದನ್ನು ತಿಳಿದು ಅಂಜುವವನೂ ಅಂಜುವುದಿಲ್ಲವೆಂದಮೇಲೆ ನನ್ನಂಥ ನಿಮ್ಮಂಥ ಸಹಜ ಶೂರರು ಇನ್ನೂ ಅತ್ಯದ್ಭುತವಾಗಿ ಹೋರಾಡದಿರುವರೆ?'_

ಎಂಬುದಾಗಿ ಒಡನಾಡಿಗಳಿಗೆ ಹುರುಪಿಸಿದ.

ಪಂಪನಿಗೆ ಈ ಪೂಣ್ಕೆಗಳನ್ನು ಕೇಳಿದಷ್ಟೂ ತನ್ನ ಕಾರ್ಯದಲ್ಲಿ ಗೆಲುವು ದೊರೆಯುವುದರಲ್ಲಿ ಸಂದೇಹಕ್ಕೆಡೆಯಿಲ್ಲವೆನ್ನಿಸಿತು. ತಂತಮ್ಮ ವೀರಾಲಾಪಗಳನ್ನು ಅದೆಷ್ಟು ಎದೆದುಂಬಿ ಹೇಳುತ್ತಿದ್ದಾರೆ. ಈ ಜೋಳದ ಪಾಳಿಗೆ ತಪ್ಪದೆ ನಡೆದು ಕೊಳ್ವ ಇವರನ್ನು ಅದೆಂತು ಸತ್ಕರಿಸಲಿ!— ಪಂಪ ಹಾಗೆಯೇ ಮೆಲುಕುಹಾಕುತ್ತ ಮುಂಬರಿದ.

ಪೂಣ್ಕೆ ಮಾಡಿದ ಭಟರೆಲ್ಲ ಕೈದುಗಳನ್ನು ಅರ್ಚಿಸಿ ದರ್ಭೆಯ ಮೇಲೆ ಮಲಗಿಕೊಂಡರು. ಹಲ್ಲನ್ನುಜ್ಜಿದರು. ಕೆಲವರು ಶಸ್ತ್ರ ಸಂಗ್ರಹಮಾಡುತ್ತ ತಮ್ಮನ್ನು ತಾವೇ ಅರ್ಪಿಸಿಕೊಳ್ಳುವುದೆಂದು ನಿಶ್ಚಯಿಸಿದರು. ಇನ್ನೂ ಮೆಲ್ಲಗೆ ಹೆಜ್ಜೆಯಿಡುತ್ತ ಹೊರಟರೆ ಅಲ್ಲೊಂದು ಕಡೆ ನಡೆದ ಸಲ್ಲಾಪಗಳು ತಂಗಾಳಿಯಾಗಿ ಬಂದುವು:

ಒಬ್ಬಾತ ತನ್ನ ನಲ್ಲೆಯ ಹತ್ತಿರ ಕುಳಿತಿದ್ದಾನೆ. ಅದು ಲಲ್ಲೆಗೈವ ಸಮಯವಲ್ಲ. ಅವಳಿಗೆ ಹೇಳುತ್ತಿದ್ದಾನೆ—"ಈ ಹೊತ್ತೆ ಹೊತ್ತು ಪ್ರಿಯೆ! ನಾಳೆ ನಾನೆಲ್ಲಿರುವೆ ಗೊತ್ತೆ? ದೇವಲೋಕದ ಕನ್ನಿಕೆಯರ ಓಲಗದೊಳಗಿರುವೆ!" ಅದಕ್ಕೆ ಆ ಓಪಳು ಕೂಡ ತಡಬಡಿಸದೆ ತಡಮಾಡದೆ ನುಡಿಯುತ್ತಿದ್ದಾಳೆ—"ನೀನು ಹೇಳಿದಂತೆ ಅಲ್ಲಿಗೆ ಹೋಗಲು ಆಗದು ಒಡೆಯಾ! ನಾಳೆ ಮತ್ತೆ ಬಂದು ಇಂದಿನಂತೆಯೇ ನನ್ನೊಡನೆ ಇಲ್ಲಿ

ಇರುವೆ."

"ಅದು ಹೇಗೆ? ನಿನಗೆ ಮುಂದಾಗುವುದನ್ನು ಹೇಳುವಷ್ಟು ತಿಳಿವು ಇದೆಯೇ?"

"ಓಹೋ ನಿಜವಾಗಿಯೂ ಇದೆ ನನ್ನರಸಾ!"

"ಅದೆಂತೋ? ಸರಸವಲ್ಲ ತಾನೆ?"

"ನನ್ನ ಓಲೆಭಾಗ್ಯ ದೊಡ್ಡದಲ್ಲವೆ?"

"ಆಹಾ, ನೀನು ನುಡಿದ ನುಡಿ ನನಗೆ ಅಮೃತವಲ್ಲದೆ ಮತ್ತೇನು? ನಿನ್ನ ಮಾತೇ ಇಷ್ಟು ಇನಿದು ನೀನು ಇನ್ನೂ.."

ಪಂಪ ಅಲ್ಲಿಂದ ಹೊರಳಿದ. ಮೂರು ಮಾರು ಹೆಜ್ಜೆ ಹಾಕುವುದರಲ್ಲಿ ಅಲ್ಲಿಯೇ ಮತ್ತೊಂದು ಚೇತೋಹಾರಿಯಾದ ದೃಶ್ಯ—

ದರ್ಭೆಯ ಹಾಸಿಗೆ ಹತ್ತಿದ್ದ ತನ್ನ ಪ್ರಾಣೇಶ್ವರನ ಇಂಗಿತವನ್ನರಿತು ಮಡದಿ ತಾನೂ ತನ್ನ ಸಾವನ್ನು ತೀರ್ಮಾನಿಸಿಕೊಂಡಳು. ನೀವಲ್ಲವೇ ನಾಳೆ ಹೋಗಿ ದಿವಿಜಾಂಗನೆಯಲ್ಲಿ ಕೂಡಿ ಇರುವವರು? ನೀವು ಹೋದ ಮೇಲೆ ನಾನು ಇಲ್ಲಿಯೇ ಇರುವಷ್ಟು ದಡ್ಡಳೆಂದುಕೊಂಡಿರಾ? ನಿಮಗಿಂತ ಮೊದಲೇ ದೇವಲೋಕಕ್ಕೆ ಹೋಗುತ್ತೇನೆ. ಏಕೆ ಗೊತ್ತೆ? ಅಲ್ಲಿಗೆ ಬರುವ ನನ್ನ ಸ್ವಾಮಿಯನ್ನು ನಾನೇ ಮುಂದೆ ನಿಂತು ಎದುರುಗೊಳ್ಳಲು. ಅದು ಬಿಟ್ಟು ಓ ಓ ಸ್ವರ್ಗಗಳಲ್ಲಿರುವ ದೇವಸ್ತ್ರೀಯರ ದಾಸಿಯರಲ್ಲಿ ನೀವು ಪ್ರೀತಿಪಡುವುದಕ್ಕೆ ಅವಕಾಶ ಕೊಡುತ್ತೇನೆಯೇ?"

"ಅಬ್ಬ ಕಪಟದ ಸೋಂಕೇ ಇಲ್ಲದ ಎಂಥ ನಲ್ಮೆಯ ನುಡಿಗಣವಿದು! ಈ ನಲ್ಲೆ ನಾಲಿಗೆಯ ತುದಿ ತನಕ ನಲ್ಮೆಯನ್ನೇ ತುಂಬಿಕೊಂಡಿದ್ದಾಳೆ. ನಮ್ಮೀ ಕನ್ನಡನಾಡು ಇಂಥ ಹೆಣ್ಣು ಮಕ್ಕಳಿಂದ ಧನ್ಯ"—ಪಂಪ ಉದ್ಗರಿಸುತ್ತಾ ಅತಿರಥರ ಗುಡಾರಗಳತ್ತ ಹೊರಟ. ಒಂದು ಬೀಡಿನೊಳಗಿಂದ ಬಂದ ಮಾತುಗಳು ಪಂಪನ ಕಿವಿಯ ಕದತಟ್ಟಿ ಹೃದಯದಲ್ಲೂ ಹೊಳಲುಗೊಡತೊಡಗಿದುವು:

"ನಲ್ಲೆ, ನನ್ನ ತೋಳು ಬಲದಲ್ಲಿ ನಿನಗೆಷ್ಟು ನಚ್ಚು?"

"ಅಷ್ಟಲ್ಲದೆ ಮತ್ತೇನು ಆಣ್ಮ? ಈ ಭುಜಗಳ ಬಲದ ಆಧಿಕ್ಯ ಹಗೆಗಳಿಗೆಲ್ಲ ಸಿಂಹಸ್ವಪ್ನ."

"ಸರಿ ಒಡತಿ, ನಾಳೆ ನಿನಗೇನು ತಂದು ಕೊಡಲಿ?"

"ನೀವೇ ನನಗೆ ಒಡವೆ. ನೀವಿರುವಾಗ ಬೇರೆ ಆಭರಣವೇಕೆ?"

"ನಿನ್ನ ಈ ಸಹಜ ಸೌಂದರ್ಯ ಇಮ್ಮಡಿಯಾಗಿ ಕಂಗೊಳಿಸುವುದಕ್ಕೆ?"

"ಅಂತಾದರೆ ಒಂದು ಬೊಗಸೆ ತುಂಬಾ ಮುತ್ತುಗಳನ್ನು ತನ್ನಿನಿಯಾ."

"ಅಷ್ಟೇ ತಾನೆ? ನಿನ್ನೀ ಬೊಗಸೆಗಂಗಳ ತುಂಬ ಈಗಲೇ ಮುತ್ತುಕೊಡುವೆ!"

"ಈ ಜೇನು ಮಾತುಗಳಲ್ಲಿ ನನ್ನ ಬೇಡಿಕೆ ಮುಳುಗಿಸಿಬಿಡಬೇಡಿ."

"ಮುತ್ತುಗಳಿಗೇನು ಬರ ಓಪಳೆ? ಅಂಗಡಿಗೆ ಈಗಲೇ ಹೋಗಿ ನಿನಗೆ ಎಷ್ಟು ಬೇಕೋ ಅಷ್ಟು ಮುತ್ತುಗಳನ್ನು ತಂದುಕೊಡಬಲ್ಲೆ. ಇದಿಗೊ ಹೊನ್ನು ದಮರಿಕೆ..."

"ಮನದನ್ನ, ನನಗೆ ಬೇಕಾಗಿರುವುದು ಅಂಗಡಿಯಲ್ಲಿ ಸಿಗುವ ಹಳೆಯ ಮುತ್ತುಗಳಲ್ಲ."

"ಮತ್ತೇನು, ಸಮುದ್ರಕ್ಕೆ ಹೋಗಿ ಹೊಸ ಮುತ್ತುಗಳನ್ನು ತರಲೆ?"

"ಕಡಲಲ್ಲಿ ಹುಟ್ಟಿದ ಮುತ್ತುಗಳಾದರೆ ಅವೇನು ಹೊಸದಾದುವೆ?"

"ಇನ್ನೆಲ್ಲಿನ ಮುತ್ತುಗಳು ಬೇಕು ಇನಿಯೆ?"

"ಯುದ್ಧ ಭೂಮಿಯಿಂದ ತರುವ ಮುತ್ತುಗಳೇ ಶ್ರೇಷ್ಠ.."

"ಅರಿತೆ ಬಿಡು. ರಾಜ ಮಹಾರಾಜ ಸೇನಾನಿ ಸಾಮಂತರ ಆಭರಣಗಳಿಂದ ತಂದ ಮುತ್ತುಗಳು ಬೇಕಲ್ಲವೆ? ನಿತ್ಯ ತರುತ್ತಿರಬಹುದು. ಅದಕ್ಕೇನೂ ಕೊರತೆಯಿಲ್ಲ."

"ಅಲ್ಲ ನಲ್ಲ, ಆ ಮುತ್ತುಗಳಲ್ಲ. ಅವು ನನಗೆ ಬೇಡ."

"ಸರಿ ಇನ್ನೆಂಥ ಮುತ್ತುಬೇಕೆಂದು ನೀನೇ ಹೇಳಿಬಿಡು. ಭೀಮ ಹೋಗಿ ಸೌಗಂಧಿಕಾ ಹೂ ತಂದಂತೆ, ಎಲ್ಲಿದ್ದರೂ ತಂದು ಕೊಡುವೆ."

"ನಿಮ್ಮೀ ತೋಳಿನ ಕಸುವಿನಿಂದ, ಮಿಗಿಲಾದ ಹಗೆಗಳ ಆನೆಗಳ ನೆತ್ತಿಯೆಂಬ ಜಲಧಿಯನ್ನು ಸೀಳಿ ಅಲ್ಲಿ ಬೆಳೆದು ಹುದುಗಿರುವ ಶುದ್ಧವೂ ಮುಕ್ಕಾಗಿ ಗಾಯವಿಲ್ಲದುವೂ ದುಂಡಾದುವೂ ಆದ ಮುತ್ತುಗಳನ್ನೇ ತನ್ನಿ!"

"ಒಪ್ಪಿದೆ, ವೀರಯೋಧನಿಗೆ ತಕ್ಕ ವೀರಸತಿ. ನಿನ್ನ ಈ ಬೇಡಿಕೆಯನ್ನು ತಪ್ಪದೆ ಈಡೇರಿಸದೆ ಹೋದಲ್ಲಿ ಕೆಮ್ಮನೆ ಈ ಮೀಸೆ ಹೊತ್ತೆನೇ?"

"ನಿಜೇಶ ನಿಮ್ಮೀ ಪೂಣ್ಕೆಯಿಂದ ಆದ ಆನಂದ..."

"ಇರಲಿರಲಿ, ಆ ಆನಂದವನ್ನು ಹೇಗೆ ತೋರಿಸಬೇಕೆಂಬುದನ್ನು ಹೇಳಿ ಕೊಡುವೆ ಬಾ."

ಕೊಂಚವೂ ತಳ್ಳವಾರಿಲ್ಲದೆ ಭಟರು ಮೈಮನಗಳನ್ನು ಹುರಿಗೊಳಿಸುತ್ತಿದ್ದರು. ಪಂಪ ಮುಂದೆ ಅಡಿಯಿಟ್ಟ. ಎದುರಿಗೆ ತನ್ನ ಹಾಗೇ ಯಾವುದರಲ್ಲೂ ಪಾಲುಗೊಳ್ಳದೆ ಮೆಲ್ಲಗೆ ಬರುತ್ತಿದ್ದ ಧೀರಗಂಭೀರ ನಡಿಗೆಯ ವ್ಯಕ್ತಿ ಕಂಡ. ಪಂಪ ಮರೆಯಾಗಿ ನಿಂತು ನೋಡಿದ. ಅದು ಅರಿಕೇಸರಿಯ ಪರಿಶೀಲನೆಯೆಂದು

ತಿಳಿದು ತಾನೂ ಹತ್ತಿರ ಹೋಗಿ "ಪ್ರಭೂ" ಎಂದ.

"ಪಂಪಾ, ಇನ್ನೂ ಬೀಡಿಗೆ ಹಿಂದಿರುಗಲಿಲ್ಲವೆ?"

"ಇದೀಗ ಹೊರಟೆ. ನಮ್ಮ ಭಟರು ನಿಜಕ್ಕೂ ನೆಲಗುದ್ದಿ ಜಲ ಬರಿಸುವ ಸಾಹಸಿಗಳು. ಅವರ ತಾಯ್ನಾಡಿನ ಪ್ರೇಮ ಕಂಡು ಮೂಕನಾಗಿದ್ದೇನೆ ಪ್ರಭೂ."

"ನಿಜ ನಾನೂ ನೋಡಿ ಬಂದೆ. ರಣಭೂಮಿಯಲ್ಲಿ ಪ್ರಾಣ ತೃಣ ಸಮಾನ ಅಲ್ಲವೆ?"

ಪಂಪ ಅರಿಗನಿಗೆ ತಾನು ಕಂಡುದನ್ನೆಲ್ಲ ವಿವರಿಸಿದ. ಅರಿಗ—

"ಪಂಪಾ, ನಿಜಕ್ಕೂ ಇದೆಲ್ಲ ಎದೆಯರಳಿಸುವ ಚಿತ್ರ. ನಾನು ಈಗ ಬೇರೆ ಕಡೆ ಕರೆದುಕೊಂಡು ಹೋಗುವೆ ಬಾ. ಅಲ್ಲಿನ ಚಿತ್ರ ಬೇರೆ ತೆರನಾದುದು" ಎಂದು ನುಡಿದು ಪಂಪನ ಭುಜದ ಮೇಲೆ ಕೈ ಹಾಕಿದ.

ಇಬ್ಬರೂ ಹೊರಟರು. ಇರುಳ ಹೊದಿಕೆಯಲ್ಲಿ ಸೈನ್ಯದ ಶಿಬಿರ ಒಂದು ವಿಚಿತ್ರ ಪ್ರಪಂಚ. ಒಂದು ಕೂಗಳತೆಯಷ್ಟು ದೂರ ಹೊರಟಾದ ಮೇಲೆ ಮರದ ನೆರಳಲ್ಲಿ ಒಂದು ಕಡೆ ನಿಂತು ನೋಡಿದರು. ಅದು ಕಾಳಗದ ಕಣದಲ್ಲಿ ಏಟು ತಿಂದ ಗಾಯಾಳುಗಳಿಗೆ ಗುಣಪಡಿಸುವ ಏರ್ಪಾಟಿನ ಚಿಕಿತ್ಸಾ ಭಾಗ. ಸಾಯುವಂತೆ ನೋವು ತಿಂದ ಪ್ರೀತಿಯ ಬಂಟರನ್ನು ಸಮಾಧಾನ ಪಡಿಸುತ್ತಿದ್ದಾರೆ. ಗಾಯಗಳನ್ನು ಹೋಗಲಾಡಿಸಲು ವೈದ್ಯರು ಮದ್ದನ್ನು ಹಚ್ಚುತ್ತಿದ್ದಾರೆ. ಗಿಡಮೂಲಿಕೆಗಳನ್ನು ಕುಟ್ಟಣಿಯಲ್ಲಿ ಕುಟ್ಟುತ್ತಾ, ರುಬ್ಬೋಗುಂಡಿನಲ್ಲಿ ರುಬ್ಬುತ್ತಾ ಕಲ್ಪತ್ತಿನಲ್ಲಿ ಅರೆಯುತ್ತಾ ಇದ್ದಾರೆ.

ಬಿಸಿ ಬಿಸಿ ರಾಗಿ ಹಿಟ್ಟು ಇಟ್ಟು ಅರಳೆಲೆ ಹಾಕಿ ಕಟ್ಟುತ್ತಿದ್ದಾರೆ. ಯುದ್ಧ ಕವಚಗಳನ್ನು ಧರಿಸಿದ್ದರೂ ಅದನ್ನು ಭೇದಿಸಿ ಕಣಕ್ ಎಂದು ಸೀಳಿ ಹೊಕ್ಕು ದೇಹದಲ್ಲಿ ಮುರಿದ ಬಾಣ, ಬಾಣದ ಚೂರುಗಳನ್ನು, ಎಲುಬುಗಳಿಗೆ ನಾಟಿ ಉಡಿದ ಕತ್ತಿ ಕಕ್ಕಡೆಗಳ ಚೂರುಗಳನ್ನು ಅಯಸ್ಕಾಂತ ತೋರಿಸಿ ತೆಗೆಯುತ್ತಿದ್ದರು. ವಜ್ರಮುಷ್ಟಿ ಎಂಬ ಕೈಯ್ಯ ಆಯುಧದ ಏಟಿನಿಂದಲೂ, ಕತ್ತಿಯ ಮೊನೆಯ ತಿವಿತದಿಂದಲೂ ಸಿಡಿದು ಹೋದ ತಲೆಯ ಚಿಪ್ಪುಗಳನ್ನು ಗಂಗಾ ನದಿಗೆ ಕಳುಹಿಸಿ ಕೊಡುತ್ತಿದ್ದರು. ನಾಂದೀಮುಖರೆಂಬ ಪಿತೃಗಳ ಶ್ರಾದ್ಧವನ್ನು ಮುಗಿಸುತ್ತಿದ್ದರು.

ಎತ್ತರವಾದ ತಲೆಯ ಪ್ರದೇಶದಲ್ಲಿ ಅಂಬುಗಳು ನಾಟಿ ಮುರಿದಿದ್ದವರಿಗೆ ಒಂದು ಕಡೆ ಕೂಡಿಸಿ ಅತ್ತ ಕಡೆ ಇತ್ತ ಕಡೆ ಬಲುಹುಳ್ಳ ದಾಂಡಿಗರು ಗುಂಪಾಗಿ ನಿಂತು ಇಕ್ಕುಳಗಳಲ್ಲಿ ಕೀಳುತ್ತಿದ್ದರು. ಹಾಗೆ ಬಲ್ಡಡಿಗರು ಇಕ್ಕಳ ಹಾಕಿ ಕಿತ್ತಾಗ

ನೆತ್ತರು ಪನಪನ ಪರಿದರೂ ಭಟರು "ನೊಂದೆನು, ಮೆಲ್ಲಗೆ" ಎನ್ನದೆ, "ಅಃ, ಅಯ್ಯೋ, ಅಮ್ಮಾ" ಎನ್ನದೆ, ಸ್ವಲ್ಪ ಕೂಡ ಮುಖ ಭಿನ್ನಗೆ ಮಾಡಿ ತಿರುಗಿಸಿಕೊಳ್ಳದೆ, ಅಳುಕದೆ ಬೇನೆಯನ್ನು ಸಹಿಸಿಕೊಳ್ಳುತ್ತಿದ್ದರು. ಅವರ ಅಳವು ಅಚ್ಚರಿಯಾಗಿತ್ತು.

ಅಲ್ಲಿಯೇ ಗಾಯಾಳುಗಳಿಗೆ ಸಂಗೀತ ನಡೆಯುತ್ತಿತ್ತು. ನಲ್ಲೆಯರು ಒಲಿದು ಮೆಲ್ಲಗೆ ಮೈ ಕೈ ನೇವರಿಸುತ್ತಿದ್ದರು. ಅರಳಿದ ಜಾಜಿಯ ಕಂಪು ಹೊತ್ತು ತೆಂಕಣದ ತಂಗಾಳಿ ಬೀಸುತ್ತಿತ್ತು. ನರ್ತಕಿಯರು ನಾಟ್ಯದಿಂದಲೂ, ವಿವಿಧ ವಾದ್ಯಗಳವರು ವಾದ್ಯಗಳ ಇಂಪಿನಿಂದಲೂ ಯುದ್ಧ ಕ್ರೀಡೆಯ ಆಯಾಸ ಪರಿಹರಿಸುವ ಕಾರ್ಯದಲ್ಲಿ ನಿರತವಾಗಿರುವುದನ್ನೂ ಕಂಡರು.

ಸುಶ್ರಾವ್ಯವಾದ ಕಂಠದಲ್ಲಿ ಗಾನ ಮಾಡುತ್ತಿದ್ದರು:

ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ।
ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾಮರಣೇ ರಣೇ॥

* * * *

ಮರುದಿವಸ ಯುದ್ಧಕ್ಕೆ ಬೆಳಗಿನ ಜಾವದಲ್ಲೇ ಸಿದ್ಧತೆ ನಡೆಯತೊಡಗಿತು. ಪಂಪ ಪರಸೈನ್ಯಭೈರವನಾಗಿ ಮೆರೆಯುವ ಕೆಚ್ಚಿನಿಂದ ಅಣಿಯಾಗತೊಡಗಿದ. ಕೂಗಾಗಳುಗಳ ಪಡೆಯುದ್ದಕ್ಕೂ ಒಮ್ಮೆ ಹಾದು ಹೋಗಿ ಅಂದಿನ ಯುದ್ಧಕ್ಕೆ ಕವಚಾದಿಗಳನ್ನು ತೊಟ್ಟು ಆಯುಧಗಳನ್ನು ಹಿಡಿದು ಅಣಿಯಾಗಿ ಅವರವರ ತಾಣಗಳಲ್ಲಿ ಬಂದು ನಿಲ್ಲುವಂತೆ ಸಾರಿ ಬಂದರು. ಪಂಪ ಅಂದು ತನ್ನ ಪಡೆಯನ್ನು ಸೂಚೀವ್ಯೂಹದಂತೆ ಒಡ್ಡಿದನು.

ಅರಿಗ ದೊರೆ ಪಟ್ಟದಾನೆ ಹತ್ತಿ ನಿಂತು ಒಮ್ಮೆ ತನ್ನ ಇಡೀ ಪಡೆಯನ್ನುನೋಡಿದ. ಆ ಪಕ್ಷಿ ನೋಟದಲ್ಲಿ ಎಲ್ಲಾ ಸರಿಯಾಗಿದೆಯೆಂಬ ಸಂತೋಷವಿತ್ತು. ಪಂಪ ಎಲ್ಲರಿಗೂ ಮೊದಲು ಹೋಗಿ ತನ್ನ ಕುದುರೆ ಹತ್ತಿ ಕೈ ಬೀಸಿದ. ಸಿಡಿಲೆರಗುವಂತೆ ಅವನ ಪಡೆ ಹಗೆಯ ಮೇಲೆ ಎರಗಿತು. ಅರಿಗ ರಥದ ವಿಭಾಗಕ್ಕೆ ಮುಂದಾಳುವಾಗಿ ಹೊರಟು ಬಾಣಗಳ ಮಳೆಯಿಂದ ಎದುರಾಳಿಗಳನ್ನು ನೆತ್ತರಲ್ಲಿ ತೋಯಿಸಿದ. ಪಂಪ ಮೈದುಂಬಿ ಬಂದವನಂತೆ ಚತುರಂಗ ಸೇನೆಯ ಎಲ್ಲಡೆಯೂ ಮಿಂಚಿನ ಹಾಗೆ ಸಂಚರಿಸಿ ತನ್ನ ಕಡೆಯ ಕಾದಾಳುಗಳಿಗೆ ಹುರುಪು ತುಂಬಿದ.

ತಂತ್ರಪಾಲ ಬಪ್ಪುವನಿಗೆ ಅರಿಕೇಸರಿಯ ಮೇಲೆ ವೈಯಕ್ತಿಕ ದ್ವೇಷವಿತ್ತು. ಗೋವಿಂದ ತನ್ನ ತಂಗಿ ರೇವಿಕೆಯನ್ನು ಅವನಿಗೆ ಮದುವೆ ಮಾಡಿಕೊಡುವುದಾಗಿ ಯುವರಾಜನಾಗಿದ್ದಾಗ ತಿಳಿಸಿದ್ದ. ಅದರಂತೆ ಸ್ವಯಂವರಕ್ಕೂ ಬಂದಿದ್ದ. ಅಂದು

ಅರಿಗ ಅವಳನ್ನು ಅಪಹರಸಿ ಹೊರಟಾಗ ಕೆಲವು ರಾಜರನ್ನು ಹುರಿಗೊಳಿಸಿ ಎದುರಾಗಿದ್ದ. ಅರಿಗನ ಬಿಲ್ಲ ಬಲ್ಮೆಯಲ್ಲಿ ಅವರೆಲ್ಲ ಪೆಟ್ಟು ಹೊಂದಿ ಇಂಗು ತಿಂದ ಮಂಗನಂತೆ ಹಿಂದಕ್ಕೆ ಹೊರಟಿದ್ದರು. ಇಂದು ಹಳೆಯ ಸೇಡನ್ನು ಚಕ್ರ ಬಡ್ಡಿ ಸಮೇತ ತೀರಿಸಿಕೊಳ್ಳಲು ಬಪ್ಪುವ ನೆರವಾಗಿ ತನ್ನ ರಥವನ್ನು ಅರಿಗನ ರಥಕ್ಕೆ ಎದುರಾಗಿ ತಂದು ನಿಲ್ಲಿಸಿ ಸರಳೆಳೆದು ಬಂಡಿಯ ಬೋವನನ್ನು ನೆಲರಕ್ಕುರುಳಿಸಿದ.

ಅರಿಗ ಸೇರಿಗೆ ಸವಾಸೇರಾಗಿ ನಿಂತು ಬಪ್ಪುವನನ್ನು ಅರಥನನ್ನಾಗಿ ಮಾಡಿದ. ಇಬ್ಬರೂ ಗದೆ ಹಿಡಿದು ನುಗ್ಗಿದರು. ಗದೆ ಬೀಸುವುದರಲ್ಲಿ ತಿರುಗಿಸುವುದರಲ್ಲಿ ಅರಿಗನದು ಮೇಲುಗೈ. ಬಪ್ಪುವನ ಕೈ ಕೆಳಗೆ ಆಯಿತು. ಒಮ್ಮೆ ಕೆಳಕ್ಕೆ ಜಾರಿದ ಗದೆಯನ್ನು ಬಪ್ಪುವ ಮೇಲೆತ್ತುವುದರಲ್ಲಿ ಅರಿಗನ ಗದೆ ತನ್ನ ಬಲಿ ತೆಗೆದುಕೊಂಡಿತು. ನೂರು ಹೋಳಾಗಿ ಬಪ್ಪುವನ ರುಂಡ ದಿಂಡುರುಳಿತು. ಬಪ್ಪುವನ ಸಾವಿನ ಸುದ್ದಿ ಕಾಳ್ಗಿಚ್ಚಾಗಿ ಹಬ್ಬಿತು. ರಟ್ಟನ ಪಡೆ ಅಲ್ಲೋಲ ಕಲ್ಲೋಲವಾಯಿತು. ಪಂಪ ಹಗೆಯನ್ನು ಬೆನ್ನಟ್ಟಿ ಪಲಾಯನಿಸುವಂತೆ ತನ್ನ ಪಡೆಗೆ ಕೈ ಬೀಸಿದ. ನಾಯಕನ ಸೂಚನೆಯಂತೆ ಅರಿಗನ ಸೇನೆ ಹೆಬ್ಬುಲಿಯಾಗಿ ನುಗ್ಗಿತು. ಗೊಜ್ಜಿಗನ ಸೇನೆ ಅನಾಯಕತ್ವದಿಂದ ದಿಕ್ಕಾಪಾಲಾಯಿತು. ಮೂರು ಗಾವುದದ ತನಕ ತರುಬಿ ಬಂದ ಪಂಪನ ಪಡೆ ವಿಜಯೋನ್ಮಾದದಿಂದ ಹಿಂದಿರುಗಿತು. ಬೆಟ್ಟದಂತೆ ಬಂದ ಯುದ್ಧದ ಕಷ್ಟ ಮಂಜಿನಂತೆ ಕರಗಿ ಹೋಯಿತು.

ಎಲ್ಲೆಲ್ಲೂ ಅರಿಗ ದೊರೆಯ ಪರಾಕ್ರಮವನ್ನೂ ಪಂಪನ ಕಲಿತನವನ್ನೂ ಕೊಂಡಾಡಲಾಯಿತು. ವಿಜಯಾಧಿಪನೂ ಗುಣಮುಖಿಯಾಗಿ ಗೆಲವು ಪಡೆದು ತನ್ನನ್ನು ಹಗೆಗೆ ಒಪ್ಪಿಸದೆ ಎಷ್ಟೇ ಕಷ್ಟ ಬಂದರೂ ಬಿಟ್ಟು ಕೊಡದೆ ಕಾಪಾಡಿದ ಅರಿಕೇಸರಿಗೆ ಪ್ರತಿಜ್ಞಾ ಗಾಂಗೇಯ, ಅಭಿನವ ಜೀಮೂತವಾಹನ ಎಂಬ ಪ್ರಶಸ್ತಿಗಳಿಂದ ಮಾನ್ಯ ಮಾಡಿದ. ತಮ್ಮ ಪ್ರಭು ಈ ಯುದ್ಧದಲ್ಲಿ ಗೆದ್ದು ಬಂದರೆ ನಾವೇ ಅರ್ಪಿತರಾಗುತ್ತೇವೆಂದು ಪ್ರತಿಜ್ಞಾಬದ್ಧರಾದ ಸಿಡಿತಲೆಗರೂ ವೇಳೆವಾಳಿಗಳೂ ಕೀಳ್ಗುಂಟೆಗಳೂ ಜೋಳವಾಳಿ ತೋರಿ ಸ್ವರ್ಗಕ್ಕೆ ನಡೆದರು. ಅವರ ದೇಹಗಳನ್ನು ಮೆರವಣಿಗೆಯಲ್ಲಿ ತಂದು ಗಂಧದ ಚಿತೆಯಲ್ಲಿಟ್ಟು ರಾಜ ಮರ್ಯಾದೆಯೊಡನೆ ಶವ ಸಂಸ್ಕಾರ ಮಾಡಿದರು. “ಇವರೆಲ್ಲರು ನಮ್ಮ ಮನೆ ಮಕ್ಕಳು. ಈ ಕುಲಪುತ್ರರ ಪುತ್ರ ಪೌತ್ರರಿಗೆಲ್ಲ ಅಗ್ರಹಾರಗಳನ್ನು ದಾನ ಕೊಟ್ಟಿದ್ದೇವೆ. ಅವರ ಸಾವು ವೀರಮರಣ. ಅಂತಹವರ ಸಾವು ನಮಗೂ ಬರಲಿ” ಎಂದು ರಾಜಸಂದೇಶ ಸಾರಿತು.

## ೧೭

ಚಾಲುಕ್ಯ ಸಾಮ್ರಾಜ್ಯ ಸಂತೋಷದ ಆಗರ. ವಿಜಯೋತ್ಸವದ ಸಡಗರ. ಗುಡಿಸಲು ಗುರುಮನೆ ಅರಮನೆ ಎಲ್ಲೆಲ್ಲೂ ಆನಂದದ ಅಲೆಗಳು. ಗೆಲುವು ತೀರದ ಕನಸೆಂದು ಅಂದುಕೊಂಡವರಿಗೂ ಇದು ನನಸಾಗಿ ಎದುರು ನಿಂತಿತ್ತು. ಪಂಪ ಅರಿಗರ ಸ್ಫೂರ್ತಿದಾಯಕ ನಾಯಕತ್ವವನ್ನು ಹಾಡಿ ಆಡಿ ನಲಿದಾಡಿತು ನಾಡ ಜನತೆ. ಪ್ರಭು ಪ್ರಜೆ ಪರಿವಾರ ಎಲ್ಲಾ ಗೆಲುವಿನ ಕಡಲಲ್ಲಿ ಈಸಾಡಿದರು. ಅರಿಕೇಸರಿ ಪಂಪನನ್ನು ಆಸ್ಥಾನದ ಕವಿಯೆಂದೂ ಒಡ್ಡೋಲಗದಲ್ಲಿ ಪ್ರಕಟ ಪಡಿಸಿದ. ಪಂಪನ ನಾಲ್ಕು ವೃತ್ತಗಳನು ನಾಡಿನ ಮೂಲೆ ಮೂಲೆಯಲ್ಲೂ ಹಾಡುವ ಏರ್ಪಾಡಾಯಿತು.

ಪಂಪನಿಗೆ ಗೆಲುವಿನೊಸಗೆಯ ಹಿಂದೆ ನೋವಿನ ಸೆಲೆಯೂ ತಲಪರಿಗೆಯಾಗಿ ಹರಿಯುತ್ತಿತ್ತು. ಯುದ್ಧದ ಕರಾಳ ದಿನಗಳ ಹಿನ್ನೆಲೆಯಲ್ಲಿ ದೊರೆಗೆ ತಿಳಿಸದೆ ನೋಡಿ ಅನುಭವಿಸಿದ ನೋವಿನ ನೋಟ ನೆನಪಾಯಿತು. ಕಾಳಗದಲ್ಲಿ ಆದ ಸಾವು ನೋವಿನ ಲೆಕ್ಕ ಯಾರಿಟ್ಟಿದ್ದಾರೆ! ಅಂದು ರಾತ್ರಿ ಹೆಣ ಪೇರಿಸಿದ, ಎಸೆದಾಡಿದ ಎಳೆದಾಡಿದ ಮಸಣದತ್ತ ಹೊರಟಾಗ—

ನಾಯಿಗಳೂ ಗೋಳಿಡುತ್ತಿದ್ದುವು. ಆ ಕಾಳಗದ ಮಸಣದಲ್ಲಿ ನೋವಿನ ರಿಂಗಣಗುಣಿತ. ಉದ್ದಕ್ಕೂ ನಂಟರಿಷ್ಟರ ರೋದನ. ಅವರ ಆಕ್ರಂಧನ ಕರುಳು ಕತ್ತರಿಸುವಂತಹುದು. ಹೆಣ್ಣಿನ ಅಳು, ಮಕ್ಕಳ ಅಳು, ಮುದುಕರ ಗೋಳು— ಎಲ್ಲಾ ನಿರಾಶೆಯ ಮುಖಗಳು. ಪಂಪ ತಲೆ ಕೊಡವಿದ. ಬೇಡವೆಂದರೂ ನೆನಪಿನಾಳದಿಂದ ನೋವಿನ ಕೂಗೂ ಆ ನೊಂದ ನೋಟವೂ ಮೇಲೆದ್ದು ಬರುತ್ತಿದೆ. ಧವಳಗಿರಿ ರಕ್ತಸಿಕ್ತವಾದಂತೆ ತೋರಿತು!

ಯಾರಿಗಾಗಿ ಈ ಯುದ್ಧ? ಯಾವ ಪುರುಷಾರ್ಥಕ್ಕಾಗಿ ಈ ನರಬಲಿ? ಇತಿಹಾಸದಿಂದ ಮಾನವ ಪಾಠ ಕಲಿಯುವುದು ಸಾಧ್ಯವೇ ಇಲ್ಲವೆ? ಮನಸ್ಸು ಮುದುಡಿ ಮೌನವಾಯಿತು.

ಗುರುಕುಲದಿಂದ ಪಂಪನಿಗೆ ಕರೆ ಬಂತು. ಕಳ್ವಪ್ಪಿನತ್ತ ಹೊರಟಿದ್ದ ಗುರು ದೇವರು ಒಂದು ವರ್ಷದ ನಂತರ ಹಿಂತಿರುಗಿರುವರೆಂಬ ಸುದ್ದಿ ತಿಳಿದು

ಬಮ್ಮಲೆ ಜಕ್ಕಲೆಯರೊಡನೆ ಹೊರಟ. ಗುರುಚರಣಗಳಿಗೆ ಎಲ್ಲಾ ಪೊಡಮಟ್ಟು ಕುಳಿತರು. ಗುರುದೇವರ ದೇಹ ಕೃಶವಾಗಿ ಕಂಡಿತು. ಪಂಪ ನಿವೇದಿಸಿದ–

"ಪೂಜ್ಯರು ದೇಹವನ್ನು ಇಷ್ಟು ದಂಡಿಸಬಾರದೆಂದು ಬೇಡುತ್ತೇನೆ."

"ಸರಿಯಾಗಿ ಹೇಳಿದೆ ನೋಡು. ಆದರೆ ಅದರ ಧರ್ಮ ಅಷ್ಟೆ. ರಕ್ಷಾ ಕವಚಕ್ಕೇ ಹೆಚ್ಚು ಮುತುವರ್ಜಿ ಕೊಟ್ಟು ಒಳಗಿನ ಹೂರಣ ಬಿಟ್ಟವರುಂಟೆ?"

"ನನಗೆ ಈ ಒಗಟಿನ ಸೂಚನೆ ತಿಳಿಯಿತಾದರೂ ಈಗಿನ ಪರಿಸ್ಥಿತಿಯಲ್ಲಿ ನಾನು ಏನು ತಾನೆ ಮಾಡಬಲ್ಲೆ ಆಚಾರ್ಯರೆ?"

"ನೀನು ಸಂಸಾರ ಬಿಟ್ಟು ನಮ್ಮಂತೆ ಸನ್ಯಾಸಿಯಾಗೆಂದು ಎಂದೂ ಹೇಳುವುದಿಲ್ಲ. ಗೃಹಸ್ಥಾಶ್ರಮ ಯಾವ ಆಶ್ರಮಕ್ಕೂ ಕಡಿಮೆಯಲ್ಲ. ಇಲ್ಲಿದ್ದೇ ಇಹಪರಗಳಿಗೆ ಸಲ್ಲುವಂತೆ ಬಾಳಬೇಕು."

"ಎರಡನ್ನೂ ಮೇಳೈಸಿಕೊಳ್ಳಲು ಹವಣಿಸುತ್ತಿದ್ದೇನೆ. ಗುರುದೇವ."

"ಬಲ್ಲೆ ಮಗು, ಆದರೂ ನೀನು ನಿನ್ನದಾದ ನೆಲವನ್ನೇ ಬೀಳುಗೊಟ್ಟಿರುವುದು ನಮಗೆ ಸಮ್ಮತವಾಗಲಿಲ್ಲ."

"ಅಂದರೆ?"

"ನೀನು ಪ್ರಧಾನವಾಗಿ ಕವಿಮನೋಧರ್ಮದವ. ನಿನ್ನ ಕ್ಷೇತ್ರ ಸಾಹಿತ್ಯ. ನಿನ್ನಿಂದ ಮಹೋನ್ನತ ಕೃತಿಗಳನ್ನು ನಾಡು ನುಡಿ ನಿರೀಕ್ಷಿಸುತ್ತಿದೆ. ಅದನ್ನು ಪೊಳ್ಳಾಗಿಸದಿರು."

"ನನ್ನ ಎದೆಮಿಡಿತವೂ ಅದೇ ಆಗಿದೆ. ಈ ಅರಿಕೇಸರಿ ದೊರೆ ನನ್ನನ್ನೇ ನಂಬಿ ನಿಂತಿದ್ದಾನೆ..."

"ಅವರನ್ನು ಬಿಟ್ಟು ಹೋಗುವುದೆಂದು ನಮ್ಮ ಅಭಿಪ್ರಾಯವಲ್ಲ. ಹಾಗೆ ಎಂದೂ ಪ್ರಭುವಂಚನೆ ಮಾಡಬೇಡ. ಈಗ ಆಗಿರುವುದೆಲ್ಲ ಒಳಿತೇ ಆಯಿತು. ನಾಡಿನ ಬಿಡುಗಡೆ, ಜನತೆಯ ನೆಮ್ಮದಿ ಬಹಳ ಮುಖ್ಯ. ಇಂದು ಅದೆಲ್ಲಾ ಈಡೇರಿದೆ. ಆದರಿಂದ ನೀನು ಇನ್ನು ಕಾವ್ಯರಚನೆಗೆ ತೊಡಗು. ನಿನಗೆ ತುಂಬಾ ಪ್ರಿಯವಾದ ಮಹಾಪುರಾಣದಿಂದ ಚವ್ವೀಸ ತೀರ್ಥಂಕರರಲ್ಲಿ ಒಬ್ಬರನ್ನು ಆಯ್ದುಕೊಂಡು ಕನ್ನಡದಲ್ಲಿ ತೀರ್ಥಂಕರ ಚರಿತೆ ರಚಿಸು."

"ಅಪ್ಪಣೆ ಆಚಾರ್ಯದೇವಾ, ಇಂದೇ ಅದಕ್ಕೆ ತೊಡಗುವೆ". ಪಂಪ ಮಾತು ಮುಂದುವರಿಸಿದ

"ಗುರುದೇವಾ, ನನ್ನನ್ನು ಕಾಡುತ್ತಿರುವ ಸಮಸ್ಯೆಯನ್ನು ಪರಿಹಾರ ಬೇಡಿ ಮುಂದಿಡುತ್ತಿದ್ದೇನೆ. ಇದೀಗ ನೋವು ಸಾವುಗಳಿಂದ ಕೂಡಿದ ಯುದ್ಧದಲ್ಲಿ

ಭಾಗವಹಿಸಿ ಬಂದಿದ್ದೇನೆ. ಅಹಿಂಸೆಯನ್ನೇ ಆಶ್ರಯಿಸಿರುವ ನಾವು ಪ್ರಭುಶಕ್ತಿ ನಿಷ್ಠೆಗಳಿಗಾಗಿ, ಜೋಳದ ಪಾಳಿಗಾಗಿ, ನಾಡಿನ ಹಿತಕ್ಕಾಗಿ ಅನಿವಾರ್ಯ ಬಂದಾಗ ಯುದ್ಧದಲ್ಲಿ ತೊಡಗುವುದು ತಪ್ಪಾಗಲಾರದೆಂದು ತಿಳಿದಿದ್ದೇನೆ. ಆದರೂ ಈ ವಿಷಯ ಪರಿಷ್ಕಾರವಾಗಿಲ್ಲ. ನನ್ನ ವಿಚಾರದಲ್ಲಿ ಗೊಂದಲಗಳಿರಬಹುದೆ?"

"ನೀನು ಗ್ರಹಿಸಿರುವುದರಲ್ಲಿ ಸತ್ಯ ಔಚಿತ್ಯ ಇದೆಯಾದರೂ ಅದು ಪೂರ್ಣ ದೃಷ್ಟಿಗೆ ಹಿಂಸೆಯೇ. ಲೌಕಿಕದಲ್ಲಿ ತೊಡಗಿದವರು ತಮ್ಮ ಯಶಸ್ವೀ ಜೀವನ ನಿರ್ವಹಣೆಗಾಗಿ ಕೆಲವು ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ತೀರ್ಥಂಕರರೂ ಅವರ ಪೂರ್ವಭವಗಳಲ್ಲಿ ಯುದ್ಧ ಮಾಡಿರುವುದುಂಟು. ತಾನಾಗಿ ಶತ್ರುಗಳು ಆಕ್ರಮಿಸಿದಾಗಲೂ ಹೀಗೆ ಮಾಡಬೇಕಾಗುತ್ತದೆ. ಆದರೆ ಇವೆಲ್ಲ ಒಂದು ಮಿತಿಯವರೆಗೆ ಕ್ಷಮ್ಯ. ಆಮೇಲೆ ಅಹಿಂಸೆಯೇ ಬಿಡುಗಡೆಗೆ ಮೆಟ್ಟಿಲಾಗಬೇಕು. ಅಹಿಂಸೆ ಜೀವದ ಸಹಜ ಸ್ವಭಾವ; ಅದೇ ಧರ್ಮ, ಅದೇ ಜೀವಯೋಗ. ತನ್ನನ್ನು ತಾನು ಅರಿಯುವುದು ಎಷ್ಟು ಸುಲಭವೋ ಅಷ್ಟೇ ಕಷ್ಟ. ಒಮ್ಮೆ ಅದರ ರಹಸ್ಯ ವಶವಾದರೆ ಸಾಕು, ಸಂಸಾರ ಹೇರಿದ ಸೀಮಾರೇಖೆಗಳನ್ನು ಜೀವ ಸುಲಭವಾಗಿ ಸೀಮೋಲ್ಲಂಘನ ಮಾಡುತ್ತದೆ."

"ಈಗ ಸಮಾಧಾನವಾಯಿತು ಗುರುದೇವಾ. ನನ್ನ ಸಂಶಯ ಆವಿಯಾಗಿದೆ. ಕಾವ್ಯ ರಚನೆಗೆ ಸ್ಫೂರ್ತಿ ದೊರೆಯಿತು. ಬೇಗ ಉತ್ತಮ ಕಾವ್ಯಬರೆಯುವುದು ಸಾಧ್ಯವಾದೀತು. ತಮ್ಮ ಆಶೀರ್ವಾದರಕ್ಷೆ ಬೇಕು."

"ಶುಭಮಸ್ತು."

ಪಂಪ ಮಹಾಪುರಾಣದ ಸಾಗರದಲ್ಲಿ ತಲ್ಲೀನನಾದ. ಪೂರ್ವಪುರಾಣದೊಳಗಿಂದ ಆದಿನಾಥಸ್ವಾಮಿಯ ಪುರಾಣವನ್ನು ಚಂಪೂ ಕಾವ್ಯವಾಗಿ ರಚಿಸಲು ಅನುವಾದ. ಅದಕ್ಕೆ ತಕ್ಕಂತೆ ಸಂದರ್ಭವೂ ಒದಗಿ ಬಂತು. ರಟ್ಟರೊಡನೆ ಗೆದ್ದ ಕಾಳಗದಲ್ಲಿ ಬಾಯಿಕ ಬೂತುಗ ಮತ್ತು ಕಾಳ ಎಂಬ ಮೂವರು ಮಹಾ ಸಾಹಸದಿಂದ ಸಿಂಹಸ್ವರೂಪಿಗಳಾಗಿ ಹೋರಾಡಿದ್ದರು. ಅವರಲ್ಲಿ ಬಾಯಿಕ, ಕಾಳ ವೀರಮರಣವಪ್ಪಿದ್ದರು. ಅವರಿಗಾಗಿ ಬೋದನದ ಹೆಬ್ಬಾಗಿಲ ಇಬ್ಬದಿಯಲ್ಲೂ ಎರಡಾಳೆತ್ತರದ ವೀರಗಲ್ಲು ನಿಲ್ಲಿಸಿದ್ದರು. ಬೂತುಗ ಸಾಹಸಕ್ಕೆ ಇನ್ನೊಂದು ಹೆಸರಾಗಿ ನಿಂತಿದ್ದ. ಈಗ ಅವನನ್ನೇ ಸೇನಾನಿಯನ್ನಾಗಿ ಮಾಡಿ ಪಂಪನನ್ನು ಆಸ್ಥಾನದ ಪೂರ್ಣ ಕಾಲದ ಅಗ್ರ ಕವಿಯೆಂದು ನೇಮಿಸಲಾಯಿತು.

ಇದರಿಂದ ಪಂಪನ ಅಭ್ಯಾಸಕ್ಕೆ ಹೆಚ್ಚು ಅನುವಾಯಿತು. ಈ

ಅವಕಾಶದಲ್ಲಿರುವಾಗಲೇ ಪುಲಿಗೆರೆಯಿಂದ ಕರೆ ಬಂದಿತ್ತು. ಅದು ಒಡಹುಟ್ಟಿದ ತಮ್ಮ ಜಿನವಲ್ಲಭನ ವಿವಾಹ ಮಹೋತ್ಸವದ ಆಹ್ವಾನ. ಪಂಪ ಮಡದಿಯರೊಡನೆ ಪುಲಿಗೆರೆಗೆ ಬಂದಿಳಿದ. ಎರಡು ಮೂರು ದಿವಸ ಪಂಪನ ಮನೆಯ ಮುಂದೆ ಪರಿಷೆ ನಡೆದಂತೆ ಜನ ಸೇರಿ ಪಂಪನನ್ನು ನೋಡಿ ಹೋದರು. ಭೀಮಪ ಅಬ್ಬಣಬ್ಬೆಯರಿಗೆ ಮಗ ಸೊಸೆಯರೊಡನೆ ಮನ ಬಿಚ್ಚಿ ಮಾತಾಡಲು ಅವಕಾಶವಾಗಿರಲಿಲ್ಲ. ಅಬ್ಬಣಬ್ಬೆಗೆ ಮೊಮ್ಮಗು ಎತ್ತಿ ಆಡಿಸುವ ಬಯಕೆ ಇದೀಗ ನೆರವೇರುವ ದಿನಗಳು ಸಮೀಪಿಸುತ್ತಿದ್ದುವದು. ಬಮ್ಮಲೆಗೆ ಅಯ್ದು ತಿಂಗಳು ತುಂಬಿತ್ತು. ಬಮ್ಮಲೆಯ ತಂದೆ ಕುಂದರಾಜ ತಾಯಿ ಪೋಚಿಕಬ್ಬೆ ಸಂಭ್ರಮಿಸಿ ಚೊಚ್ಚಲ ಹೆರಿಗೆಯ ಸೀಮಂತವನ್ನು ಮದುವೆಯಂತೆ ಅದ್ದೂರಿಯಾಗಿ ನಡಸಿದರು. ಜಕ್ಕಲೆಗೂ ಅಕ್ಕನ ನಲಿವು ತನ್ನದೇ ತಂಬ ಸಡಗರ. ಅವಳ ತಾಯಿ ಮಾಚಿಕಬ್ಬೆಗಿಂತ ತಂದೆ ಶಂಭುರಾಜ ತೇದುಹೋಗಿದ್ದ. ಇದ್ದ ಒಬ್ಬಳೇ ಮಗಳು ಬಹುದೂರ ಹೋಗಿಬಿಟ್ಟಳಲ್ಲಾ ಎಂಬ ಕೊರಗನ್ನು ಹಚ್ಚಿಕೊಂಡಿದ್ದ. ಈಗ ಮಗಳು ಬಂದದ್ದು ಕಾಯಕಲ್ಪ ಪಡೆದಂತಾಗಿತ್ತು.

ಜಿನವಲ್ಲಭನ ಮದುವೆಗೆ ನೆಂಟರಿಷ್ಟರೆಲ್ಲಾ ಬಂದಿಳಿಯತೊಡಗಿದರು. ಪಂಪ ಬೋದನದಿಂದ ಬಂದವನೇ ಬನವಾಸಿ ಮಂಡಲವನ್ನೆಲ್ಲಾ ಸುತ್ತಿಬಂದ. ಪುಲಿಗೆರೆಯ ಜಯಗೊಂಡ ಸಿದ್ಧಾಂತ ಆಚಾರ್ಯರ ಬಳಿ ತನ್ನ ಕಾವ್ಯರಚನೆಯ ಭಾಗಗಳನ್ನು ನಿತ್ಯ ಓದತೊಡಗಿದ. ಪಂಪ ಆದಿಪುರಾಣ ಎಂದು ತನ್ನ ಕಾವ್ಯಕ್ಕೆ ಚೌಕಟ್ಟು ಹಾಕಿಕೊಂಡಿದ್ದುದರಿಂದ ಉಳಿದ ಪುರಾಣಗಳಿಗೆ ಇದು ಮಾದರಿಯಾಗಿ ನಿಲ್ಲಬೇಕೆಂದು ಸ್ಫೂರ್ತಿಯ ಕ್ಷಣಗಳಲ್ಲಿ ಬರೆಯತೊಡಗಿದ.

ತಮ್ಮನ ಮದುವೆಯ ದಿನ ಬಂದೇ ಬಿಟ್ಟಿತು. ವರಪೂಜೆಯ ದಿವಸ ದೇವರೂಟ ಮುಗಿಸಿಕೊಂಡು ವೆಂಗಿಪಳುವಿಗೆ ಹೊರಟರು. ಜಿನವಲ್ಲಭನಿಗೆ ಹೆಣ್ಣು ಗೊತ್ತಾಗಿದ್ದುದು ಅಲ್ಲಿಯೇ. ಅಲ್ಲದೆ ಜಿನವಲ್ಲಭ ತಾತನ ಕಡೆಯಿಂದ ಬಂದ ಅಳಿದುಳಿದ ಆಸ್ತಿಯನ್ನು ರೂಢಿಸಿ ಬೆಳೆಸಿಕೊಂಡು ಬಾಳುವುದೆಂದು ನಿಶ್ಚಯವಾಗಿತ್ತು. ಪಂಪನಿಗೂ ಇದು ಒಪ್ಪಿಗೆಯೇ. ವೆಂಗಿಪಳು ಬೋದನಕ್ಕೆ ತೀರ ಹತ್ತಿರವಾದ್ದರಿಂದ ತನ್ನ ಒಡಹುಟ್ಟಿದವರ ಹತ್ತಿರದಲ್ಲೇ ಬಂದು ನಿಲ್ಲುವುದು ಅನುಕೂಲಕ್ಕೆ ಆಯಿತೆಂದು ತಿಳಿದ.

ಪಂಪ ಬಮ್ಮಲೆಯನ್ನು ಮದುವೆಯ ತಂಡದವರೊಡನೆ ಪುಲಿಗೆರೆಗೆ ಕಳಿಸಿದ. ಹೆರಿಗೆಯೆಲ್ಲ ಸುಖವಾಗಿ ನಡೆಯುವುದೆಂದು ಮಡದಿಗೆ ಕಿವಿಯಲ್ಲೇ ನುಡಿದು ಧೈರ್ಯ ತುಂಬಿದ. ವೆಂಗಿಪಳುವಿನ ಜಕ್ಕಲೆ ಮತ್ತು ಶಂಭುರಾಜ

ಮಾಚಿಕಬ್ಬೆಯರನ್ನು ಕರೆದುಕೊಂಡು ಬೋದನ ತಲುಪಿದ. ಅತ್ತೆಮಾವಂದಿರ ಬರುವಿಕೆ ಪಂಪನಿಗೆ ಬೇಕಿತ್ತು. ತಂದೆತಾಯಿಯರ ಇರುವಿಕೆಯಿಂದ ಒಬ್ಬಂಟಿಗಳಾದ ಜಕ್ಕಲೆ ನೆಮ್ಮದಿ ಪಡಲಿ, ತನ್ನ ಕಾವ್ಯ ರಚನೆ ನಿರಾತಂಕವಾಗಿ ಸಾಗಲಿ ಎಂಬುದು ಒಳ ಹಾರೈಕೆ.

ಧವಳಗಿರಿ ಮನೆಯೊಳಗೆ ಹೋಗುತ್ತಿದ್ದಂತೆಯೇ ಆಗಸ ಕುಸಿದು ಬೀಳುವಂತಹ ದುರ್ವಾರ್ತೆ ಕೇಳಿ ಪಂಪ ಮೈಮರೆತು ಬಿದ್ದ. ಗುರುದೇವ ದೇವೇಂದ್ರ ಮುನೀಂದ್ರರು ಸಮಾಧಿ ಮರಣ ಪಡೆದಿದ್ದರು.

ಪುಲಿಗೆರೆಯ ಸಹಸ್ರಕೂಟ ಚೈತ್ಯಾಲಯದಲ್ಲಿ ಪಂಪ ಆದಿಪುರಾಣದ ರಚನೆಯಲ್ಲಿ ತಲ್ಲೀನನಾದ. ಕಾವ್ಯವನ್ನು ಬೇಗ ಬರೆದು ಮುಗಿಸಿ ಅದರ ಸಂಪೂರ್ಣ ವಾಚನ ಗಮಕಿಗಳಿಂದ ನಡೆಯಬೇಕೆಂದು ಏರ್ಪಾಟಾಗಿತ್ತು.

ದೇವೇಂದ್ರ ಮುನೀಂದ್ರರು ಸಮಾಧಿಮರಣ ಪಥದ ಮೇಲೆ ಅವರಿಗೆ ಅಲ್ಲಿನ ಗುರುಕುಲದ ನಟ್ಟ ನಡುವೆ ಅರಸ ಅರಿಕೇಸರಿಯೇ ಮುಂದೆ ನಿಂತು ನಿಸದಿಗೆ ನಿರ್ಮಿಸಿಕೊಟ್ಟ. ಬೋದನದ ಅಣುಕಣವೆಲ್ಲ ಆಚಾರ್ಯರ ನೆನಪನ್ನೇ ಮೂಡಿಸುತ್ತಿದ್ದುವು. ಪಂಪ ಅನಾಥ ಪ್ರಜ್ಞೆಯಿಂದ ಬಿಡಿಕೊಳ್ಳುವುದು ಅನಿವಾರ್ಯವಾಗಿತ್ತು. ಅದಕ್ಕಾಗಿ ಕುಟುಂಬದೊಡನೆ ಪುಲಿಗೆರೆಗೆ ಹೊರಟು ಬಂದ. ಒಂದು ತಿಂಗಳಲ್ಲಿ ಆದಿಪುರಾಣದ ಉಳಿದ ಭಾಗಗಳನ್ನು ಬರೆದು ಮುಗಿಸಿದ್ದ.

ಜಯಗೊಂಡ ಸಿದ್ಧಾಂತ ಮುನಿಗಳ ಮಾರ್ಗದರ್ಶನದಲ್ಲಿ ಪುರಾಣ ವಾಚನ ಕಾರ್ಯ ಮುಗಿಯಿತು. ಸುತ್ತಮುತ್ತಲ ಊರು ಕೇರಿಗಳ ಸಮಾಜ ಬಾಂಧವರಲ್ಲದೆ ಸಾಹಿತ್ಯ ಪ್ರಿಯರೆಲ್ಲ ನಿತ್ಯ ಸೇರುತ್ತಿದ್ದರು. ಆರು ದಿವಸ ವಾಚನ ವ್ಯಾಖ್ಯಾನ. ಹಸ್ತಪ್ರತಿಯನ್ನು ಆನೆಯ ಮೇಲಿಟ್ಟು ಊರೆಲ್ಲ ಮೆರವಣಿಗೆಯಲ್ಲಿ ಕೊಂಡೊಯ್ದರು. ಭೀಮಪ ಅಬ್ಬಣಬ್ಬೆಯರಿಗೆ ಹೆತ್ತೊಡಲು ಇಂದು ತಣಿಯಿತೆಂಬ ತೃಪ್ತಿ. ಕುಂಥರಾಜ ಪೋಚಿಕಬ್ಬೆಯರಿಗೂ ಶಂಭುರಾಜ ಮಚಿಕಬ್ಬೆಯರಿಗೂ ತಮ್ಮ ಅಳಿಯ ಹಿರಿಯ ಮನ್ನಣೆಗೊಳಗಾದ ಕವಿಯೆಂಬ ಹೆಮ್ಮೆ. ಜಿನವಲ್ಲಭನಿಗೆ ಎಲ್ಲಿಲ್ಲದ ಉಲ್ಲಾಸ. ಬಮ್ಮಲೆ ತುಂಬು ಬಸರಿಯಾದರೂ ಸಡಗರದಿಂದ ಓಡಾಡಿದಳು. ಜಕ್ಕಲೆಯಂತೂ ಅಭಿಮಾನದಿಂದ ಬೀಗಿಹೋದಳು.

ಪಂಪನಿಗೆ ಮಾತ್ರ ತೃಪ್ತಿ ಬೇರೊಂದು ಕಾರಣದಿಂದ ದೊರೆತಿತ್ತು. ತನ್ನ ಬಾಳ ಚುಕ್ಕಾಣಿಯಂತಿದ್ದ ದೇವೇಂದ್ರ ಮುನೀಂದ್ರರಿಗೆ ಒಪ್ಪಿಗೆಯಾಗುವ ಕಾಣಿಕೆಯ ಕಬ್ಬವನ್ನು ಬರೆದು ಮುಗಿಸಿದೆನಲ್ಲಾ ಎಂಬ ಆತ್ಮತೃಪ್ತಿಯದು, ಆದಿಪುರಾಣವನ್ನು

ದೇವೇಂದ್ರರಿಗೇ ಅರ್ಪಿಸಿ ಮೊದಲ ಪ್ರಾರ್ಥನೆಯಲ್ಲೇ ಅವರನ್ನೇ ಸ್ತುತಿಸಿದ:

ಶ್ರೀ ದೇವೇಂದ್ರ ಮುನೀಂದ್ರವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿ ಬ್ರಹ್ಮನಗಾಧ ಬೋಧ ನಿಳಯಂ ದುರ್ವಾರ ಸಂಸಾರ ವಿ।
ಚ್ಛೇದೋಪಾಯ ನಿಯುಕ್ತ ಸೂಕ್ತಿವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿ ಶ್ರೀ ಸುಖಾವಾಪ್ತಿಯಂ॥

ದೇವೆಂದ್ರ ಮುನೀಂದ್ರರ ನಿಸಿದಿಯ ಬಳಿ ಹೋಗಿ ಪೂಜಿಸಿ "ನನ್ನ ಬಾಳಿನುದ್ದಕ್ಕೂ ನಿಮ್ಮ ತಿರು ಅಡಿಗೆಳೆಡೆಯ ಹೊನ್ನಕಣ ನನ್ನ ನೆತ್ತಿಯಮೇಲೆ ತೀರ್ಥಜಲವಾಗಿ ನಿಂತು ಹರಸುತ್ತಿರಲಿ' ಎಂದು ಬೇಡಿಕೊಂಡ.

ಬೋದನದಿಂದ ರಾಜರ ತುರ್ತುಕರೆಯಂತೆ ಪಂಪ ಹೊರಡುವ ಸಿದ್ಧತೆಯಲ್ಲಿರುವಾಗಲೇ ಬಮ್ಮಲೆ ಗಂಡುಮಗುವಿನ ತಾಯಿ ಆಗಿದ್ದಳು. ಬೋದನದಿಂದ ಪಂಪನಿಗೆ ಕವಿತಾಗುಣಾರ್ಣವನೆಂಬ ರಾಜಪ್ರಶಸ್ತಿ ಬಂದಿತ್ತು. ಪಂಪ ಅಚ್ಚರಿಯಿಂದ ಮೂಕನಾದ. ಅದರ ಜತೆಜತೆಗೇ ಬಂದ ಸಿರಿಸಂಪತ್ತುಗಳ ಸರಮಾಲೆ ಸಮಸ್ತವನ್ನೂ ಸಂತೋಷಚಿತ್ತದಿಂದ ಗುರುಕುಲಕ್ಕೆ ದಾನಮಾಡಿ ಸಮರ್ಪಿಸಿದ. ಮಠಗಳಲ್ಲಿ ಸಂಸ್ಕೃತ ಪ್ರಾಕೃತಗಳು ಜತೆಗೆ ಕನ್ನಡವನ್ನೂ ಬೋಧಿಸಲು ಏರ್ಪಾಟು ಮಾಡಿದ. ಸರ್ವಭಾಷಾಮಯಿಯಾದ ಸರಸ್ವತಿಗೆ ಭಾಷಾಭೇದಗಳಿಂದ ದ್ವೇಷಾಸೂಯೆಗಳನ್ನು ತೋರಬಾರದೆಂದು ಮಿತ್ರಸಂಹಿತೆಯಿಂದ ಪ್ರತಿಪಾದಿಸಿದ. ಅಪರಿಗ್ರಹದ ಅನುಷ್ಠಾನದಿಂದ ಪದವಿ ಅಂತಸ್ತುಗಳ ಪಂಪನನ್ನು ಗೆಲ್ಲಲಾಗಲಿಲ್ಲ.

ಆದಿಪುರಾಣದ ನೂರಾರು ಓಲೆಗರಿ ಪ್ರತಿಗಳನ್ನು ಬರೆಯಿಸಿ ಆಸ್ಥಾನದ ವಿದ್ವನ್ಮಂಡಲಿಗೂ, ರಾಜ್ಯದ ಸಾರಸ್ವತಮಂಡಲಿಗೂ ಉಡುಗೊರೆಗಳೊಡನೆ ಗೌರವ ಪೂರ್ವಕವಾಗಿ ವಿತರಣೆ ಮಾಡಲಾಯಿತು.

# ೧೮

ಪಂಪ ಬೋದನ ತಲುಪಿದವನೇ ಅರಿಕೆಸರಿಯನ್ನು ಕಂಡ.

“ತಮ್ಮ ಕರೆ ತಲುಪಿತು.”

“ನೀವು ಹೇಳದ ಕೇಳದೆ ರಾಜಧಾನಿ ಬಿಟ್ಟು ಹೊರಡುವುದೆ? ಅದೂ ತಿಂಗಳುಗಟ್ಟಲೆ! ಅಲ್ಲಿ ಕಾವ್ಯ ಬರೆಯುತ್ತಾ ನೀವು ಕುಳಿತುಬಿಟ್ಟು ಇಲ್ಲಿ ರಾಜ್ಯದ ಗೊಡವೆಯನ್ನೇ ಮರೆತು ಬಿಟ್ಟರೆ ಹೇಗೆ ಹೇಳಿ?”

ಪಂಪನಿಗೆ ಅರಿಗನ ಮಾತಿನ ಧೋರಣೆ ಹಿಡಿಸಲಿಲ್ಲ. ಪಡಿನುಡಿಯುವುದಕ್ಕೆ ತೊಡಗಿ ಕಡೆಗೆ ಮಾತು ನುಂಗಿಕೊಂಡು ಸುಮ್ಮನಾದ. ಅಂದಿನ ಒಡ್ಡೋಲಗ ಮುಗಿದು ಪಂಪ ನೇರವಾಗಿ ಮನೆಗೆ ಹೋಗದೆ ಗುರುಕುಲದ ದಿಬ್ಬ ಹತ್ತಿ ನಿಂತ. ಆ ಜಾಗದಲ್ಲಿ ನೂರಾರು ಸಲ ಅರಿಗ ಪಂಪ ಸೇರಿ ಗಂಟೆಗಟ್ಟಲೆ ಮಾತನಾಡಿದ್ದರು, ಅಕ್ಕಪಕ್ಕದಲ್ಲಿ ಗಿಡಮರ ಬಳ್ಳಿಗಳೆಲ್ಲ ಶಿಶಿರ ಋತುವಿನ ಆಳ್ಕೆಯಲ್ಲಿ ಎಲೆಗಳೆಲ್ಲ ಉದುರಿ ಬೋಳಾಗಿ ನಿಂತಿದ್ದುವು! ಎದುರು ನೋಡಿದ. ದೂರದಲ್ಲಿ ಬೋದನ ಕಂಡಿತು. ಪಂಪ ಅಲ್ಲೇ ಹುಲ್ಲಿನ ಮೇಲೆ ಕುಳಿತು ಮರಕ್ಕೆ ಒರಗಿಕೊಂಡು ಚಿಂತಿಸತೊಡಗಿದ. ಈ ಇಳಾಧಿನಾಥರನ್ನು ಓಲಗಿಸಿ ಬಾಳುವುದೇ ಕಷ್ಟವೆನಿಸಿತು. ಕವಿತಾಗುಣಾರ್ಣವವೆಂಬ ಪ್ರಶಸ್ತಿ ಕೊಡುವ ದೊರೆಯೇ ಹೀಗೆ ನುಡಿದರೆ? ನಂಬಲಾಗಲಿಲ್ಲ.

ಬಗೆಗಣ್ಣಿನೆದುರು_

ಕಣ್ಣು ಕಾಣುವ ತನಕ ಚೆಲುವಿನ ಹರಹು. ಜಲ ಜಲನೆ ಉಕ್ಕಿಹರಿವ ಕಾಲುವೆ. ಕಾಲುವೆಯಲ್ಲಿ ಸೊಕ್ಕಿ ಬೆಳೆವ ಹೊಸ ನೆಯ್ದಿಲ ಹೂ. ನೆಯ್ದಿಲ ಸೊಂಪು ಗಂಪನ್ನು ಬೀರತ್ತ ಕೆಂದೆನೆಗೆ ಜೋಲುವ ನೆಲ್ಲು. ತೂಗಿ ಬಾಗಿ ತೊನೆವ ತುಂಬಿದ ತೆನೆಗಳು. ತೆನೆಗಳಿಗೆ ಹಾಯುತ್ತಿರುವ ಗಿಳಿಗಳ ಬಳಗ. ಪಕ್ಕದಲ್ಲೇ ಉದ್ದಕ್ಕೂ ಹಚ್ಚಗೆ ಹಬ್ಬಿ ಕೈಗೆ ಬಂದ ಬೆಳೆಯಿಂದ ಬಾಗಿದ ಕೈ ಹೊಲ. ಕೈ ಹೊಲವನ್ನು ಬಳಸಿದ ಹೂ ತುಂಬಿದ ಹೂಗೊಳಗಳು. ಹೂಗೊಳಗಳನ್ನು ಬಳಸಿ ಸುತ್ತಾಡುವ ದುಂಬಿಗಳು. ತಂಬೆಲರಿಗೆ ಹಾರುವ ನೆಲಸಿರಿಯ ಪರಿಮಳ ಎಲ್ಲೆಲ್ಲಿಯೂ ಸಿರಿ ಒಪ್ಪಿ ತೋರುವುದು.

ಆ ನಾಡಿನ ಅಡವಿ

ವಿಚಿತ್ರ ಪತ್ರ ಫಲ ಪುಷ್ಪಗಳಿಂದ ಇಡಿಕಿರಿದು ಸೊಕ್ಕಿದಾನೆಯನ್ನು ಬೆಳೆವುದು ದೇವಮಾತೃಕವೆನಿಸಿದ ಹೊಲ.

ಮಳೆತಾಯಿ ಕಾಪಾಡಿ ನರಗಂಪು ಹೊಮ್ಮಿದ ನೆಲ್ಲನ್ನು ಬಳೆವುದು

ಆ ನಾಡಿನ ರಮ್ಯನಂದನವನ.

ಅಗಲಿದ ಕಾದಲರುಗಳಿಗೆ ಒಲವನ್ನೂ ಬೇಟವನ್ನೂ ಬಳೆವುದು.

ಮೂರು ಬಗೆಯ ಬೆಳಸು ಆ ನಾಡಿನ ಕಾಡಿನ ಅಂತರಾಳದಲ್ಲಿ.

ಬಗೆಗಣ್ಣಿನ ಮುಂದೆ—

ಬಾನವರ ಮರುಕದೆರಕದಿಂದ ಬೆಳೆದ ಮರಗಿಡಗಳು. ಸಾರ್ಥಕ ಬದುಕು. ಯಾವ ಹೂವು ಹಣ್ಣು ಬೀತು ಹೋಗವು. ಮಲ್ಲಿಗೆಗಳೂ ಇಮ್ಮಾವೂ ಅಲ್ಲಿ ಬೀಯವು. ಅಹುದು ಇದಕ್ಕೂ ಬೇರೆ ಇನ್ನೇನಿದೆ ಸಂಸಾರ ಸಾರ ಸರ್ವಸ್ವ ಫಲ!

ಅಬ್ಬ, ಹದವಾದ ಕಬ್ಬು, ಕಿರುಬೆರಳಲ್ಲಿ ಮೆಲ್ಲಗೆ ಮಿಡಿದರೂ ರಸ ಬಿಡುತ್ತವೆ. ಅಹ್! ಬಿರಿದ ಮೊಗ್ಗಿನ ಕಂಪು ಮತ್ತೇರಿಸುತ್ತದೆ. ಒಂದೇ ಒಂದು ಹೂವಿನ ಕೆಂಪೇ ಸಾಕು, ತುಂಬಿ ಮೊಗಗೆಡುವುದು. ಅದೊ! ಕೈಗೆಟಕುವಂತೆ ಬಾಗಿರುವ ಒತ್ತಿನ ಹಣ್ಣುಗಳು. ಒಂದೇ ಒಂದು ಹಣ್ಣು ಸಾಕು. ರಸ ಕುಡಿದು ಅರಗಿಸಿಕೊಳ್ಳಲಾರದೆ ಗಿಳಿಗಳು ಅಜೀರ್ಣ ಪಡಲು.

ಎಲ್ಲಾ ಚಲುವ ಕನ್ನಡ ನಾಡ ಸಿರಿ. ಬಸಿರ ಮಕ್ಕಳ ಹೆಮ್ಮೆ. ಏನು ಬೆಳೆ ಏನು ಹೊರವು, ಏನು ಹುಲುಸು. ಮಾವು ಮಲ್ಲಿಗೆ, ಮಲ್ಲಿಗೆ ಮಾವು ಎಲ್ಲಿ ನೋಡಲಿ ಅಲ್ಲಿ.

ಸುತ್ತಿರಿದ ರಸದ ತೊರೆಗಳು. ಮುತ್ತಿನ ಮಾಣಿಕದ ಹಲವು ತೋಡು ಬೀಡುಗಳು. ಸೊಕ್ಕಿ ಹುಚ್ಚು ಹಿಡಿದಂತೆ ತೋರುವ ಮದದಾನೆಗಳು. ಅವು ಸುಮ್ಮನೆ ನುಗ್ಗುವ ಕಾನುಗಳು. ಓಹ್! ಕನ್ನಡ ನೆಲದ ಸಿರಿಯನ್ನು ಏನೆಂದು ಹೊಗಳುವುದು. ಮಳೆ, ಬೆಳೆ, ಹೊಳೆ, ಕಾಡಬೆಳೆ, ನಾಡಬೆಳೆ– ಒಂದು ಹತ್ತಾಗಿ ಹತ್ತು ನೂರೆಸಳಾಗಿ ಎಲ್ಲೆಲ್ಲೂ ನಾಡ ಸಿರಿ ದಾಂಗುಡಿಯಿಟ್ಟಿದೆ. ಕಣ್ ತುಂಬ ಎದೆ ತುಂಬ ನವಿರೇಳಿಸಿದೆ.

ಹುರುಳಾದ ತಿರುಳಾದ ಇಂಪಾದ ಸೊಂಪಾದ ತಾಯಾದ ತವರಾದ ಹೆಮ್ಮೆಯ ಕನ್ನಡನಾಡು, ಕನ್ನಡ ನುಡಿ.

ಚಿಗುರು ತುಂಬಿದ ಕೊಂಬೆಗಳಲ್ಲಿ ಕುಳಿತು ಕುಹೂ ಕುಹೂ ಕೂಗುವ ಕೋಗಿಲೆ. ಇಳಿಬಿದ್ದ ಹೂವಿನ ಗೊಂಚಲುಗಳಿಗೆ ಒತ್ತಿ ಮುತ್ತಿಕೊಂಡು ಹಾಡಿ

ಝೇಂಕರಿಸುವ ದುಂಬಿ. ತುರುಗಿದ್ದ ಬಲ್ಮಿಡಿಯ ತೂಗಿ ಗೊಂಬಿನಲ್ಲಿ ಹಾಯ್ದು ಬಂಡುಣಿಸುತ್ತಿರುವ ಶುಕಾಳಿಗಳು. ತಳಿರ್ಗೊಂಬಿನಲ್ಲಿ ಕೋಗಿಲೆ. ಪೂ ಗೊಂಬಿನಲ್ಲಿ ದುಂಬಿ, ತೂಗು ಗೊಂಬಿನಲ್ಲಿ ಗಿಳಿ. ಮಾವಿನ ಮರದ ತುಂಬ ತುಂಬಿಕೊಂಡು ಮದನನ ಸಂದೇಶ ಸಾರುತ್ತಿವೆ—ಇಮ್ಮಾವೆ ಅವಕ್ಕೆ ಇನಿಯ ಇಕ್ಕೆದಾಣ.

ಇಮ್ಮಾವು

ಅಗಲಿದ ಇನಿಯರನ್ನು ತುಳಿಯುವುದಕ್ಕೆ ಕೋಲ್ವಿಲ್ಲನಿಗೆ ಚಿಗುರಿದ ಮಾವಿನ ಮರ ನೆರವಾಗಬೇಕು. ಮಾವು ಬಂದರೆ ಲೋಕಕ್ಕೆ ಮಧುಮಾಸ ಆಗಮಿಸಿದಂತೆ, ಈ ನಾಡಿನ ವನಗಳಲ್ಲಿ ಮಾವೇ ಅರಸು. ತನ್ನ ರಾಜ್ಯ ವೈಭವವನ್ನು ಲೋಕದಲ್ಲಿ ಸಾರಲು ಮಾವೇ ಸರಿಯೆಂದು ಕಾಮ ಕೂಡ ಅಕ್ಕರಿಂದ ಮೂರು ಸಾರಿ ಸುತ್ತು ಹಾಕಿದನಂತೆ.

ಮಾವು ಬಿಟ್ಟರೆ

ಅಹುದು. ಬೇರೆ ಹೂಗಳೂ ಇವೆ. ತೋಟಗಳಲ್ಲಿ ಸುಳಿದಾಡುವ ಹೆಂಗಳೆಯರ ಇಚ್ಛೆಯನ್ನು ಮೆಚ್ಚಿಸುವ ರುಚಿಯಾದ ಶುಚಿಯಾದ ಕಂಪಿನ ಬಟ್ಟಲುಗಳು ಅಪಾರ. ಹೊನ್ನೆಯರಳು, ಸುರಗಿಯ ಮುಗುಳು, ಪೊಗಡೆಯ ಹೂ. ಇರುವಂತೆ, ಅದಿರ್ಮುತ್ತೆ. ಆರಾರ ಮನವನ್ನೂ ಸೋಲಿಸುವ ಜಾಜಿ, ನಲ್ಲರ ಲಲ್ಲೆಯಾದ ಮೊಲ್ಲೆ, ಹೂ ಬಾಣನ ನಲ್ಲಂಬುಗಳಿಗೆ ತಕ್ಕುದಾದ ಪಾದರಿ, ಕಣಿಗಿಲೆ.

ಸಂಪಗೆ

ಎಂಥ ಹೆಸರು ಕಂಪಿಗೆ! ಕಂಪಿದ್ದರೆ ಒಪ್ಪವಾದ ಬಣ್ಣವಿರುವುದಿಲ್ಲ. ಬಣ್ಣವಿದ್ದರೆ ಹಿತವಾದ ಕಂಪಿರುವುದಿಲ್ಲ. ಆದರೆ ಸಂಪಗೆಗೆ ಕಂಪೂ ಬಣ್ಣವೂ ಒಟ್ಟಿಗೆ ದೊರೆತಿವೆ. ಕೆಂಡಸಂಪಗೆ, ವನಸಂಪಗೆ, ನಾಗಸಂಪಗೆ! ಸಂಪಗೆ ಚಂಪಕದ ಚತುರ್ಮುಖ ಸೌಂದರ್ಯ. ದುಂಬಿಗೆ ಹಗೆ ಸಂಪಗೆ, ನಿಜ. ಆದರೆ ರಸಿಕರೆದೆಗೆ ತಂಗಾಳಿ ತೀಡಿದಂತೆ.

ಸುರಹೊನ್ನೆ

ಹೂಗಳಲ್ಲಿ ಏನು ಚೆನ್ನನ್ನೋ ಸುರಹೊನ್ನೆ. ಮುತ್ತಿನಲ್ಲಿ ನವಿರಾದ ಎಸಳುಗಳನ್ನು ಚೆನ್ನಾಗಿ ಕಂಡರಿಸಿ, ಅದರ ಕೇಸರಾಕೃತಿಯಲ್ಲಿ ಸುವರ್ಣ ಚೂರ್ಣವನ್ನು ಪಸರಿಸಿ, ಕರ್ಣಿಕೆಯಂದದಲ್ಲಿ ಕೀಲಿಸಿ ಹೊಸತೊಂದು ನುಣುಪಿನ ಅರಲನ್ನು ಅರಲಂಬಿಗೆಂದೇ ಸಮೆದಂತೆ ಸುರಹೊನ್ನೆ ಸೊಗಯಿಸುವುದು.

ಆಮೇಲೆ

ಕೇದಗೆ

ಓಹ್, ಕೇತಕಿಯ ಧೂಳಿ ತುಂಬಿದ ಆ ಗಾಳಿ ಎಷ್ಟು ಆಹ್ಲಾದಕರ.

ಚೆನ್ನೈದಿಲು, ಬಕುಳ, ಸೇವಂತಿಗೆ, ಗೊಜ್ಜಗೆ ಇನ್ನೂ ಹತ್ತಾರು ತರದ ಹೂಗಳು. ಎಲ್ಲಾ ನುಡಿಯಲು ಆಗುವುದೆ ಆ ನಾಡಿನ ಹೂಗಳ ಲೆಕ್ಕವನ್ನು? ಆ ನಾಡ ಹೂ ತೋಟ ಕಾಮನ ಒಡ್ಡೋಲಗ.

ಮಲ್ಲಿಗೆ!

ಆ ನಾಡಿನಲ್ಲಿ ಉದ್ದಗಲಕ್ಕೂ ಎಲ್ಲಿಗೆ ಹೋದರೂ ಬಿಡದೆ ಅಲ್ಲಿಗೆ ತಟ್ಟುವುದು ಮಲ್ಲಿಗೆಯ ಮೋಹಕ ಕಂಪು. ಅದು ದಿಕ್ತಟವನ್ನು ಬಳಸಲು ಮಗಮಗಿಸುತ್ತ ಮಂದಯಿಸಿದೆ. ಹೀರುವ ದುಂಬಿಗೆ ತಣಿಸಲು ಮಲ್ಲಿಗೆ ಗಂಪು ಕರೆಯುತ್ತಿದೆ. ಮಧು ಮತ್ತು ಮನೋಭವರು ಅಳ್ತಿವಟ್ಟು ಮಲ್ಲಿಗೆಗೇ ವಂಸತ ಋತುವಿನಲ್ಲಿ ಪಟ್ಟ ಕಟ್ಟಿದ್ದಾರೆ. ಅವರ ಜಸ ಸಾರಲು ಮಲ್ಲಿಗೆಯೊಂದೇ ಸಾಕೆಂದು ಅವರ ಭಾವನೆ. ಹಸುರು ಹಿಂದೆ ಸರಿದು ಬಿಳುಪು ಮೆಲ್ಲಮೆಲ್ಲಗೆ ಮುಂದೆ ಚಾಚಿಕೊಳ್ಳುವ ಪರಿ ಅದೇನು ಸೊಗಸು. ದುಂಡುಮಲ್ಲಿಗೆ, ಸೂಜಿಮಲ್ಲಿಗೆ, ಏಳುಸುತ್ತಿನ ಮಲ್ಲಿಗೆ, ನಾಗಮಲ್ಲಿಗೆ, ನಿತ್ಯಮಲ್ಲಿಗೆ ಒಂದೊಂದೂ ಸೊಗಸು. ತಂಗಾಳಿ ತೀಡಿದಾಗ ಹಸಿರಬಸಿರಿನಿಂದ ಬಂದ ಬಿಳಿಯ ಮೊಗ್ಗು ತನ್ನೊಡಲಿಂದ ಕಂಪು ಚೆಲ್ಲುವ ಪರಿ ಸೋಜಿಗವಲ್ಲದೆ ಮತ್ತೇನು? ನಲ್ಲರ ಎದೆಗಳೇ ಅದನ್ನು ನೋಡಿ ಮೆಲ್ಲನೆ ಬಿರಿವುವೆಂದಮೇಲೆ ಬೇರೆ ವಿವರಣೆಯೇಕೆ? ಮಲ್ಲಿಗೆಗೆ ನಲ್ಲರ ಮೆಲ್ಲೆದೆ ಮೇಳಗೊಂಡಿದೆ. ಅಷ್ಟೆಲ್ಲ ಏಕೆ. ಆ ಮದನ ಕೂಡ ತನ್ನ ಮುಡಿಗೆ ಮಲ್ಲಿಗೆಯನ್ನೇ ಏರಿಸುವುದು. ಆತ ಮಲ್ಲಿಗೆಯ ಮನೋಹರತೆಯನ್ನು ಕೈಯೆತ್ತಿ ಹೊಗಳಿ ತಣಿಯನು ದಣಿಯನು.

ಸೊಡರ ಬೆಳಗಿನೊಳ್ ಕೊರಗುವ ಜಾಜಿಯನ್ ತುಂಬಿಯೋಳ್ ಪಗೆಗೊಂಡ

ಸಂಪಗೆಯನ್

ಮುಡಿಯೆ ಸೊಗಯಿಸಿದದಿರ್ಮುತ್ತೆಯಲರನ್ ಮಸಿಯೊಳ್ ಸಮನಾದ

ಗೊಜ್ಜುಗೆಯನ್

ನುಡಿಯಲಕ್ಕುಮೆ ಪೂಗಳ ಲೆಕ್ಕಮನೆಂದೆಯ್ದೆ ಕಾಮನೊಡ್ಡೋಲಗದೊಳ್

ಮುಡಿಗೆಯಿಕ್ಕಿಯುಂ ಕೈಯನೆತ್ತಿ ಪೊಗಳ್ದುಂ ತಣಿಯನೆ ಮದನನುಂ

ಮಲ್ಲಿಗೆಯನ್

ಮೈಮರೆತು ಹಾಡಿದ್ದ—

"ವಹವ್ವಾ! ಪಂಪಾ, ನೀನೆ ಈ ನಾಡ ಮಹಾಕವಿ. ನೀನೇ ಬೆಡಂಗನ್ನೈ, ನೀನೆ ನೀರನ್ನೈ, ನೀನೆ ವಿಳಾಸಿಯ್ಯೈ, ನೀನೆ ಚೆಲ್ವನ್ನೈ, ನೀನೆ ಭುವನಕ್ಕಾರಾಧ್ಯನ್ನೈ, ಕರ್ನಾಟಕ ಸೌಂದರ್ಯ ಪ್ರಿಯ, ಆರಾಧಕ, ಕವಿರಾಜ ಕವಿತಾ ಗುಣಾರ್ಣವ ನಿನ್ನರಸನೋಲಗದ ಕವಿಗಳ್ ನಿನ್ನಂತೆ ಚೆನ್ನರ್ಗಳೇ!!"

ಪಂಪ ತನ್ನ ಪರಾಕಿನ ನುಡಿಗಣವನ್ನಾಲಿಸಿ ಅವಾಕ್ಕಾದ. ಸರಕ್ಕನೆ ಹಿಂದಿರುಗಿ ನೋಡಿದ. ಬೆನ್ನ ಬಳಿಯಲ್ಲೇ ಮಹಾಪ್ರಭು ನಿಂತಿದ್ದಾರೆ. ಸಿಗ್ಗು ಸಂಕೋಚಗಳು, ಒಮ್ಮೆಲೇ ನುಗ್ಗಿದುವು. ಏನು ಮಾಡಬೇಕೆಂದು ತೋಚಲಿಲ್ಲ.

"ಕ್ಷಮಿಸಿ ಪ್ರಭು, ತಾವು ಬಂದುದು...."

"ತಿಳಿಯಿತು ಪಂಪಕವಿಗಳೇ. ಮನ್ನಿಸಬೇಕಾದವರು ನಾವಲ್ಲ, ನೀವು, ಮನ ನೋಯುವಂತಹ ಸಣ್ಣ ಮಾತನಾಡಿ ಅಪರಾಧ ಮಾಡಿದ್ದೇನೆ. ಸೂಕ್ಷ್ಮಸಂವೇದನ ಶಕ್ತಿಯ ಸುಕೋಮಲ ಕವಿ ಹೃದಯಕ್ಕೆ ಅಪಚಾರವೆಸಗಿದ್ದೇವೆ, ಯಾವುದೋ ಆವೇಗದ ಭರದಲ್ಲಿ ಆಡಿದ ಬಿರುನುಡಿಗಳನ್ನು ಮರೆತುಬಿಡಿ, ನಿಮ್ಮ ಎಂದಿನ ಹೃದಯದ ಔದಾರ್ಯದ ಅಮೃತಜಲ ಸಿಂಚನೆ ಮತ್ತೆ ನಮ್ಮ ಮೇಲಾಗಲಿ."

"ಪ್ರಭು, ತಾವು ಹೀಗೆಲ್ಲ ನುಡಿಯಬಾರದು. ಒಡ್ಡೋಲಗದ ನಮ್ಮೆಲ್ಲರ ಬಾಳೂ ತಮ್ಮ ಕೃಪಾಶ್ರಯದ ನೆರಳಲ್ಲಿ ಅರಳಿದೆ. ಗುಣಾರ್ಣವರಿದ್ದುರಿಂದ ಈ ಕವಿತಾಗುಣಾರ್ಣವ ಕಾಣಿಸಿಕೊಂಡ. ಆದುದರಿಂದ ತಾವು....

"ಕವಿಸಾರ್ವಭೌಮಾ, ನೀವು ಇನ್ನೂ ನಮ್ಮ ಮೇಲೆ ಪ್ರಸನ್ನರಾಗಿಲ್ಲ. ದಯವಿಟ್ಟು ಆ ಘಟನೆಯನ್ನು ಸಂಪೂರ್ಣವಾಗಿ ಮರೆತುಬಿಡು. ನಿಮ್ಮ ಎದೆಯಿಂದ ಅಳಿಸಿಬಿಡಿ. ನಮ್ಮನ್ನು ನೀವು ಮನ್ನಿಸಿದ್ದೀರೆಂಬುದಕ್ಕೆ ಸಾಕ್ಷಿ ನಿಮ್ಮ ಅಪ್ಪುಗೆ" ಎಂದು ಅರಿಕೇಸರಿ ನಿಡುದೋಳುಗಳನ್ನು ನೀಳವಾಗಿ ಬಾಚಿದರು. ಪಂಪ ಕರಗಿಹೋದ. ಅರಸನ ಆಲಿಂಗನದಲ್ಲಿ ಕೆಳೆತನದ ಕಾವಿತ್ತು. ಕಾರ್ಮೋಡದಂತೆ ಕವಿದ ಕೋಪ ನಿರಾಶೆಗಳು ನೇಹದ ಗಾಳಿಗೆ ಗುರುತೂ ಇಲ್ಲದಂತೆ ಚದುರಿಹೋದವು. ಇಬ್ಬರ ಕಣ್ಣಲ್ಲೂ ಆನಂದಬಾಷ್ಪವಾಡಿತು.

"ಪಂಪಾ, ಕನ್ನಡ ನಾಡು ಮರೆಯಲು ಆರಂಕುಶಮಿಟ್ಟೊಡಂ ಆಗದೆಂದು ಹೇಳಿದಿರಿ. ಅದೇನು ಪ್ರಶ್ನಾರ್ಥಕ ಸರ್ವನಾಮವೊ ಇಲ್ಲವೆ ಸಂಖ್ಯಾವಾಚಕವೋ?"

ಸಂಕೋಚ ಸಡಿಲಿಸಲು ಅರಿಕೇಸರಿ ವಿನೋದಕ್ಕಿಳಿದರು.

"ಎರಡೂ ಸೇರಿಕೊಂಡಿವೆ ಪ್ರಭು. ಕವಿಗಳು ಶ್ಲೇಷಾಲಂಕಾರ ಪ್ರಿಯರು."

"ಏನೇ ಇರಲಿ ಕವಿರಾಜ. ನೀವು ಆಡಿರುವ ಅಭಿಪ್ರಾಯ ನಮ್ಮ

ಹೃದಯದಲ್ಲೂ ಹೊಳಲುಗೊಡುತ್ತಿದೆ. ಹಾಗೆ ನೋಡುವುದಾದರೆ ಕನ್ನಡಿಗರೆಲ್ಲರ ನರನಾಡಿಗಳಲ್ಲೂ ಇದೇ ನಿನದಿಸುತ್ತಿದೆಯಲ್ಲವೆ? ಕಲೆ ಭವಿಷ್ಯದರ್ಶಿಯೆಂಬುದು ಇದಕ್ಕೆ ಇರಬೇಕು. ಕವಿಗಳ ಕಣಸು ನಾಡಿನವರ ನನಸು."

"ಪ್ರಭುಗಳು ಕಾವ್ಯೋಪಾಸಕರಷ್ಟೇ ಅಲ್ಲ, ಕಾವ್ಯ ವಕ್ಕಣಿಸುವವರೂ ಆಗ ತೊಡಗಿದ್ದೀರಿ."

"ಎಲ್ಲ ನಿಮ್ಮ ಸಹವಾಸ ಫಲ. ಗಂಧದ ಒಡನಾಟವಿದು. ಅದಿರಲಿ, ಈಗ ನಮ್ಮ ಭಿನ್ನಪವೊಂದಿದೆ. ಅದನ್ನು ನೀವು ನೆರವೇರಿಸಿಕೊಡಬೇಕು!"

"ತಾವು ಹಾಗನ್ನಬಾರದು, ಬಿನ್ನಪ, ಅರಿಕೆ, ವಿಜ್ಞಾಪನೆ, ಪ್ರಾರ್ಥನೆ ಅವೆಲ್ಲ ಇತರರು ತಮ್ಮೊಡನೆ ನುಡಿವಾಗ ಹೇಳಬೇಕಾದ ಶಬ್ದಗಳು."

"ಅವು ಲೋಕದ ಇತರ ಎಲ್ಲರೊಡನೆ ನಡೆದುಕೊಳ್ಳುವಾಗ ಅನ್ವಯಿಸುತ್ತವೆಯೇ ಹೊರತು ನೀವು ನಾವು ಇರುವಾಗ ಅಲ್ಲವೆಂದು ಹಿಂದೆ ಅದೆಷ್ಟು ಸಲ ನಿಮ್ಮಲ್ಲಿ ತಿಳಿಸಿಲ್ಲ.?"

"ತಮ್ಮ ಚಿತ್ತ ಪ್ರಭು. ತಾವು ಈಗ ಅಪ್ಪಣೆ ಕೊಡಿಸೋಣವಾಗಲಿ."

"ನೋಡಿದಿರಾ! ನೀವು ಮತ್ತೆ ಮತ್ತೆ ನಮ್ಮನ್ನು ಪ್ರಭುವೆಂದು ಕರೆಯುವ ಅಗತ್ಯವಿಲ್ಲವೆಂದು ಹೇಳಿದ್ದಾಗಿಲ್ಲವೆ?"

"ನಿಜ, ತಾವು ಅದೇನು ಅನ್ನಿಂದ ಆಗಬೇಕೆಂಬುದನ್ನು....."

"ನೀವು ಆಗದೆನ್ನಕೂಡದು."

"ಛೆ! ಎಲ್ಲಾದರೂ ಎಂದಾದರೂ ಉಂಟೇ?"

"ನೀವು ಕನ್ನಡ ನಾಡಿನ ಬಣ್ಣನೆಯ ಶಾಸನದಂತೆ ಬರೆದಿರುವ ಆ ನಾಲ್ಕು ಪದ್ಯಗಳನ್ನು ದಯವಿಟ್ಟು ಈಗ ಹಾಡಬೇಕು.."

"ಅಷ್ಟೇ ತಾನೇ ದೊರೆ."

"ನಿಮಗೆ ಅಷ್ಟೇ ಅನ್ನಿಸಬಹುದು. ನಮಗೆ ಅವು ಪಂಚ ನಮಸ್ಕಾರ ಗಾಯತ್ರಿ ಇದ್ದಂತೆ!"

"ಎಷ್ಟು ಬಾರಿ ತಾವು ಆ ಪದ್ಯಗಳನ್ನು ನನ್ನಿಂದ ಬೇರೆಯವರಿಂದ ಗಮಕಿ ಗಾಯಕದಿಂದ ಹಾಡಿಸಿ ಕೇಳಿಲ್ಲ?"

"ನಿಜ ಕವಿಗಳೇ. ನೂರಾರು ಬಾರಿ ಕೇಳಿದ್ದೇವೆ. ಇನ್ನೂ ಸಾವಿರ ಸಲ ಕೇಳಬೇಕೆನಿಸುತ್ತದೆ. ಇನಿಯ ಕವಿತೆ ಪಂಪನ ಕವಿತೆ! ಎಂದು ನಾಡೇ ಕೊಂಡಾಡುತ್ತಿದೆ. ಅಂಬಿಗರು, ಬೆಸ್ತರು, ಕುಂಬಾರರು, ಒಕ್ಕಲವರು ಎಲ್ಲಾ ಹಾಡಿ ದಣಿಯರು ಈ ನಾಲ್ಕು ಪದ್ಯಗಳನ್ನು. ಈ ರಾಷ್ಟ್ರಗೀತೆಯನ್ನು ನಾವು ಮತ್ತೆ ಕೇಳಬಾರದೆ?"

"ತಪ್ಪದೇ ಕೇಳಬೇಕು ಪ್ರಭು. ಕೇಳುವ ಕಿವಿ ತಾಳುವ ಹೃದಯ ಇರುವಾಗ ಕವಿಗಿನ್ನೇನು ಕೊರತೆ? ಆನಂದದಿಂದ ಹಾಡುವೆ?"

"ಪಂಪ ನಿಮ್ಮ ಕವಿತೆಯನ್ನು ಗಮಕಿ ಗಾಯಕರ ಮೂಲಕ ಹಾಡಿಸಿ ಕೇಳಿದಾಗ ಆಗುವ ಆನಂದ ಒಂದು ವಿಧ. ಆದರೆ ನಿಮ್ಮ ದುಂದುಭಿಗಭೀರ ನಿನದದಲಿ, ಓಂಕಾರದಂತೆ ಝೇಂಕಾರ ಮಾಡಿಕೊಂಡು ಭಾವನಿರ್ಭರತೆಯಿಂದ ಅಸ್ಖಲಿತವಾಗಿ ಹೊಮ್ಮಿ ಚಿಮ್ಮಿಬಂದ ನಾಡಗೀತೆಯ ಲಹರಿಯಿಂದ ಅಸ್ವಾದ್ಯವಾಗುವ ಸಂತೋಷ ಅವರ್ಣನೀಯ."

"ಪ್ರಭೂ, ತಾವು ನಾನು ಹಾಡುವ ಮೊದಲೇ ಭಾವಪರವಶರಾಗಿ ನುಡಿಯತೊಡಗಿದ್ದೀರಿ. ಇನ್ನೂ ಹಾಡಿನ ಮೇಲೆಂತೋ! ನಾನು ಹಾಡುವುದು ಬೇಡವೆಂದು ತೋರುತ್ತಿದೆ."

"ಸ್ಫೂರ್ತಿಯೆನ್ನುವುದು ಸಾಮಾನ್ಯರಾದ ನಮ್ಮನ್ನೇ ಹೀಗೆ ಕುಣಿಸಿದರೆ ಇನ್ನು ಮಹಾಕವಿಗಳನ್ನು ಹೇಗೆ ಆಡಿಸಬಹುದೆಂದು ಊಹಿಸಿಕೊಳ್ಳಬಲ್ಲೆವು. ಅದಿರಲಿ, ನೀವು ಹಾಡಿರಿ."

ದೊರೆಯ ಆತ್ಮೀಯತೆಯ ಕಾವಿಗೆ ಪಂಪ ಕರ್ಪೂರನಾದ. ನೂರು ಬಾರಿ ಹಾಡಿ ಆಡಿ ಆನಂದದಿಂದ ನಾಡ ಹಾಡನ್ನು ಮತ್ತೆ ಹಾಡತೊಡಗಿದ. ರಾಜಾಜ್ಞೆಗೆ ಬಾಗದ ಮನಸ್ಸು ಗೆಳೆತನಕ್ಕೆ ಸ್ಪಂದಿಸಿತ್ತು.

೧೯

ಪಂಪ ತನ್ನ ದುಂಧುಭಿ ನಿನದವನ್ನು ಅಲೆಯಲೆಯಾಗಿ ಹಬ್ಬಿಸತೊಡಗಿದ. ಬಂಗಾರದ ಎಳೆ ಕಂಬಚ್ಚಿನಿಂದ ಹೊರಬರುವಂತೆ, ಜೇನಮಳೆ ಸುರಿವಂತೆ, ಹಾಲತೊರೆ ಹರಿವಂತೆ ಪಂಪನ ಬಾಯಿಂದ ಕನ್ನಡ ನಾಡಗೀತೆ ಹೊನಲಾಗಿ ಹರಿಯಿತು.

"ಸಂತೋಷವಾಯಿತೆ ಪ್ರಭು?"

"ಯಥೇಚ್ಛವಾಗಿ ಆಯಿತು. ಇನ್ನು ನಮ್ಮ ದೊಡ್ಡ ಬೇಡಿಕೆಯೊಂದನ್ನು ನೀವು ಈಡೇರಿಸಿಕೊಡಬೇಕೆಂದು ಕೋರುತ್ತೇವೆ."

"ಆಗಲೇ ನಾನು ಅರಿಕೆ ಮಾಡಿಕೊಂಡಿದ್ದೇನೆ ಪ್ರಭುಗಳು ಆಜ್ಞಾಪಿಸಬೇಕೆಂದು."

"ನೀವು ಪುಲಿಗೆರೆಯಲ್ಲಿ ಮುಗಿಸಿದ ಆದಿಪುರಾಣ ಮಹಾಕಾವ್ಯವನ್ನು ಪ್ರತಿಮಾಡಿಸಿ ತರಿಸಿದ್ದಾಗಿದೆ. ಅದನ್ನು ಈ ಶುಕ್ರವಾರ ರಾಜಗೌರವ ಪ್ರಶಸ್ತಿಗಳೊಡನೆ ಬೆಳ್ಳಿ ಪಲ್ಲಕ್ಕಿಯಲ್ಲಿಟ್ಟು ರಾಜಧಾನಿಯಲ್ಲಿ ಮೆರವಣಿಗೆಯ ಏರ್ಪಾಟು ಆಗಿದೆ.

ಆದರೆ ನೀವು ಅಂಥ ಮಹಾ ಮೇರುಕೃತಿ ರಚನೆಯ ವಿಚಾರವಾಗಿ ನಮಗೆ ಈ ಮೊದಲು ಏನು ಸುಳಿವುಗೊಡಲಿಲ್ಲವೇಕೆಂಬ ಆತ್ಮೀಯ ತಾಪದಿಂದ ಬೆಳಗ್ಗೆ ಹಾಗೆ ಹುಸಿಕೋಪದಿಂದ ಹೇಳಿದುದೇ ಹೊರತು ಅನ್ಯಥಾ ಅಲ್ಲ."

"ಅದನ್ನು ಮರೆತು ಎಷ್ಟೋ ಸಮಯವಾಯಿತು. ಇನ್ನು ಅದರ ಪ್ರಸ್ತಾಪಬೇಡಿ."

"ಸರಿ, ಆದರೆ ನಮ್ಮ ಉತ್ಕಟ ಆಕಾಂಕ್ಷೆಯೆಂದರೆ ವ್ಯಾಸ ಮಹರ್ಷಿ ಪ್ರಣೀತ ಶ್ರೀ ಮಹಾಭಾರತ ಸಾರವನ್ನು ಕನ್ನಡದಲ್ಲಿ ಕನ್ನಡಿಸಿ ಕೊಡಬೇಕೆಂಬುದು."

"ಲಕ್ಷಶ್ಲೋಕಗಳ ಆ ಮಹಾಕಾವ್ಯ ಸಾಗರವನ್ನು ಈಸುವುದು ಸುಲಭ ಸಾಧ್ಯವಲ್ಲ. ಅದರ ಅನುವಾದವೂ ಕಷ್ಟಸಾಧ್ಯ. ವ್ಯಾಸ ಸದೃಶರಾದ ಮಹಾ ತಪಸ್ವಿಗಳು ಮಾತ್ರ ಅಂತಹ ಮಹಾಕಾರ್ಯಕ್ಕೆ ಕೈ ಹಾಕಬಹುದು."

"ನೀವೂ ಒಬ್ಬ ಕವಿ ವ್ಯಾಸರೆಂದೇ ನಮ್ಮೆಣಿಕೆ."

"ಅನಿತು ದೊಡ್ಡ ಗೌರವಕ್ಕೆ ಪಾತ್ರನಾಗುವ ಅರ್ಹತೆ ನನಗಿನ್ನೂ ಬಂದಿಲ್ಲ ಅರಸರೇ."

"ವ್ಯಾಸರನ್ನು ಕಂಡರೆ ನಿಮಗೆ ಎಷ್ಟೊಂದು ಗೌರವ ವಿನಯ ಕವಿವರ್ಯಾ."

"ವ್ಯಾಸರ ವವಚನಾಮೃತ ವಾರಿಧಿ ನಮ್ಮೆಲ್ಲರ ಅಳವಿಗೆ ಮೀರಿದ ಹರಹಿನಿಂದ ನಿಂತಿದೆ. ಭಗವಾನ್ ವ್ಯಾಸರೂ, ಭಗವಾನ್ ಜಿನಸೇನಚಾರ್ಯರೂ, ಮೇರು ಸದೃಶ ಮಹಿಮಾನ್ವಿತರು."

"ಕವಿ ಶ್ರೇಷ್ಠರೆ, ಈಗ ನೀವು ಎಂತಿದ್ದರೂ ಒಬ್ಬ ಮಹಿಮಾನ್ವಿತರಾದ ಜಿನಸೇನರ ಆದಿ ಪುರಾಣವನ್ನು ಕನ್ನಡಕ್ಕಿಳಿಸಿ ಪುಣ್ಯಭಾಜನರಾಗಿದ್ದೀರಿ. ಇನ್ನೊಬ್ಬ ಮಹಾತ್ಮರಾದ ವ್ಯಾಸರ ಭಾರತವನ್ನೂ ಕನ್ನಡದ ಕನ್ನಡಿಯಲ್ಲಿ ಬಿಂಬಿಸಬೇಕೆಂಬುದು ನಮ್ಮ ಕೋರಿಕೆ."

"ತಮ್ಮ ಕೋರಿಕೆಗೆ ತಲೆ ಬಾಗುವೆ. ಆದರೆ ನನಗೆ ಕೊಂಚ ಕಾಲಾವಕಾಶ ಕೊಡಿ, ಕಾವ್ಯ ರಚನೆ ಬಲಾತ್ಕಾರದಿಂದ ಆಗುವ ಕೆಲಸವಲ್ಲ. ಅದು ಒಳಗಿನ ಒತ್ತಾಸೆಯಿಂದ ರಚಿತವಾಗಬೇಕೆಂಬುದನ್ನು ಬಲ್ಲೆವು. ಅಲ್ಲದೆ ನೀವು ಇದನ್ನು ರಾಜನ ಋಣವೆಂದು ತಿಳಿದು ಬರೆಯತೊಡಗಲೂ ಬಾರದು. ನಿಮ್ಮ ಋಣದಲ್ಲಿ ನಾವೂ ನಮ್ಮ ನಾಡೂ ಇದೆಯೇ ಹೊರತು, ನೀವು ಯಾರ ಹಂಗಿನಲ್ಲೂ ಇಲ್ಲವೆಂಬುದನ್ನು ಮರೆಯದಿರಿ." ಬೆಳಗಿನ ಘಟನೆ ಮರೆಯಲೆಂದು ಅರಿಕೇಸರಿ ಈ ಮಾತುಗಳನ್ನು ಒತ್ತಿ ಹೇಳಿದ. ಪಂಪನಿಗೆ ಆ ಸಂಜೆಯ ರಾಜಸಭೆಯಲ್ಲಿ ಮತ್ತೆ ಪಂಡಿತ ಮಂಡಳಿ ಒಟ್ಟಾಗಿ ಕೇಳಿಕೊಂಡಿತು: "ಸಮಸ್ತ ಭಾರತವನ್ನು

ಕನ್ನಡದಲ್ಲಿ ನೀವೇ ಬರೆಯಬೇಕು. ಇದುವರೆಗೆ ಯಾರೂ ಕನ್ನಡದಲ್ಲಿ ಎಸಗದ ಎಸಕವನ್ನು ಮಾಡಲು ನೀವೇ ಯೋಗ್ಯರು. ನಮ್ಮ ಈ ಯಾಚನೆಯನ್ನು ನಿರಾಕರಿಸದೆ ಮಾನ್ಯ ಮಾಡಿ." ವಿದ್ವಾಂಸರೆಲ್ಲರ ಒಕ್ಕೊರಲ ಬೇಡಿಕೆಗೆ ಪಂಪ ಕರಗಿದ, ತಲೆ ಬಾಗಿದ.

ಶುಕ್ರವಾರ ಬೆಳ್ಳಿ ಪಲ್ಲಕ್ಕಿಯನ್ನು ಅಲಂಕರಿಸಿ ತಂದು ದೊಡ್ಡ ರಥದಲ್ಲಿ ಇಟ್ಟರು. ಶ್ವೇತಾಶ್ವಗಳನ್ನು ಹೂಡಿದರು. ಬಸದಿಯಿಂದ ಪೂಜಿಸಿ ತಂದ ಆದಿ ಪುರಾಣ ಹೊತ್ತಿಗೆಯನ್ನು ಇಟ್ಟರು. ಅದರ ಹಿಂದೆ ಆನೆ ಅಂಬಾರಿಯಲ್ಲಿ ಕುಳಿತ ಆಸ್ಥಾನದ ಖ್ಯಾತ ಸಂಗೀತ ರತ್ನಾಕರ ಲಚ್ಚಲದೇವಿ ಆದಿಪುರಾಣದಿಂದ ಆರಿಸಿದ ಭಾಗಗಳನ್ನು ಹಾಡುತ್ತಿದ್ದಳು. ಲಚ್ಚಲದೇವಿಗೆ ಒಪ್ಪವಾದ ಶರೀರದಂತೆ ಚೊಕ್ಕ ಶಾರೀರವಿತ್ತು.

* * * *

ಲಚ್ಚಲದೇವಿಯ ಸಂಗೀತ ಬೋದನಕ್ಕೆ ಅಮೃತ. ಮಧುಮಾಸದಲ್ಲಿ ಹಾಡು ಕೋಗಿಲೆಯಾಗಿ ಹಾಡುವ ಲಚ್ಚಲದೇವಿಯ ಸೊಗಯಿಪ ನುಣ್ಚರದ ಗೀತಕ್ಕೆ ಮೆಚ್ಚಿ ಮಾರುಹೋಗದವರಿಲ್ಲ. ಅವಳು ಮಾತ್ರ ಪಂಪನಿಗೆ ಸೋತಿದ್ದಳು. ಆಂಧ್ರದಿಂದ ಬಂದ ಲಚ್ಚಲದೇವಿ ಪಂಪನ ಗೀತೆಗಳನ್ನೂ ನಾಡ ಗೀತೆಯನ್ನೂ ಆಸ್ಥಾನದಲ್ಲಿ ಹತ್ತಾರು ಸಲ ಹಾಡಿದ್ದಳು. ಅವನ ವಿದ್ವತ್ತಿಗೆ ಮಾರುಹೋದಂತೆ ಪಂಪನ ಅಂಗ ಸೌಷ್ಠವಕ್ಕೂ ವಶಳಾಗಿದ್ದಳು. ನಾಡಿನ ದೊರೆ ಮೆಚ್ಚಿಕೊಂಡ ಈ ದೊರೆಯ ದೊರೆಯೇ ತನ್ನ ದೊರೆ ಎಂದು ಅಂದುಕೊಂಡಳು.

ಅರಿಗ ಒಮ್ಮೆ ಅರಮನೆಯ ಮಿತ ಪರಿವಾರದೊಡನೆ ಜಲಕ್ರೀಡೆಗೆ ಹೋಗಿದ್ದ ಪ್ರಸಂಗವದು. ಜಲಕ್ರೀಡೆಯಲ್ಲಿ ಉಲ್ಲಸಿತರಾಗಿರುವಾಗ ಪಂಪ ಮಿಂದೆದ್ದು ಬಂದು ದಡದಲ್ಲಿ ನಿಂತಿದ್ದಾನೆ. ಅಲ್ಲಿಯೇ ಎದುರಲ್ಲಿ ಮೀಯುವ ಪಕ್ಕದ ಕೊಳದಿಂದ ಲಚ್ಚಲದೇವಿ ಎದ್ದು ನಿಂತಳು. ಪಂಪ ಜಲದೇವತೆಯೇ ಇರಬೇಕೆಂದು ಆ ರೂಪಾಣಿಯನ್ನು ನೋಡಿದ. ಎಂಥ ಶರೀರ ಸೌಭಾಗ್ಯ! ಮುಖ ತೋತಾಪುರಿ ಮಾವಿನಹೋಳು, ಕುಡಿಹುಬ್ಬಿನ ವಿಲಾಸ ಬೇವಿನೆಸಳು!! ಪಂಪ ನೋಡುವ ಅಚ್ಚರಿಯ ನೋಟವನ್ನು ಅವಳೂ ಗಮನಿಸಿ ನಕ್ಕಳು. ಹುಣ್ಣಿಮೆ ನಕ್ಕು ಮತಾಡಿಸಿದಂತಾಯಿತು. ಆ ಕ್ಷಣ ಜೀವನವೇ ಜೇನಾಗಿ ಹರಿದ ಶುಭಘಳಿಗೆ ಎನ್ನಿಸಿತು.

ಲಚ್ಚಲೆಯೂ ಒಚ್ಚತಗೊಂಡು ನೋಡಿದಳು. ಎತ್ತರವಾದ ಗೂಳಿ ಹೆಗಲು, ಅಗಲವಾದ ತುಂಬಿದೆದೆ, ಉದ್ದವಾದ ತೋಳುಗಳು. ಇಬ್ಬರೂ ಕಣ್

ಬೇಟಗೊಂಡರು. ಪಡೆದರೆ ಅವರನ್ನೇ ಪಡೆಯಬೇಕೆಂದು ನೋಡಿದ ಕೂಡಲೇ ಮನದಲ್ಲಿ ಸೋತಳು. ಲಜ್ಜೆ ಸಂಕೋಚ ತೋರ್ಪಡಿಸಿಕೊಳ್ಳದೆ ವಿಧಿಯಿಲ್ಲ! ಕಾತರದ ಕಾರ್ಮೋಡದಲ್ಲಿ ಕಳವಳಿಸುವ ವಿದ್ಯುಲ್ಲತೆಯಾಗಿ ಹೊಯ್ದಾಡಿದಳು. ಚಿತ್ತಸ್ಥಿರತೆ ಕಳೆದುಕೊಂಡು ಬಚ್ಚಲೆ ನಂಬಿಕೆಯೇ ಬಾಳಿನ ಬೆಳಕೆಂದು ಆಶಾವಾದಿಯಾಗಿಯೇ ಹೊರಟಳು.

ಪಂಪ ತನ್ನ ಆ ಕ್ಷಣದ ಚಾಂಚಲ್ಯವನ್ನು ಗೆದ್ದು ನಿಂತ. ಇಬ್ಬರ ನಡುವೆ ಪವಿತ್ರ ಸ್ನೇಹ ಏರ್ಪಟ್ಟಿತು. ಪಂಪನ ಸಖ್ಯದಲ್ಲಿ ಲಚ್ಚಲದೇವಿ ಮರುಹುಟ್ಟು ಪಡೆದಳು: "ಕಾಡುಕಗ್ಗಲ್ಲಿನಂತಿದ್ದ ನನ್ನನ್ನು ಕಡೆದು ಒಬ್ಬ ಮನುಷ್ಯಳನ್ನಾಗಿ ಮಾಡಿದ ಮಹಾ ಶಿಲ್ಪಿ ನೀವು. ಬದುಕೆಂಬುದು ನಾಲ್ಕು ದಿನದ ಚೆಲ್ಲಾಟವೆಂದಷ್ಟೇ ಭಾವಿಸಿದ್ದ ನನಗೆ ಬಾಳು ಹಲವು ಆಸೆ ಧ್ಯೇಯಗಳ ದೇಗುಲವೆಂದು ತೋರಿಸಿಕೊಟ್ಟ ಗುರು ನೀವು" ಎಂದು ಒಲವುದುಂಬಿ ನುಡಿದಳು.

"ಲಚ್ಚಲದೇವಿ ನೀನು ಆಡುತ್ತಿರುವುದು ಮಾತೆ?"

"ಮತ್ತೇನು ಸ್ವಾಮಿ?"

"ಒಂದು ಪುಟ್ಟ ಭಾವಗೀತೆ!"

ನಗೆ ಮಲ್ಲಿಗೆಯರಳಿ ಪ್ರೇಮ ಪರಿಮಳ ಬೀರಿತು.

* * * *

ಪಂಪನ ಕೋರಿಕೆಯಂತೆ ಅರಿಗ ದೊರೆ ನೀಡಿದ ಉದಾರ ನೆರವಿನಿಂದ ವೆಂಗಿಮಂಡಲದಲ್ಲಿ ಆದಿನಾಥ ತೀರ್ಥಂಕರರ ಚೈತ್ಯಾಲಯ ನಿರ್ಮಾಣವಾಯಿತು. ಪಂಪ ಕಲೆಗೂ, ಶಿಲ್ಪಿಗಳಿಗೂ ಆಶ್ರಯವಿತ್ತುದಲ್ಲದೆ ವಿಶೇಷ ಪ್ರೋತ್ಸಾಹ ನೀಡಿದ. ಆದಿನಾಥ ಸ್ವಾಮಿ ಪಂಪನ ಇಷ್ಟದೈವ ಕುಲದೈವ—'ಲೋಕಕ್ಕೇ ಜ್ಞಾನ ವಿಜ್ಞಾನ ಕಲಿಸಿದ ಮಹಾತ್ಮ, ಸ್ತ್ರೀಯರೂ ವಿದ್ಯೆಗೆ ಸಮಾನ ಅರ್ಹರೆಂದು ತೋರಿಸಿದ ಲೋಕಗುರು' – ಎಂದು ಪಂಪ ಪದೇ ಪದೇ ಬೋಧಿಸುತ್ತಿದ್ದ. ಅದರಿಂದ ಆದಿನಾಥ ಬಸದಿಯನ್ನು ತಾನೇ ಮುಂದಾಗಿ ತಿಂಗಳುಗಟ್ಟಲೆ ನಿಂತು ರೂವಾರಿಗಳಿಗೆ ಮಾರ್ಗದರ್ಶನ ಮಾಡಿದ್ದ.

ಭಿತ್ತಿ ಚಿತ್ರಗಳಲ್ಲಿ ನೀಲಾಂಜನೆ ನೃತ್ಯ, ಪಂಚಕಲ್ಯಾಣ, ಭವಾವಳಿ, ಷೋಡಶ ಸ್ವಪ್ನಗಳು, ಸಮವಸರಣ – ಮೊದಲಾದುವನ್ನು ಸಮುಚಿತ ವರ್ಣ ವಿನ್ಯಾಸದೊಡನೆ ಮೂಡಿಸುವ ವಿಚಾರದಲ್ಲಿ ಆತ ಸಂಪೂರ್ಣ ಹೊಣೆ ಹೊತ್ತು ಶ್ರಮಿಸಿದ್ದ. ಶಿಲೆಯಲ್ಲಿ ಕೂಡ ಭರತ ಬಾಹುಬಲಿ ನೇತ್ರಯುದ್ಧ ಜಲಯುದ್ಧ ಮಲ್ಲಯುದ್ಧಗಳನ್ನು

ಎದ್ದು ಕಾಣುವ ರೀತಿಯಲಿ ನಿಷ್ಣಾತ ರೂವಾರಿಗಳಿಂದ ಕೆತ್ತಿಸಿದ್ದ. ಪ್ರತಿಷ್ಠಾಪನೆಯ ದಿವಸ ಮಿಂದು ಮಡಿಯುಟ್ಟು ಸಕುಟುಂಬ ಸಮೇತನಾಗಿ ರಥೋತ್ಸವ ನರವೇರಿಸಿ, ತಾನೇ ತೇರು ಎಳೆದು ಆನಂದ ತುಂದಿಲನಾಗಿದ್ದ. ಅದೇ ದಿನ ದುರ್ಬಲರಿಗೆ, ದುರ್ಗತಿಕರಿಗೆ, ದುಃಖಾರ್ತರಿಗೆ, ಪತಿತರಿಗೆ ದ್ರಮ್ಮ ದೀನಾರ ಗದ್ಯಾಣಗಳನಿತ್ತು ದಿನಗಟ್ಟಲೆ ಸಮಾರಾಧನೆ ನಡೆಸಿ ಸಂತೋಷಪಟ್ಟ. ದಿಗಂಬರ ಶ್ವೇತಾಂಬರ ಯಾಪನೀಯವೆಂಬ ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲ ಆಮ್ನಾಯದವರಿಗೂ ಮರ್ಯಾದೆ ತೋರಿದ. ಜಾತಿಮತ ಭೇದವಾಗಲಿ ವಿರೋಧವಾಗಲಿ ತೋರದೆ ಎಲ್ಲಾ ಮತದವರಿಗೂ ಸಹನೆ ಗೌರವ ನೀಡಿದ.

# ೨೦

ಪ್ರೇಮ, ಕೆಮ್ಮು, ಹಣ, ಹೊಗೆ – ಇವನ್ನು ಬಹು ದಿವಸ ಮುಚ್ಚಿಡಲು ಸಾಧ್ಯವಿಲ್ಲ. ಪಂಪನ ರಸಿಕತೆ ಅರಿಗ ದೊರೆಗೂ ಅರಿಕೆಯಾಯಿತು. ಪೆಂಡವಾಸದಲ್ಲಿ ತಾವಿಬ್ಬರೇ ಇರುವಾಗ ಪಂಪನನ್ನು ಅರಿಗ ಚರ್ಚೆಗೆಳೆದ_

"ಪಂಪಾ ಭೋಗ ಹೆಚ್ಚೋ, ಯೋಗ ಹೆಚ್ಚೋ?"

"ಅವೆರಡರ ಸಮನ್ವಯವೇ ದೊಡ್ಡದು."

"ಅದನ್ನು ಪಲಾಯನವಾದ ಎನ್ನುವರಲ್ಲಾ?"

"ಎಂದಿಗೂ ಅಲ್ಲ. ಚತುರ್ವಿಧ ಪುರುಷಾರ್ಥಗಳ ಮೂಲಕ ಬದುಕಿನ ಸಾರ್ಥಕತೆ ಹಾಗೂ ಬಿಡುಗಡೆ."

"ಧರ್ಮ ಅರ್ಥ ಕಾಮಗಳನ್ನು ಚೆನ್ನಾಗಿ ಅನುಭವಿಸಿ ಬಿಟ್ಟರೆ ಮೋಕ್ಷ ದೊರಕಿ ಬಿಡುವುದೆಂದು ಅರ್ಥವೆ."

"ಮೋಕ್ಷದ ಮೆಟ್ಟಿಲುಗಳು ಅವು. ಅವನ್ನು ಮೋಕ್ಷಕ್ಕೆ ಸಾಧಕವೆಂದು ಹೊಂದಿಸಿಕೊಂಡು ಬಾಳಬೇಕು. ಬದುಕು ಭೋಗ ವಿಲಾಸದ ಸಾಗರವಲ್ಲ. ಅದನ್ನು ಕಲಾವಿಲಾಸದ ಆಗರ ಮಾಡಿಕೊಳ್ಳಬೇಕು. ಆಗಲೇ ಅವನು ನೂರು ಕಾಲ ಬಾಳ ಬಲ್ಲವನಾಗುವುದು. ಧರ್ಮ ಮೂಲವಾದ ಅರ್ಥ ಕಾಮಗಳು ಗ್ರಾಹ್ಯ."

"ಅಂದರೆ ಶತಾಯುವಾಗಿರುವುದು....."

"ಅಲ್ಲ, ನೂರು ಕಾಲ ಬಾಳೆಂಬುದು ಹಿಂದಿನಿಂದ ಬಂದ ಹಿರಿಯರ ಹರಕೆ ಹಾರೈಕೆಯಾದರೂ ಅದರ ಅರ್ಥ ಕೇವಲ ನೂರು ವರ್ಷ ಜೀವಿಸುವುದಲ್ಲ. ಪೂರ್ಣಾಯುಷ್ಯದಿಂದ ಚೆನ್ನಾಗಿ ಬಾಳು, ಭೋಗ ಬಿಡಬೇಕಾಗಿಲ್ಲ, ಎಂದು. ಮದ್ದಿನ ಬೇಡಿಕೆಗೆ ಕಾರಣವಾಗುವ ಬೇನೆಗಳಿಲ್ಲದೆ ಬಾಳಲೆಂಬುದು. ಆರೋಗ್ಯವೇ ಅರಮನೆ, ಅನಾರೋಗ್ಯವೇ ಸೆರಮನೆ."

"ಪಂಪಾ ಅಂತೂ ನೀನು ಎಲ್ಲಾ ಅರ್ಥದಲ್ಲಿಯೂ ಅರಮನೆಯಲ್ಲೇ ಇದ್ದೀಯೆ ಬಿಡು."

ಇಬ್ಬರೂ ನಕ್ಕರು.

* * * *

ಪಂಪ ಆರು ತಿಂಗಲ್ಲಿ ತನ್ನ ಮಹಾಕಾವ್ಯ ಬರೆದು ಮುಗಿಸಿದ. ತನ್ನ ಕಾವ್ಯದಲ್ಲಿ ತತ್ಕಾಲದ ಸಮಾಜ ದರ್ಶನವನ್ನೂ ಸಮಾವೇಶಗೊಳಿಸಿದ. ಒಂಕುಂದ ಪುಲಿಗೆರೆಯ ಸಾಜದ ತಿರುಳುಗನ್ನಡದ ಶಿಷ್ಟ ಭಾಷೆಯಲ್ಲಿ ರಚಿಸಿದ ಈ ಕಾವ್ಯಕ್ಕೆ ಒಂದು ಹೊಸ ಚೌಕಟ್ಟು ಕಟ್ಟಿದ. ಮೂಲದಲ್ಲಿನ ಪಾತ್ರಗಳನ್ನು ಕೆಲವು ಮಾರ್ಪಡಿಸಿದ. ಅರ್ಜುನ ಕಥಾನಾಯಕ. ಅವನ ಪಾತ್ರದೊಡನೆ ತನ್ನ ಆಶ್ರಯದಾತ ಅರಿಕೇಸರಿಯನ್ನೂ ಸಮೀಕರಿಸಿ ಅಭಿನ್ನತೆಯಿಂದ ಕಾವ್ಯ ಬರೆದಿದ್ದ. ಪೂರ್ವ ಭೂಮಿಪರನ್ನು ಮೀರಿಸಿದ ಗುಣಾವಳಿ ಅರಿಗನಿಗಿರುವುದು ಕಂಡಿತು. ಅರ್ಜುನ_ ಅರಿಗ ಇಬ್ಬರೂ ಎಲ್ಲಾ ಗುಣಗಳಲ್ಲೂ ಎಲ್ಲರಿಗಿಂತ ಅಗ್ಗಳರು. ದ್ವಾಪರ ಯುಗದಲ್ಲಿ ಕುಂತೀ ಪುತ್ರ ಅರ್ಜುನ. ಕಲಿಯುಗದಲ್ಲಿ ಜಾಕಬ್ಬೆ ಮಗ ಅರಿಗ ಸರಿಯೆನ್ನಿಸಿತು. ಅರಿಗನ ಬಿರುದುಗಳನ್ನು ಅನಾಮತ್ತಾಗಿ ಅರ್ಜುನನಿಗೂ ತಗುಳ್ಚಿದ. ಮಹಾಭಾರತಕ್ಕಿಂತ ಇಲ್ಲಿನ ಅರ್ಜುನ ವಿಕ್ರಮಶಾಲಿ. ಅದರಿಂದ ವಿಕ್ರಮಾರ್ಜುನ ವಿಜಯವೆಂದು ಕಾವ್ಯಕ್ಕೆ ಹೆಸರಿಟ್ಟು ಆರಂಭದ ಪ್ರಾರ್ಥನಾ ಪದ್ಯಗಳಲ್ಲಿ ಶ್ಲೇಷಾಲಂಕಾರ ತಂದ.

ಅರಿಕೇಸರಿ ಅರಮನೆಯ ಹೆಗ್ಗಡೆಗಳನ್ನು ಕಳಿಸಿ ಪಂಪನನ್ನು ಬರಮಾಡಿಕೊಂಡ. ಅಕ್ಕರೆಯಿಂದ ಕಂಡು ಹಿರಿದು ಮನ್ನಣೆ ನೀಡಿದ. ತನ್ನ ಹೆಸರು ಇಳೆಯಲ್ಲಿ ಆಚಂದ್ರಾರ್ಕ ತಾರಂಭರೆಗೂ ನಿಲ್ಲವಂತೆ ಇತಿಹಾಸವನ್ನೂ ಭಾರತ ಕಥೆಯನ್ನೂ ಹಾಸುಹೊಕ್ಕಾಗಿ ಹೆಣೆದು ಬರೆದ ಮೇರು ಕೃತಿಯ ಮಹಾ ಸನ್ಮಾನಕ್ಕೆ ಸಿದ್ಧತೆ ಮಾಡಲು ಅಪ್ಪಣೆಯಿತ್ತ. ಅತ್ತ ರಾಷ್ಟ್ರಕೂಟರ ಚಕ್ರವರ್ತಿಯಾಗಿದ್ದ ಮುಮ್ಮಡಿ ಕೃಷ್ಣನಿಗೂ ದಯಮಾಡಿಸುವಂತೆ ಆಹ್ವಾನ ಕೊಡಲು ಪ್ರಧಾನಿಯನ್ನೇ ಕಳಿಸಿದ.

ಪಂಪನ ಸೌಧ ಧವಳಗಿರಿಗೆ ನಿತ್ಯ ತೊಡಲು ಬಗೆ ಬಗೆಯ ಪಂಚ ರತ್ನಾಭರಣಗಳು ಬಂದುವು. ಹೊರಕ್ಕೆ ಹೊರಟರೆ ದೊರೆ ತಾನು ಉಡುವ ಮಡಿ ಮಾಡಿ ಉಡುಗೆಗಳಂತಹುವನ್ನೇ ಕಳಿಸಿದ. ನೂರೊಂದು ಆಕಳು, ಆನೆ ಕುದುರೆಗಳು ಅನೇಕ ಜನ ದಾಸದಾಸಿಯರು ಕೊಡುಗೆಯಾಗಿ ಬಂದರು. ಅರಿಗ ದೊರೆ ಆಸ್ಥಾನ ವಿದುಷಿ ಲಚ್ಚಲೆಯನ್ನೂ ಪಂಪನಿಗೆ ಕೊಡುಗೆಯಾಗಿ ಕೊಟ್ಟುದಲ್ಲದೆ ನಿತ್ಯ ಪ್ರಾತಃಕಾಲ ಆದಿಪುರಾಣ ಇಲ್ಲವೇ ವಿಕ್ರಮಾರ್ಜುನ ವಿಜಯದ ಪದ್ಯಗಳನ್ನು ಸುಪ್ರಭಾತವಾಗಿ ಹಾಡಬೇಕೆಂದು ರಾಜ ಶಾಸನದಂತೆ ತಿಳಿಸಿ ಕಳಿಸಿದ. ಬಹುಮಾನವಾಗಿ ಕೊಡುವ ಊರುಗಳು ಹಲವಾದವು. ಅದರಲ್ಲಿ ಪ್ರಮುಖವಾದುದು ಸಪಾದಲಕ್ಷಕ್ಷಿತಿ ರಾಜ್ಯದ ಸಬ್ಬಿಸಹಸ್ರನಾಡಿನ ಕೇಂದ್ರವಾದ

ಧರ್ಮಪುರವೆಂಬ ಅಗ್ರಹಾರ. ಅದರ ಬಡಗಣದಲ್ಲಿ ವೃಷಭಗಿರಿ. ದಾನಶಾಸನದ ಪಾಠವನ್ನಾಲಿಸಿ ಪಂಪ ಮೂಕನಾದ.

"ಪ್ರಭೂ ಹಿರಿದಾದ ದಯೆ ತೋರಿದಿರಿ, ದೊಡ್ಡ ಮಹಿಮೆ ಮನ್ನಣೆ ನೀಡಿದಿರಿ. ಗೌರವ ಪರಂಪರೆಯನ್ನೇ ಸದ್ದಿಲ್ಲದೆ ಮೆಲ್ಲಗೆ ಮನೆಗೆ ಕಳಿಸಿದಿರಿ, ಇವೆಲ್ಲ...?

"ನೀವು ಈ ವಿಚಾರವಾಗಿ ತಾಳ್ಮೆಯಾಗಿರಬೇಕೆಂದು ಕೋರಿಕೆ. ಈ ದೊರೆಯ ಯಶಃಕಾಯ ಲೋಕದಲ್ಲಿ ನೆಲೆಯಾಗಿ ನಿಲ್ಲಿಸಿದ ನಿಮಗೆ ಇಡೀ ರಾಜ್ಯವೇ ಸಲ್ಲಬೇಕು."

"ನಾನು ಸಾರಸ್ವತೋಪಾಸಕನೆಂಬುದನ್ನು ಅರಸರು ಎಲ್ಲೋ ಮರೆತಂತೆ ಕಾಣುತ್ತದೆ."

"ಏಕೆ ಹಾಗೆನ್ನುವಿರಿ?"

"ಈ ಲಕ್ಷ್ಮೀ ಔಪಾಸಕರ ಸ್ವತ್ತೆಲ್ಲ ನನ್ನ ಮನೆಗೆ ರಾಶಿರಾಶಿಯಾಗಿ ಬರುತ್ತಿರುವುದನ್ನು ನೋಡಿದರೆ ಹಾಗೆನ್ನಿಸುತ್ತದೆ."

"ನೀವು ಸರಸ್ವತಿ–ಲಕ್ಷ್ಮೀ ಇಬ್ಬರ ವರ ಪುತ್ರರು. ಇಬ್ಬರ ಸಂಪೂರ್ಣ ಕೃಪಾನುಗ್ರಹ ಪಾತ್ರರು."

"ಸರಿ ಸರಿ, ದೊರೆ ಒಲಿದರೆ ಬಡತನವೆ?"

"ನಾವು ಒಲಿದುದಲ್ಲ; ನಿಮ್ಮ ಶ್ರೇಷ್ಠ ಪ್ರತಿಭಾಶಕ್ತಿಗೆ ದೇವತೆಯೇ ಪ್ರಸನ್ನಳಾಗಿದ್ದಾಳೆ."

"ಅಂತೇ ಆಗಲಿ. ತಾವು ಇನ್ನಾದರೂ ಪ್ರೀತಿ ಕುಗ್ಗದೆ ಹಿಗ್ಗಿನಿಂದ ಕೊಟ್ಟು ಕಳಿಸುತ್ತಿರುವ ಅಗ್ಗದ ವಸ್ತುಗಳನ್ನು ನಿಲ್ಲಿಸಬಹುದಲ್ಲವೆ?"

ವಸಂತ ಋತುವಿನ ಕಡೆಯ ದಿನಗಳಲ್ಲಿ ಬೃಹಸ್ಪತಿವಾರದಂದು ಪಂಪನಿಗೆ ಬೋದನದಲ್ಲಿ ಅದ್ದೂರಿಯ ಕವಿ ಮನ್ನಣೆ ಸಮಾರಂಭ ನಡೆಯತೊಡಗಿತು. ರಟ್ಟರ ಸಾಮ್ರಾಟ ಜನಪ್ರಿಯ ಕನ್ನರ ಎತ್ತರದಲ್ಲಿ ಕುಳಿತಿದ್ದಾನೆ. ಒಂದು ಬದಿಯಲ್ಲಿ ಅರಿಕೇಸರಿ ಇನ್ನೊಂದು ಪಕ್ಕದಲ್ಲಿ ಒಪ್ಪವಾದ ಬಿತ್ತರಿಗೆಯ ಮೇಲೆ ಪಂಪ.

ರಾಜಗಾಯಕಿಯರು ಆದಿಪುರಾಣದ ಜಿನಸುತ್ತಿ ಹಾಡಿದ್ದಾದ ಮೇಲೆ ಪಂಚ ಕಲ್ಯಾಣಗಳನ್ನು ರಾಜನರ್ತಕಿಯರ ತಂಡ ಅಭಿನಯಿಸಿತು. ಅನಂತರ ಗಮಕಿಗಳೂ ವಿಕ್ರಮಾರ್ಜುನ ವಿಜಯದ ಕೆಲವು ಭಾಗಗಳನ್ನು ಪಾರಾಯಣ ಮಾಡಿದರು. ತರುವಾಯ ಚಕ್ರವರ್ತಿಯ ಸಮ್ಮುಖದಲ್ಲಿ ಪಂಪನೇ ಕೆಲವು ಪದ್ಯಗಳನ್ನು ಓದಬೇಕೆಂಬ ಕೋರಿಕೆ ಬಂತು. ಪಂಪ ಸುತ್ತ ನೋಡಿದ. ಮನಸ್ಸಿನ

ಮಾಲಿನ್ಯವನ್ನು ಪುಣ್ಯತೀರ್ಥ ಸ್ನಾನದಂತೆ ಪರಿಹರಿಸುವ ದಿವ್ಯ ರಾಜಸಭೆ.

ಕವಿಗಳು, ಗಮಕಿಗಳು, ಸಂಗೀತಗಾರರು, ವಾದಿ ಪ್ರತಿವಾದಿಗಳು, ಮಹಾ ಮುಕುಟ ವರ್ಧನರು, ಅಮಾತ್ಯರು, ಸೇನಾನಿಗಳು, ವರ್ತಕ ಶ್ರೇಷ್ಠರು, ರತ್ನಪಡಿಗಳು, ಮಹಾಮಲ್ಲರು, ವೈದ್ಯರು, ಸಾಮಂತರು, ಹೆಗ್ಗಡೆಗಳು, ಓಲೆಕಾರರು, ನರ್ತಕಿಯರು, ಬೇಹುಗಾರರು, ಕಪ್ಪಕಾಣಿಕೆ ಕೊಡುವವರು, ಪ್ರಧಾನ ತಳಾರರು, ಎಲ್ಲಾ ಉಚಿತಾಸನಗಳಲ್ಲಿ ಮಂಡಿಸಿದ್ದರು. ಪರಿಮಳದ ಗಣಿಯಾಗಿ ರಾಣಿವಾಸ, ಮಹಿಳೆಯರ ತಂಡ ಇನ್ನೊಂದು ಕಡೆ ಕುಳಿತಿದೆ. ಒಡ್ಡೋಲಗ ಕಿಕ್ಕಿರಿದಿದೆ. ಬಗೆ ಬಗೆಯಾದ ಬೆತ್ತದ ದಂಡಧಾರಿಗಳು ಎಚ್ಚರಿಸುತ್ತಿದ್ದಾರೆ. "ನಿಮ್ಮ ನಿಮ್ಮ ಎಡೆಗಳಲ್ಲಿರಿ, ಗಟ್ಟಿಯಾಗಿ ನುಡಿಯದಿರಿ. ಪ್ರಭುಗಳು ಮಾತನಾಡಿದ ಮೇಲೆ ಮಾತ್ರ ನೀವು ಮಾತನಾಡಿರಿ. ನೀವಿರುವ ಎಡೆಗಳಲ್ಲೇ ಎಲೆ ಮಿಡುಕದೆ, ಅಕ್ಕಪಕ್ಕ ತಳ್ಳದೆ ಇರಬೇಕು. ಮಿಡುಕಿದೊಡನೆ ಚಿತ್ರವೇತ್ರ ದುಂಡಧರರ ಪರಿಚಯವಾದೀತು."

ಪಂಪ ದೇವೇಂದ್ರ ಮುನೀಂದ್ರರನ್ನು ಸ್ತುತಿಸಿ ಸ್ಮರಿಸಿ ಸಮಸ್ತ ಭಾರತದಿಂದ ಕೆಲವು ವೃತ್ತಗಳನ್ನು ಹಾಡಿದ. ಅರಿಕೇಸರಿ ಚಕ್ರವರ್ತಿಗಳತ್ತ ನೋಡಿ ನುಡಿದ—

"ಹೇಗಿತ್ತು ಪ್ರಭು, ಪಂಪ ಮಹಾಕವಿಯ ದುಂದುಭಿ ಗಂಭೀರ ನಿನಾದ ಹೊತ್ತ ಕಾವ್ಯ."

"ಅರಿಗರೇ ಅದೊಂದು ಗಂಗಾ ಪ್ರವಾಹ. ಆ ಪವಿತ್ರ ಪ್ರವಾಹದಲ್ಲಿ ಪಾಲುಗೊಳ್ಳುವ ಪುಣ್ಯ ನಮಗೆ ದೊರಕಿಸಿಕೊಟ್ಟುದಕ್ಕೆ ಉಪಕೃತರು."

ಪಂಪ ಎದೆದುಂಬಿ ನುಡಿದ.

"ಅಷ್ಟು ಪ್ರಶಂಸೆಗೆ ಪಾತ್ರವಾಗುವ ಔನ್ನತ್ಯ ನನ್ನಲ್ಲಿಲ್ಲ ಪ್ರಭೂ."

"ಅದು ನಿಮ್ಮ ಸೌಜನ್ಯ ಕವಿವರ್ಯಾ. ಇಂದು ನಿಮ್ಮ ಕಾವ್ಯದ ಅಮೃತ ಮಡುವಿನಲ್ಲಿ ಮಿಂದು ನಾವು ಧನ್ಯರಾದೆವೆಂದು ತಿಳಿದಿದ್ದೇವೆ. ಕಾಳಿದಾಸನಂಥ ಮಹಾಕವಿಯನ್ನು ಕನ್ನಡದಲ್ಲೂ ಕಾಣಬೇಕೆಂಬ ನಮ್ಮ ಬಹುದಿನದ ಹಂಬಲ ಈ ಜೀವಿತ ಕಾಲದಲ್ಲೇ ಇಂದು ಕೈಗೂಡಿದೆ. ಈ ಯುಗದ ಕವಿಯಾದ ನೀವು ಆಸ್ಥಾನ ಕವಿಯಾಗಿರುವ ಈ ದೊರೆಯ ಪುಣ್ಯವೇ ಪುಣ್ಯ."

ಚಕ್ರವರ್ತಿ ಕನ್ನರ ಮುಗುಳುನಗೆ ದುಂಬಿ ಅರಿಗನತ್ತ ನೋಡಿದ. ಅರಿಗನ ಮುಖ ಆನಂದ ಧನ್ಯತೆಗಳ ಸರೋವರವಾಗಿತ್ತು.

ಪಂಪ ತಲೆಬಾಗಿ ನುಡಿದ : "ಮಹಾ ಸಾಮ್ರಾಟರು ವಾತ್ಸಲ್ಯ ಪ್ರೇರಿತರಾಗಿ ಉತ್ಪ್ರೇಕ್ಷಿಸಿ ಅನುಗ್ರಹಿಸಿದ್ದಾರೆ. ಆದರೆ ಕಾಳಿದಾಸನೆಲ್ಲಿ, ನಾನೆಲ್ಲಿ? ಕಾಳಿದಾಸನೇ ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ। ಪ್ರಾಂಶುಲಭ್ಯೇ ಫಲೇ

ಲೋಭಾದುದ್ಬಾಹುರಿವ ವಾಮನಃ॥– ಎಂದು ಹೇಳಿಕೊಂಡಿರುವುದನ್ನು ತಾವೆಲ್ಲ ಬಲ್ಲಿರಿ, ಅಂದಮೇಲೆ ನಾನು ಎಷ್ಟು ಕಿರಿಯನೆಂಬುದನ್ನು ಊಹಿಸಿಕೊಳ್ಳಬಹುದು.

"ನೀವು ವಿನಯದಿಂದ ಹೀಗೆ ನುಡಿದ ಮಾತ್ರದಿಂದ ನಿಮಗೆ ಮಹಾಕವಿಯ ಪಟ್ಟ ತಪ್ಪುವುದಿಲ್ಲ. ಚಕ್ರವರ್ತಿಗಳ ವಾಣಿ ಅಮರವಾಣಿ. ನೀವು ಅಭಿನವ ಕಾಳಿದಾಸರೇ ಸೈ"

ಪಂಪನಿಗೆ ಚಕ್ರವರ್ತಿಯ ಮೂಲಕ ಸಂಸಾರ ಸಾರೋದಯ ಎಂಬ ಪ್ರಶಸ್ತಿಯಿತ್ತು ಸನ್ಮಾನಿಸಲಾಯಿತು.

ಮರುದಿವಸ ಗುರುಕುಲದಿಂದ ರಾಜಧಾನಿಯ ತನಕ ಪಲ್ಲಕ್ಕಿ ಪಟ್ಟದಾನೆಯ ಮೇಲೆ ಪಂಪನ ಎರಡೂ ಕಾವ್ಯಗಳನ್ನಿಟ್ಟು ಗೌರವದ ಮೆರವಣಿಗೆ ಮಾಡಿದರು.

ಪಂಪನನ್ನು ಅರಮನೆಯ ರಥದಲ್ಲಿ ಕುಳ್ಳಿರಿಸಿ ಕರೆತರಲಾಯಿತು. ಕಾವ್ಯಗಳಿಟ್ಟ ಪಲ್ಲಕ್ಕಿಯನ್ನು ಸ್ವಲ್ಪ ದೂರ ರಟ್ಟರ ಚಕ್ರವರ್ತಿ ಕನ್ನರ ಒಂದು ಕಡೆ ಅರಿಗ ಒಂದು ಕಡೆ ಹೆಗಲು ಕೊಟ್ಟುದನ್ನು ಜನತೆ ಹರ್ಷೋದ್ಗಾರದಿಂದ ಸ್ವಾಗತಿಸಿತು. ಪಂಪನನ್ನು ಮನೆಯಿಂದ ಹೇಗೆ ಜೋಡಿ ಓಲಗ ಊದಿಸಿ ಕರೆತಂದರೋ ಹಾಗೆಯೇ ಕಳಿಸಿದರು. ದಾರಿಯುದ್ದಕ್ಕೂ ಹದಿನಾಲ್ಕು ಆಶ್ವಾಸದ ಕಾವ್ಯಕ್ಕೆ ಸಂಕೇತವಾಗಿ ಹದಿನಾಲ್ಕು ಚಪ್ಪರ ಹಾಕಿದ್ದರು. ಸಂಜೆಯ ಹೊಂಬೆಳಕಿನಲ್ಲಿ ಪಂಪ ಬಿಡಾರ ಹೊಕ್ಕ. ಲೋಕವನ್ನು ಬೆಳಗಿದ ದಿನಪತಿ, ಕಾವ್ಯಲೋಕವನ್ನು ಬೆಳಗಿದ ಕೃತಿಪತಿ ಪಂಪನನ್ನು ಮನದಣಿಯೆ ಕಂಡು, ತನ್ನ ಅಂದಿನ ಕರ್ತವ್ಯ ಮುಗಿಯಿತೆಂದು ಪಡುವಣಕ್ಕೆ ಇಳಿಯಲು ಅಣಿಯಾದ.

# ಪಂಪಭಾರತದ ಲೋಕವಿಖ್ಯಾತ ಪದ್ಯಗಳು

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ।
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್॥

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ।
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ॥

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೆಗಂ।
ನಗೆ ಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್॥

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ ಕೋಳ ಜೊಂ।
ಪಮುಮೇವೇಳ್ವುದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೇ॥

* * * *